# ಕನ್ನಡ ಸಾರ್ವಭೌಮತ್ವ ಕನಸಿನ ಆಯಾಮಗಳು

## ಪ್ರಸ್ತಾವನೆ

ಎಸ್.ಎಸ್. ಒಡೆಯರ್ ರಾಜ್ಯದ ಒಳಗೆ ಹಾಗೂ ಹೊರಗೆ ಅನೇಕ ಸಾಹಿತಿಗಳನ್ನು ಶಿಕ್ಷಣ ತಜ್ಞರನ್ನು ವಿಶ್ವವಿದ್ಯಾಲಯಗಳನ್ನು ಭೇಟಿ ಮಾಡಿ ವರದಿಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಿದರು. ಅದರಲ್ಲಿ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ಕಲೆ, ಮಾನವಿಕ ಶಾಸ್ತ್ರಗಳ ಬಗ್ಗೆ ಆಳವಾದ ಅಧ್ಯಯನ ಹಾಗೂ ಉನ್ನತ ಸಂಶೋಧನೆಗೆ ಕನ್ನಡ ವಿಶ್ವವಿದ್ಯಾಲಯ ಸ್ಥಾಪನೆಗೆ ಅಗತ್ಯವೆಂದು ಹೇಳಲಾಗಿದೆ. ವರದಿಯನ್ನು ಒಪ್ಪಿಕೊಂಡ ಆಗಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಎಸ್. ಬಂಗಾರಪ್ಪನವರು ಕನ್ನಡ ವಿಶ್ವವಿದ್ಯಾಲಯವನ್ನು ಪ್ರಕಟಿಸಿದರು. ಕನ್ನಡಿಗರ ಬಹುದಿನದ ಆಶೋತ್ತರವಾದ ಈ ಸಂಸ್ಥೆಯನ್ನು ಕಟ್ಟಲು ಹಿರಿಯ ಲೇಖಕರೂ, ಸೂಕ್ಷ್ಮ ಸಂವೇದನೆ, ಸೃಜನಶೀಲ ಲೇಖಕರು ಜಾನಪದದಲ್ಲಿ ಆಳವಾದ ಸಂಶೋಧನೆ ಯುಳ್ಳವರು, ಕನಸುಗಾರರು, ನಾಟಕ, ರಂಗಭೂಮಿ, ಸಿನಿಮಾ ಮುಂತಾದ ಕ್ಷೇತ್ರಗಳಲ್ಲಿ ದೊಡ್ಡ ಕೊಡುಗೆ ಕೊಟ್ಟಿರುವ ಡಾ. ಚಂದ್ರಶೇಖರ್ ಕಂಬಾರ ಅವರನ್ನು ೨೩.೧೦.೧೯೯೧ ರಂದು ವಿಶೇಷ ಆಡಳಿತ ಅಧಿಕಾರಿಯನ್ನಾಗಿ ಸರ್ಕಾರ ನೇಮಿಸಿತ್ತು. ಹೀಗೆ ಹಂಪಿಯ ಕಲ್ಲು ಮಂಟಪಗಳಲ್ಲಿ ಕನ್ನಡ ವಿಶ್ವವಿದ್ಯಾಲಯವು ವಿದ್ಯುಕ್ತವಾಗಿ ಪ್ರಾರಂಭವಾಯಿತು. ಡಾ. ಕಂಬಾರರು ರಾಜ್ಯದ ಒಳಗೆ ಮತ್ತು ದೇಶದ ಒಳಗೆ ವ್ಯಾಪಕ ಪ್ರವಾಸ ನಡೆಸಿ ನಾಡು ನುಡಿಯ ಏಳ್ಗೆಗೆ ದುಡಿದಿರುವ ಹಲವಾರು ಕ್ಷೇತ್ರದ ಗಣ್ಯರ ಜೊತೆ ಸಮಾಲೋಚನೆ ಮಾಡಿ ಕನ್ನಡ ವಿಶ್ವವಿದ್ಯಾಲಯದ ರೂಪ ರೇಷೆಯನ್ನು ಒಳಗೊಂಡ ಒಂದು ವರದಿಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಿದರು.

ಸರ್ಕಾರವು ಡಾ. ಚಂದ್ರಶೇಖರ ಕಂಬಾರರನ್ನು ದಿನಾಂಕ ೧೮.೧೦.೧೯೯೨ರಂದು ಮೊದಲ ಕುಲಪತಿಯನ್ನಾಗಿ ನೇಮಿಸಿತು. ಕನ್ನಡಿಗರ ಬಹುದಿನದ ಸುಪ್ತ ಕನಸೊಂದು ನನಸಾಗಲಾರಂಭಿಸಿತು. ಡಾ. ಕಂಬಾರ ಅವರ ಆಶೆಯ ಹಂಪಿ ಕೇವಲ ವಿಜಯನಗರ ರಾಜಕೀಯ ಸಾಮ್ರಾಜ್ಯ ಆಳಿದ ಜಾಗ ಮಾತ್ರವಲ್ಲ. ಇದು ಈ ಭಾಗದ ದೈವ ವಿರೂಪಾಕ್ಷನೂ ಅವನ ಹೆಂಡತಿ ಹಂಪಮ್ಮ ಇರುವ ದೈವ ಸಾಮ್ರಾಜ್ಯ ಕೂಡ. ರಾಜಕೀಯ ಸಾಮ್ರಾಜ್ಯ ಅಳಿದು ಹೋದರೂ, ಜನಸಾಮಾನ್ಯರ ಅದಿದೈವವಾದ ವಿರೂಪಾಕ್ಷನು ಇನ್ನೂ ಆಳ್ವಿಕೆ ನಡೆಸುತ್ತಿರುವ ಜಾಗ. ಇಲ್ಲಿ ಅನೇಕ ಕವಿಗಳು, ಪಂಡಿತರು, ಸಂತರು ಆಗಿ ಹೋಗಿರುವ ಜಾಗ. ಇದು ರಾಜಪ್ರಭುತ್ವದ ಆಶ್ರಯದಲ್ಲಿ ತನ್ನ ಪಾಂಡಿತ್ಯವನ್ನು ತೋರಿದ ಮಾಧವ ಸಾಮಣರು ಇದ್ದ ಜಾಗವು ಹೌದು. ರಾಜರನ್ನು ಕುರಿತು ಬರೆಯಲಾರೆ ಎಂದು ಪ್ರತಿಜ್ಞೆ ಮಾಡಿ ಸಾಮಾನ್ಯರಲ್ಲಿ ಕಾವ್ಯದ ನಾಯಕರನ್ನಾಗಿಸಿಕೊಂಡ ಹರಿಹರನ ಜಾಗವು ಹೌದು. ಇಂಥ ಪರಿಸರದಲ್ಲಿ ಕನ್ನಡ ವಿಶ್ವವಿದ್ಯಾಲಯವು ತಲೆಯತ್ತಲು ಪ್ರಾರಂಭವಾಯಿತು.

ಕರ್ನಾಟಕ ಸಂಸ್ಕೃತಿಯ ತಲಸ್ಪರ್ಶಿಯಾದ ಅಭ್ಯಾಸ ಕನ್ನಡ ಸಂಸ್ಕೃತಿಯ ವಿವಿಧ ಕ್ಷೇತ್ರಗಳಲ್ಲಿ ಸಂಶೋಧನೆ ಕ್ಷೇತ್ರಕ್ಕೆ ತನ್ನನ್ನು ಸಜ್ಜುಗೊಳಿಸತೊಡಗಿತು. ಇದಕ್ಕಾಗಿ ಡಾ. ಚಂದ್ರಶೇಖರ್ ಕಂಬಾರ ಅವರು ನಾಡಿನ ವಿವಿಧ ಭಾಗಗಳಿಂದ ವಿದ್ವಾಂಸರನ್ನು ಕರೆಯಿಸಿ ಕಾರ್ಯಕ್ರಮ ಮಾಡಿದರು. ಹಂಪಿಯ ವಿಶ್ವವಿದ್ಯಾಲಯ ಒಂದು ವಿಶಾಲವಾದ ಒಂದು ಸಾಂಸ್ಕೃತಿಕ ಅವಶ್ಯಕತೆಯನ್ನು ಪೂರೈಸಲು ಮಾತ್ರ ಜನ್ಮ ತಳೆಯಿತು. ಇದು ಪದವಿ ನೀಡುವ ಕೆಲಸ ಮಾಡುವ, ರಾಜ್ಯದಲ್ಲಿ ಉಳಿದ ವಿಶ್ವವಿದ್ಯಾಲಯಗಳ ಜೊತೆ ಸ್ಪರ್ಧೆ ಮಾಡುವುದಿಲ್ಲ. ಇದು ಸಂಶೋಧನೆ ಕಾರ್ಯವಾಗಿರುವ ವಿಶ್ವವಿದ್ಯಾಲಯ. ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆಯುವ ಸಂಶೋಧನೆಯ ಧ್ಯೇಯ ಕರ್ನಾಟಕದ ಬಗ್ಗೆ ಸಮಗ್ರ ತಿಳುವಳಿಕೆ ಕಡೆಗೆ ಒಯ್ಯುವಂತಾಗಿದೆ. ೧೨ನೆಯ ಶತಮಾನದ ಶರಣರು ತಮ್ಮ ಆಧ್ಯಾತ್ಮಿಕ ಅನುಭಾವ ಅಭಿವ್ಯಕ್ತಿಗೆ ಕನ್ನಡವನ್ನು ಉಪಯೋಗಿಸಿ ಅದಕ್ಕೊಂದು ಅಪೂರ್ವವಾದ ಶಕ್ತಿಯನ್ನು ತಂದುಕೊಡುತ್ತಾರೆ. ಹೀಗೆ ಕನ್ನಡವನ್ನು ಹೊಸ ಹೊಸ ಗಾನವನ್ನು ಅಭಿವ್ಯಕ್ತಿಗೊಳಿಸಲು ಶಕ್ತವಾಗುವಂತೆ, ಸಜ್ಜುಗೊಳಿಸುವಂತೆ ಕೆಲಸ ಮಾಡುವುದು ವಿಶ್ವವಿದ್ಯಾಲಯದ ಉದ್ದೇಶವಾಗಿತ್ತು.

ಜಾಗತೀಕರಣ ಪ್ರಕ್ರಿಯೆ ಆರಂಭಗೊಂಡ ಕಾಲದಲ್ಲಿ ಪ್ರಾದೇಶಿಕ ಭಾಷೆಯ ಹೆಸರಲ್ಲಿ ಆರಂಭವಾಗಿದ್ದು ಸಾಂಕೇತಿಕವಾಗಿದೆ. ಕನ್ನಡಿಗರು ಆಧುನಿಕ ವಿಜ್ಞಾನ ತಂತ್ರಜ್ಞಾನ ಇವುಗಳನ್ನೆಲ್ಲಾ ಇಂಗ್ಲೀಷ್ ಭಾಷೆಯಿಂದ ಕಲಿಯುತ್ತಿರುವರು. ಸಾಹಿತ್ಯ, ಕಲೆ, ತತ್ವಜ್ಞಾನ, ರಾಜಕೀಯ, ಸಮಾಜಶಾಸ್ತ್ರಗಳಿಗೆ ಇಂಗ್ಲಿಷ್‌ನ ಜೊತೆಗೆ ಕನ್ನಡವನ್ನು ಉಪಯೋಗಿಸುತ್ತಾ. ಇಂಗ್ಲಿಷ್ ಕನ್ನಡಕ್ಕೆ ಜಗತ್ತನ್ನು ನೋಡುವ ತಾಯಿಯು ಹೌದು. ಜೊತೆಗೆ ದೃಷ್ಟಿಕೋನವನ್ನು ತಿಳುವಳಿಕೆಯ ವಿಧಾನವನ್ನು ಕೊಡುವ ಭಾಷೆಯೂ ಹೌದು. ಈ ಹಿನ್ನೆಲೆಯಲ್ಲಿ ಕನ್ನಡವು ತನ್ನದೇ ಆದ ಶಾಸ್ತ್ರ ವಿಧಾನಗಳನ್ನು ರೂಪಿಸಲು ಕಲಿಯಬೇಕೆಂಬುದು ವಿಶ್ವವಿದ್ಯಾಲಯದ ಉದ್ದೇಶವಾಗಿತ್ತು. ಇದು ಕೇವಲ ಭಾಷಾ ಮಾಧ್ಯಮದ ಸವಾಲು ಮಾತ್ರವಾಗಿರದೇ ಹೊಸ ಅಧ್ಯಯನ ವಿಧಾನಗಳನ್ನು ಹುಟ್ಟಿಸುವ ಸವಾಲು ಕೂಡ ಆಗಿತ್ತು. ಕನ್ನಡವು ತನ್ನ ಪರಂಪರೆಯಿಂದ ಶಕ್ತಿಯನ್ನು ಪಡೆದುಕೊಳ್ಳುವಂತೆಯೆ ಹೊಸ ತಲೆಮಾರಿನ ಜನರಿಗೆ ಹೊಸಗತ್ಯಗಳನ್ನು ಪೂರೈಸುವ ಭಾಷೆಯ ಆಗಬೇಕಾಗಿದೆ.

ಕನ್ನಡಿಗರು ಕನ್ನಡದಲ್ಲಿಯೇ ಸ್ವತಂತ್ರವಾಗಿ ಆಲೋಚನೆ ಮಾಡುವ, ಅಭಿವ್ಯಕ್ತಿಸುವ ಸಾಮರ್ಥ್ಯ ಪಡೆಯುವಂಥ ಪರಿಸರ ನಿರ್ಮಾಣ ಮಾಡಬೇಕಾಗಿದೆ. ಈ ಕೆಲಸವನ್ನು ಕನ್ನಡ ವಿಶ್ವವಿದ್ಯಾಲಯ ಏಕಾಂಗಿಯಾಗಿ ಮಾಡುವುದಿಲ್ಲ. ಬದಲಿಗೆ ನಾಡಿನ ಅತ್ಯುತ್ತಮವಾದ ಎಲ್ಲಾ ಮನಸ್ಸುಗಳ ಸಹಯೋಗದಲ್ಲಿ ಮಾಡಬೇಕಿದೆ. ಇದು ಕನ್ನಡ ವಿಶ್ವವಿದ್ಯಾಲಯದ ಮುಂದೆ ಇರುವ ಸಾಂಸ್ಕೃತಿಕ ಹೊಣೆಗಾರಿಕೆಯಾಗಿತ್ತು. ಈ ಹಿನ್ನೆಲೆಯಲ್ಲಿ ಕನ್ನಡ ವಿಶ್ವವಿದ್ಯಾಲಯದ ಮುಂದಿದ್ದ ಉದ್ದೇಶಗಳು ಹೀಗಿದ್ದವು.

ಕನ್ನಡ ಭಾಷೆ ಮತ್ತು ಸಾಹಿತ್ಯದಲ್ಲಿ ಉನ್ನತ ಮಟ್ಟದ ಸಂಶೋಧನಾ ಕೇಂದ್ರವಾಗಿ ಕೆಲಸ ಮಾಡುವುದು. ತನ್ನ ಭಾಷೆ ಮತ್ತು ಸಾಹಿತ್ಯವನ್ನು ಅಧ್ಯಯನ ಮಾಡಲು ಅಪೇಕ್ಷಿಸುವ ಭಾರತದೊಳಗೆ ಅಥವಾ ಹೊರಗೆ ವಾಸಿಸುತ್ತಿರುವವರಿಗೆ ತರಬೇತಿ ನೀಡುವುದು. ಕನ್ನಡ ಭಾಷೆ ಮತ್ತು ಸಾಹಿತ್ಯವನ್ನು ಆಧರಿಸಿ ಬೆಳೆದ ಸಾಹಿತ್ಯ, ಸಂಗೀತ, ಸಂಸ್ಕೃತಿ, ರಂಗಭೂಮಿ, ಜಾನಪದ, ಚಿತ್ರಕಲೆ, ಸಮಾಜ ವಿಜ್ಞಾನ, ಧರ್ಮ, ತತ್ವಶಾಸ್ತ್ರ ಮುಂತಾದ ಕ್ಷೇತ್ರಗಳಲ್ಲಿ ಉಚ್ಚ ಶಿಕ್ಷಣ ಮತ್ತು ಸಂಶೋಧನೆಗೆ ಅನುಕೂಲತೆಗಳಿವೆ. ಈ ಉದ್ದೇಶಗಳಿಗೆ ಹೊಂದಿಕೊಳ್ಳುವಂತಹ ಹಾಗೂ ಅಗತ್ಯಗಳಿಗೆ ಅನುಗುಣವಾಗಿ ಇತರ ಭಾಷೆಗಳಲ್ಲಿರುವ ಪುಸ್ತಕಗಳನ್ನು ಕನ್ನಡಕ್ಕೆ ಭಾಷಾಂತರಿಸುವುದು ಮತ್ತು ಕನ್ನಡದಲ್ಲಿರುವ ಪುಸ್ತಕಗಳನ್ನು ಇತರ ಭಾಷೆಗಳಿಗೆ ಭಾಷಾಂತರಿಸುವುದು. ತಾಳೆಗರಿಯಲ್ಲಿರುವ ಹಸ್ತಪ್ರತಿಗಳು ಪ್ರಾಚೀನವಾದ ಅಪೂರ್ವ ಪುಸ್ತಕಗಳನ್ನು ಸಂರಕ್ಷಿಸಿಡುವುದು, ಪ್ರಕಟಿಸುವುದು. ಅವುಗಳ ವ್ಯಾಖ್ಯಾನಕಾರ್ಯ ಮಾಡುವುದು, ಕನ್ನಡ ಭಾಷೆ ಮತ್ತು ಸಾಹಿತ್ಯ ಮತ್ತು ಸಂಸ್ಕೃತಿ ಕನ್ನಡಿಗರ ಇತಿಹಾಸಕ್ಕೆ ಸಂಬಂಧಿಸಿದ ಶಾಸನಗಳಿಗಾಗಿ ಶೋಧನೆ ನಡೆಸುವುದು, ಅವುಗಳನ್ನು ಸಂಗ್ರಹಿಸುವುದು. ಅದರ ಸಂಶೋಧನೆ ಆಧಾರದ ಮೇಲಿನ ನಿರ್ಣಯದೊಂದಿಗೆ ಅವುಗಳನ್ನು ಪ್ರಕಟಿಸುವುದು, ಕರ್ನಾಟಕದಲ್ಲಿರುವ ಕನ್ನಡಿಗರಿಂದ ಮತ್ತು ಭಾರತದ ಇತರ ಭಾಗಗಳಲ್ಲಿರುವ ಮತ್ತು ಇತರ ದೇಶಗಳಲ್ಲಿ ವಾಸಿಸುವ ಕನ್ನಡಿಗರಿಂದ ಬಳಸಲಾದ ಕನ್ನಡ ಪದಗಳು, ಅಭಿವ್ಯಕ್ತಿಗಳು, ಆಡು ನುಡಿಗಳು, ಕೈಗಾರಿಕೆಗಳು ಕೃಷಿಗೆ ಸಂಬಂಧಪಟ್ಟ ವಿಶಿಷ್ಟ ಪದಗಳನ್ನು ಸಂಗ್ರಹಿಸುವುದು ಮತ್ತು ಪ್ರಕಟಿಸುವುದು. ಮುಂದಿನ ವೈಜ್ಞಾನಿಕ ಬೆಳವಣಿಗೆಗಳ ದೃಷ್ಟಿಯಲ್ಲಿಟ್ಟುಕೊಂಡು ಪ್ರಾಚೀನ ಕಾಲದಲ್ಲಿನ ಕನ್ನಡ ಭಾಷೆ ಮತ್ತು ಸಾಹಿತ್ಯದಲ್ಲಿನ ಸಂಶೋಧನೆಗಾಗಿ ಏರ್ಪಾಟುಮಾಡುವುದು.

ಅಭಿವೃದ್ಧಿಶೀಲ ವಿಶ್ವದಲ್ಲಿರುವ ಎಲ್ಲಾ ಶೈಕ್ಷಣಿಕ ಕ್ಷೇತ್ರಗಳನ್ನು ತನ್ನಲ್ಲಿ ಅಡಕ ಮಾಡಿಕೊಂಡಿರುವ ಕನ್ನಡ ಭಾಷೆ ಮತ್ತು ಸಾಹಿತ್ಯ ಬೆಳವಣಿಗೆಗೆ ಸಂಬಂಧಪಟ್ಟಂತೆ ಸಂಶೋಧನೆಗೆ ಏರ್ಪಾಟು ಮಾಡುವುದು. ಆ ಬಗ್ಗೆ ಕಾರ್ಯವಿಧಾನವನ್ನು ನಿರ್ಧರಿಸುವುದು. ಅದಕ್ಕಾಗಿ ಸೂಕ್ತ ಮಾರ್ಗವನ್ನು ಕಂಡುಕೊಳ್ಳುವುದು. ಭಾರತೀಯ ಸಂಸ್ಕೃತಿಗೆ ಸಂಬಂಧಪಟ್ಟಂತೆ, ಕನ್ನಡ ಭಾಷೆ ಮತ್ತು ಸಾಹಿತ್ಯದಲ್ಲಿ ಅಧ್ಯಯನವನ್ನು ಪ್ರಾರಂಭಿಸುವುದು. ಕನ್ನಡ ಭಾಷೆ ಮತ್ತು ಸಾಹಿತ್ಯದ ಪ್ರವೃತ್ತಿಗಳ ಆಳವಾದ ತಿಳುವಳಿಕೆ ಆಧಾರದ ಮೇಲೆ ಉಚ್ಚ ಶಿಕ್ಷಣ ಮತ್ತು ಸಂಶೋಧನಾ ಕಾರ್ಯಗಳನ್ನು ಸಂಘಟಿಸುವುದು, ಪ್ರಾಚೀನ ಕನ್ನಡ ಸಂಸ್ಕೃತಿಗಳನ್ನು ಪುನರುಜ್ಜೀವನಗೊಳಿಸುವ, ಪುನರ್‌ಶೋಧನೆ ಮಾಡುವ ದೃಷ್ಟಿಯಿಂದ ಪುರಾತತ್ವ ಶಾಸ್ತ್ರವನ್ನು ಎಲ್ಲಾ ವಿವಿಧ ಅಂಶಗಳ ಬಗ್ಗೆ ಉತ್ತೇಜನ ನೀಡುವುದು. ಮುಂದಿನ ಸಂಶೋಧನೆಗೆ ಅನುಕೂಲ ಮಾಡಿಕೊಡುವುದಕ್ಕಾಗಿ ರಾಜ್ಯದಲ್ಲಿಯೇ ಸ್ಮಾರಕಗಳನ್ನು ಕಾಪಾಡುವುದು. ಕತೆ, ವಾಸ್ತುಶಿಲ್ಪ, ಶಿಲ್ಪಕಲೆ, ವರ್ಣಚಿತ್ರ, ಪ್ರತಿಮಾಶಾಸ್ತ್ರ, ಶಾಸನಶಾಸ್ತ್ರ, ರಂಗಭೂಮಿ, ನೃತ್ಯ, ಸಂಗೀತ, ಬುಡಕಟ್ಟು ಕಲೆ, ಧರ್ಮ, ಜೀವನ, ತತ್ವಜ್ಞಾನ, ಸಾಮಾಜಿಕ ಆಂದೋಲನ

ಮುಂತಾದವುಗಳ ಮೂಲಕ ವ್ಯಕ್ತವಾಗಿರುವ ಕನ್ನಡ ಸಂಸ್ಕೃತಿಕ ಸಂಯೋಜಿಸುವುದು ಸಾಂಪ್ರದಾಯಿಕ ಬುಡಕಟ್ಟು, ಜನಪದ ಕಲೆ, ಪುಸ್ತಕ ಕಲೆಗಳನ್ನು ದಾಖಲೆ ಹಿಡಿದು ಕೊಂಡು ವಿಶ್ಲೇಷಿಸುವುದು ಮತ್ತು ಸಂರಕ್ಷಿಸುವುದು. ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿನ ಆಧುನಿಕ ಮುನ್ನಡೆಗೆ ಸಂಬಂಧಪಟ್ಟಂತೆ ಕನ್ನಡವನ್ನು ಶಿಕ್ಷಣ ಮಾಧ್ಯಮವನ್ನಾಗಿ ಅಭಿವೃದ್ಧಿಗೊಳಿಸುವುದು. ಇತರ ದ್ರಾವಿಡ ಮತ್ತು ಇತರ ಭಾರತೀಯ ಭಾಷೆಗಳೊಂದಿಗೆ ಕನ್ನಡ ತೌಲನಿಕ ಅಧ್ಯಯನವನ್ನು ಬೆಳೆಸುವುದು, ಉತ್ಕೃಷ್ಟ ಮಾದರಿಯ ವಸ್ತುಗಳನ್ನು, ಕರ್ನಾಟಕದ ಕಲಾ ಕೃತಿಗಳನ್ನು ಸಂಗ್ರಹಿಸುವುದರಲ್ಲೂ ಒಂದು ಸಣ್ಣ ಸಂಗ್ರಹಾಲಯವನ್ನು ನಿರ್ಮಿಸುವುದು.

೧೩-೧೦-೧೯೯೧ ರಿಂದ ಪ್ರಾರಂಭವಾದ ಕನ್ನಡ ವಿಶ್ವವಿದ್ಯಾಲಯವು ೧೯೯೫ ರಿಂದ ನುಡಿಹಬ್ಬವನ್ನು ನೆರವೇರಿಸುತ್ತಾ ಬಂದಿದೆ. ಈ ನುಡಿಹಬ್ಬದಲ್ಲಿ ಬಹಳ ಮುಖ್ಯವಾಗಿ ನಾಡುನುಡಿ ಹಾಗೂ ಪುಸ್ತಕಗಳ ಬಿಡುಗಡೆ, ಘಟಿಕೋತ್ಸವ ಮತ್ತು ನಮ್ಮ ಹಬ್ಬ ಕುರಿತ ವಿಶೇಷ ಕಾರ್ಯಕ್ರಮಗಳು ನೆರವೇರುತ್ತವೆ. ಘಟಿಕೋತ್ಸವದ ಸಂದರ್ಭದಲ್ಲಿ ಆಯಾ ಕಾಲದಲ್ಲಿದ್ದ ಮಾನ್ಯ ಕುಲಪತಿಗಳು ಕನ್ನಡ ಸಾರ್ವಭೌಮತ್ವ ಕುರಿತು ತಮ್ಮ ಕನಸಿನ ಆಯಾಮಗಳನ್ನು ಹಾಗೂ ಸಾಕಾರಗೊಂಡ ಅಂಶಗಳನ್ನೊಳಗೊಂಡ ಸ್ವಾಗತ ಭಾಷಣಗಳನ್ನು ಮಾಡುವುದು ನಿಯಮ. ಈ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಗಳು ಮಾಡಿದಂತಹ ಭಾಷಣಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುತ್ತಿದ್ದೇನೆ. ಈ ಕಾರ್ಯಕ್ಕೆ ಆಶೀರ್ವದಿಸಿ ಕೆಲಸ ಮಾಡಲು ಪ್ರೇರೇಪಿಸಿದ ಸನ್ಮಾನ್ಯ ಕುಲಪತಿಗಳಾದ ಡಾ. ಎ. ಮುರಿಗೆಪ್ಪ ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳು. ಹಾಗೂ ಈ ಕಾರ್ಯದಲ್ಲಿ ನೆರವಾದ ಡಾ. ವೀರೇಶ ಬಡಿಗೇರ, ಡಾ. ಹೆಚ್.ಡಿ. ಪ್ರಶಾಂತ, ಡಾ. ಮೀನಾಕ್ಷಿ ಪಲ್ಲಾಗಟ್ಟೆ, ಶ್ರೀ ಕೆ.ಎಲ್. ರಾಜಶೇಖರ್, ಶ್ರೀ ಸುಜ್ಞಾನಮೂರ್ತಿ, ಶ್ರೀ ಸುರೇಶ, ಡಾ. ವಿ.ಸಿ. ಮಾರುತಿ ಹಾಗೂ ಪ್ರಸಾರಾಂಗ, ಆಡಳಿತಾಂಗ ಹಾಗೂ ಅಧ್ಯಯನಾಂಗದ ಸ್ನೇಹಿತರೆಲ್ಲರಿಗೂ ಹೃತ್ಪೂರ್ವಕ ಕೃತಜ್ಞತೆಗಳು.

**ಡಾ. ಮಂಜುನಾಥ ಬೇವಿನಕಟ್ಟಿ**
ಕುಲಸಚಿವರು

# ಶಬ್ದಪಾರಮಾರ್ಗಮಶಕ್ಯಂ

ಕರ್ನಾಟಕದ ಆಧುನಿಕ ಚರಿತ್ರೆಯಲ್ಲಿ ಕರ್ನಾಟಕ ಏಕೀಕರಣ ಒಂದು ಮಹತ್ವಪೂರ್ಣ ಐತಿಹಾಸಿಕ ಘಟನೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆಯೂ ಮತ್ತೊಂದು ಮಹತ್ವದ ಘಟನೆ. ಕನ್ನಡ ಕನ್ನಡಿಗ-ಕರ್ನಾಟಕ ಸಂಸ್ಕೃತಿಯ ಕಲ್ಪನೆಯಡಿಯಲ್ಲಿ ಅಸ್ತಿತ್ವಕ್ಕೆ ಬಂದ ಕನ್ನಡ ವಿಶ್ವವಿದ್ಯಾಲಯದ ಹರವು ವಿಸ್ತಾರವಾದದ್ದು. ಈ ಕಾರಣದಿಂದ ಕನ್ನಡ ವಿಶ್ವವಿದ್ಯಾಲಯದ ಆಶಯ ಮತ್ತು ಗುರಿ ಇತರ ವಿಶ್ವವಿದ್ಯಾಲಯಗಳಿಗಿಂತ ಭಿನ್ನ ಹಾಗೂ ಪ್ರಗತಿಪರ. ಕನ್ನಡದ ಸಾಮರ್ಥ್ಯವನ್ನು ಎಚ್ಚರಿಸುವ ಕಾಯಕವನ್ನು ಉದ್ದಕ್ಕೂ ಅದು ನೋಂಪಿಯಿಂದ ಮಾಡಿಕೊಂಡು ಬಂದಿದೆ. ಕರ್ನಾಟಕತ್ವದ 'ವಿಕಾಸ' ಈ ವಿಶ್ವವಿದ್ಯಾಲಯದ ಮಹತ್ತರ ಆಶಯವಾಗಿದೆ.

ಕನ್ನಡ ಅಧ್ಯಯನ ಮೂಲತಃ ಶುದ್ಧ ಜ್ಞಾನದ, ಕಾಲ, ದೇಶ, ಜೀವನ ತತ್ವದ ಪರವಾಗಿರುವುದರ ಜೊತೆಗೆ ಅಧ್ಯಯನವನ್ನು ಒಂದು ವಾಗ್ವಾದದ ಭೂಮಿಕೆ ಎಂದು ನಾವು ಭಾವಿಸಬೇಕಾಗಿದೆ. ಕನ್ನಡ ಬದುಕಿನ ಚಿಂತನೆಯ ಭಾಗವೆಂದೇ ಅದನ್ನು ರೂಪಿಸಿ ವಿವರಿಸಬೇಕಾಗಿದೆ. ಅಂದರೆ: ದೇಸಿ ಬೇರುಗಳ ಗುರುತಿಸುವಿಕೆ ಕನ್ನಡ ಅಧ್ಯಯನದ ಮುಖ್ಯ ಭಿತ್ತಿಯಾಗಬೇಕಾಗಿದೆ. ಕನ್ನಡ ಸಂಸ್ಕೃತಿಯು ಬಹುತ್ವದ ನೆಲೆಗಳನ್ನು ಆಧರಿಸಿದೆ. ಸಮಾಜಮುಖಿ ಚಿಂತನೆಗಳ ವ್ಯಾಪಕ ಅಧ್ಯಯನ ಬದುಕಿನ ಸಂಕೀರ್ಣ ಲಕ್ಷಣಗಳ ಸ್ವರೂಪವನ್ನು ಇದು ಪರಿಚಯಿಸುತ್ತದೆ. ನಾವು ಇದನ್ನು ಎಲ್ಲ ವಲಯಗಳಲ್ಲಿ ಕನ್ನಡದ ಅನುಷಾವಿನದ ಮೂಲಕ ಉಳಿಸಿ, ಬೆಳೆಸಬೇಕಾಗಿದೆ. ಆಗ ಕನ್ನಡ ಸಂಸ್ಕೃತಿಯು ವಿಶ್ವಪ್ರಜ್ಞೆಯಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ. 'ಕನ್ನಡದ್ದೇ ಮಾದರಿ'ಯ ಶೋಧ ಇಂದಿನ ಮತ್ತು ಬರುವ ದಿನಗಳ ತೀವ್ರ ಅಗತ್ಯವಾಗಿದೆ.

ಕನ್ನಡ ಸಂಸ್ಕೃತಿಯ ಭಾಗವಾಗಿರುವ ಕನ್ನಡ ಅಧ್ಯಯನವು ಕಾಲದಿಂದ ಕಾಲಕ್ಕೆ ಹೊಸ ತಿಳಿವಳಿಕೆಯನ್ನು ತನ್ನ ತೆಕ್ಕೆಗೆ ಜೋಡಿಸಿಕೊಳ್ಳುತ್ತ ಬಂದಿದೆ. ಹೀಗಾಗಿ ವಿದೇಶಿ ಮತ್ತು ದೇಶಿ ವಿದ್ವಾಂಸರು ತೊಡಗಿಸಿಕೊಂಡ ಈ ವಿದ್ವತ್‌ಕ್ಷೇತ್ರದಲ್ಲಿ ಮುಂದಿನ ವಿದ್ವಾಂಸರು ಕಾಲದಿಂದ ಕಾಲಕ್ಕೆ ಹೊಸಬೆಳೆಯನ್ನು ತೆಗೆಯುತ್ತ ಬಂದಿದ್ದಾರೆ. ಕನ್ನಡ ಅಧ್ಯಯನ ಪಳೆಯುಳಿಕೆಯ ಶಾಸ್ತ್ರವಾಗದೆ, ಬದಲಾಗುತ್ತಿರುವ ಕಾಲಮಾನದಲ್ಲಿ ಎದುರಾಗುತ್ತಿರುವ ಆಹ್ವಾನಕ್ಕೆ ತಕ್ಕಂತೆ ತನ್ನ ಗತಿಯನ್ನು ಬದಲಾಯಿಸಿಕೊಳ್ಳುತ್ತ ಬಂದಿರುವುದು ಗಮನಿಸತಕ್ಕ ಅಂಶ. ಸಾಂಪ್ರದಾಯಿಕ ಚಿಂತನೆಗಳು ಆಧುನೀಕರಣದ ಈ ಕಾಲಘಟ್ಟದಲ್ಲಿ ಸಕಾಲಿಕ ಗೊಳ್ಳುವುದು ಅನಿವಾರ್ಯವಾಗಿದೆ. ಮಾಹಿತಿ ತಂತ್ರಜ್ಞಾನದ ಮೂಲಕ ಜಗತ್ತಿನ ಜ್ಞಾನಪ್ರವಾಹವೇ ನಮ್ಮ ಅಂಗೈಯೊಳಗೆ ಚುಳುಕಾಗುವ ಈ ಸಂದರ್ಭದಲ್ಲಿ ಕನ್ನಡದ ಚಹರೆ ಮತ್ತು ಕನ್ನಡ ಭಾಷೆಯ ಚಲನಶೀಲತೆಯನ್ನು ಶೋಧಿಸಲಿಕ್ಕೆ ಭಾಷಾ ಆಧುನೀಕರಣ ಮತ್ತು ಪ್ರಮಾಣೀಕರಣದ ಪ್ರಕ್ರಿಯೆಗಳ ನೆಲೆಯಲ್ಲಿ ಅಧ್ಯಯನದ ಹೊಸ ಸಾಧ್ಯತೆಗಳನ್ನು ಅನುಲಕ್ಷಿಸಿ, ಭಾಷಾನೀತಿ, ಭಾಷಾಯೋಜನೆ ರೂಪಿಸುವುದು ಅನಿವಾರ್ಯ ಹಾಗೂ ಅವಶ್ಯವಾಗಿದೆ. ಆಗ ಅಧ್ಯಯನದ ಸ್ವರೂಪ ಹಾಗೂ ಬಳಕೆಯ ವಿಧಾನದಲ್ಲಿ ಪರಿವರ್ತನೆ ಸಾಧ್ಯವಾಗುತ್ತದೆ.

ನಮ್ಮೆದುರು ನುಗ್ಗಿ ಬರುತ್ತಿರುವ ಜಾಗತೀಕರಣಕ್ಕೆ ಪ್ರತಿರೋಧವಾಗಿ ನಮ್ಮ ದೇಶೀಯ ಜ್ಞಾನಪರಂಪರೆಯನ್ನು ಮರುಶೋಧಿಸಿ ಆ ಮೂಲಕ ಕುಸಿಯುತ್ತಿರುವ ನಮ್ಮ ಬೇರುಗಳನ್ನು ಬಲಗೊಳಿಸಿಕೊಳ್ಳಬೇಕಾಗಿದೆ. ಭಾಷೆ, ಸಾಹಿತ್ಯ, ವ್ಯಾಕರಣ, ಛಂದಸ್ಸು, ಚರಿತ್ರೆ, ಕೃಷಿ, ವೈದ್ಯ, ಪರಿಸರ ಮುಂತಾದ ಅಧ್ಯಯನ ವಿಷಯಗಳನ್ನು ಹೊಸ ಆಲೋಚನೆಯ ನೆಲೆಯಲ್ಲಿ ವಿಶ್ಲೇಷಿಸಬೇಕಾಗಿದೆ. ಆಧುನಿಕ ವಿಜ್ಞಾನ, ತಂತ್ರಜ್ಞಾನವೇ 'ಜ್ಞಾನ' ಎಂದು ರೂಪಿಸಿರುವ ಇಂದಿನ ಆಲೋಚನೆಗೆ ಪ್ರತಿಯಾಗಿ ಈ ಜ್ಞಾನಶಾಖೆಗಳಲ್ಲಿ ಹುದುಗಿರುವ ದೇಶಿ ಪರಂಪರೆಯ ಜ್ಞಾನದ ಹುಡುಕಾಟ ನಡೆಯಬೇಕಾಗಿದೆ. ಅಂತಹ ಪ್ರಯತ್ನಗಳಿಗೆ ಬೇಕಾದ ಮಾರ್ಗದರ್ಶಕ ಸೂತ್ರಗಳ ಹಾಗೂ ಆಕರ ಪರಿಕರಗಳ ನಿರ್ಮಾಣದ ನೆಲೆ ತುಂಬ ಮುಖ್ಯವಾಗಿದೆ. ಕನ್ನಡ ವಿಶ್ವವಿದ್ಯಾಲಯವು ಕಳೆದ ಹದಿನಾರು ವರ್ಷಗಳಿಂದ ಈ ಕೆಲಸಗಳನ್ನು ಹಲವು ಯೋಜನೆಗಳ ಮೂಲಕ ರೂಪಿಸಿಕೊಂಡಿದೆ, ರೂಪಿಸಿಕೊಳ್ಳುತ್ತಿದೆ. ಇದೊಂದು ಚಲನಶೀಲ ಪ್ರಕ್ರಿಯೆಯಾಗಿದೆ. ಸಮಕಾಲೀನ ಭಾಷಿಕ, ಸಾಂಸ್ಕೃತಿಕ ಸಮಸ್ಯೆಗಳಿಗೆ ಮುಖಾಮುಖಿಯಾಗುತ್ತ ಕನ್ನಡ ನಾಡುನುಡಿಯನ್ನು ಹೊಸದಾಗಿ ಶೋಧಿಸುತ್ತಾ, ವಿವರಿಸುತ್ತಾ ಬಂದಿದೆ. ಅಂದರೆ: ಕನ್ನಡದ ಅರಿವಿನ ವಿಕೇಂದ್ರೀಕರಣವೇ ವರ್ತ ಮಾನದ ಹೊಸ ಬೆಳವಣಿಗೆ. ಇದು ಕನ್ನಡ ವಿಶ್ವವಿದ್ಯಾಲಯದ ಜೀವಧಾತುವಾಗಿದೆ.

ಕನ್ನಡ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳು ಪ್ರಾರಂಭದಿಂದ ಇಲ್ಲಿಯವರೆಗಿನ ಸ್ವಾಗತ ಭಾಷಣಗಳಲ್ಲಿ ವಿಶ್ವವಿದ್ಯಾಲಯದ ಏಳಿಗೆ, ಸಾಧನೆಗಳ ಕುರಿತು ಮೌಲಿಕ ಸಲಹೆಗಳನ್ನು ನೀಡಿದ್ದಾರೆ. ಈ ಮೌಲಿಕ ಮಾತುಗಳನ್ನು ಒಂದೆಡೆ ಕ್ರೋಢೀಕರಿಸಿ **ಕನ್ನಡ ಸಾರ್ವಭೌಮತ್ವ: ಕನಸಿನ ಆಯಾಮಗಳು** ಎಂಬ ಗ್ರಂಥಗಳನ್ನು ಸಂಪಾದಿಸಿಕೊಟ್ಟ ಡಾ.ಮಂಜುನಾಥ ಬೇವಿನಕಟ್ಟಿ ಅವರಿಗೆ ವಿಶ್ವವಿದ್ಯಾಲಯದ ಕೃತಜ್ಞತೆಗಳು ಸಲ್ಲುತ್ತವೆ.

ಈ ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತರುತ್ತಿರುವ ಪ್ರಸಾರಾಂಗ ನಿರ್ದೇಶಕರಾದ ಡಾ. ಮಂಜುನಾಥ ಬೇವಿನಕಟ್ಟಿ ಮತ್ತು ಸಹಾಯಕ ನಿರ್ದೇಶಕರಾದ ಶ್ರೀ ಬಿ. ಸುಜ್ಞಾನ ಮೂರ್ತಿ ಅವರಿಗೆ ಆಭಾರಿಯಾಗಿದ್ದೇನೆ.

**ಡಾ. ಎ. ಮುರಿಗೆಪ್ಪ**
ಕುಲಪತಿ

# ೧. ನಿರ್ಜನ ಪ್ರದೇಶದಲ್ಲಿ ಒಂದು ಹೊಸ ‘ಜನಸ್ಥಾನ’

ನಮ್ಮ ಕುಲಾಧಿಪತಿಗಳೂ ಮುಖ್ಯಮಂತ್ರಿಗಳೂ ಆಗಿರುವ ಸನ್ಮಾನ್ಯ ದೇವೇಗೌಡ ಅವರೇ, ಸಹಕುಲಾಧಿಪತಿಗಳೂ ಉನ್ನತ ಶಿಕ್ಷಣ ಸಚಿವರೂ ಆದ ಸನ್ಮಾನ್ಯ ಡಿ. ಮಂಜುನಾಥ ಅವರೇ, ಘಟಿಕೋತ್ಸವ ಭಾಷಣ ಮಾಡಲಿರುವ ಸನ್ಮಾನ್ಯ ಜಿ.ಎಸ್. ಶಿವರುದ್ರಪ್ಪನವರೇ, ಪ್ರಥಮದಲ್ಲಿ ಕನ್ನಡ ವಿಶ್ವವಿದ್ಯಾಲಯದ ಕನಸು ಕಂಡ ಸನ್ಮಾನ್ಯ ರಾಮಕೃಷ್ಣ ಹೆಗಡೆಯವರೇ, ಹಂಪಿಯ ಮಣ್ಣಿನಲ್ಲಿ ಈ ಕನಸನ್ನು ಕಂಡರಿಸಿದ ಸನ್ಮಾನ್ಯ ಎಂ.ಪಿ. ಪ್ರಕಾಶ್ ಅವರೇ, ಸನ್ಮಾನ್ಯ ಸಚಿವರಾದ ಎನ್.ಎಂ. ನಬಿಯವರೇ, ಮಹಿಳೆಯರೇ ಮತ್ತು ಮಹನೀಯರೇ.

ನಮ್ಮ ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವಕ್ಕೆ ತಮ್ಮನ್ನು ತೆರೆದ ಹೃದಯದಿಂದ ಸ್ವಾಗತಿಸುತ್ತೇನೆ. ಕನ್ನಡ ವಿಶ್ವವಿದ್ಯಾಲಯದ ಇತಿಹಾಸದಲ್ಲಿ ಇಂದು ಚಿರಸ್ಮರಣೀಯವಾದ ದಿನ. ಹಂಪಿಯ ನಿರ್ಜನ ಪರಿಸರದಲ್ಲಿ ಒಂದು ಹೊಸ ‘ಜನಸ್ಥಾನ’ ಈಗ ತಲೆ ಎತ್ತಿದೆ. ವಿದ್ಯೆಯ ಹೊಸ ಕನಸುಗಳನ್ನು ಈ ಪ್ರದೇಶ ಕಾಣ ತೊಡಗಿದೆ. ಒಂದು ದೊಡ್ಡ ಸಾಮ್ರಾಜ್ಯವನ್ನು ನುಂಗಿ ನೀರು ಕುಡಿದು ಈ ನೆಲ ಈಗ ಮತ್ತೆ ಒಂದು ಹೊಸ ತಿಳುವಳಿಕೆಯ ಪರಿಸರವನ್ನು ಸೃಷ್ಟಿಸುತ್ತಿದೆ. ಮೈಹೊರಳಿಸಿದ ಕಾಲದ ಇನ್ನೊಂದು ಮಗ್ಗಲು ಕಾಣತೊಡಗಿದೆ.

ಕರ್ನಾಟಕ ಸರ್ಕಾರ ಕೊಡಮಾಡಿರುವ ಈ ವಿಸ್ತಾರವಾದ ನಿವೇಶನದಲ್ಲಿ ಈಗ ವಿಶ್ವವಿದ್ಯಾಲಯದ ಕಟ್ಟಡಗಳು ತಲೆಎತ್ತಿವೆ. ತ್ರಿಪದಿ, ಕೂಡಲಸಂಗಮ, ತುಂಗಾಭದ್ರಾ, ಕವಿರಾಜಮಾರ್ಗ, ದೇಸೀಮಾರ್ಗದಂಥ ಹಳೆಯ ಹೆಸರುಗಳು ಹೊಸ ಅರ್ಥವಂತಿಕೆಯನ್ನು ಪಡೆದುಕೊಳ್ಳುತ್ತಿವೆ. ಕಟ್ಟಡಗಳ ವಿನ್ಯಾಸವು ವಿಜಯನಗರದ ವಾಸ್ತುಶಿಲ್ಪಕ್ಕೆ ವಿಸಂಗತವಾಗದಂತೆ ನೋಡಿಕೊಳ್ಳಲಾಗಿದೆ. ವಿದ್ಯಾನಗರವಾಗಿದ್ದದ್ದು ಸಾಮ್ರಾಜ್ಯ ವಿಸ್ತಾರದಿಂದ ವಿಜಯನಗರವಾಗಿ, ಈಗ ವಿದ್ಯಾರಣ್ಯವಾಗಿ ಚಿಗುರುತ್ತಿದೆ. ಬೇರೆ ಬೆಟ್ಟಗಳಲ್ಲಿ ಗಿಡಮರ ಬೆಳೆದರೆ ಈ ಅರಣ್ಯದಲ್ಲಿ ಕಲ್ಲುಬಂಡೆ ಬೆಳೆಯುತ್ತವೆ. ಮೂರ್ತಿ ಇಲ್ಲವೆ ಮಂದಿರವಾಗುವ ಸುಪ್ತ ಕನಸಿನ ಈ ಕಲ್ಲು ಬಂಡೆಗಳ ಅಡಿಯಲ್ಲಿ ಈಗ ಹಸಿರು ಹುಲ್ಲು ಬೆಳೆಯುತ್ತಿದೆ. ಬಿರುಬೇಸಿಗೆಯಲ್ಲೂ ಹುಲ್ಲಿಗೆ ನೀರುಣಿಸುವ ತಾಯಿ ತುಂಗಭದ್ರೆಗೆ ನಮಸ್ಕರಿಸೋಣ.

ಕಳೆದ ಎರಡು ವರ್ಷಗಳಿಂದ ಕನ್ನಡ ವಿಶ್ವವಿದ್ಯಾಲಯ ನುಡಿಹಬ್ಬವನ್ನು ಆಚರಿಸುತ್ತ ಬಂದಿದೆ. ವಿಶೇಷವೆಂದರೆ ಈ ಸಲದ ನುಡಿಹಬ್ಬ ನಮ್ಮದೇ ಆವರಣದಲ್ಲಿ ನಮ್ಮ ಕಟ್ಟಡಗಳಲ್ಲಿಯೇ ನಡೆಯುತ್ತಿರುವುದು. ನಿಮಗೆಲ್ಲ ತಿಳಿದಿರುವಂತೆ ನಮ್ಮ ವಿಶ್ವವಿದ್ಯಾಲಯದಲ್ಲಿ ಶಿಕ್ಷಣಕ್ಕಿಂತ ಸಂಶೋಧನೆಗೆ ಮಹತ್ವ ಹೆಚ್ಚು. ನಾವು ಎಂ.ಫಿಲ್. ಮತ್ತು ಪಿಎಚ್.ಡಿ. ಪದವಿಗಳನ್ನು ಮಾತ್ರ ನೀಡುತ್ತೇವೆ. ಈ ಎರಡೂ ಪದವಿಗಳ ಪದವೀಧರರ ಪ್ರಥಮ ತಂಡ ಹೊರಬರುತ್ತಿರುವುದು ಈ ಸಲದ ನುಡಿಹಬ್ಬದ ವಿಶೇಷ. ಈ ವರ್ಷದ ಘಟಿಕೋತ್ಸವ ನಮ್ಮ ವಿಶ್ವವಿದ್ಯಾಲಯದ ಮೊದಲ ಘಟಿಕೋತ್ಸವವಾಗಿದೆ. ಶ್ರೀ ಕೃಷ್ಣಕಟ್ಟಿಯವರು ಸಿದ್ಧಪಡಿಸಿದ ಬೇಂದ್ರೆ ಹಾಗೂ ಕನ್ನಡ ಭಾವಗೀತದ ಸ್ವರೂಪ ಎಂಬ ಮಹಾಪ್ರಬಂಧಕ್ಕೆ ಪಿಎಚ್.ಡಿ. ಪದವಿಯನ್ನು ಕೊಡಲಾಗುತ್ತಿದೆ. ಈ ಮಹಾಪ್ರಬಂಧ ಮೊದಲನೆಯದದ್ದಾರಿಂದ ಮತ್ತು ಅದರ ಪರೀಕ್ಷಕರು ನಾಡಿನ ಶ್ರೇಷ್ಠ ವಿದ್ವಾಂಸರಾಗಿರುವುದರಿಂದ ಅದೊಂದು ಮಾದರಿಯಾಗಬೇಕೆಂದು ನಮ್ಮೆಲ್ಲರ ಆಸೆಯಾಗಿದೆ. ಶ್ರೀ ಕಟ್ಟಿಯವರೊಂದಿಗೆ ಇನ್ನೂ ಆರು ಜನ ವಿದ್ಯಾರ್ಥಿಗಳು ಎಂ.ಫಿಲ್. ಪದವಿ ಪಡೆಯುತ್ತಾರೆ. ನಮ್ಮದಿನ್ನೂ ಶೈಶವಾವಸ್ಥೆಯಲ್ಲಿರುವ ವಿಶ್ವವಿದ್ಯಾಲಯವಾಗಿರುವುದರಿಂದ ಅದರ ತಳಹದಿ ಗಟ್ಟಿಯಾಗಿರಬೇಕೆಂದು ನಾವೆಲ್ಲ ಶ್ರಮಿಸುತ್ತಿದ್ದೇವೆ. ಬೆಳೆದ ಮೇಲೆ ಕೂಡ ಶಿಕ್ಷಣದ ಗುಣಮಟ್ಟದಲ್ಲಿ ಯಾವುದೇ ಬಗೆಯ ರಾಜಿಗೆ ಇಲ್ಲಿ ಅವಕಾಶವಿರಬಾರದು.

ಈ ಪದವಿಗಳಲ್ಲದೆ ನಾಡೋಜ ಎಂಬ ಗೌರವ ಪದವಿಯನ್ನೂ ನಾವು ಈ ವರ್ಷ ನೀಡುತ್ತಿದ್ದೇವೆ. ಯಾವುದೇ ಕ್ಷೇತ್ರದಲ್ಲಿ ಅತ್ಯುನ್ನತವಾದ ಸೇವೆ ಸಲ್ಲಿಸಿದವರಿಗೆ ಈ ಗೌರವ ಪದವಿಯನ್ನು ನೀಡಲಾಗುತ್ತಿದೆ. ಈ ಸಲ ರಾಷ್ಟ್ರಕವಿ ಡಾ. ಕುವೆಂಪು ಅವರು, ಸನ್ಮಾನ್ಯ ನಿಜಲಿಂಗಪ್ಪನವರು ಮತ್ತು ಶ್ರೀಮತಿ ಗಂಗೂಬಾಯಿ ಹಾನಗಲ್ ಇವರಿಗೆ ಈ ಪದವಿ ಸಲ್ಲುತ್ತಿದೆ.

ಕನ್ನಡ ವಿಶ್ವವಿದ್ಯಾಲಯದ ಗುರಿ ಎಂದರೆ ಕನ್ನಡದ ಸರ್ವತೋಮುಖವಾದ ಬೆಳವಣಿಗೆಯಾಗಿದೆ. ಆದರೆ ಇಂಗ್ಲೀಷ್ ಮಾಧ್ಯಮದ ಭರಾಟೆಯಲ್ಲಿ ಕನ್ನಡದ ಬೆಳವಣಿಗೆ ಎದಕ್ಕೂ ಸಾಲದೆನ್ನುವುದನ್ನು ಬೇರೆ ಹೇಳಬೇಕಾಗಿಲ್ಲ. ಸಮಾಜ ನಮ್ಮ ಕಣ್ಣಿಗೆ ಕಾಣದಂತೆ ಬದಲಾವಣೆ ಹೊಂದುತ್ತಿರುತ್ತದೆ. ಈ ಶತಮಾನದ ಪ್ರಾರಂಭದಲ್ಲಿ ಒಮ್ಮೆಲೆ ನಮ್ಮ ದೇಶ ಬದಲಾಗತೊಡಗಿತು. ಇದಕ್ಕೆ ಬ್ರಿಟೀಷರ ಆಗಮನವೇ ಕಾರಣವೆನ್ನುವುದು ಸ್ಪಷ್ಟವಾಗಿದೆ. ಬ್ರಿಟೀಷರಿಗಿಂತ ಮುಂಚೆ ಗ್ರೀಕರು ಮುಸಲ್ಮಾನರು ನಮ್ಮಲ್ಲಿಗೆ ಬಂದಿದ್ದರು, ಬದಲಾವಣೆ ತಂದಿದ್ದರು. ಆದರೆ ಈ ಬದಲಾವಣೆಯ ಗತಿ ಇಷ್ಟು ತೀವ್ರವಾಗಿರಲಿಲ್ಲ. ಬ್ರಿಟೀಷರ ರಾಜಸತ್ತೆಯ ಪರಿಣಾಮವೇ ಬೇರೆ. ಅವರು ಬೇರೊಂದು ಸಂಸ್ಕೃತಿಯನ್ನು ತಂದರು. ಬೇರೊಂದು ರೀತಿಯ ರಾಜ್ಯವ್ಯವಸ್ಥೆಯನ್ನು ತಂದರು. ಎಲ್ಲಕ್ಕಿಂತ ಹೆಚ್ಚಾಗಿ ನಮಗೆ ಇಂಗ್ಲಿಷ್ ಭಾಷೆಯನ್ನು ಕಲಿಸಿದರು.

ಇಂಗ್ಲಿಷ್ ಭಾಷೆ ಅನೇಕ ಪ್ರಲೋಭನೆಗಳನ್ನು ಒಡ್ಡಿದ ಭಾಷೆ. ಇಂದಿಗೂ ಆ ಭಾಷೆ ಕಲಿಯದವನು ವಿದ್ಯಾವಂತನೇ ಅಲ್ಲ. ಯಾವುದೇ ಭಾಷೆ ಮನುಷ್ಯನ ತಿಳುವಳಿಕೆಯನ್ನು ತನ್ನ ರೀತಿಯಲ್ಲಿ ತಿದ್ದುತ್ತದೆ. ಇಂಗ್ಲಿಷ್ ಹಾಗೇ ಮಾಡಿತು. ಈಗ ನಮ್ಮ ಚಿಂತನೆ – ಅದು ಕನ್ನಡದಲ್ಲಿ ಅಭಿವ್ಯಕ್ತಿ ಪಡೆದರೂ ನಡೆಯುವುದು ಮಾತ್ರ ಇಂಗ್ಲಿಷ್ ಭಾಷೆಯ ಮೂಲಕವಾಗಿ. ನಮ್ಮ ಶಿಕ್ಷಣದ ಮಾಧ್ಯಮ ಮೊದಲು ಇಂಗ್ಲಿಷ್ ಇದ್ದದ್ದು ಈಗ ಕನ್ನಡವಾಗುತ್ತಿದೆ. ಆದರೆ ಕನ್ನಡ ಮಾಧ್ಯಮ ಕೂಡ ಇಂಗ್ಲಿಷ್ ಮಾಧ್ಯಮದ ಅನುವಾದವಾಗಿದೆ. ನಮ್ಮ ಸಮಾಜ ತ್ವರಿತಗತಿಯಲ್ಲಿ ಬದಲಾವಣೆ ಹೊಂದುತ್ತಿರುವುದಕ್ಕೆ ಈ ಮಾಧ್ಯಮ ಕಾರಣವಾಗಿದೆ. ಇಂಗ್ಲಿಷ್ ಕಲಿತ ಮೇಲೆ ನಾವು ನಮ್ಮ ಇತಿಹಾಸದ ಕಲ್ಪನೆಯನ್ನು ರೂಪಿಸಿಕೊಂಡೆವು. ಈ ಐತಿಹಾಸಿಕ ಪ್ರಜ್ಞೆಯಿಂದ ನಮ್ಮ ಹಳೆಯ ಜ್ಞಾನಶಾಸ್ತ್ರವನ್ನು ರೂಪಿಸಿಕೊಂಡೆವು. ನಮ್ಮಲ್ಲಿರುವ ತರತಮ ಭಾವನೆಗಳಿಗೆ, ಮೌಲ್ಯಗಳಿಗೆ, ಕೀಳರಿಮೆಗೆ, ಸರಿತಪ್ಪುಗಳ ಕಲ್ಪನೆಗಳಿಗೆ ಈ ಭಾಷೆಯೇ ಕಾರಣವೆಂದರೂ ತಪ್ಪಿಲ್ಲ. ಇದರ ಪರಿಣಾಮವಾಗಿ ನಮ್ಮಲ್ಲಿದ್ದ ವಿಜ್ಞಾನಗಳೆಲ್ಲ ಗೊಡ್ಡು ಪುರಾಣಗಳಾದವು. ಆಯುರ್ವೇದದಂಥ ವಿಜ್ಞಾನ, ದೇವಸ್ಥಾನ ರಚನೆಯಂಥ ನಮ್ಮ ಇಂಜಿನಿಯರಿಂಗ್ ಕೂಡ ಗೊಡ್ಡು ಪುರಾಣಗಳಾಗಿ ವಿಶ್ವಾಸ ಕಳೆದುಕೊಂಡವು. ನೆಲ, ಹೊಲ, ಕನ್ನಡವಾಗಿದ್ದರೂ ಕೃಷಿಶಾಸ್ತ್ರ ಕೂಡ ಇಂಗ್ಲಷಿನಲ್ಲಿ ರೂಪುಗೊಳ್ಳುತ್ತಿರುವ ವಿಪರ್ಯಾಸ ನಮ್ಮದಾಗಿದೆ.

ಈ ವಿಪರ್ಯಾಸವನ್ನು ತಡೆಗಟ್ಟುವುದು ಕನ್ನಡ ವಿಶ್ವವಿದ್ಯಾಲಯದ ಗುರಿಯಾಗಿದೆ. ಕನ್ನಡಕ್ಕೆ ತನ್ನದೇ ಆದ ಅಭಿಜಾತತೆ ಇದೆ, ಜಾನಪದವೂ ಇದೆ. ಅಲ್ಲದೆ ಹೊಸ ಕಾಲಕ್ಕೆ ತಕ್ಕಂಥ ಆಧುನಿಕತೆಯೂ ಇದೆ. ಈ ಮೂರು ನಿಟ್ಟುಗಳಲ್ಲಿ ಬೆಳವಣಿಗೆ ಪಡೆದ ಭಾಷೆಯನ್ನು ಸರಿಯಾಗಿ ದುಡಿಸಿಕೊಳ್ಳುವ ಉಪಕ್ರಮ ಇಲ್ಲಿ ನಡೆಯುತ್ತಿದೆ. ಇದಕ್ಕಾಗಿ ಸಂಶೋಧನೆಯ ಕಲ್ಪನೆ ಹಾಗೂ ಉದ್ದೇಶಗಳನ್ನು ಬದಲಿಸಿಕೊಳ್ಳಬೇಕಾಗಿದೆ.

ಪಿಎಚ್.ಡಿ. ಅಥವಾ ಅನ್ಯತ್ರ ಮಾಡಿದ ಸಂಶೋಧನೆಗಳು ಸಂಶೋಧನೆ ಮಾಡಿದವರಿಗೆ ಜೀವನದಲ್ಲಿ ಒಂದು ಬಾರಿಯೂ ಉಪಯೋಗವಾಗದಿದ್ದಲ್ಲಿ ಅಂಥ ಸಂಶೋಧನೆಯಿಂದ ಏನು ಪ್ರಯೋಜನ, ಸಂಶೋಧನೆಗಾಗಿ ಸಂಶೋಧನೆ ಆಗಬಾರದು. ಆದ್ದರಿಂದಲೇ ಅದು ಕೊನೆಪಕ್ಷ ಕನ್ನಡದ ಸಾಮಾನ್ಯ ಜನ, ವಿದ್ಯಾರ್ಥಿಗಳು ಹಾಗೂ ಬುದ್ಧಿವಂತರು ಈ ಮೂವರಲ್ಲಿ ಒಬ್ಬರಿಗಾದರೂ ಉಪಯೋಗ ಆಗಬೇಕೆಂದು ಕನ್ನಡ ವಿಶ್ವವಿದ್ಯಾಲಯ ಬಯಸುತ್ತದೆ. ಜನ ಸಾಮಾನ್ಯರಿಗಾಗಿ ಈ ಸಲ ೧೦೦ ಪುಸ್ತಕಗಳನ್ನು ನಾವು ಪ್ರಕಟಿಸಿದ್ದೇವೆ. ಕೃಷಿಪದ ನಿಘಂಟು, ಜನಪದ ಕಲೆಗಳ ವಿಶ್ವಕೋಶಗಳು ಆಗಲೇ ಸಿದ್ಧವಾಗಿದೆ. ಕನ್ನಡಿಗರ ಮನೆಮನೆಗಳಲ್ಲಿರಬೇಕಾದ ವೈದ್ಯಕೋಶ ಅಚ್ಚಿನ ಮುಕ್ತಾಯದ ಹಂತದಲ್ಲಿದೆ. ಹಾಗೆಯೇ ಆಯಗಾರರೇ ಮುಂತಾದವರ ವೃತ್ತಿ ಪದಕೋಶಗಳು ತಯಾರಿಕೆಯ ಹಂತದಲ್ಲಿವೆ.

ಸಾಹಿತ್ಯ ಮತ್ತು ಮಾನವಿಕ ಶಾಸ್ತ್ರಗಳಲ್ಲಿ ನಡೆದ ಸಂಶೋಧನೆ ಬೆಲೆಯುಳ್ಳದ್ದಾಗಿದೆ. ಆದರೆ ವಿಜ್ಞಾನದ ಕ್ಷೇತ್ರದಲ್ಲಿ ನಾವು ನಿರೀಕ್ಷಿಸಿದಷ್ಟು ಪ್ರಗತಿ ಆಗಿಲ್ಲ. ವೈಜ್ಞಾನಿಕ ತಿಳುವಳಿಕೆ ಇದ್ದರೂ ವೈಜ್ಞಾನಿಕ ಚಿಂತನೆ ನಮಗೆ ಇನ್ನೂ ಸಾಧಿಸಿಲ್ಲ. ಆದರೂ ಈ ದಿಕ್ಕಿನಲ್ಲಿ ನಮ್ಮ ಪ್ರಯತ್ನ ನಡೆದೇ ಇದೆ. ನಮ್ಮ ವಿಶ್ವವಿದ್ಯಾಲಯ ಪ್ರಕಟಿಸುತ್ತಿರುವ 'ವಿಜ್ಞಾನ ಸಂಗಾತಿ'ಗೆ ಈ ಗುರಿಯಿದೆ. ಅಲ್ಲದೆ ಕನ್ನಡದಲ್ಲಿ ವಿಜ್ಞಾನ ಬೋಧನೆಯ ಪಠ್ಯಗಳನ್ನು ನಿರ್ಮಿಸುತ್ತಿದ್ದೇವೆ. ನಮ್ಮ ಕನ್ನಡ ಕಾವ್ಯ, ಶೈಲಿ ಕೈಪಿಡಿಗಳು ಆಗಲೇ ಸಿದ್ಧವಾಗಿವೆ. ಈವರೆಗೆ ಲಭ್ಯವಿದ್ದ, ಕರ್ನಾಟಕವನ್ನು

ಕನ್ನಡಿಗರಿಗೆ ಪರಿಚಯಿಸುವ ಕರ್ನಾಟಕದ ಸಮಗ್ರ ಇತಿಹಾಸ ಆರು ಸಂಪುಟಗಳಲ್ಲಿ ಸಿದ್ಧಗೊಳ್ಳುತ್ತಿವೆ. ಕರ್ನಾಟಕದ ಬಗೆಗಿನ ಯಾವುದೇ ಮಾಹಿತಿ ಒದಗಿಸುವ ಮಾಹಿತಿ ಕೇಂದ್ರ ದಿನೇದಿನೇ ವೃದ್ಧಿಗೊಳ್ಳುತ್ತಿದೆ.

ಕನ್ನಡ ಚಿಂತನೆಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಗೊಳಗಾಗಬೇಕೆಂಬ ಉದ್ದೇಶದಿಂದ ಭಾಷಾಂತರ ವಿಭಾಗವನ್ನು ಚುರುಕುಗೊಳಿಸಿದ್ದೇವೆ. ಆ ವಿಭಾಗದ ಪುರಾಣಕೋಶ ಆಗಲೇ ಸಿದ್ಧವಾಗಿದೆ. ತುಂಬ ಮಹತ್ವಾಕಾಂಕ್ಷೆಯ ಮತ್ತು ಭಾರತದ ಯಾವ ವಿಶ್ವವಿದ್ಯಾಲಯವೂ ಪ್ರಯತ್ನಿಸಲಾಗದ ಒಂದು ವಿನೂತನ ಯೋಜನೆ ನಮ್ಮ ಕನ್ನಡ, ಕನ್ನಡದಲ್ಲಿ ದಿನನಿತ್ಯ ಸೃಷ್ಟಿಯಾಗುತ್ತಿರುವ ಶಬ್ದಗಳನ್ನು ಆಯಾ ತಿಂಗಳು ದಾಖಲಿಸಿ ರೂಪನಿರ್ಣಯ ಮಾಡುವುದು ಮತ್ತು ಆ ಮೂಲಕ ಕನ್ನಡದ ಬೆಳವಣಿಗೆಗೆ ನಿರ್ದೇಶನಗಳನ್ನು ಕೊಡುವುದು ಈ ಯೋಜನೆಯ ಉದ್ದೇಶ. ಇದು ಭಾರತದ ಯಾವ ಭಾಷೆಯಲ್ಲೂ ನಡೆದಿಲ್ಲ ಎನ್ನುವುದನ್ನು ಒತ್ತಿ ಹೇಳಬಯಸುತ್ತೇನೆ.

ಕನ್ನಡ ವಿಶ್ವವಿದ್ಯಾಲಯ ಈಗ ಮುಗಿಸಿರುವ ಯೋಜನೆಗಳಲ್ಲದೆ ಇನ್ನೂ ಅನೇಕ ಯೋಜನೆಗಳನ್ನು ಕೈಗೊಳ್ಳಬೇಕಿದೆ. ನಮ್ಮ ಬೇರೆ ಬೇರೆ ಭೌಗೋಳಿಕ ಪ್ರದೇಶಗಳು. ಇತಿಹಾಸದ ಬೇರೆಬೇರೆ ಮಗ್ಗಲುಗಳು. ನಮ್ಮ ಸಾಹಿತ್ಯ ಕಲೆಗಳು ಮುಟ್ಟಿದ ಎತ್ತರದ ಆಳವಾದ ಅರಿವು ನಮಗೆ ಆಗಬೇಕಾಗಿದೆ. ನಮ್ಮಲ್ಲಿ ಹೊಸದಾಗಿ ಹುಟ್ಟಿರುವ 'ಕಾವ್ಯಕೇಂದ್ರ'ಕ್ಕೆ ಹಲವಾರು ಕನಸುಗಳಿವೆ. ಕನ್ನಡದ ಶಕ್ತಿ ಇರುವುದು ಅದರ ಸಾಹಿತ್ಯದಲ್ಲಿ. ನಮ್ಮದು ಕಾವ್ಯ ನಾಟಕಗಳಿಗೆ ಹೇಳಿ ಮಾಡಿಸಿದ ಭಾಷೆ. ಅದಕ್ಕಾಗಿ ಸಾಹಿತ್ಯವನ್ನು ಕುರಿತು ಅನೇಕ ಚಿಂತನೆಯ ಕ್ರಮಗಳು ಹುಟ್ಟಿ ಬಂದರೆ ಆಶ್ಚರ್ಯವಿಲ್ಲ.

ಇಷ್ಟಾಗಿ ನಮ್ಮ ಮುಂದೆ ಅನೇಕ ಕನಸುಗಳು ಸುಳಿದಾಡುತ್ತಿವೆ. ಸಾಹಿತ್ಯದ ಏಕಮೇವ ಮಾಧ್ಯಮವಾಗಿರುವ ಕನ್ನಡ ಭಾಷೆ ಇನ್ನು ಮುಂದೆ. ಎಲ್ಲ ಶಾಸ್ತ್ರಗಳಿಗೂ ಮಾಧ್ಯಮವಾಗಬೇಕಾಗಿದೆ. ಸಾಹಿತ್ಯವನ್ನು ಹೊರತುಪಡಿಸಿ ಕನ್ನಡ ಭಾಷೆ ಇದೀಗ ಬೇರೆ ಚಿಂತನೆಯ ಕ್ರಮಗಳನ್ನು ಕಲಿಯತೊಡಗಿದೆ. ಮಾನವಶಾಸ್ತ್ರ ಹಾಗೂ ಭೌತಿಕ ಶಾಸ್ತ್ರಗಳು ಕನ್ನಡ ಭಾಷೆಯಲ್ಲಿ ಮೈದಾಳಲು ಕಾದು ನಿಂತಿವೆ. ಒಟ್ಟಿನಲ್ಲಿ ಹೊಸ ಶಿಕ್ಷಣ ಶಾಸ್ತ್ರ ಇಲ್ಲಿಂದ ಹುಟ್ಟಬೇಕೆಂಬುದು ನಮ್ಮ ಆಸೆ. ಮಹತ್ವಾಕಾಂಕ್ಷೆಯ ಇಂಥ ಗುರಿ ಸಾಧಿಸಲು ಸರಕಾರದ ಉದಾರ ನೆರವು ಬೇಕು. ನಿಮ್ಮೆಲ್ಲರ ಸಹಕಾರ ಬೇಕು.

ತಮ್ಮ ಘನವಾದ ಸಾಕ್ಷಿಯಲ್ಲಿ ನಡೆಯುತ್ತಿರುವ ಪ್ರಥಮ ಘಟಿಕೋತ್ಸವ ಈ ದಿನ ಹೀಗೆ ಹಾರೈಸುತ್ತೇನೆ.

ಮೂಡುಮಲೆಯ ಸೂರ್ಯನಾರಾಯಣ ಸ್ವಾಮಿ, ಪಡುಮಲೆಯ ಚಂದ್ರಾಮ ಸ್ವಾಮಿ ಇರುವತನಕ ಇಲ್ಲಿ ನಿತ್ಯ ನಿರಂತರವಾಗಿ ವಿದ್ಯೆ ಸೃಷ್ಟಿ ನಡೆಯುತ್ತಿರಲೆಂದು ಪಂಪಾಂಬಿಕೆ ಸಮೇತ ವಿರೂಪಾಕ್ಷನ ಸನ್ನಿಧಿಯಲ್ಲಿ ಪ್ರಾರ್ಥಿಸುತ್ತೇನೆ.

ನಮ್ಮ ವಿಶ್ವವಿದ್ಯಾಲಯವು ಈ ವರ್ಷ ನೀಡುತ್ತಿರುವ ನಾಡೋಜ ಗೌರವ ಪದವಿಯನ್ನು ಈಗ ಕುಲಾಧಿಪತಿಗಳು ಶ್ರೀ ಕುವೆಂಪು, ಶ್ರೀ ಎಸ್. ನಿಜಲಿಂಗಪ್ಪ ಮತ್ತು ಶ್ರೀಮತಿ ಗಂಗೂಬಾಯಿ ಹಾನಗಲ್ ಅವರಿಗೆ ಪ್ರದಾನ ಮಾಡಬೇಕೆಂದು ಕೋರುತ್ತೇನೆ. ಆದರೆ ರಾಷ್ಟ್ರಕವಿ ಡಾ. ಕುವೆಂಪು ಅವರು ಈಗ ನಮ್ಮ ಮಧ್ಯದಲ್ಲಿ ಇಲ್ಲ. ಆದರೆ ಅವರು ಬಿಟ್ಟು ಹೋಗಿರುವ ಕಾವ್ಯವಿದೆ, ಕತೆ, ಕಾದಂಬರಿಗಳಿವೆ. ರಸವಿಮರ್ಶೆಯಿದೆ. ಸಹ್ಯಾದ್ರಿಯ ಮಡಿಲಲ್ಲಿ, ಚೇತೋಹಾರಿಯಾದ ವನರಾಜಿಯ ಮಧ್ಯದಲ್ಲಿ ಹುಟ್ಟಿ ಬೆಳೆದ ಈ ಕವಿಯ ಕಾವ್ಯಚಿಂತನದೊಂದಿಗೆ ಕನ್ನಡದ ಧ್ಯಾನವೂ ಮಿಳಿತವಾಗಿತ್ತು ಅಥವಾ ಅವೆರಡೂ ವಿಭಿನ್ನವಾಗಿದ್ದವು. ನಮ್ಮ ಕವಿಗಳಲ್ಲಿ ಕರ್ನಾಟಕದ ನಿತ್ಯ ಸಚಿವ ಮಂಡಳವನ್ನ ಕಂಡು ಕುವೆಂಪು ಜೀವನ ಮೌಲ್ಯಗಳಿಗಾಗಿ ಬಾಳಿದರು. ಅವರದು ನವೋದಯ ಕಾವ್ಯದ ತಿರುಳಾದ ಪ್ರತಿಭೆ. ಅವರ ಮಹಾಕಾವ್ಯ ಮತ್ತು ಕಾದಂಬರಿಗಳು ಈ ಯುಗದ ಮಹತ್ವದ ಕೊಡುಗೆಗಳಾಗಿವೆ. ಅಂಥ ಅಪ್ರತಿಮ ಪ್ರತಿಭೆಗೆ ನಮನ ಪೂರ್ವಕವಾಗಿ ನಮ್ಮ ಗೌರವ ಪದವಿ 'ನಾಡೋಜ'ವನ್ನು ಅರ್ಪಿಸುತ್ತಿದ್ದೇವೆ.

ಸನ್ಮಾನ್ಯ ನಿಜಲಿಂಗಪ್ಪನವರ ವ್ಯಕ್ತಿತ್ವವೆಂದರೆ ನಮ್ಮ ಸ್ವಾತಂತ್ರ್ಯಪೂರ್ವದ ಮತ್ತು ಸ್ವಾತಂತ್ರ್ಯೋತ್ತರ ರಾಷ್ಟ್ರೀಯ ಇತಿಹಾಸವಾಗಿದೆ. ಈಗ ಅವರು ರಾಜಕೀಯದಿಂದ ನಿವೃತ್ತರಾಗಿರಬಹುದು. ಆದರೆ ನಮ್ಮ ರಾಜಕೀಯದ ಒಳಿತು ಕೆಡಕುಗಳಿಗೆ, ನೀತಿ ಸಂಹಿತೆಗೆ, ಶಕ್ತಿ ದೌರ್ಬಲ್ಯಗಳಿಗೆ ಅವರು ಪ್ರಮಾಣಪುರುಷರಾಗಿದ್ದಾರೆ. ಅವರು ನಂಬಿಕೊಂಡು ಬಂದಿರುವ ರಾಜಕೀಯ ಮಾರ್ಗದಿಂದ ದೇಶ ಇಂದು ವಿಮುಖವಾಗಿದ್ದರೂ ಅದನ್ನು ಬಿಟ್ಟರೆ ಬೇರೆ ಮಾರ್ಗವಿಲ್ಲವೆನ್ನುವುದಕ್ಕೆ ನಿಜಲಿಂಗಪ್ಪನವರೇ ಸಾಕ್ಷಿಯಾಗಿದ್ದಾರೆ. ರಾಜಕೀಯದ ಜೊತೆಗೆ ಸಾಹಿತ್ಯಾಸಕ್ತಿಯೂ ಸೇರಿಕೊಂಡು ಅವರ ವ್ಯಕ್ತಿತ್ವವನ್ನು ಇನ್ನೂ ಶ್ರೀಮಂತವಾಗಿಸಿವೆ. ಅವರ ವ್ಯಕ್ತಿತ್ವದಿಂದ ನಾಡು ಕಲಿತುಕೊಳ್ಳುವುದು ಬೇಕಾದಷ್ಟಿದೆ. ರಾಜಕೀಯದ ಆಚಾರ ಸಂಹಿತೆಗೆ ಉದಾಹರಣೆಯಾಗಿರುವ ಅವರು ಇಡೀ ನಾಡಿನ ಗುರು 'ನಾಡೋಜ'.

ಶ್ರೀಮತಿ ಗಂಗೂಬಾಯಿ ಹಾನಗಲ್ ಅವರು ನಮ್ಮವರು. ನಮ್ಮ ವಿಶ್ವವಿದ್ಯಾಲಯದ ಜೊತೆಗೆ ನಿಕಟವಾದ ಸಂಬಂಧವನ್ನಿಟ್ಟುಕೊಂಡವರು. ಇಲ್ಲಿಯ ಶೈಕ್ಷಣಿಕ ಚಟುವಟಿಕೆಗಳನ್ನು ಆಸಕ್ತಿಯಿಂದ ವೀಕ್ಷಿಸಿ ತಮ್ಮ ಅಮೂಲ್ಯವಾದ ಸಲಹೆ ಸಹಕಾರ ನೀಡಿದವರು. ಸಂಗೀತ ಕ್ಷೇತ್ರದಲ್ಲಿ ಈಗ ಕರ್ನಾಟಕದಲ್ಲಿ ಇವರ ಸರಿದೊರೆಯಾಗ ತಕ್ಕವರು ಯಾರೂ ಇಲ್ಲ. ಇವರ ಸಂಗೀತದ ದೀರ್ಘವಾದ ಸೇವೆಯನ್ನು ಗಮನಿಸಿ ಇವರಿಗೆ ಈ ಪದವಿಯನ್ನು ನೀಡುತ್ತಿದ್ದೇವೆ. ಕನ್ನಡ ವಿಶ್ವವಿದ್ಯಾಲಯ ವಿದ್ವಾಂಸರನ್ನು ಗುರುತಿಸುವ ಮೊದಲು ನಾಡಿನ ಶ್ರೇಷ್ಠ ವಿದ್ವಾಂಸರು ವಿಶ್ವವಿದ್ಯಾಲಯವನ್ನು ಗುರುತಿಸಬೇಕಾಗಿದೆ. ಗೌರವ ಪದವಿ ಎಂದರೆ ಇದೇ ಗಂಗೂಬಾಯಿಯಂತವರ ವೈದುಷ್ಯವನ್ನು ನಾವು ಗುರುತಿಸಬೇಕಾಗಿಲ್ಲ. ಅದಕ್ಕೆ ಮೊದಲೇ ಅವರು 'ನಾಡೋಜ' ರಾಗಿದ್ದಾರೆ. ಅವರ ಸಂಗೀತವನ್ನು ನಾಡಿನ ಹಿರಿಯ ಗಾಯಕರೆಲ್ಲ ಗುರುತಿಸಿದ್ದಾರೆ. ಆದರೆ ನಮ್ಮ ವಿಶ್ವವಿದ್ಯಾಲಯ ಅವರನ್ನು ಈ ಪದವಿ ಸ್ವೀಕರಿಸಬೇಕಾಗಿ ಕೇಳಿಕೊಳ್ಳುತ್ತಿದೆ.

ಫೆಬ್ರವರಿ ೧೫, ೧೯೯೫

**ಡಾ. ಚಂದ್ರಶೇಖರ ಕಂಬಾರ**
ಕುಲಪತಿ

# ೨. ಮೈ ಹೊರಳಿಸಿದ ಕಾಲ

ನಮ್ಮ ಕುಲಾಧಿಪತಿಗಳಾದ ಮುಖ್ಯಮಂತ್ರಿಗಳೂ ಆಗಿರುವ ಸನ್ಮಾನ್ಯ ದೇವೇಗೌಡ ಅವರೇ, ಸಹಕುಲಾಧಿಪತಿಗಳೂ ಉನ್ನತ ಶಿಕ್ಷಣ ಸಚಿವರೂ ಆದ ಸನ್ಮಾನ್ಯ ಡಿ. ಮಂಜುನಾಥ ಅವರೇ, ಘಟಿಕೋತ್ಸವ ಭಾಷಣ ಮಾಡಲಿರುವ ಸನ್ಮಾನ್ಯ ಡಾ. ಷೇಖ್ ಅಲಿ ಅವರೇ, ಮಹಿಳೆಯರೇ ಮತ್ತು ಮಹನೀಯರೇ,

ನಮ್ಮ ವಿಶ್ವವಿದ್ಯಾಲಯದ ಎರಡನೆಯ ಘಟಿಕೋತ್ಸವಕ್ಕೆ ತಮ್ಮನ್ನು ತೆರೆದ ಹೃದಯದಿಂದ ಸ್ವಾಗತಿಸುತ್ತೇನೆ. ಕನ್ನಡ ವಿಶ್ವವಿದ್ಯಾಲಯದ ಇತಿಹಾಸದಲ್ಲಿ ಇಂದು ಚಿರಸ್ಮರಣೀಯವಾದ ದಿನ. ಹಂಪಿಯ ನಿರ್ಜನ ಪರಿಸರದಲ್ಲಿ ಒಂದು ಹೊಸ 'ಜನಸ್ಥಾನ' ಈಗ ತಲೆ ಎತ್ತಿದೆ. ವಿದ್ಯೆಯ ಹೊಸ ಕನಸುಗಳನ್ನು ಈ ಪ್ರದೇಶ ಕಾಣ ತೊಡಗಿದೆ. ಒಂದು ದೊಡ್ಡ ಸಾಮ್ರಾಜ್ಯವನ್ನು ನುಂಗಿ ನೀರು ಕುಡಿದ ಈ ನೆಲ ಈಗ ಮತ್ತೆ ಒಂದು ಹೊಸ ತಿಳುವಳಿಕೆಯ ಪರಿಸರವನ್ನು ಸೃಷ್ಟಿಸುತ್ತಿದೆ. ಮೈ ಹೊರಳಿಸಿದ ಕಾಲದ ಇನ್ನೊಂದು ಮಗ್ಗಲು ಕಾಣತೊಡಗಿದೆ.

ಕರ್ನಾಟಕ ಸರ್ಕಾರ ಕೊಡಮಾಡಿರುವ ಈ ವಿಸ್ತಾರವಾದ ನಿವೇಶನದಲ್ಲಿ ಈಗ ವಿಶ್ವವಿದ್ಯಾಲಯದ ಕಟ್ಟಡಗಳು ತಲೆ ಎತ್ತಿವೆ. ತ್ರಿಪದಿ, ಕೂಡಲಸಂಗಮ, ತುಂಗಾಭದ್ರಾ, ಕವಿರಾಜಮಾರ್ಗ, ದೇಸೀಮಾರ್ಗದಂಥ ಹಳೆಯ ಹೆಸರುಗಳು ಹೊಸ ಅರ್ಥವಂತಿಕೆಯನ್ನು ಪಡೆದುಕೊಳ್ಳುತ್ತಿವೆ. ಕಟ್ಟಡಗಳ ವಿನ್ಯಾಸವು ವಿಜಯ ನಗರದ ವಾಸ್ತುಶಿಲ್ಪಕ್ಕೆ ವಿಸಂಗತವಾಗದಂತೆ ನೋಡಿಕೊಳ್ಳಲಾಗಿದೆ. ವಿದ್ಯಾನಗರವಾಗಿದ್ದದ್ದು ಸಾಮ್ರಾಜ್ಯ ವಿಸ್ತಾರದಿಂದ ವಿಜಯನಗರವಾಗಿ, ಈ ವಿದ್ಯಾರಣ್ಯವಾಗಿ ಚಿಗುರುತ್ತಿದೆ. ಬೇರೆ ಬೆಟ್ಟಗಳಲ್ಲಿ ಗಿಡಮರ

ಬೆಳೆದರೆ ಈ ಅರಣ್ಯದಲ್ಲಿ ಕಲ್ಲುಬಂಡೆ ಬೆಳೆಯುತ್ತದೆ. ಮೂರ್ತಿ ಇಲ್ಲವೆ ಮಂದಿರವಾಗುವ ಸುಪ್ತ ಕನಸಿನ ಈ ಕಲ್ಲು ಬಂಡೆಗಳ ಅಡಿಯಲ್ಲಿ ಈಗ ಹಸಿರು ಹುಲ್ಲು ಬೆಳೆಯುತ್ತಿದೆ. ಬಿರುಬೇಸಿಗೆಯಲ್ಲೂ ಹುಲ್ಲಿಗೆ ನೀರುಣಿಸುವ ತಾಯಿ ತುಂಗೆಭದ್ರೆಗೆ ನಮಸ್ಕರಿಸೋಣ.

ನಿಮಗೆಲ್ಲ ತಿಳಿದಿರುವಂತೆ ನಮ್ಮ ವಿಶ್ವವಿದ್ಯಾಲಯದಲ್ಲಿ ಶಿಕ್ಷಣಕ್ಕಿಂತ ಸಂಶೋಧನೆಗೆ ಮಹತ್ವ ಹೆಚ್ಚು. ನಾವು ಎಂ.ಫಿಲ್ ಮತ್ತು ಪಿಎಚ್.ಡಿ. ಪದವಿಗಳನ್ನು ಮಾತ್ರ ನೀಡುತ್ತೇವೆ. ಈ ಎರಡೂ ಪದವಿಗಳ ಪದವೀಧರರ ಎರಡನೆಯ ತಂಡ ಹೊರಬರುತ್ತಿದೆ. ಶ್ರೀ ಚನ್ನಬಸವೇಶ್ವರಸ್ವಾಮಿ ಓಲಿಮಠ ಮತ್ತು ಶ್ರೀ ವೀರಭದ್ರಪ್ಪ ಶೇಷಪ್ಪ ಬಡಿಗೇರ ಅವರು ತಮ್ಮ ಮಹಾಪ್ರಬಂಧಗಳಿಗೆ ಪಿಎಚ್.ಡಿ. ಪದವಿಯನ್ನೂ ಇವರೊಂದಿಗೆ ಇನ್ನೂ ಹದಿನಾಲ್ಕು ಜನ ವಿದ್ಯಾರ್ಥಿಗಳು ಎಂ.ಫಿಲ್. ಪದವಿಯನ್ನು ಪಡೆಯುತ್ತಾರೆ. ನಮ್ಮದಿನ್ನೂ ಶೈಶವಾವಸ್ಥೆಯಲ್ಲಿರುವ ವಿಶ್ವವಿದ್ಯಾಲಯವಾಗಿರುವುದರಿಂದ ಅದರ ತಳಹದಿ ಗಟ್ಟಿಯಾಗಿರಬೇಕೆಂದು ನಾವೆಲ್ಲ ಶ್ರಮಿಸುತ್ತಿದ್ದೇವೆ. ಬೆಳೆದ ಮೇಲೆ ಕೂಡ ಶಿಕ್ಷಣದ ಗುಣಮಟ್ಟದಲ್ಲಿ ಯಾವುದೇ ಬಗೆಯ ರಾಜಿಗೆ ಇಲ್ಲಿ ಅವಕಾಶವಿರಬಹುದು.

ಈ ಪದವಿಗಳಲ್ಲದೆ 'ನಾಡೋಜ' ಎಂಬ ಗೌರವ ಪದವಿಯನ್ನೂ ನಾವು ಈ ವರ್ಷ ನೀಡುತ್ತಿದ್ದೇವೆ. ಯಾವುದೇ ಕ್ಷೇತ್ರದಲ್ಲಿ ಅತ್ಯುನ್ನತವಾದ ಸೇವೆ ಸಲ್ಲಿಸಿದವರಿಗೆ ಈ ಗೌರವ ಪದವಿಯನ್ನು ನೀಡಲಾಗುತ್ತಿದೆ. ಕನ್ನಡ ಸಾಹಿತ್ಯವನ್ನು ಸಮೃದ್ಧಿಗೊಳಿಸಿರುವ ಶ್ರೀ ಪುತಿನ ಮತ್ತು ಕನ್ನಡ ಪತ್ರಿಕೋದ್ಯಮದ ಏಳಿಗೆಗೆ ಮಹತ್ವದ ಕಾಣಿಕೆ ಸಲ್ಲಿಸಿರುವ ಶ್ರೀ ಪಾಟೀಲ ಪುಟ್ಟಪ್ಪ ಇವರಿಗೆ ಈ ಸಲ ಈ ಪದವಿ ಸಲ್ಲುತ್ತಿದೆ.

ಕನ್ನಡ ವಿಶ್ವವಿದ್ಯಾಲಯದ ಗುರಿ ಎಂದರೆ ಕನ್ನಡದ ಸರ್ವತೋಮುಖವಾದ ಬೆಳವಣಿಗೆಯಾಗಿದೆ. ಆದರೆ ಇಂಗ್ಲೀಷ್ ಮಾಧ್ಯಮದ ಭರಾಟೆಯಲ್ಲಿ ಕನ್ನಡದ ಬೆಳವಣಿಗೆ ಎದಕ್ಕೂ ಸಾಲದೆನ್ನುವುದನ್ನು ಬೇರೆ ಹೇಳಬೇಕಾಗಿಲ್ಲ. ಸಮಾಜ ನಮ್ಮ ಕಣ್ಣಿಗೆ ಕಾಣದಂತೆ ಬದಲಾವಣೆ ಹೊಂದುತ್ತಿರುತ್ತದೆ. ಈ ಶತಮಾನದ ಪ್ರಾರಂಭದಲ್ಲಿ ಒಮ್ಮೆಲೆ ನಮ್ಮ ದೇಶ ಬದಲಾಗತೊಡಗಿತು. ಇದಕ್ಕೆ ಬ್ರಿಟೀಷರ ಆಗಮನವೇ ಕಾರಣವೆನ್ನುವುದು ಸ್ಪಷ್ಟವಾಗಿದೆ. ಬ್ರಿಟೀಷರಿಗಿಂತ ಮುಂಚೆ ಗ್ರೀಕರು, ಮುಸಲ್ಮಾನರು ನಮ್ಮಲ್ಲಿಗೆ ಬಂದಿದ್ದರು. ಬದಲಾವಣೆ ತಂದಿದ್ದರು. ಆದರೆ ಆ ಬದಲಾವಣೆಯ ಗತಿ ಇಷ್ಟು ತೀವ್ರವಾಗಿರಲಿಲ್ಲ. ಬ್ರಿಟೀಷರ ರಾಜಸತ್ತೆಯ ಪರಿಣಾಮವೇ ಬೇರೆ. ಅವರು ಬೇರೊಂದು ಸಂಸ್ಕೃತಿಯನ್ನು ತಂದರು. ಬೇರೊಂದು ರೀತಿಯ ರಾಜ್ಯವ್ಯವಸ್ಥೆಯನ್ನು ತಂದರು. ಎಲ್ಲಕ್ಕಿಂತ ಹೆಚ್ಚಾಗಿ ನಮಗೆ ಇಂಗ್ಲಿಷ್ ಭಾಷೆಯನ್ನು ಕಲಿಸಿದರು.

ಇಂಗ್ಲಿಷ್ ಭಾಷೆ ಅನೇಕ ಪ್ರಲೋಭನೆಗಳನ್ನು ಒಡ್ಡಿದ ಭಾಷೆ. ಇಂದಿಗೂ ಆ ಭಾಷೆ ಕಲಿಯದವನು ವಿದ್ಯಾವಂತನೇ ಅಲ್ಲ ಎಂಬ ಭಾವನೆ ಇದೆ. ಯಾವುದೇ ಭಾಷೆ ಮನುಷ್ಯನ ತಿಳುವಳಿಕೆಯನ್ನು ತನ್ನ ರೀತಿಯಲ್ಲಿ ತಿದ್ದುತ್ತದೆ. ಇಂಗ್ಲಿಷ್ ಹಾಗೇ ಮಾಡಿತು. ಈಗ ನಮ್ಮ ಚಿಂತನೆ ಅದು ಕನ್ನಡದಲ್ಲಿ ಅಭಿವ್ಯಕ್ತಿ ಪಡೆದರೂ ನಡೆಯುವುದು ಮಾತ್ರ ಇಂಗ್ಲಿಷ್ ಭಾಷೆಯ ಮೂಲಕವಾಗಿ. ನಮ್ಮ ಶಿಕ್ಷಣದ ಮಾಧ್ಯಮ ಮೊದಲು ಇಂಗ್ಲಿಷ್ ಇದ್ದದ್ದು ಈಗ ಕನ್ನಡವಾಗುತ್ತಿದೆ. ಆದರೆ ಕನ್ನಡ ಮಾಧ್ಯಮ ಕೂಡ ಇಂಗ್ಲಿಷ್ ಮಾಧ್ಯಮದ ಅನುವಾದವಾಗಿದೆ. ನಮ್ಮ ಸಮಾಜ ತ್ವರಿತಗತಿಯಲ್ಲಿ ಬದಲಾವಣೆ ಹೊಂದುತ್ತಿರುವುದಕ್ಕೆ ಈ ಮಾಧ್ಯಮ ಕಾರಣವಾಗಿದೆ. ಇಂಗ್ಲಿಷ್ ಕಲಿತ ಮೇಲೆ ನಾವು ನಮ್ಮ ಇತಿಹಾಸದ ಕಲ್ಪನೆಯನ್ನು ರೂಪಿಸಿಕೊಂಡೆವು. ಈ ಐತಿಹಾಸಿಕ ಪ್ರಜ್ಞೆಯಿಂದ ನಮ್ಮ ಹಳೆಯ ಜ್ಞಾನಶಾಸ್ತ್ರವನ್ನು ರೂಪಿಸಿಕೊಂಡೆವು. ನಮ್ಮಲ್ಲಿರುವ ತರತಮ ಭಾವನೆಗಳಿಗೆ, ಮೌಲ್ಯಗಳಿಗೆ, ಕೀಳರಿಮೆಗೆ, ಸರಿತಪ್ಪುಗಳ ಕಲ್ಪನೆಗಳಿಗೆ, ಈ ಭಾಷೆಯೇ ಕಾರಣವೆಂದರೂ ತಪ್ಪಿಲ್ಲ. ಇದರ ಪರಿಣಾಮವಾಗಿ ನಮ್ಮಲ್ಲಿದ್ದ ವಿಜ್ಞಾನಗಳೆಲ್ಲ ಗೊಡ್ಡು ಪುರಾಣಗಳಾದವು. ಆಯುರ್ವೇದದಂಥ ವಿಜ್ಞಾನ, ದೇವಸ್ಥಾನ ರಚನೆಯಂಥ ನಮ್ಮ ಇಂಜಿನಿಯರಿಂಗ್ ಕೂಡ ಗೊಡ್ಡು ಪುರಾಣಗಳಾಗಿ ವಿಶ್ವಾಸ ಕಳೆದುಕೊಂಡವು. ನೆಲ, ಹೊಲ, ಕನ್ನಡವಾಗಿದ್ದರೂ ಕೃಷಿಶಾಸ್ತ್ರ ಕೂಡ ಇಂಗ್ಲಷಿನಲ್ಲಿ ರೂಪುಗೊಳ್ಳುತ್ತಿರುವ ವಿಪರ್ಯಾಸ ನಮ್ಮದಾಗಿದೆ.

ಈ ವಿಪರ್ಯಾಸವನ್ನು ತಡೆಗಟ್ಟುವುದು ಕನ್ನಡ ವಿಶ್ವವಿದ್ಯಾಲಯದ ಗುರಿಯಾಗಿದೆ. ಕನ್ನಡಕ್ಕೆ ತನ್ನದೇ ಆದ ಅಭಿಜಾತತೆ ಇದೆ, ಜಾನಪದವೂ ಇದೆ. ಅಲ್ಲದೆ ಹೊಸ ಕಾಲಕ್ಕೆ ತಕ್ಕಂಥ ಆಧುನಿಕತೆಯೂ ಇದೆ. ಈ ಮೂರು ನಿಟ್ಟುಗಳಲ್ಲಿ ಬೆಳವಣಿಗೆ ಪಡೆದ ಭಾಷೆಯನ್ನು ಸರಿಯಾಗಿ ದುಡಿಸಿಕೊಳ್ಳುವ ಉಪಕ್ರಮ ಇಲ್ಲಿ ನಡೆಯುತ್ತಿದೆ. ಇದಕ್ಕಾಗಿ ಸಂಶೋಧನೆಯ ಕಲ್ಪನೆ ಹಾಗೂ ಉದ್ದೇಶಗಳನ್ನು ಬದಲಿಸಿಕೊಳ್ಳಬೇಕಾಗಿದೆ.

ಪಿಎಚ್.ಡಿ. ಅಥವಾ ಅನ್ಯತ್ರ ಮಾಡಿದ ಸಂಶೋಧನೆಗಳು ಸಂಶೋಧನೆ ಮಾಡಿದವರಿಗೇ ಜೀವನದಲ್ಲಿ ಒಂದು ಬಾರಿಯೂ ಉಪಯೋಗವಾಗದಿದ್ದಲ್ಲಿ ಅಂಥ ಸಂಶೋಧನೆಯಿಂದ ಏನು ಪ್ರಯೋಜನ, ಸಂಶೋಧನೆಗಾಗಿ ಸಂಶೋಧನೆ ಆಗಬಾರದು. ಆದ್ದರಿಂದಲೇ ಅದು ಕೊನೆಪಕ್ಷ ಕನ್ನಡದ ಸಾಮಾನ್ಯ ಜನ. ವಿದ್ಯಾರ್ಥಿಗಳು ಹಾಗೂ ಬುದ್ಧಿವಂತರು ಈ ಮೂವರಲ್ಲಿ ಒಬ್ಬರಿಗಾದರೂ ಉಪಯೋಗವಾಗಬೇಕೆಂದು ಕನ್ನಡ ವಿಶ್ವವಿದ್ಯಾಲಯ ಬಯಸುತ್ತದೆ. ಜನ ಸಾಮಾನ್ಯರಿಗಾಗಿ ೧೦೦ ಪುಸ್ತಕಗಳನ್ನು ನಾವು ಪ್ರಕಟಿಸಿದ್ದೇವೆ. ಕೃಷಿ ಪದ ನಿಘಂಟು, ಜನಪದ ಕಲೆಗಳ ವಿಶ್ವಕೋಶಗಳು ಆಗಲೇ ಸಿದ್ಧವಾಗಿದೆ. ಹಾಗೆಯೇ ಆಯಗಾರರೇ ಮುಂತಾದವರ ಕಾವ್ಯ ಸಂಗ್ರಹವು ೧೦ ಸಂಪುಟಗಳಲ್ಲಿ ಸಿದ್ಧವಾಗುತ್ತಿದೆ. ಬಹುಶಃ ಭಾರತೀಯ ಭಾಷೆಗಳಲ್ಲೆ ಮೊಟ್ಟ ಮೊದಲಬಾರಿಗೆ ವೈದ್ಯ ವಿಶ್ವಕೋಶವನ್ನು ಪ್ರಕಟಿಸುತ್ತಿದ್ದೇವೆ.

ಸಾಹಿತ್ಯ ಮತ್ತು ಮಾನವಿಕ ಶಾಸ್ತ್ರಗಳಲ್ಲಿ ನಡೆದ ಸಂಶೋಧನೆ ಬೆಲೆಯುಳ್ಳದ್ದಾಗಿದೆ. ಆದರೆ ವಿಜ್ಞಾನದ ಕ್ಷೇತ್ರದಲ್ಲಿ ನಾವು ನಿರೀಕ್ಷಿಸಿದಷ್ಟು ಪ್ರಗತಿ ಆಗಿಲ್ಲ. ವೈಜ್ಞಾನಿಕ ತಿಳುವಳಿಕೆ ಇದ್ದರೂ ವೈಜ್ಞಾನಿಕ ಚಿಂತನೆ ನಮಗೆ ಇನ್ನೂ ಸಾಧಿಸಿಲ್ಲ. ಆದರೂ ಈ ದಿಕ್ಕಿನಲ್ಲಿ ನಮ್ಮ ಪ್ರಯತ್ನ ನಡೆದೇ ಇದೆ. ನಮ್ಮ ವಿಶ್ವವಿದ್ಯಾಲಯ ಪ್ರಕಟಿಸುತ್ತಿರುವ ವಿಜ್ಞಾನ ಸಂಗಾತಿಗೆ ಈ ಗುರಿಯಿದೆ. ಅಲ್ಲದೆ ಕನ್ನಡದಲ್ಲಿ ವಿಜ್ಞಾನ ಬೋಧನೆಯ ಪಠ್ಯಗಳನ್ನು ನಿರ್ಮಿಸುತ್ತಿದ್ದೇವೆ. ನಮ್ಮ ಕನ್ನಡ ಕಾವ್ಯ, ಶೈಲಿ ಕೈಪಿಡಿಗಳು, ಆಗಲೇ ಸಿದ್ಧವಾಗಿವೆ. ಈವರೆಗೆ ಲಭ್ಯವಿದ್ದ, ಕರ್ನಾಟಕವನ್ನು ಕನ್ನಡಿಗರಿಗೆ ಪರಿಚಯಿಸುವ ಕರ್ನಾಟಕದ ಸಮಗ್ರ ಇತಿಹಾಸ ಆರು ಸಂಪುಟಗಳಲ್ಲಿ ಸಿದ್ಧಗೊಳ್ಳುತ್ತಿವೆ. ಕರ್ನಾಟಕದ ಬಗೆಗಿನ ಯಾವುದೇ ಮಾಹಿತಿ ಒದಗಿಸುವ ಮಾಹಿತಿ ಕೇಂದ್ರ ದಿನೇ ದಿನೇ ವೃದ್ಧಿಗೊಳ್ಳುತ್ತಿದೆ.

ಕನ್ನಡ ಚಿಂತನೆಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಗೊಳಗಾಗಬೇಕೆಂಬ ಉದ್ದೇಶದಿಂದ ಭಾಷಾಂತರ ವಿಭಾಗವನ್ನು ಚುರುಕುಗೊಳಿಸಿದ್ದೇವೆ. ತುಂಬ ಮಹತ್ವಾಕಾಂಕ್ಷೆಯ ಮತ್ತು ಭಾರತದ ಯಾವ ವಿಶ್ವವಿದ್ಯಾಲಯವೂ ಪ್ರಯತ್ನಿಸಲಾಗದ ಒಂದು ವಿನೂತನ ಯೋಜನೆ ನಮ್ಮ ಕನ್ನಡ ಕನ್ನಡದಲ್ಲಿ ದಿನನಿತ್ಯ ಸೃಷ್ಟಿಯಾಗುತ್ತಿರುವ ಶಬ್ದಗಳನ್ನು ಆಯಾ ತಿಂಗಳು ದಾಖಲಿಸಿ ರೂಪನಿರ್ಣಯ ಮಾಡುವುದು ಮತ್ತು ಆ ಮೂಲಕ ಕನ್ನಡದ ಬೆಳವಣಿಗೆಗೆ ನಿರ್ದೇಶನಗಳನ್ನು ಕೊಡುವುದು ಈ ಯೋಜನೆಯ ಉದ್ದೇಶ. ಇದು ಭಾರತದ ಯಾವ ಭಾಷೆಯಲ್ಲೂ ನಡೆದಿಲ್ಲ ಎನ್ನುವುದನ್ನು ಒತ್ತಿ ಹೇಳಬಯಸುತ್ತೇನೆ.

ಕನ್ನಡ ವಿಶ್ವವಿದ್ಯಾಲಯ ಈಗ ಮುಗಿಸಿರುವ ಯೋಜನೆಗಳಲ್ಲದೆ ಇನ್ನೂ ಅನೇಕ ಯೋಜನೆಗಳನ್ನು ಕೈಗೊಳ್ಳಬೇಕಿದೆ. ನಮ್ಮ ಬೇರೆ ಬೇರೆ ಭೌಗೋಳಿಕ ಪ್ರದೇಶಗಳು, ಇತಿಹಾಸದ ಬೇರೆಬೇರೆ ಮಗ್ಗುಲುಗಳು, ನಮ್ಮ ಸಾಹಿತ್ಯ, ಕಲೆಗಳು ಮುಟ್ಟಿದ ಎತ್ತರದ ಅರಿವು ನಮಗೆ ಆಗಬೇಕಾಗಿದೆ. ನಮ್ಮಲ್ಲಿ ಹೊಸದಾಗಿ ಹುಟ್ಟಿರುವ ಕಾವ್ಯಕೇಂದ್ರಕ್ಕೆ ಹಲವಾರು ಕನಸುಗಳಿವೆ. ಕನ್ನಡದ ಶಕ್ತಿ ಇರುವುದು ಅದರ ಸಾಹಿತ್ಯದಲ್ಲಿ. ನಮ್ಮದು ಕಾವ್ಯ ನಾಟಕಗಳಿಗೆ ಹೇಳಿ ಮಾಡಿಸಿದ ಭಾಷೆ. ಅದಕ್ಕಾಗಿ ಸಾಹಿತ್ಯವನ್ನು ಕುರಿತು ಅನೇಕ ಚಿಂತನೆಯ ಕ್ರಮಗಳು ಹುಟ್ಟಿ ಬಂದರೆ ಆಶ್ಚರ್ಯವಿಲ್ಲ.

ಇಷ್ಟಾಗಿ ನಮ್ಮ ಮುಂದೆ ಅನೇಕ ಕನಸುಗಳು ಸುಳಿದಾಡುತ್ತಿವೆ. ಸಾಹಿತ್ಯದ ಏಕಮೇವ ಮಾಧ್ಯಮವಾಗಿರುವ ಕನ್ನಡ ಭಾಷೆ ಇನ್ನು ಮುಂದೆ ಎಲ್ಲ ಶಾಸ್ತ್ರಗಳಿಗೂ ಮಾಧ್ಯಮವಾಗಬೇಕಾಗಿದೆ. ಸಾಹಿತ್ಯವನ್ನು ಹೊರತುಪಡಿಸಿ ಕನ್ನಡ ಭಾಷೆ ಇದೀಗ ಬೇರೆ ಚಿಂತನೆಯ ಕ್ರಮಗಳನ್ನು ಕಲಿಯತೊಡಗಿದೆ. ಮಾನವಶಾಸ್ತ್ರ ಹಾಗೂ ಭೌತಿಕ ಶಾಸ್ತ್ರಗಳು ಕನ್ನಡ ಭಾಷೆಯಲ್ಲಿ ಮೈದಾಳಲು ಕಾದು ನಿಂತಿವೆ. ಒಟ್ಟಿನಲ್ಲಿ ಹೊಸ ಶಿಕ್ಷಣ

ಶಾಸ್ತ್ರ ಇಲ್ಲಿಂದ ಹುಟ್ಟಬೇಕೆಂಬುದು ನಮ್ಮ ಆಸೆ. ಮಹತ್ವಾಕಾಂಕ್ಷೆಯ ಇಂಥ ಗುರಿ ಸಾಧಿಸಲು ಸರಕಾರದ ಉದಾರ ನೆರವು ಬೇಕು. ನಿಮ್ಮೆಲ್ಲರ ಸಹಕಾರ ಬೇಕು.

ಪ್ರಖ್ಯಾತ ಇತಿಹಾಸಕಾರರು, ದಾರ್ಶನಿಕ ವಿದ್ವಾಂಸರು, ಎರಡು ವಿಶ್ವವಿದ್ಯಾಲಯಗಳ ಪ್ರಥಮ ಕುಲಪತಿಯವರೂ ಆಗಿದ್ದ ಸನ್ಮಾನ್ಯ ಪ್ರೊ. ಷೇಖ್‌ಅಲಿ ಅವರು ಘಟಿಕೋತ್ಸವ ಉಪನ್ಯಾಸ ನೀಡಲು ಆಗಮಿಸಿದ್ದಾರೆ.

ನಮ್ಮ ರಾಜ್ಯದ ಮುಖ್ಯಮಂತ್ರಿಯವರೂ ನಮ್ಮ ವಿಶ್ವವಿದ್ಯಾಲಯದ ಕುಲಾಧಿಪತಿಯವರೂ ಆದ ಸನ್ಮಾನ್ಯ ಎಚ್.ಡಿ.ದೇವೇಗೌಡ ಅವರು ಪದವಿ ಪ್ರದಾನ ಮಾಡಲಿದ್ದಾರೆ.

ಸನ್ಮಾನ್ಯ ಪಾಟೀಲ ಪುಟ್ಟಪ್ಪ ಅವರು ನಾಡೋಜ  ಗೌರವ ಪದವಿಯನ್ನು ಸ್ವೀಕರಿಸಲು ದಯವಿಟ್ಟು ಒಪ್ಪಿ ಬಂದಿದ್ದಾರೆ.

ನಮ್ಮ ವಿಶ್ವವಿದ್ಯಾಲಯದ ಸಹ ಕುಲಾಧಿಪತಿಯವರು ಮತ್ತು ಕರ್ನಾಟಕ ರಾಜ್ಯದ ಉನ್ನತ ಶಿಕ್ಷಣ ಸಚಿವರೂ ಆದ ಸನ್ಮಾನ್ಯ ಡಿ. ಮಂಜುನಾಥ ಅವರು ಈ ಸಮಾರಂಭದಲ್ಲಿ ಉಪಸ್ಥಿತರಿದ್ದಾರೆ.

ನಮ್ಮ ವಿಶ್ವವಿದ್ಯಾಲಯದ ಆಡಳಿತ ಮಂಡಳಿ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರು ಉಪಸ್ಥಿತರಿದ್ದಾರೆ.

ಈ ಎಲ್ಲ ಮಹನೀಯರನ್ನೂ, ಪಿಎಚ್.ಡಿ., ಎಂ.ಫಿಲ್. ಪದವಿಗಳನ್ನು ಪಡೆಯುತ್ತಿರುವ ಯಶಸ್ವಿ ಅಭ್ಯರ್ಥಿಗಳನ್ನು ಹಾಗೂ ತಮ್ಮೆಲ್ಲರನ್ನೂ ಘಟಿಕೋತ್ಸವಕ್ಕೆ ಸ್ವಾಗತಿಸುತ್ತೇನೆ.

ಮೂಡುಮಲೆಯ ಸೂರ್ಯನಾರಾಯಣ ಸ್ವಾಮಿ, ಪಡುಮಲೆಯ ಚಂದ್ರಾಮ ಸ್ವಾಮಿ ಇರುವತನಕ ಇಲ್ಲಿ ನಿತ್ಯ ನಿರಂತರವಾಗಿ ವಿದ್ಯೆ ಸೃಷ್ಟಿ ನಡೆಯುತ್ತಿರಲೆಂದು ಪಂಪಾಂಬಿಕೆ ಸಮೇತ ವಿರೂಪಾಕ್ಷನ ಸನ್ನಿಧಿಯಲ್ಲಿ ಪ್ರಾರ್ಥಿಸುತ್ತೇನೆ.

ಮಾರ್ಚ್ ೧೦, ೧೯೯೬

# ೩. ಕನ್ನಡಕ್ಕೆ ಸಾರ್ವಭೌಮತ್ವವನ್ನು ಕೊಡುವ ಕನಸು

ಸನ್ಮಾನ್ಯ ಕುಲಾಧಿಪತಿಗಳಾದ ಜೆ.ಎಚ್. ಪಟೇಲ್ ಅವರೇ, ಸನ್ಮಾನ್ಯರಾದ ಶಿವರಾಮ ಕಾರಂತ ಅವರೇ, ಸನ್ಮಾನ್ಯ ಕರೀಂಖಾನ್ ಅವರೇ, ಸನ್ಮಾನ್ಯ ಎಂ.ಪಿ. ಪ್ರಕಾಶ್ ಅವರೇ, ಹಿರಿಯರೇ, ಮತ್ತು ಸ್ನೇಹಿತರೇ, ಕನ್ನಡ ವಿಶ್ವವಿದ್ಯಾಲಯದ ಮೂರನೆಯ ನುಡಿಹಬ್ಬಕ್ಕೆ ತಮಗೆಲ್ಲ ಹೃತ್ಪೂರ್ವಕ ಸ್ವಾಗತ.

ಹಂಪಿ ಮತ್ತು ವಿಜಯನಗರಗಳ ಈ ಬೆಂಗಾಡಿನಲ್ಲಿ ತಲೆ ಎತ್ತಿದ ಈ ವಿಶ್ವವಿದ್ಯಾಲಯ ಒಂದು ಆದಮ್ಯವಾದ ಸೃಜನಶಕ್ತಿಯ ಫಲವಾಗಿದೆ. ಈ ನೆಲದಲ್ಲಿ ಮುಚ್ಚಿಹೋಗಿರುವ ಇತಿಹಾಸವನ್ನು ಮತ್ತೆ ಬಯಲಿಗೆ ತರುವ ಕೆಲಸವನ್ನು ವಿಶ್ವವಿದ್ಯಾಲಯ ಮಾಡುತ್ತಿದೆ. ಹಿಂದೆ ಸನ್ಮಾನ್ಯ ಪಟೇಲರು ಇಲ್ಲಿಗೆ ಬಂದಿದ್ದಾಗ ಇಲ್ಲಿಯ ವಾತಾವರಣದಲ್ಲಿಯ ಮೌನದಲ್ಲಿ ಸಂಗೀತವಿದೆಯೆಂದು ಹೇಳಿ ತಮ್ಮ ವಿಸ್ಮಯವನ್ನು ಪ್ರಕಟಿಸಿದ್ದರು. ದೊಡ್ಡ ಗಾತ್ರದ ಬಂಡೆಗಲ್ಲುಗಳು ಈ ಪ್ರದೇಶದಲ್ಲಿ ಮೌನವಾಗಿ ಮಲಗಿವೆ. ಇಂಥ ಪ್ರದೇಶದಲ್ಲಿ ಶಿಕ್ಷಣದ ಹೊಳಹನ್ನು ಹಾಕಲಾಗಿದೆ.

ಇಂದಿಗೆ ಐದು ವರ್ಷಗಳ ಹಿಂದೆ ನಾನಿಲ್ಲಿಗೆ ಬಂದಾಗ ನನ್ನ ತಲೆಯಲ್ಲಿ ನೂರಾರು ಕನಸುಗಳಿದ್ದುವು. ವಿಜಯನಗರದ ನೆಲದಲ್ಲಿ ವಿದ್ಯಾನಗರವನ್ನು ಕಟ್ಟ ಬೇಕಾಗಿತ್ತು. ಅದು ಬಯಲಿನಲ್ಲಿ ಆಲಯವನ್ನು ಕಟ್ಟುವ ಕೆಲಸ. ಎಲ್ಲ ಸೃಜನ ವ್ಯಾಪಾರವೂ ಒಂದು ಸಂಘರ್ಷದ ಕೆಲಸ. ಕಳೆದ ಐದು ವರ್ಷಗಳಿಂದ ನಾನು ಇಂಥ ಸೃಜನಕ್ರಿಯೆಯಲ್ಲಿ ತೊಡಗಿದ್ದೇನೆ. ಕನಸುಗಳನ್ನು ಸಾಕಾರಗೊಳಿಸುವುದು ನಾವು ತಿಳಿದುಕೊಂಡಷ್ಟು ಸುಲಭವಲ್ಲ. "In Our dreams begin our the sponsibilities" ಎಂದ ಏಟ್ಸ್ ಕವಿಯ ಮಾತು ನಮಗೆಲ್ಲ ಮಾರ್ಗದರ್ಶಕವಾದ ಸೂತ್ರ. ಕರ್ನಾಟಕದಲ್ಲಿ ಕನ್ನಡಕ್ಕೆ ಸಾರ್ವಭೌಮತ್ವವನ್ನು ತಂದುಕೊಡುವ ಕನಸು ಇದಾಗಿದೆ. ಇದು ಕನ್ನಡ ವಿಶ್ವವಿದ್ಯಾಲಯದ ಮಹತ್ವದ ಜವಾಬ್ದಾರಿಯೂ ಆಗಿದೆ.

ಕನ್ನಡ ಸಾವಿರದ ವರ್ಷಗಳಿಂದ ಬೆಳೆದು ಬಂದ ಭಾಷೆ. ಕವಿಗಳು, ಶಾಸ್ತ್ರಕಾರರು, ಶಿವಶರಣರು, ಹರಿದಾಸರು ಇವರೆಲ್ಲ ಕೂಡಿಕೊಂಡು ಈ ಭಾಷೆಯನ್ನು ಅವರ ಎಲ್ಲ ಅಗತ್ಯಗಳ ಅಭಿವ್ಯಕ್ತಿಗೆ ಹದಗೊಳಿಸಿದರು. ಒಂದು ಕಾಲಕ್ಕೆ ಮಡಿಯಲ್ಲಿದ್ದಾಗ ಸಂಸ್ಕೃತ, ಮೈಲಿಗೆಯಲ್ಲಿದ್ದಾಗ, ಕನ್ನಡ ಎನ್ನುವ ಪರಿಸ್ಥಿತಿ ಇತ್ತು. ಅದಕ್ಕಾಗಿ ಕನ್ನಡ ಬಡವಾಯಿತು. ಶಿಕ್ಷಣ ಮಾಧ್ಯಮ ಇಂಗ್ಲಿಷ್ ಆದ ಮೇಲೆ ಇನ್ನೊಂದು ಬಗೆಯ ಮಡಿವಂತಿಕೆ ನಮ್ಮ ಜನರಲ್ಲಿ ಬಂತು. ನವಾಬರ ಕಾಲಕ್ಕೆ ಉರ್ದು, ಪೇಶ್ವೆಯರ ಕಾಲಕ್ಕೆ ಮರಾಠಿ, ಬ್ರಿಟೀಷರ ಕಾಲಕ್ಕೆ ಇಂಗ್ಲಿಷ್. ಇವು ರಾಜ ಭಾಷೆಗಳಾದವು. ಈಗ ಕರ್ನಾಟಕದಲ್ಲೂ ಕನ್ನಡ ಅಧಿಕೃತ ರಾಜಭಾಷೆ ಎಂಬುದೇನೋ ನಿಜ. ಆದರೆ ಕನ್ನಡವನ್ನು ಪ್ರತಿಯೊಂದು ಕ್ಷೇತ್ರದಲ್ಲೂ ಉಪಯೋಗಿಸುವ ಜನ ಮುಂದೆ ಬಂದಿಲ್ಲ. ಭಾಷೆ ಕೇವಲ ಸಂವಹನದ ಮಾಧ್ಯಮವಾಗಿ ಉಳಿದುಬಿಟ್ಟರೆ ಯಾವ ಭಾಷೆಯಾದರೂ ನಡೆದೀತು. ಈಗ ನಮ್ಮ ಕಲಿತ ಜನ ಇಂಗ್ಲಿಷನ್ನು ನೆಚ್ಚಿಕೊಂಡಿದ್ದಾರೆ. ಆದರೆ ಇಂಗ್ಲಿಷ್ ಬಲ್ಲ ಜನ ಇಂಗ್ಲಿಷ್‌ನಲ್ಲಿ ಕಾವ್ಯ ನಾಟಕವನ್ನು ಬರೆಯುವುದಿಲ್ಲ. ಶಾಸ್ತ್ರಗ್ರಂಥಗಳನ್ನು ರಚಿಸುವುದೂ ಇಲ್ಲ. ಆದರೆ ಅದನ್ನು ಸಂವಹನಕ್ಕಾಗಿ ಮಾತ್ರ ಬಳಸುತ್ತಾರೆ. ಇಂಗ್ಲಿಷ್ ನಮಗೆ ಗ್ರಂಥಾಲಯದ ಭಾಷೆ, ಸಂಸ್ಕೃತ ಧಾರ್ಮಿಕ ಭಾಷೆ, ಕನ್ನಡ ದಿನನಿತ್ಯದ ಬಳಕೆಯ ಭಾಷೆ ಹೀಗಾದರೆ ನಮ್ಮ ಮನಸ್ಸು ಕನ್ನಡವಾಗುವುದು. ನಮ್ಮ ಜನ ಪ್ರಬುದ್ಧರಾಗುವುದು ಯಾವಾಗ ನಮ್ಮ ಕನ್ನಡ ವಿಶ್ವವಿದ್ಯಾಲಯ ಈಗ ಕನ್ನಡ ಶಕ್ತಿಯನ್ನು ಗುರುತಿಸಿ ಅದನ್ನು ಸರ್ವಾಂಗೀಣ ಉಪಯೋಗಕ್ಕಾಗಿ ಸಿದ್ಧಗೊಳಿಸುವ ಕಾಯಕದಲ್ಲಿ ತೊಡಗಿದೆ.

ಕನ್ನಡ ವಿಶ್ವವಿದ್ಯಾಲಯದಲ್ಲಿ ನಾವು ಈ ಬಾರಿ ಆದ್ಯತೆ ಕೊಟ್ಟಿರುವುದು ಭಾಷೆ ಮತ್ತು ಇತಿಹಾಸಗಳ ಅಧ್ಯಯನಕ್ಕೆ. ಕನ್ನಡ ಭಾಷೆಯ ಅನೇಕ ಉಪಯೋಗಗಳು ಇಲ್ಲಿ ಅಭ್ಯಾಸದ ವಸ್ತುಗಳಾಗಿವೆ. ನಮ್ಮ ಶಾಸನಗಳು, ಜನಪದ ಮಹಾಕಾವ್ಯಗಳು, ನಾಟಕಗಳು, ಕೈಫಿಯತ್ತುಗಳು, ಗಾದೆ ಮಾತುಗಳು ಇವೆಲ್ಲ ಭಾಷೆಯ ಅನೇಕ ಅವತಾರಗಳಾಗಿವೆ. ನಮ್ಮ ವಿದ್ಯೆಗಳೇ ಆಗಲಿ, ಕಲೆಗಳೇ ಆಗಲಿ, ಅವು ಹುಟ್ಟಿ ಬೆಳೆಯುವುದು ನಮ್ಮ ಭಾಷೆ ಮತ್ತು ಇತಿಹಾಸದ ಸಂದರ್ಭದಲ್ಲಿಯೇ. ಯಾವ ವಸ್ತುವಿನ ಅಧ್ಯಯನ ನಡೆಯಬೇಕಾದರೂ ಭಾಷೆಯಲ್ಲಿ ಮತ್ತು ಭಾಷೆಯ ಮುಖಾಂತರವೇ ನಡೆಯಬೇಕು. ಅದಕ್ಕಾಗಿ ಈಗ ಕನ್ನಡ ಭಾಷೆಗೆ ತನ್ನ ಅರಿವು ಮೂಡಬೇಕು. ನಮ್ಮ ಭಾಷೆಗೆ ವ್ಯಾಕರಣದ ಅರಿವು ಇದೆ. ಆದರೆ ಕಾರ್ಯವಿಸ್ತಾರದ ಅರಿವಿಲ್ಲ. ಸಾವಿರ ವರ್ಷಗಳ ಹಿಂದೆ ಒಬ್ಬ ಸಾಮ್ರಾಟನಿಗೆ ಈ ಅರಿವಿತ್ತು. ಒಂದು ರಾಜ್ಯದ ದೇಶಿಯತೆಯ ಗಡಿರೇಖೆಗಳನ್ನು ನೃಪತುಂಗ ಕನ್ನಡ ಭಾಷೆಯಿಂದ ಗುರುತಿಸಿದ. ಕನ್ನಡ ಕಾವ್ಯಭಾಷೆಯಷ್ಟೇ ಅಲ್ಲ, ರಾಜಕಾರಣದ ಭಾಷೆಯೂ ಆಯಿತು. ಈ ಶತಮಾನದಲ್ಲಿ ಕನ್ನಡಕ್ಕೆ ಹೊಸ ಹೊಸ ಮಹತ್ವಾಕಾಂಕ್ಷೆಗಳು ಹುಟ್ಟಿ ಕೊಂಡಿವೆ. ಮನುಷ್ಯನಿಗೆ ಇರುವಂತೆ ಭಾಷೆಗೂ ಒಂದು ಪ್ರಜ್ಞೆಯ ಆಳವಾದ ಅಧ್ಯಯನ ಈಗ ನಡೆದಿದೆ.

ಇದೇ ಕಾರಣಕ್ಕಾಗಿ ನಮ್ಮ ವಿಶ್ವವಿದ್ಯಾಲಯ ಇತಿಹಾಸದ ಅಧ್ಯಯನಕ್ಕೂ ಮಹತ್ವ ಕೊಟ್ಟಿದೆ. ವಿಶ್ವವಿದ್ಯಾಲಯವಿರುವ ಈ ಸ್ಥಳ ಐತಿಹಾಸಿಕ ಮಹತ್ವ ಪಡೆದಿರುವ ಸ್ಥಳ. ಜಗತ್ತಿನ ಒಂದು ದೊಡ್ಡ ಸಾಮ್ರಾಜ್ಯ ಈ ಪ್ರದೇಶದಲ್ಲಿತ್ತು. ಸಾಮ್ರಾಜ್ಯದ ವೈಭವದೊಡನೆ ಅದರ ದರ್ಪ, ಅಭಿಮಾನ, ಸಂಸ್ಕೃತಿ, ನ್ಯಾಯ, ಅನ್ಯಾಯಗಳ ಹತ್ತು ಇತಿಹಾಸಗಳಾದರೂ ನಮಗೆ ಬೇಕು. ಭಾಷೆಯಂತೆ ಇತಿಹಾಸ ಕೂಡ ಒಂದು ಸಾಂಸ್ಕೃತಿಕ ರಚನೆ. ಬ್ರಿಟೀಷ್ ಆಳ್ವಿಕೆಯ ಕಾಲದಲ್ಲಿ ನಮ್ಮ ದೇಶದ ಇತಿಹಾಸ ರಚನೆ ಶುರುವಾಯಿತು. ಆದರೆ ಬ್ರಿಟಿಷ್ ಕಾಲದ ನಮ್ಮ ದೇಶದ ಇತಿಹಾಸ ಕೂಡ ಬ್ರಿಟಿಷ್ ಸಾಮ್ರಾಜ್ಞ ಇತಿಹಾಸವಾಗಿದೆ. ಬ್ರಿಟಿಷ್ ದೃಷ್ಟಿಕೋನವನ್ನು ತಿಳಿಯಲು ಮಾತ್ರ ಈ ಇತಿಹಾಸವನ್ನು

ಅಭ್ಯಾಸ ಮಾಡಬೇಕು. ಆದರೆ ನಮ್ಮ ದೃಷ್ಟಿಕೋನವನ್ನು ಪ್ರತಿನಿಧಿಸುವ ಇತಿಹಾಸ ಇನ್ನೂ ಬಂದಿಲ್ಲ. ಅದಕ್ಕಾಗಿ ನಮ್ಮ ಇತಿಹಾಸ ಪ್ರಜ್ಞೆಯಲ್ಲಿ ಬದಲಾವಣೆ ಆಗಬೇಕು, ಅಂದರೆ ಇತಿಹಾಸದ ಕಥನ ಕ್ರಮದಲ್ಲಿ ಬದಲಾವಣೆ ಆಗಬೇಕು. ಕನ್ನಡ ವಿಶ್ವವಿದ್ಯಾಲಯದ ಧ್ಯೇಯವೆಂದರೆ ಇದೆ. ಸಂಶೋಧನೆಯ ಮಾರ್ಗ ನೀತಿ ಧೋರಣೆಗಳಲ್ಲಿ ಬದಲಾವಣೆಯಾಗಬೇಕು. ಆ ಕಾರ್ಯ ನಡೆಯುತ್ತದೆ.

ಈ ವರ್ಷದ ನಾಡೋಜ ಪದವಿ ಡಾ. ಶಿವರಾಮ ಕಾರಂತರು ಮತ್ತು ಕರೀಂ ಖಾನ್‌ರಿಗೆ ಸಲ್ಲುತ್ತಿದೆ. ಡಾ. ಶಿವರಾಮ ಕಾರಂತರಿಗೆ ಇಂಥ ಗೌರವ ಪ್ರಶಸ್ತಿ ಮತ್ತು ಪದವಿಗಳು ಹೊಸವೇನಲ್ಲ. ಅಂದರೆ ಈ ಪದವಿಯನ್ನು ಕೊಡುವುದರ ಮೂಲಕ ಅವರನ್ನು ಕನ್ನಡ ವಿಶ್ವವಿದ್ಯಾಲಯ ತನ್ನ ಬಳಗಕ್ಕೆ ಸೇರಿಸಿಕೊಳ್ಳುತ್ತಿದೆ. ಕಾರಂತರು 'ನಾಡೋಜ' ಪದವಿಯನ್ನು ಒಪ್ಪಿಕೊಂಡು ನಮ್ಮನ್ನು ಕೃತಾರ್ಥರನ್ನಾಗಿ ಮಾಡಿದ್ದಾರೆ. ಅವರು ಬಾಲಪ್ರಪಂಚ ಮತ್ತು ವಿಜ್ಞಾನ ಪ್ರಪಂಚ ಸಂಪುಟಗಳನ್ನು ಹೊರತಂದಾಗಲೇ ನಾಡೋಜರಾಗಿ ಬಿಟ್ಟರು. ನಮ್ಮ ನವೋದಯ ಕಾಲದ ಆಶೋತ್ತರಗಳು, ಕನಸುಗಳು, ಕಾರಂತರಲ್ಲಿ ಅವರ ವ್ಯಕ್ತಿತ್ವದಲ್ಲಿ ಮೂರ್ತೀಭವಿಸಿದೆಯೆಂದರೂ ತಪ್ಪಿಲ್ಲ. ನಾಡೋಜ ಪದವಿಯನ್ನು ಸ್ವೀಕರಿಸಿದ ಇನ್ನೊಬ್ಬ ಹಿರಿಯರು ಕರೀಂಖಾನ್ ಅವರೂ ನಾಡೋಜರೇ. ನಮ್ಮ ನಾಡಿನ ವಿಶೇಷತೆಯೆಂದರೆ ಹಲವಾರು ವಿಶ್ವವಿದ್ಯಾಲಯಗಳ ಅಬ್ಬರದಲ್ಲಿ ಕೂಡ ನಮ್ಮ ಜಾನಪದ ಜೀವಂತವಾಗಿದೆ. ಸಂಸ್ಕೃತಿಯ ಇನ್ನೊಂದು ಭಿನ್ನವಾದ ಅರ್ಥ ಜನಪದದಲ್ಲಿರುವುದರಿಂದ ಕರೀಂಖಾನ್ ರಂಥವರ ಸೇವೆ ಬಹಳ ಮಹತ್ವದ್ದಾಗಿದೆ. ವಿಶ್ವವಿದ್ಯಾಲಯ ಮಾಡಬೇಕಾದ ಕಾರ್ಯವನ್ನೇ ಈ ಇಬ್ಬರು ಹಿರಿಯರು ನಾಡಿನ ಜನರಿಗಾಗಿ ಮಾಡುತ್ತಾ ಬಂದಿದ್ದಾರೆ. ಈ ಇಬ್ಬರು ಮಹನೀಯರಿಗೂ ನನ್ನ ಅಭಿನಂದನೆಗಳು. ಹಾಗೆಯೇ ಈ ಸಲ ಪಿಎಚ್.ಡಿ. ಮತ್ತು ಎಂ.ಫಿಲ್. ಪದವಿ ಸ್ವೀಕರಿಸುತ್ತಿರುವ ನನ್ನ ಎಳೆಯ ಸ್ನೇಹಿತರಿಗೂ ಅಭಿನಂದನೆ ಹೇಳಿ ಎಲ್ಲರಿಗೂ ಇನ್ನೊಮ್ಮೆ ಸ್ವಾಗತ ಕೋರಿ ನನ್ನ ಮಾತು ಮುಗಿಸುತ್ತೇನೆ.

ಫೆಬ್ರವರಿ ೧೫, ೧೯೯೭

# ೪. ಶೈಕ್ಷಣಿಕ ವಿಕಾಸದ ಹೊಸ ಆಯಾಮಗಳು

ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳೂ, ಕನ್ನಡ ವಿಶ್ವವಿದ್ಯಾಲಯದ ಕುಲಾಧಿಪತಿಗಳೂ ಆಗಿರುವ ಮಾನ್ಯ ಶ್ರೀ ಜೆ.ಎಚ್.ಪಟೇಲ್ ಅವರೇ, ಉನ್ನತ ಶಿಕ್ಷಣ ಸಚಿವರೂ, ಕನ್ನಡ ವಿಶ್ವವಿದ್ಯಾಲಯದ ಸಹ ಕುಲಾಧಿಪತಿಗಳೂ ಆಗಿರುವ ಮಾನ್ಯ ಶ್ರೀ ಬಸವರಾಜ ಪಾಟೀಲ ಅಟ್ಟೂರ ಅವರೇ, ''ನಾಡೋಜ'' ಗೌರವ ಪದವಿ ವಿಭೂಷಿತರಾದ ಡಾ. ದೇ. ಜವರೇಗೌಡ, ಡಾ. ರಾಜಕುಮಾರ್, ಡಾ. ಜಾರ್ಜ್‌ಮಿಶಲ್ ಅವರೇ, ಮುಖ್ಯ ಅತಿಥಿಗಳಾದ ಡಾ. ವಿ. ಐ. ಸುಬ್ರಹ್ಮಣ್ಯಂ ಅವರೇ, ಮಾನ್ಯ ಸಚಿವರೇ, ಶಾಸಕರೇ, ಮಹನಿಯರೇ, ಮಹಿಳೆಯರೇ – ನಿಮ್ಮೆಲ್ಲರಿಗೂ ಸ್ವಾಗತ.

ಪಾಶ್ಚಿಮಾತ್ಯ ಪದ್ಧತಿಯ ವಿಶ್ವವಿದ್ಯಾಲಯಗಳು ಭಾರತದಲ್ಲಿ ಆರಂಭವಾಗಿ ನೂರು ವರ್ಷ ಗತಿಸಿದವು. ಈ ಅವಧಿಯಲ್ಲಿ ಸಿದ್ಧ ಮಾದರಿಯ ಈ ವಿಶ್ವವಿದ್ಯಾಲಯಗಳಿಂದ ಭಿನ್ನವೆಂಬಂತೆ, ಶಾಂತಿನಿಕೇತನದಂಥ ಹೊಸ ಬಗೆಯ ವಿಶ್ವವಿದ್ಯಾಲಯಗಳು ಅಲ್ಲಲ್ಲಿ ಅಸ್ತಿತ್ವಕ್ಕೆ ಬಂದವು. ಇವುಗಳಲ್ಲಿ ಒಂದು ವಿಶಿಷ್ಟ ಪ್ರಯೋಗವೆನಿಸಿದೆ ಹಂಪಿಯ ಕನ್ನಡ ವಿಶ್ವವಿದ್ಯಾಲಯ. ಕನ್ನಡ ಸಂಸ್ಕೃತಿಯನ್ನು ಶೋಧಿಸುವ, ವ್ಯಾಖ್ಯಾನಿಸುವ, ಪ್ರಕಟಣ, ಪ್ರಸಾರ ಕಾರ್ಯವನ್ನು ಪೂರೈಸುವ ಹೊಣೆಯನ್ನು ಈ ಸಂಸ್ಥೆ ಹೊಂದಿದೆ. ಈ ಎಲ್ಲ ಚುಟವಟಿಕೆಗಳಿಗೆ ತಾತ್ವಿಕ ನೆಲೆಯಾಗಿದೆ, ದೇಶಿ.

ಸಮಗ್ರ ಭಾರತದಲ್ಲಿಯೇ ರಾಜ್ಯ ಸರಕಾರ ಪೋಷಿಸುವ ಏಕೈಕ ವಿದ್ಯಾ ಸಂಸ್ಥೆಯಾಗಿದೆ ಕನ್ನಡ ವಿಶ್ವವಿದ್ಯಾಲಯ. ಹೀಗಾಗಿ ಮೊದಲಿನಿಂದಲೂ ಈ ಸಂಸ್ಥೆಗೆ ಉದಾರ ನೆರವು ನೀಡುತ್ತ ಬಂದ ಕರ್ನಾಟಕ ಸರ್ಕಾರವನ್ನು, ಅದರ ಮಹಾನಾಯಕನಾಗಿರುವ ಮಾನ್ಯ ಶ್ರೀ ಜೆ.ಎಚ್. ಪಟೇಲ್ ಅವರನ್ನು ಆರಂಭದಲ್ಲಿಯೇ ಅಭಿನಂದಿಸುತ್ತೇನೆ.

ಶಿಕ್ಷಣ, ವಿಶ್ವವಿದ್ಯಾಲಯದ ಹೃದಯ. ಇದಕ್ಕೆ ಅರ್ಥ ತುಂಬುವುದಕ್ಕಾಗಿ ಈ ವರ್ಷದ ಆರಂಭದಲ್ಲಿಯೇ ಮಾಡಿದ ಬಹುಮುಖ್ಯ ಕೆಲಸವೆಂದರೆ ವಿಭಾಗಗಳ ಪುನಾರಚನೆ. ಇದರಿಂದಾಗಿ ಮಹಿಳಾ ಅಧ್ಯಯನ ವಿಭಾಗ, ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ, ವಿಶ್ವ ಕನ್ನಡ ವಿಭಾಗಗಳು ಅಸ್ತಿತ್ವಕ್ಕೆ ಬಂದು ಈ ವಿಶ್ವವಿದ್ಯಾಲಯದ ಶೈಕ್ಷಣಿಕ ವಿಕಾಸಕ್ಕೆ ಹೊಸ ಆಯಾಮಗಳು ಪ್ರಾಪ್ತವಾಗಿವೆ.

ವಿಶ್ವವಿದ್ಯಾಲಯದ ಬೆಳವಣಿಗೆಯೆಂದರೆ ವಿಭಾಗಗಳ ಬೆಳವಣಿಗೆ. ಅವುಗಳ ಬೆನ್ನೆಲುಬು ಗಟ್ಟಿಯಾದರೆ ಮಾತ್ರ ವಿಶ್ವವಿದ್ಯಾಲಯದ ಬೆನ್ನೆಲುಬು ಗಟ್ಟಿಯಾಗಿರುತ್ತದೆ. ಈ ಆದರ್ಶದಲ್ಲಿ ವಿಭಾಗಗಳು ಮೈಮುರಿದು ಬೆಳೆಯುವುದಕ್ಕಾಗಿ, ಅವುಗಳಲ್ಲಿ ಸ್ವತಂತ್ರ ಘಟಕದ ಸ್ಥಾನಮಾನವನ್ನು ಕಲ್ಪಿಸಿಕೊಡಲಾಗಿದೆ. ಅಂದರೆ ವಾರ್ಷಿಕ ಬಜೆಟ್ ಹಂಚಿಕೊಟ್ಟು, ಸಾಂಸ್ಥಿಕ ಯೋಜನೆ, ವೈಯಕ್ತಿಕ ಯೋಜನೆ, ವಿಚಾರ ಸಂಕಿರಣಗಳ ಹೊಣೆಗಳನ್ನು ವಹಿಸಿಕೊಡಲಾಗಿದೆ. ಪ್ರತಿ ತಿಂಗಳು ವರದಿ ತರಿಸಿಕೊಳ್ಳುವ ಮತ್ತು ಪ್ರತಿ ಮೂರು ತಿಂಗಳಿಗೊಮ್ಮೆ ಕುಲಪತಿಗಳು ವಿಭಾಗಗಳಿಗೆ ಭೇಟಿ ನೀಡುವ ಮೂಲಕ, ಅಲ್ಲಿ ಸಂಶೋಧನೆ ಕ್ರಮಬದ್ಧವಾಗಿ ಮುನ್ನಡೆಯುವಂತೆ ಎಚ್ಚರವಹಿಸಲಾಗಿದೆ.

ಇದು 'ದೇಶೀ ಅಧ್ಯಯನ'ದ ವಿಶ್ವವಿದ್ಯಾಲಯ. ಇಲ್ಲಿ ಕರ್ನಾಟಕದ ಅಧ್ಯಯನ ಮತ್ತು ಇದಕ್ಕೆ ನೆಲೆಯಾಗಿರುವ ದ್ರಾವಿಡ ಅಧ್ಯಯನಗಳಿಗೆ ವಿಶೇಷ ಒತ್ತು ಕೊಡುತ್ತಲೇ ಲೋಕ ಸಂಬಂಧವನ್ನು ಕಲ್ಪಿಸಿಕೊಳ್ಳುವುದು ಇದರ ಉದ್ದೇಶವಾಗಿದೆ. ಆದುದರಿಂದ ಪ್ರಸ್ತುತ ವರ್ಷದ ಯೋಜನೆ, ವಿಚಾರ ಸಂಕಿರಣ, ಗ್ರಂಥ ಪ್ರಕಟಣೆಗಳು ಈ ದಾರಿಯಲ್ಲಿ ಹೀಗೆ ಮುನ್ನಡೆದಿವೆ.

ಕರ್ನಾಟಕದ ಬುಡಕಟ್ಟು ಮಹಾಕಾವ್ಯಗಳ ಮತ್ತು ಉತ್ತರ ಕರ್ನಾಟಕದ ಜನಪದ ಮಹಾಕಾವ್ಯಗಳ ಸಂಗ್ರಹ, 'ದೇಶೀ' ಸಮ್ಮೇಳನ ಮತ್ತು 'ಬುಡಕಟ್ಟು ಮಹಿಳೆ'ಯನ್ನು ಕುರಿತ ವಿಚಾರ ಸಂಕಿರಣಗಳ ಸಂಘಟನೆ. ಕರ್ನಾಟಕದ ಜನಸಮುದಾಯ ಕೋಶ ಮತ್ತು ಕೃಷಿ ಪದಕೋಶಗಳ ಸಿದ್ಧತೆ, ಉತ್ತರ ಕರ್ನಾಟಕದ ಎಲ್ಲ ಜಿಲ್ಲೆಗಳ ಶಾಸನ ಸಂಪಾದನೆ, ಕರ್ನಾಟಕದ ಪ್ರತಿಯೊಂದು ಗ್ರಾಮದ ದೇವಾಲಯಗಳ ಪರಿವೀಕ್ಷಣೆ, ಹಸ್ತಪ್ರತಿಗಳ ಸಂಗ್ರಹ ಇವೇ ಮೊದಲಾದ ಯೋಜನೆಗಳು ಈ ವರ್ಷ ಆರಂಭವಾಗಿದೆ. ಹೀಗೆ ಅಧ್ಯಯನವನ್ನು ಕರ್ನಾಟಕದ ಪ್ರಾಚೀನತೆಗೆ ಮಾತ್ರ ಸೀಮಿತಗೊಳಿಸದೆ, ಆಧುನಿಕತೆಗೂ ಮುಂದುವರಿಸಿದ ಫಲವಾಗಿ, ಕರ್ನಾಟಕದ ಹೊಸ ಜಿಲ್ಲೆಗಳ ಅಧ್ಯಯನ ಯೋಜನೆಯೊಂದಿಗೆ, ಉತ್ತರ ಕರ್ನಾಟಕದ ಅಭಿವೃದ್ಧಿ ಅಧ್ಯಯನ, ಕನ್ನಡ ಮಹಿಳೆಯ ಮತ್ತು ಸ್ವಾತಂತ್ರ್ಯ ಹೋರಾಟ, ಕನ್ನಡ ಸಾಹಿತ್ಯದ ಅಧ್ಯಯನಗಳ ಪುನರ್ ವ್ಯಾಖ್ಯಾನ, ಮೌಖಿಕ ಚರಿತ್ರೆ ಇವೇ ಮೊದಲಾದ ವಿಚಾರ ಸಂಕಿರಣಗಳನ್ನು ಈ ವರ್ಷ ಜರುಗಿಸಲಾಗಿದೆ.

ಹೀಗೆ ಕರ್ನಾಟಕಕ್ಕೆ ಮಾತ್ರ ಸೀಮಿತಗೊಳ್ಳದೆ, ತಾನು ದ್ರಾವಿಡ ವ್ಯಾಪ್ತಿಗೂ ಹಿಗ್ಗಬೇಕೆಂದು ಕನ್ನಡ ವಿಶ್ವವಿದ್ಯಾಲಯದ ಸಂಕಲ್ಪವಾಗಿದೆ. ಈ ಸಂಕಲ್ಪವನ್ನು ಸಕಾರಗೊಳಿಸುತ್ತಿರುವುದಕ್ಕೆ ನಿದರ್ಶನವೆಂಬಂತೆ "ದ್ರಾವಿಡ ಕಾವ್ಯ ಮೀಮಾಂಸೆ" ಹೆಸರಿನ ವಿಚಾರ ಸಂಕಿರಣವನ್ನು ಸಂಘಟಿಸುವುದರೊಂದಿಗೆ, 'ದ್ರವಿಡಿಯನ್ 'ಎಟಿಮಾಲಾಜಿಕಲ್ ಡಿಕ್ಷನರಿ'ಯ ಅನುವಾದ ಕಾರ್ಯವನ್ನು, ದ್ರಾವಿಡ ಸಾಹಿತ್ಯ ಚರಿತ್ರೆ, ಕನ್ನಡಕ್ಕೆ ಅನುವಾದಗೊಂಡ ದ್ರಾವಿಡ ಗ್ರಂಥಸೂಚಿಗಳ ಸಿದ್ಧತೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಈ ವರ್ಷದ ನುಡಿಹಬ್ಬಕ್ಕೆ ದ್ರಾವಿಡ ವಿಶ್ವವಿದ್ಯಾಲಯದ ಸಹ ಕುಲಾಧಿಪತಿಗಳಾದ ಡಾ. ವಿ.ಐ. ಸುಬ್ರಹ್ಮಣ್ಯಂ ಅವರನ್ನು ಮುಖ್ಯ ಅತಿಥಿಗಳನ್ನಾಗಿ ನಾವು ಬರಮಾಡಿಕೊಂಡುದ್ದು, ಈ ಹಿನ್ನೆಲೆಯಲ್ಲಿ.

ಹೀಗೆ ದ್ರಾವಿಡ ಅಧ್ಯಯನ ನಡೆಸುತ್ತಲೇ ಇದರ ಆಚೆಗೂ ಇರುವ ಲೋಕದೊಂದಿಗೆ ಆದಾನ-ಪ್ರದಾನ ಸಂಬಂಧ ಇಟ್ಟುಕೊಳ್ಳುವುದು ಈ ಸಂಸ್ಥೆಯ ಗುರಿಯಾಗಿದೆ. ಈ ಹಿನ್ನೆಲೆಯಲ್ಲಿ ನಿಂತು, ಮರಾಠಿ ಅಭಂಗಗಳ ಅನುವಾದ ಕಾರ್ಯ, ಕನ್ನಡಕ್ಕೆ ಅನುವಾದಗೊಂಡ ಇಂಗ್ಲಿಷ್

ಗ್ರಂಥಸೂಚಿಗಳ ಸಿದ್ಧತೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಭೌತಿಕ ಮತ್ತು ಬೌದ್ಧಿಕ ಹಸಿವನ್ನು ಹಿಂಗಿಸಿಕೊಳ್ಳಬೇಕೆಂದು ಜಗತ್ತಿನ ಮೂಲೆ ಮೂಲೆಗೆ ವಲಸೆ ಹೋಗಿರುವ ಕನ್ನಡಿಗರೊಂದಿಗೆ ಸಂಪರ್ಕ ಬೆಳೆಸಿಕೊಳ್ಳಲು, ವಿದೇಶಿಯರಿಗೆ ಕನ್ನಡ ಸಂಸ್ಕೃತಿಯನ್ನು ಪರಿಚಯಿಸಲು ಅಸ್ತಿತ್ವಕ್ಕೆ ಬಂದಿರುವ 'ವಿಶ್ವ ಕನ್ನಡ ವಿಭಾಗ' ಈ ದಿಶೆಯಲ್ಲಿ ದುಡಿಯುವ ಉದ್ದೇಶ ಹೊಂದಿದೆ. ಇಂದು ಡಾ. ಜಾರ್ಜ್ ಮಿಶಲ್ ಅವರಿಗೆ 'ನಾಡೋಜ' ಗೌರವ ಪದವಿಯನ್ನು ನೀಡುವ ಉದ್ದೇಶವೂ ಲೋಕವಿಸ್ತಾರ ಪಡೆಯುವುದೇ ಆಗಿದೆ.

ಹೀಗೆ, ಕನ್ನಡವನ್ನು ಕೇಂದ್ರವಾಗಿಟ್ಟುಕೊಳ್ಳುತ್ತಲೇ ಕನ್ನಡದಿಂದ ದ್ರಾವಿಡಕ್ಕೆ, ದ್ರಾವಿಡದಿಂದ ಆರ್ಯಕ್ಕೆ, ಆರ್ಯದಿಂದ ಆರ್ಯೇತರಕ್ಕೆ ವಿಸ್ತಾರ ಪಡೆಯುತ್ತಲಿರುವ ಇಲ್ಲಿಯ ಅಧ್ಯಯನ, 'ಸೀಮೋಲ್ಲಂಘನ ಪ್ರಕ್ರಿಯಾ' ಸ್ವರೂಪದ್ದಾಗುವಂತೆ ನೋಡಿಕೊಳ್ಳಲಾಗಿದೆ.

ಕನ್ನಡ ವಿಶ್ವವಿದ್ಯಾಲಯದ ಕಣ್ಣಮುಂದೆ ಇರುವ ಇನ್ನೊಂದು ಕನಸು ಅನ್ವಯಿಕ ಬೋಧನೆ. ಅಂದರೆ, ಸಾಹಿತ್ಯವನ್ನು ಬೋಧಿಸುವುದನ್ನಲ್ಲ, ಸೃಷ್ಟಿಸುವುದನ್ನು ಕಲಿಸುವುದು. ಇದಕ್ಕೆ ಪೂರ್ವಭಾವಿ ಪ್ರಯೋಗವೆಂಬಂತೆ 'ಕಾವ್ಯ ಕಟ್ಟುವ ಬಗೆ' ವಿಷಯವನ್ನು ಕುರಿತ ಹತ್ತು ದಿನಗಳ ಕಮ್ಮಟದಲ್ಲಿ ೨೦ ಯುವಕರಿಗೆ ಮಾರ್ಗದರ್ಶನ – ತರಬೇತಿ ನೀಡಿದುದು ಒಂದು ಹೊಸ ಪ್ರಯೋಗವೆಂದೇ ಹೇಳಬೇಕು. ಈ ಆದರ್ಶದಲ್ಲಿ 'ಸೃಜನಶೀಲ ಕನ್ನಡ' ಡಿಪ್ಲೋಮಾ ವರ್ಗವನ್ನು ಮುಂದಿನ ವರ್ಷದಿಂದ ತೆರೆಯಲಾಗುತ್ತದೆ. ಈಗ ಸಂಗೀತ ವಿಭಾಗ, ಶಿಲ್ಪಕಲಾ ವಿಭಾಗಗಳಲ್ಲಿ ಡಿಪ್ಲೋಮಾ ವರ್ಗ ನಡೆಸಲಾಗುತ್ತಿದ್ದು, ಮುಂದಿನ ವರ್ಷ 'ಮಹಿಳಾ ಅಧ್ಯಯನ ಡಿಪ್ಲೋಮಾ' ವರ್ಗವನ್ನು ಆರಂಭಿಸಲಾಗುತ್ತದೆ.

ಲೋಹಿಯಾ ಅಧ್ಯಯನ ಪೀಠ, ದಲಿತ ಸಂಸ್ಕೃತಿ ಅಧ್ಯಯನ ಪೀಠ, ಶಂಭಾ ಅಧ್ಯಯನ ವೇದಿಕೆಗಳನ್ನು ಪುನಾಃರಚಿಸಲಾಗಿದ್ದು, ಲೋಹಿಯಾ ಅಧ್ಯಯನ ಪೀಠ, ಶಾಂತವೇರಿ ಗೋಪಾಲಗೌಡ ನೆನಪಿನ ಸಂಪುಟವನ್ನು ಪ್ರಕಟಿಸಿದೆ. ಮಿಕ್ಕವು ಸೂಕ್ತ ಯೋಜನೆಗಳನ್ನು ಕೈಗೆತ್ತಿಕೊಂಡಿವೆ. ಈ ವರ್ಷ ಕನ್ನಡ ತೆಲುಗು ಸಂಸ್ಕೃತಿಪೀಠ, ಶ್ವೇತಾಂಬರ ಜೈನಸಂಸ್ಕೃತಿ ಪೀಠ ಆರಂಭಿಸುವ ಪೂರ್ವಸಿದ್ಧತೆ ನಡೆದಿದೆ.

ಶೈಕ್ಷಣಿಕ ಅಭಿವೃದ್ಧಿಗಾಗಿ ಜಾನಪದ ಮ್ಯೂಜಿಯಂ, ಆರ್ಟ್‌ಗ್ಯಾಲರಿ, ಹಸ್ತಪ್ರತಿ ಗ್ರಂಥಾಲಯಗಳನ್ನು ಅಸ್ತಿತ್ವಕ್ಕೆ ತರಲಾಗಿದೆ. ಕೊಪ್ಪಳದ ಶ್ರೀ ಸಂಗಣ್ಣ ಅಗಡಿ, ಧಾರವಾಡದ ಶ್ರೀ ಕೆ.ಎಸ್. ದೇಶಪಾಂಡೆ ಅವರಿಂದ ಅಪೂರ್ವ ಗ್ರಂಥಗಳನ್ನು ಕಾಣಿಕೆಯಾಗಿ ಪಡೆದು, ಗ್ರಂಥಾಲಯವನ್ನು ಬೆಳೆಸಲಾಗಿದೆ.

ಪ್ರಸಾರಾಂಗ, ನಮ್ಮ ವಿಶ್ವವಿದ್ಯಾಲಯದ ಶಕ್ತಿ ಆಸಕ್ತಿಗಳನ್ನು ಜಗತ್ತಿಗೆ ಪರಿಚಯಿಸುವ ಪ್ರಕಟನೆ ಸಂಸ್ಥೆ. ಈ ಮೊದಲಿನ ಪತ್ರಿಕೆಗಳ ಜೊತೆಗೆ ಈ ವರ್ಷ 'ಕನ್ನಡ ಅಧ್ಯಯನ', 'ಮಹಿಳಾ ಅಧ್ಯಯನ' ಹೆಸರಿನ ಎರಡು ಹೊಸ ಪತ್ರಿಕೆಗಳನ್ನು ಆರಂಭಿಸಲಾಗಿದೆ. ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ, ನಾಟಕ ರಂಗಕೃತಿಗಳ ಪ್ರಯೋಗ, ಬೃಹದ್ದೇಶೀ, ರಜಾಕಾರ ಲಾವಣಿ ಕೃತಿಗಳು ಇತ್ತೀಚೆಗೆ ಪ್ರಕಟವಾಗಿದ್ದು, ನುಡಿಹಬ್ಬದ ಅಂಗವಾಗಿ ಮಂಟಪಮಾಲೆಯ ೧೦ ಪುಸ್ತಕಗಳು, ಬಳ್ಳಾರಿ ಜಿಲ್ಲೆಯ ಶಾಸನ ಸಂಪುಟ, ಕೃಷಿಜ್ಞಾನ ಪ್ರದೀಪಿಕೆ, ಕೋಡೆಕಲ್ಲ ವಚನವಾಕ್ಯ, ಆದಿಲ್‌ಸಾಹಿ ಆಸ್ಥಾನ ಸಾಹಿತ್ಯ, ಕರ್ನಾಟಕದ ಸೂಫಿಗಳು, ಕನ್ನಡ ರಂಗಭೂಮಿ ಈ ಆರು ಕೃತಿಗಳು ಇಂದು ಬಿಡುಗಡೆಯಾಗಿದೆ. ಈ ವರ್ಷ ಬಾಹ್ಯಯೋಜನೆಯ ಅಂಗವಾಗಿ ಕೊಲ್ಲಾಪುರ ಜಿಲ್ಲೆಯ ಶಾಸನಗಳು, ಆಂಧ್ರಪ್ರದೇಶದ ಕನ್ನಡ ಶಾಸನಗಳು, ತಮಿಳುನಾಡಿನ ಕನ್ನಡ ಶಾಸನಗಳು ಹೆಸರಿನ ಸಂಪುಟಗಳ ರೂಪುಗೊಳ್ಳುತ್ತಲಿವೆ.

ಪ್ರಸಾರಾಂಗದ ಇನ್ನೊಂದು ಕೆಲಸವೆಂದರೆ, ಪುಸ್ತಕ ಸಂಸ್ಕೃತಿಯಾತ್ರೆ. ಇದರ ಅಂಗವಾಗಿ ಬೀದರ್, ಗುಲ್ಬರ್ಗಾ, ಬಳ್ಳಾರಿ, ಸಂಡೂರು, ಸಂಕೇಶ್ವರ, ಬೆಳಗಾವಿ, ಚಿತ್ರದುರ್ಗ, ಹಂಪಿ, ಧರ್ಮಸ್ಥಳಗಳಲ್ಲಿ ಪುಸ್ತಕ ಮಾರಾಟ ನಡೆಸಲಾಗಿದೆ. ಬಳ್ಳಾರಿ ಸಂಡೂರು, ಹೆಬ್ರಿ, ಸಂಕೇಶ್ವರ, ಕಾಸರಗೋಡುಗಳಲ್ಲಿ ಮಂಟಪಮಾಲೆಯ ಉಪನ್ಯಾಸವನ್ನು ಕೈಕೊಳ್ಳಲಾಗಿದೆ. 'ಉಪೇಕ್ಷಿತ ಸಾಹಿತ್ಯಮಾಲೆ'ಯ ಹೆಸರಿನಲ್ಲಿ ಅದಿಲ್‌ಶಾಹಿ

ಆಸ್ಥಾನ ಸಾಹಿತ್ಯ ವಿಷಯವನ್ನು ಕುರಿತ ವಿಶೇಷ ಉಪನ್ಯಾಸ ಏರ್ಪಡಿಸಲಾಗಿದೆ. ಹೊಸಪೇಟೆಯಲ್ಲಿ ಪುಸ್ತಕ ಮಾರಾಟ ಮಳಿಗೆಯನ್ನು ಆರಂಭಿಸಿರುವುದು ಈ ವರ್ಷದ ವಿಶೇಷ ಸಾಧನೆಯಾಗಿದೆ.

ಆಡಳಿತ ಸುಧಾರಣೆ ಈ ವರ್ಷದ ಇನ್ನೊಂದು ಸಾಧನೆ. ಸಂಶೋಧನೆ ವಿಭಾಗಗಳಲ್ಲಿ ಸೇರಿಹೋಗಿದ್ದ 'ಅಧ್ಯಯನಾಂಗ'ವನ್ನು ಆಡಳಿತ ವಿಭಾಗದಲ್ಲಿ ಸ್ಥಾಪಿಸಿ, ಅದಕ್ಕೆ ಕ್ರಮವತ್ತಾದ ಕಾರ್ಯ ಯೋಜನೆಯನ್ನು ರೂಪಿಸಿಕೊಡಲಾಗಿದೆ. ಪಠ್ಯಕ್ರಮ, ಪರೀಕ್ಷೆ, ಪಿಎಚ್.ಡಿ. ನಿಯಮಗಳಲ್ಲಿ ಸುಧಾರಣೆ ಮಾಡಲಾಗಿದೆ. ವಿತ್ತ ಭಂಡಾರದ ಮೇಲೆ ಹತೋಟಿ ಸಾಧಿಸಲಾಗಿದೆ. ಇದರ ಫಲವಾಗಿ ಹಣಕಾಸಿನಲ್ಲಿ ಮಿತವ್ಯಯ, ಕಾಗದ ಪತ್ರಗಳ ಪರಿಚಲನೆಯಲ್ಲಿ ವೇಗಗಳು ಸಾಧ್ಯವಾಗಿದೆ.

ಅಭಿವೃದ್ಧಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದ ಆವರಣದಲ್ಲಿ ಬ್ಯಾಂಕ್ ಸ್ಥಾಪಿಸಲಾಗಿದೆ. ಬಸ್ ವ್ಯವಸ್ಥೆ ಮಾಡಿ ತಿಂಗಳಿಗೆ ೩೦ ಸಾವಿರ ರೂಪಾಯಿ ಉಳಿತಾಯ ಮಾಡಲಾಗಿದೆ. ಐದು ಸಾವಿರ ಗಿಡಗಳನ್ನು ಈ ವರ್ಷ ನೆಡಿಸಲಾಗಿದೆ. ಶ್ರೀಶೈಲ ಅತಿಥಿಗೃಹವನ್ನು ಪೀಠೋಪಕರಣಗಳಿಂದ ಸುಸಜ್ಜಿತಗೊಳಿಸಲಾಗಿದೆ. ಅಂಚೆ ಕಛೇರಿಯನ್ನು ಆರಂಭಿಸುವ ಸಿದ್ಧತೆ ನಡೆದಿದೆ. ಬರುವ ಮಾರ್ಚ್‌ದೊಳಗಾಗಿ ಆವರಣದ ಎಲ್ಲ ರಸ್ತೆಗಳ ಡಾಂಬರೀಕರಣ ಮಾಡಲಾಗುತ್ತದೆ.

ವರ್ಷದ ಆರಂಭದಿಂದಲೂ ಆರ್ಥಿಕ ಅಭಿವೃದ್ಧಿಗಾಗಿ ಪ್ರಯತ್ನಿಸುತ್ತಿದ್ದೇವೆ. ಕಳೆದ ವರ್ಷ ನೀಡುತ್ತಲಿದ್ದ ಎರಡೂವರೆ ಕೋಟಿ ವಾರ್ಷಿಕ ಅನುದಾನ, ಈ ವರ್ಷ ಮೂರು ಕೋಟಿಗೆ ಏರಿದೆ. ಹೋದ ವರ್ಷದ ಬಾಕಿ ತೀರಿಸಲು ಈ ವರ್ಷದ ಆರಂಭದಲ್ಲಿಯೇ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಜೆ.ಎಚ್. ಪಟೇಲ್ ಅವರು ಮತ್ತೆ ಹೆಚ್ಚಿನದಾಗಿ ಒಂದು ಕೋಟಿ ರೂಪಾಯಿ ಅನುದಾನ ನೀಡಿರುವುದನ್ನು ಕೃತಜ್ಞತೆಯಿಂದ ನೆನೆಯುತ್ತೇನೆ.

ಈ ವರ್ಷ 'ಕನ್ನಡ ಸಂಸ್ಕೃತಿ ಇಲಾಖೆ' ನೀಡಿದ ನೆರವು ಸ್ಮರಣೀಯವೆನಿಸಿದೆ. ಉತ್ತರ ಕರ್ನಾಟಕದ ಎಲ್ಲ ಜಿಲ್ಲೆಗಳ ಶಾಸನ ಪ್ರಕಟಣೆಗಾಗಿ ಈ ಇಲಾಖೆ ಪ್ರತಿವರ್ಷ ಎರಡು ಲಕ್ಷ ರೂಪಾಯಿಗಳಂತೆ ಹತ್ತು ವರ್ಷ ಅನುದಾನವನ್ನು ಮಂಜೂರು ಮಾಡಿದೆ. 'ಬೃಹದ್ದೇಶೀ' ಗ್ರಂಥ ಪ್ರಕಟಣೆಗೆ ಒಂದು ಲಕ್ಷ ರೂಪಾಯಿ ನೀಡಿದೆ. ಆವರಣದ ಒಳರಸ್ತೆಗಳ ಡಾಂಬರೀಕರಣಕ್ಕೆ ಪ್ರವಾಸೋದ್ಯಮ ನಿರ್ದೇಶನಾಲಯ ವತಿಯಿಂದ ಆರೂವರೆ ಲಕ್ಷ ಬರಲಿದೆ. ಲೋಕೋಪಯೋಗಿ ಇಲಾಖೆ ಆಳ್ವಿಕೆರೆಯ ಮೇಲಿನ ರಸ್ತೆಯ ಡಾಂಬರೀಕರಣಕ್ಕಾಗಿ ಆರೂವರೆ ಲಕ್ಷ ನೀಡಿದೆ. 'ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯು ವಿಶ್ವವಿದ್ಯಾಲಯದ ಆವರಣದ ಅಭಿವೃದ್ಧಿಗಾಗಿ ೫೦ ಲಕ್ಷ ರೂಪಾಯಿಗಳು ನೀಡುವುದಾಗಿ ಆಶ್ವಾಸನೆ ನೀಡಿದೆ. ಈ ಎಲ್ಲ ಅನುದಾನಗಳಿಗಾಗಿ ಮಾನ್ಯ ಸಚಿವರಾದ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್, ಶ್ರೀ ಸಿ.ಎಂ. ಉದಾಸಿ, ಶ್ರೀ ಕೆ. ಶರಣಪ್ಪ ಅವರ ಔದಾರ್ಯವನ್ನು ನೆನೆಯುತ್ತೇನೆ. ಇವೆಲ್ಲವುಗಳ ಹಿಂದೆ ಬಹುದೊಡ್ಡ ಪಾತ್ರವಾಡಿದ ಬಳ್ಳಾರಿ ಜಿಲ್ಲೆಯ ಉಸ್ತುವಾರಿ ಸಚಿವರಾದ ಮಾನ್ಯ ಶ್ರೀ ಎಂ.ಪಿ. ಪ್ರಕಾಶ್ ಅವರನ್ನು ವಿಶೇಷವಾಗಿ ಸ್ಮರಿಸುತ್ತೇನೆ.

ಕನ್ನಡ ವಿಶ್ವವಿದ್ಯಾಲಯ ತನ್ನ ಅಸ್ತಿತ್ವನ್ನು ಪ್ರಕಟಣೆಗಳ ಮುಲಕ ತೋರಿಸಬೇಕಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಮುದ್ರಣ ವೆಚ್ಚದ ಏರಿಕೆ ಕಾರಣವಾಗಿ, ಎಲ್ಲ ವಿಶ್ವವಿದ್ಯಾಲಯಗಳ ಪ್ರಕಟಣ ಕಾರ್ಯ ಸೊರಗುತ್ತಲಿದೆ. ಈ ದುಃಸ್ಥಿತಿ ಕನ್ನಡ ವಿಶ್ವವಿದ್ಯಾಲಯಕ್ಕೆ ಒದಗಬಾರದೆಂದು 'ಸಂಸದ ಸಾಹಿತ್ಯನಿಧಿ' ಯೋಜನೆಯನ್ನು ರೂಪಿಸಲಾಗಿದೆ. ಇದರನ್ವಯ ಜಿಲ್ಲಾ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ಲೋಕಸಭೆ ರಾಜ್ಯಸಭೆಗಳ ಸದಸ್ಯರಿಗೆ ಕೊಡಮಾಡುವ ಒಂದು ಕೋಟಿ ರೂಪಾಯಿ ಹಣದಲ್ಲಿ ಐದು ಲಕ್ಷ ರೂಪಾಯಿಗಳನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ನೀಡಲು ಎಲ್ಲ ಸಂಸತ್ ಸದಸ್ಯರಿಗೆ ಭಿನ್ನವಿಸಿಕೊಳ್ಳಲಾಗಿದೆ. ಮಾನ್ಯರಾದ ಶ್ರೀ ಕೆ.ಸಿ. ಕೊಂಡಯ್ಯ, ಶ್ರೀ ಎಚ್.ಜಿ. ರಾಮುಲು, ಶ್ರೀ ಬಸವರಾಜ ಪಾಟೀಲ ಸೇಡಂ ಇದಕ್ಕೆ ಒಪ್ಪಿಗೆ ಸೂಚಿಸಿದ್ದಾರೆ. ಮಾನ್ಯರಾದ ಶ್ರೀ ರಾಮಕೃಷ್ಣ ಹೆಗಡೆ, ಶ್ರೀ ಅನಂತಕುಮಾರ ಅವರು ಭರವಸೆ ನೀಡಿದ್ದಾರೆ. ಮಿಕ್ಕವರಿಂದ ಒಪ್ಪಿಗೆ ನಿರೀಕ್ಷಿಸಿದ್ದು, ಇವರೆಲ್ಲರು ಕೊಡಮಾಡಿದರೆ ಒಂದೂವರೆ ಕೋಟಿ ರೂಪಾಯಿ ಸಂಗ್ರಹವಾಗಿ, ಅದರ ಬಡ್ಡಿ

ಹಣದಲ್ಲಿ ಪ್ರಕಟಣೆಗಳು ನಿರಾತಂಕವಾಗಿ ನಡೆಸಬಹುದಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಈ ಸಂಸತ್ ಸದಸ್ಯರಿಗೆ ಒಂದು ಮಾತು ಹೇಳಿದರೆ ದೊಡ್ಡ ಉಪಕಾರವಾಗುತ್ತದೆ.

ವಿಶ್ವವಿದ್ಯಾಲಯದಲ್ಲಿ ಹದಿನೆಂಟು ವಿಭಾಗಗಳಿವೆ. ಪ್ರತಿಯೊಂದು ವಿಭಾಗದಲ್ಲಿ ದತ್ತಿ ಉಪನ್ಯಾಸ ಸ್ಥಾಪಿಸಲು ಈ ವರ್ಷ ಯೋಜಿಸಲಾಗಿದೆ. ಇದರ ಅಂಗವಾಗಿ ಬಳ್ಳಾರಿಯ ಶ್ರೀ ಕೆ.ಸಿ. ಕೊಂಡಯ್ಯ, ಶಿವಮೊಗ್ಗೆಯ ಶ್ರೀ ಎಚ್. ಇಬ್ರಾಹಿಂ ಸಾಹೇಬ್, ಬಳ್ಳಾರಿಯ ಶ್ರೀ ಅಲ್ಲಂ ಬಸವರಾಜ, ಬೆಳಗಾವಿಯ ಕೆ.ಎಲ್.ಇ. ಸೊಸೈಟಿ, ಬಾಗಲಕೋಟೆಯ ಶ್ರೀ ಬಸವೇಶ್ವರ ವಿದ್ಯಾವರ್ಧಕ ಸಂಘ ತಲಾ ೫೦ ಸಾವಿರ ಕೊಡಮಾಡಿದ್ದಾರೆ. ಹೀಗೆ ಮಿಕ್ಕ ವಿಭಾಗಗಳಲ್ಲಿಯೂ ದತ್ತನಿಧಿ ಸ್ಥಾಪಿಸುವ ಪ್ರಯತ್ನ ಮುಂದುವರೆದಿದೆ. ವಿಶ್ವವಿದ್ಯಾಲಯದ ಆವರಣದಲ್ಲಿ ಸಿಬ್ಬಂದಿಗಳ ಮನೆಗಳನ್ನು ಕಟ್ಟಲು ಹುಡ್ಕೋದಿಂದ ಒಂದೂವರೆ ಕೋಟಿ ಮಂಜೂರಾಗಿದೆ. ಕೇಂದ್ರ ಮಾನವ ಸಂಪನ್ಮೂಲ ಇಲಾಖೆ ಪುರಾತತ್ವ ವಸ್ತುಸಂಗ್ರಹಾಲಯಕ್ಕಾಗಿ ಒಂದು ಕೋಟಿ ಎಪ್ಪತ್ತೈದು ಲಕ್ಷ ಹಣ ಮಂಜೂರು ಮಾಡಿದೆ. ಹೀಗೆ ಸಾಧ್ಯವಿರುವ ಎಲ್ಲ ಸಂಪನ್ಮೂಲಗಳನ್ನು ಕ್ರೋಢೀಕರಿಸಲಾಗಿದೆ. ಹೀಗಿದ್ದೂ ಹಿಂದಿನ ಬಾಕಿ ಇನ್ನೂ ೭೫ ಲಕ್ಷ ಇದ್ದು, ಮಾನ್ಯ ಮುಖ್ಯಮಂತ್ರಿಗಳನ್ನು ಈ ಅನುದಾನಕ್ಕಾಗಿ ಭಿನ್ನವಿಸಿಕೊಳ್ಳುತ್ತೇನೆ. 'ಹಣವನ್ನು ನೀರಿನಂತೆ ಗಳಿಸಬೇಕು. ತೀರ್ಥದಂತೆ ಬಳಸಬೇಕು' ಎಂಬ ಅರ್ಥನೀತಿಯನ್ನು ಅನುಸರಿಸಿ, ಮಿತವ್ಯಯವನ್ನು ಪಾಲಿಸಿರುವುದರಿಂದಾಗಿ, ಈ ವಿಶ್ವವಿದ್ಯಾಲಯಕ್ಕೆ ಪ್ರತಿ ವರ್ಷ ೧೨ ಲಕ್ಷ ರೂಪಾಯಿ ಉಳಿತಾಯವಾಗುತ್ತಲಿದೆ.

ವಿಶ್ವವಿದ್ಯಾಲಯದ ಆಸ್ತಿ ಎಂದರೆ ಇಲ್ಲಿಯ ಸಿಬ್ಬಂದಿ ವರ್ಗ ಮತ್ತು ಇಲ್ಲಿಯ ಪ್ರಕಟಣೆಗಳು. ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿದ ಕರ್ನಾಟಕ ಜಾನಪದ ಕಲೆಗಳ ಕೋಶ (ಸಂ.ಪ್ರೊ.ಹಿ.ಚಿ.ಬೋರಲಿಂಗಯ್ಯ) ಕೃತಿಗೆ ಕನ್ನಡ ಪುಸ್ತಕ ಪ್ರಾಧಿಕಾರದ ಪ್ರಥಮ ಬಹುಮಾನ, ದೆಹಲಿಯ ಅಖಿಲ ಭಾರತ ಪ್ರಕಾಶನ ಸಂಸ್ಥೆಯ ಪ್ರಥಮ ಬಹುಮಾನಗಳು ಲಭ್ಯವಾಗಿದೆ. ಬುಡಕಟ್ಟು ವಿಭಾಗ ಪ್ರಕಟಿಸಿದ ಬುಡಕಟ್ಟು ಮಹಾಕಾವ್ಯ ಮಾಲೆ (ಸಂ. ಡಾ. ಕೆ.ಎಂ. ಮೇತ್ರಿ, ಡಾ. ಕೇಶವನ್ ಪ್ರಸಾದ್, ಡಾ. ಚಲುವರಾಜು ಮತ್ತು ಶ್ರೀ ಮೊಗಳ್ಳಿ ಗಣೇಶ) ಪುಸ್ತಕಕ್ಕೆ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಬಹುಮಾನವನ್ನು, ಬೇರು ಕಾಂಡ ಚಿಗುರು (ಡಾ. ಕೆ.ವಿ. ನಾರಾಯಣ), ತಮಂಧದ ಕೇಡು (ಡಾ. ಅಮರೇಶ್ ನುಗಡೋಣಿ), ನಾಕನೆಯ ನೀರು (ಶ್ರೀಮತಿ ನಾಗವೇಣಿ) ಕೃತಿಗಳು ಸಾಹಿತ್ಯ ಅಕಾಡೆಮಿಯ ಬಹುಮಾನವನ್ನು ಗೆದ್ದುಕೊಂಡಿವೆ. ಪ್ರೊ. ಎ.ವಿ. ನಾವಡ ಅವರು ಈ ವರ್ಷ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಜಾನಪದ ತಜ್ಞ ಗೌರವ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಜಾನಪದ ಅಕಾಡೆಮಿಗೆ ಪ್ರೊ. ಹಿ.ಚಿ. ಬೋರಲಿಂಗಯ್ಯ, ಶಿಲ್ಪಕಲಾ ಅಕಾಡೆಮಿಗೆ, ಶ್ರೀ ಜಯಕುಮಾರ್ ಸದಸ್ಯರಾಗಿ ನಾಮಕರಣಗೊಂಡಿದ್ದಾರೆ. ಈ ಸಂಗತಿಗಳು ವಿಶ್ವವಿದ್ಯಾಲಯದ ಕಿರೀಟಕ್ಕೆ ತುರಾಯಿ ಎನಿಸಿವೆ.

'ನಾಡೋಜ' ಮಹಾಕವಿ ಪಂಪನ ಬಿರುದು. ನಾಡಿನ ಉಪಾಧ್ಯಾಯ, ನಾಡಿನ ಆಚಾರ್ಯ ಪುರುಷ ಎಂದು ಇದರ ಅರ್ಥ. ಆ ಕಾಲದ 'ಪಂಪ ಪ್ರತಿಭೆ'ಯನ್ನು ನೆನಪಿಸುವ ಈ ಕಾಲದ ಗಣ್ಯರಿಗೆ, ಕನ್ನಡ ವಿಶ್ವವಿದ್ಯಾಲಯ 'ನಾಡೋಜ' ಗೌರವ ಪದವಿ ಪ್ರದಾನ ಮಾಡುತ್ತ ಬಂದಿದೆ. ಈ ವರ್ಷ ಅಭಿನಯ ಕಲಾ ಸಾಮ್ರಾಜ್ಯದ ಅನಭಿಷಕ್ತ ದೊರೆ ಡಾ. ರಾಜ್‌ಕುಮಾರ್ ಅವರಿಗೆ, ಕನ್ನಡ ಉನ್ನತ ಶಿಕ್ಷಣದ ಶಿಲ್ಪಿಗಳಾದ ಡಾ. ದೇ. ಜವರೇಗೌಡ, ಡಾ. ಆರ್.ಸಿ. ಹಿರೇಮಠ ಅವರಿಗೆ ಮತ್ತು ಕರ್ನಾಟಕಾಂತರ್ಗತ ಭಾರತೀಯ ಪುರಾತತ್ವ ವಿದ್ವಾಂಸ ಡಾ. ಜಾರ್ಜ್‌ಮಿಶಲ್ ಅವರಿಗೆ ಈ ಗೌರವ ಪದವಿಯನ್ನು ನೀಡಲಾಗುತ್ತಿದ್ದು, ಇವರೆಲ್ಲರನ್ನು ಆದರದಿಂದ ಸ್ವಾಗತಿಸುತ್ತೇನೆ.

ಈ ವರ್ಷದ ನುಡಿಹಬ್ಬಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿರುವ ಡಾ. ವಿ. ಆಯ್. ಸುಬ್ರಹ್ಮಣ್ಯಂ ಅವರು ಅಂತಾರಾಷ್ಟ್ರೀಯ ದ್ರಾವಿಡ ವಿದ್ವಾಂಸರು. ತಮಿಳು ವಿಶ್ವವಿದ್ಯಾಲಯದ ಪರಿಕಲ್ಪನೆಗೆ ಹುಟ್ಟುಹಾಕಿ, ಅದನ್ನು ಅಸ್ತಿತ್ವಕ್ಕೆ ತರುವ ಮೂಲಕ, ಇವರು ಪರ್ಯಾಯವಾಗಿ ತೆಲುಗು ವಿಶ್ವವಿದ್ಯಾಲಯ, ಕನ್ನಡ ವಿಶ್ವವಿದ್ಯಾಲಯಗಳ ಸೃಷ್ಟಿಗೂ ಕಾರಣವೆನಿಸಿದ್ದಾರೆ. ಈ ಚಿಂತನೆಯ ಮುಂದುವರಿಕೆಯೆಂಬಂತೆ ಈಗ ಕುಪ್ಪಂನಲ್ಲಿ 'ದ್ರಾವಿಡ ವಿಶ್ವವಿದ್ಯಾಲಯ'ವನ್ನು ಅಸ್ತಿತ್ವಕ್ಕೆ ತಂದು, ಅದರ ಸಹಕುಲಾಧಿಪತಿಗಳಾಗಿರುವ ಇವರನ್ನು ಗೌರವದಿಂದ ಬರಮಾಡಿಕೊಳ್ಳುತ್ತೇನೆ.

ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳ ವ್ಯಾಪ್ತಿ ೩-೪ ಜಿಲ್ಲೆಗಳಿಗೆ ಮಾತ್ರ ಸೀಮಿತ. ಕನ್ನಡ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಕರ್ನಾಟಕದ ಎಲ್ಲ ಜಿಲ್ಲೆಗಳು, ಏಕೆ? ಕನ್ನಡಿಗರಿರುವ ಜಗತ್ತಿನ ಎಲ್ಲ ಪ್ರದೇಶಗಳೂ ಸೇರುತ್ತವೆ. ಇವುಗಳಿಗೆ ಕನ್ನಡ ವಿಶ್ವವಿದ್ಯಾಲಯ ಕೇಂದ್ರವಾಗಬೇಕೆಂಬುದು ನಮ್ಮ ಕನಸು. ಈ ಉದ್ದೇಶದ ಸಫಲತೆಗಾಗಿ, ಹಂಪಿಯ ಕನ್ನಡದ ವಿಶ್ವವಿದ್ಯಾಲಯವನ್ನು ರಾಜ್ಯದ ಮೂಲೆಮೂಲೆಗೆ ಕೊಂಡೊಯ್ಯುವ ಮೊದಲ ಹಂತದ ಹೊಸ ಪ್ರಯೋಗಗಳನ್ನು ಆರಂಭಿಸಲಾಗಿದೆ. ಇದರಿಂದಾಗಿ ಈ ವರ್ಷ ಕರ್ನಾಟಕ ವ್ಯಾಪ್ತಿಗೆ ಹಿಗ್ಗುತ್ತಲಿರುವ ಈ ಸಂಸ್ಥೆ, ಮುಂದಿನ ವರ್ಷ ಭಾರತ, ವಿದೇಶಗಳ ವ್ಯಾಪ್ತಿಯನ್ನು ಸಾಧಿಸಲಿದೆ. 'ಎಲ್ಲ ರಸ್ತೆಗಳ ರೋಮ್‌ದ ಕಡೆಗೆ' ಎಂಬಂತೆ ಕನ್ನಡದ ಎಲ್ಲ ಹಾದಿಗಳು ಹಂಪಿಯ ಕಡೆಗೆ ಎಂಬಂಥ ವಾತಾವರಣ ನಿರ್ಮಾಣ ಮಾಡುವ ಗುರಿ, ಈ ಸಂಸ್ಥೆಯ ಕಣ್ಣ ಮುಂದಿದೆ. ಈ ಕಾರ್ಯದಲ್ಲಿ ಕನ್ನಡಿಗರ ಸಹಕಾರವನ್ನು ಬಯಸುತ್ತೇನೆ. ಎಲ್ಲರಿಗೂ ನಮಸ್ಕಾರ.

ಜನವರಿ ೪, ೧೯೯೯

# ೫. ರಾಷ್ಟ್ರೀಯ ವಾಹಿನಿಯಲ್ಲಿ ಸಂಲಗ್ನಗೊಂಡ ಲಕ್ಷಣ

ಘನತೆವೆತ್ತ ಸನ್ಮಾನ್ಯ ಕುಲಾಧಿಪತಿಗಳೇ, ಸನ್ಮಾನ್ಯ ಸಮ ಕುಲಾಧಿಪತಿಗಳೇ, ಗೌರವಾನ್ವಿತ ಡಾ. ಎ.ಎನ್. ಮೂರ್ತಿರಾವ್ ಮತ್ತು ಡಾ. ಹಾ.ಮಾ. ನಾಯಕ ಅವರೇ, ಸಂಸದ ಸದಸ್ಯರೇ, ಸಚಿವ – ಶಾಸಕರೇ, ಸೆನೆಟ್ – ಸಿಂಡಿಕೇಟ್ ಸದಸ್ಯರೇ, ಮಹನೀಯರೇ – ಮಹಿಳೆಯರೇ ಮತ್ತು ವಿದ್ಯಾರ್ಥಿಗಳೇ.

"ಕನ್ನಡ ವಿದ್ಯೆ"ಯ ಶೋಧ, ವಿಮರ್ಶೆ ಮತ್ತು ಪ್ರಸಾರಗಳ ಆದರ್ಶದಲ್ಲಿ ಅಸ್ತಿತ್ವಕ್ಕೆ ಬಂದಿರುವ ಕನ್ನಡ ವಿಶ್ವವಿದ್ಯಾಲಯ ಇಂದು ತನ್ನ ಆರನೆಯ ನುಡಿಹಬ್ಬವನ್ನು ಆಚರಿಸುತ್ತಲಿದೆ. ಈ ಸಮಾರಂಭಕ್ಕೆ ಘನತೆವೆತ್ತ ಸನ್ಮಾನ್ಯ ಕುಲಾಧಿಪತಿಗಳಾದ ಶ್ರೀಮತಿ ವಿ.ಎಸ್. ರಮಾದೇವಿ ಅವರನ್ನೂ, ಸನ್ಮಾನ್ಯ ಸಮಕುಲಾಧಿಪತಿಗಳಾದ ಡಾ. ಜಿ. ಪರಮೇಶ್ವರ ಅವರನ್ನೂ, ಸುಪ್ರಸಿದ್ಧ ಸಾಹಿತಿಗಳಾದ ಡಾ. ಎ.ಎನ್. ಮೂರ್ತಿರಾವ್, ಡಾ. ಹಾ.ಮಾ. ನಾಯಕ ಅವರನ್ನೂ, ಸಂಸದ ಸದಸ್ಯರನ್ನೂ, ಸಚಿವ-ಶಾಸಕರನ್ನೂ, ಎಲ್ಲ ಮಹನೀಯರನ್ನು ಪ್ರೀತಿಯಿಂದ ಸ್ವಾಗತಿಸುತ್ತೇನೆ.

ಕನ್ನಡ ಮತ್ತು ಆಂಧ್ರ ಅಕ್ಕತಂಗಿಯರು. ಹೀಗಾಗಿ ಆಂಧ್ರದ ಮಗಳಾದ ಮಾನ್ಯ ಶ್ರೀಮತಿ ರಮಾದೇವಿಯವರು ಪರ್ಯಾಯವಾಗಿ ಕನ್ನಡದ ಮಗಳೇ ಆಗಿದ್ದಾರೆ. ಪ್ರಥಮ ದರ್ಜೆಯ ಚಿನ್ನದ ಗರಿಗಳನ್ನು ಕಿರೀಟದಲ್ಲಿ ಧರಿಸಿಕೊಳ್ಳುತ್ತಲೇ ಬೆಳೆದ ಈ ಕಾನೂನು ತಜ್ಞೆ, ಕಾನೂನು ಸಾಹಿತಿಯೂ ಆಗಿರುವುದು ಒಂದು ವಿಶೇಷ. ಕಥೆ, ಕಾದಂಬರಿ, ನಾಟಕ ರಚನೆಯ ಮೂಲಕ ತೆಲುಗು ಸಾಹಿತಿಯಾಗಿರುವುದು ಇನ್ನೂ ವಿಶೇಷ. "ನಾನು ಇಷ್ಟರಲ್ಲಿ ಕನ್ನಡದಲ್ಲಿಯೇ ವ್ಯವಹರಿಸುತ್ತೇನೆ" ಎಂದು ಇತ್ತೀಚೆಗೆ ಹೇಳಿರುವ ಮಾತು, ಇವರ ಸಾಂಸ್ಕೃತಿಕ ಕರ್ತವ್ಯ ಪ್ರಜ್ಞೆಗೆ ನಿರ್ದಶನವೆನಿಸಿದೆ. ಯಾವುದೇ ರಾಜ್ಯದ ರಾಜ್ಯಪಾಲರಿಗೆ ಮಾದರಿಯೆನಿಸಿದೆ. ಕನ್ನಡ ವಿಶ್ವವಿದ್ಯಾಲಯವು, 'ವಿಶ್ವವಿದ್ಯಾಲಯ ಧನಸಹಾಯ ಆಯೋಗ'ಕ್ಕೆ ಸಂಲಗ್ನಗೊಂಡ ಮೊದಲ ವರ್ಷವಿದು. ಈ ಮೊದಲ ವರ್ಷದ ನುಡಿಹಬ್ಬಕ್ಕೆ ಮೊದಲನೆಯ ಕುಲಾಧಿಪತಿಯಾಗಿ ಸನ್ಮಾನ್ಯರು ಆಗಮಿಸಿರುವುದು, ಚರಿತ್ರಾರ್ಹ ಘಟನೆಯಾಗಿದೆ.

ಶಿಕ್ಷಣ ಸಚಿವರಾದ ಮಾನ್ಯ ಡಾ. ಜಿ. ಪರಮೇಶ್ವರ ಅವರು ಶಿಕ್ಷಣ ಸಂಸ್ಥೆಗಳ ಮಧ್ಯೆ ಹುಟ್ಟಿ, ಶಿಕ್ಷಣ ಸಂಸ್ಥೆಗಳ ಮಧ್ಯೆ ಬೆಳೆದವರು. ಕೃಷಿ ಪದವೀಧರರಾಗಿರುವುದು, ವಿದೇಶದಲ್ಲಿ ಪಿಎಚ್.ಡಿ. ಪದವಿ ಗಳಿಸಿರುವುದು, ೧೦೦೦ ರಷ್ಟು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಲಿರುವುದು ಇವೆಲ್ಲ ಇವರ ಶಿಕ್ಷಣ ಸಚಿವತ್ವಕ್ಕೆ ಸಮರ್ಥನೆಯನ್ನು ಒದಗಿಸಿವೆ. ಉನ್ನತ ಶಿಕ್ಷಣ ಕ್ಷೇತ್ರವನ್ನು ತೀವ್ರ ಬದಲಾವಣೆಯೊಂದಿಗೆ ೨೧ನೆಯ ಶತಮಾನಕ್ಕೆ ಕೊಂಡೊಯ್ಯಬೇಕೆನ್ನುವ ಇವರ ಆದಮ್ಯ ಬಯಕೆ ಅನನ್ಯವೆನಿಸಿದೆ.

ನಾಡೋಜ ಗೌರವ ಪದವಿ ಸ್ವೀಕರಿಸಲಿರುವ ಮಾನ್ಯ ಶ್ರೀ ಎ.ಎನ್. ಮೂರ್ತಿ ರಾವ್ ಅವರು ಭೌತಿಕ ಮತ್ತು ಸಾಂಸ್ಕೃತಿಕ ಎರಡೂ ಅರ್ಥಗಳಲ್ಲಿ 'ಶತಮಾನ ಪುರುಷ' ಎನಿಸಿದ್ದಾರೆ. 'ಮೌಲ್ಯ' ವನ್ನು ವ್ಯಕ್ತಿಯಾಗಿ ಬದುಕಿ, ಲೇಖಕರಾಗಿ ಬರೆಯುವ ಹಿರಿಯ ಸಾಹಿತಿಗಳಾದ ಶ್ರೀಯುತರು ಕನ್ನಡ ಪ್ರಬಂಧ ಸಾಹಿತ್ಯ ಪ್ರಕಾರಕ್ಕೆ, ವಿಚಾರ ಸಾಹಿತ್ಯ ಪ್ರಕಾರಕ್ಕೆ ನೀಡಿದ ಕೊಡುಗೆ ಅರ್ಥಪೂರ್ಣವಾದುದು. ಅಂದರೆ ಗುಣಾತ್ಮಕವಾಗಿರುವ ಅದು ಒಳನೋಟಗಳಿಂದ ತುಂಬಿದ್ದು, ಹೊಸ ವೈಚಾರಿಕ ದೃಷ್ಟಿಕೋನದಿಂದ ಶೋಭಿಸುತ್ತದೆ.

ನುಡಿಹಬ್ಬದ ಮುಖ್ಯ ಅತಿಥಿಗಳಾಗಿ ಆಗಮಿಸಿರುವ ಮಾನ್ಯ ಡಾ. ಹಾ.ಮಾ. ನಾಯಕ ಅವರದು ತುಂಬ ದೊಡ್ಡ ಹೆಸರು. ಅಖಂಡ ಕರ್ನಾಟಕವನ್ನು ಸಮಾನವಾಗಿ ಪ್ರೀತಿಸುವ ಇವರು, ದೇಶ-ವಿದೇಶ ಮಟ್ಟದಲ್ಲಿ ಕನ್ನಡದ ರಾಯಭಾರಿಯಂತೆ ದುಡಿದವರು. ಕನ್ನಡದ ಹಿತರಕ್ಷಣೆ ವಿಷಯದಲ್ಲಿ ನಿರ್ಭೀತ ಸಲಗದಂತೆ ನಡೆದು ಕೊಳ್ಳುವ ಇವರು, ಅಂಥ ಸಂದರ್ಭಗಳಲ್ಲಿ ವಹಿಸಿದ ಶ್ರಮ, ತೋರಿದ ಶ್ರದ್ಧೆ ಶಬ್ದಾತೀತ. ಅಂಕಣ ಬರಹದ ಮೂಲಕ ಕರ್ನಾಟಕದ ಮನೆಮನಗಳನ್ನು ಮುಟ್ಟಿದ ಡಾ. ನಾಯಕ ಅವರು, ಆ ಪ್ರಕಾರಕ್ಕೆ ಸಾಹಿತ್ಯಕ್ಷೇತ್ರದಲ್ಲಿ ಒಂದು ಸ್ಥಿರವಾದ ಸ್ಥಾನ ಗೌರವವನ್ನು ತಂದುಕೊಟ್ಟವರು.

ಈ ಸಮಾರಂಭಕ್ಕೆ ಆಗಮಿಸಿರುವ ಸಚಿವರು, ಲೋಕಸಭಾ ಸದಸ್ಯರು, ಶಾಸಕರು ಕನ್ನಡ ವಿಶ್ವವಿದ್ಯಾಲಯವನ್ನು ತುಂಬ ಗಾಢವಾಗಿ ಪ್ರೀತಿಸುತ್ತಲಿರುವರೆಂಬುದು ನನ್ನ ಪ್ರತ್ಯಕ್ಷ ಅನುಭವದ ಮಾತಾಗಿದೆ. ನುಡಿಹಬ್ಬದಲ್ಲಿ ಪಾಲ್ಗೊಂಡ ಇವರೆಲ್ಲರನ್ನು, ನಿಮ್ಮೆಲ್ಲರನ್ನು ಇನ್ನೊಮ್ಮೆ ಗೌರವದಿಂದ ಸ್ವಾಗತಿಸುತ್ತೇನೆ.

ಮೂಲತಃ ಧಾರ್ಮಿಕ ಕೇಂದ್ರವಾಗಿರುವ ಹಂಪಿ, ಕವಿ ಹರಿಹರನಿಂದಾಗಿ ಸಾಹಿತ್ಯ ಕೇಂದ್ರವಾಗಿ, ಹಕ್ಕಬುಕ್ಕರಿಂದ ರಾಜಕೀಯ ಕೇಂದ್ರವಾಗಿ ಬೆಳೆದು 'ವಿಜಯನಗರ' ವೆನಿಸಿತು. ಇಂದು ಆ ವಿಜಯನಗರವೇ ಕನ್ನಡ ವಿಶ್ವವಿದ್ಯಾಲಯ ಹೆಸರಿನಲ್ಲಿ 'ವಿದ್ಯಾನಗರ'ವಾಗಿ ಬೆಳೆಯುತ್ತಲಿದೆ. ಈ ಉನ್ನತ ವಿದ್ಯಾಸಂಸ್ಥೆ ಭೌತಿಕ ಮತ್ತು ಬೌದ್ಧಿಕ ನೆಲೆಗಳಲ್ಲಿ ಮುನ್ನಡೆಯಬೇಕೆಂದು ನಮ್ಮ ಆಸೆ. ಭೌತಿಕ ಸಾಧನೆಯನ್ನು ಕುರಿತು ಹೇಳುವುದಾದರೆ ಈ ವರ್ಷ ಕರ್ನಾಟಕ ಸರ್ಕಾರದಿಂದ ೩೬ ಲಕ್ಷ ರೂಪಾಯಿ ಹೆಚ್ಚಿನ ಅನುದಾನ ಲಭ್ಯವಾಗಿದೆ. ಕರ್ನಾಟಕದ ಜನಪ್ರಿಯ ದಿನಪತ್ರಿಕೆ ಖ್ಯಾತಿಯ ಸಂಯುಕ್ತ ಕರ್ನಾಟಕದ 'ಲೋಕಶಿಕ್ಷಣ ಟ್ರಸ್ಟ್' ಕಾರ್ಯದರ್ಶಿಗಳಾದ ಶ್ರೀ ಕೆ. ಶ್ಯಾಮರಾವ್ ಅವರು ಗಳಗನಾಥರ ಸಮಗ್ರ ಕಾದಂಬರಿ ಸಾಹಿತ್ಯದ ಪ್ರಕಟನೆಗೆ ದೊಡ್ಡ ಮೊತ್ತದ ಹಣ ನೀಡಿದ್ದಾರೆ. ಬಳ್ಳಾರಿ ಜಿಲ್ಲೆಯ ಲೋಕಸಭಾ ಸದಸ್ಯರಾಗಿದ್ದ ಮಾನ್ಯ ಶ್ರೀ ಕೆ.ಸಿ. ಕೊಂಡಯ್ಯ ಅವರು ನೀಡಿದ್ದ ಲೊಕಸಭಾ ಸದಸ್ಯ ನಿಧಿಯಿಂದ ರಸ್ತೆಗಳು ಡಾಂಬರೀಕರಣಗೊಂಡಿದ್ದು, ಇಂದೇ ಅವರಿಂದ 'ಸೂರ್ಯಬೀದಿ' ಮತ್ತು 'ಚಂದ್ರಬೀದಿ'ಗಳು ಉದ್ಘಾಟನೆಗೊಂಡಿದೆ. ಕೊಪ್ಪಳ ಜಿಲ್ಲೆಯ ಲೋಕಸಭಾ ಸದಸ್ಯರಾದ ಶ್ರೀ ಹೆಚ್.ಜಿ. ರಾಮುಲು ಅವರು ನೀಡಿದ ಲೋಕಸಭಾ ಸದಸ್ಯ ನಿಧಿಯಿಂದ ರೂಪಗೊಳ್ಳಲಿರುವ 'ಸಮಗ್ರ ನೀರು ಪೂರೈಕೆ ಯೋಜನೆ'ಗಾಗಿ ಇಂದೇ ಅವರಿಂದ ಅಡಿಗಲ್ಲು ಸ್ಥಾಪಿತವಾಗಿದೆ.

ಬಳ್ಳಾರಿ ಜಿಲ್ಲೆಯ ಜಿಲ್ಲಾ ಪಂಚಾಯತ್ ಕೊಡಮಾಡಿರುವ ಹಣದಿಂದ 'ಅಕ್ಷರೋದ್ಯಾನ' ಮತ್ತು 'ಕ್ರಿಯಾಶಕ್ತಿ ವನ'ಗಳನ್ನು ನಿರ್ಮಿಸಲಾಗಿದೆ. ಕೊಪ್ಪಳ ಜಿಲ್ಲಾ ಪಂಚಾಯತ್‌ದವರು ಸ್ವರ್ಣ ಜಯಂತಿ ಗ್ರಾಮ ರೋಜಗಾರ ಯೋಜನೆಯ ಅಧ್ಯಯನಕ್ಕಾಗಿ ಮತ್ತು ಕೊಪ್ಪಳ ಜಿಲ್ಲಾ ಅಭಿವೃದ್ಧಿ ಗ್ರಂಥ ರಚನೆಗಾಗಿ ಆರ್ಥಿಕ ನೆರವು ನೀಡಿದ್ದಾರೆ. ಅರಣ್ಯ ಇಲಾಖೆಯವರು ವಿಶ್ವವಿದ್ಯಾಲಯದ ಆವರಣದಲ್ಲಿ ಈ ವರ್ಷ ೧೦ ಸಾವಿರ ಗಿಡಗಳನ್ನು ಬೆಳೆಸಿದ್ದಾರೆ. ಇವರೆಲ್ಲರಿಗೆ ವಿಶ್ವವಿದ್ಯಾಲಯ ಋಣಿಯಾಗಿದೆ.

ಹೀಗೆ ತನ್ನ ಸಂಪನ್ಮೂಲಗಳನ್ನು ಸರಕಾರ ಮತ್ತು ಸಾರ್ವಜನಿಕರಿಂದ ಕ್ರೋಢೀಕರಿಸಿ ಕೊಂಡು, ಅರ್ಧಕ್ಕೆ ನಿಂತಿದ್ದ ವಸತಿಗೃಹಗಳನ್ನು ಇತರ ಕಾಮಗಾರಿಗಳನ್ನು ಪೂರ್ಣ ಗೊಳಿಸುವ ಕಾರ್ಯವನ್ನು ಮಾಡುತ್ತಲಿದ್ದೇವೆ. ಎನ್.ಎಸ್. ಎಸ್. ಶಿಬಿರಗಳನ್ನು ಏರ್ಪಡಿಸಿ ಆವರಣದ ಅಭಿವೃದ್ಧಿಗಾಗಿ ಶ್ರಮಿಸಿದ್ದೇವೆ. 'ಪುಸ್ತಕ ಮಾರಾಟ ಮಳಿಗೆ'ಯ ಕಟ್ಟಡ ಕಾರ್ಯ ಇಷ್ಟರಲ್ಲಿ ಆರಂಭವಾಗಲಿದೆ. ಇಂದೇ ಉನ್ನತ ಶಿಕ್ಷಣ

ಸಚಿವರಾದ ಮಾನ್ಯ ಶ್ರೀ ಜಿ. ಪರಮೇಶ್ವರ ಅವರು "ಮಾನಸೋಲ್ಲಾಸ" ಹೆಸರಿನ ಕುಲಪತಿ ನಿವಾಸದ, ತೋಟಗಾರಿಕೆ ಸಚಿವರಾದ ಮಾನ್ಯ ಶ್ರೀ ಅಲ್ಲಂ ವೀರಭದ್ರಪ್ಪನವರು 'ಭುವನವಿಜಯ ಉದ್ಯಾನದ" ಅಡಿಗಲ್ಲು ಸಮಾರಂಭವನ್ನು ನೆರವೇರಿಸಿದ್ದಾರೆ.

ಜಾನಪದ-ಬುಡಕಟ್ಟು ವಸ್ತುಸಂಗ್ರಹಾಲಯ, ಇತಿಹಾಸ-ಪುರಾತತ್ವ ಸಂಗ್ರಹಾಲಯ ಮತ್ತು ಸಾಹಿತಿ – ಕಲಾವಿದರ ಚಿತ್ರಶಾಲೆಗಳನ್ನು ಸ್ಥಾಪಿಸಿ, ಅವುಗಳ ಬೆಳವಣಿಗೆಗಾಗಿ ವಿಶೇಷ ಪ್ರಯತ್ನ ಮಾಡುತ್ತಲಿದ್ದೇವೆ. ಪ್ರತಿವರ್ಷ ಬುಡಕಟ್ಟು- ಜಾನಪದ- ಸಾಂಪ್ರದಾಯಿಕ ಚಿತ್ರಕಲಾ ಸ್ಪರ್ಧೆ ಏರ್ಪಡಿಸುವ ಹೊಸ ಯೋಜನೆಯನ್ನು ಈ ವರ್ಷದಿಂದ ಆರಂಭಿಸಿದ್ದೇವೆ. ಮಾಹಿತಿ ತಂತ್ರಜ್ಞಾನದ ಬಗೆಗೆ ಕರ್ನಾಟಕ ಸರ್ಕಾರ ಹೊಸ ಅಧ್ಯಾಯ ಆರಂಭಿಸಿದ್ದು, ಇದಕ್ಕೆ ಸಹಮತವೆನ್ನುವಂತೆ ಕನ್ನಡ ವಿಶ್ವವಿದ್ಯಾಯ ತನ್ನ ಎಲ್ಲ ವಿಭಾಗಗಳಿಗೆ ಈ ತಂತ್ರಜ್ಞಾನವನ್ನು ಸಮಗ್ರವಾಗಿ ಅಳವಡಿಸಲಾಗಿದೆ. ಮುಂದುವರಿದು, ಜಾಗತಿಕ ಸಂಪರ್ಕಕ್ಕಾಗಿ ನಿನ್ನೆಯೇ ವೆಬ್‌ಸೈಟ್ ಉದ್ಘಾಟನೆಯಾಗಿರುವುದು ಈ ವರ್ಷದ ಇನ್ನೊಂದು ಸಾಧನೆಯಾಗಿದೆ. ಹೆಚ್ಚಿನದಾಗಿ ಕಟ್ಟಡಗಳಿಗೆ ವಿದ್ಯುತ್ ದೀಪ, ಆಂತರಿಕ ದೂರವಾಣಿಗಳನ್ನು ಕಲ್ಪಿಸುವುದರೊಂದಿಗೆ, ಒಂದು ಸಾವಿರ ಎಕರೆ ಭೂಮಿಗೆ ತಂತಿಬೇಲಿಯನ್ನು ಕಟ್ಟಿಸಿ, ವಿಶ್ವವಿದ್ಯಾಲಯದ ಆವರಣವನ್ನು ಸಂರಕ್ಷಿಸಲಾಗಿದೆ.

ಶೈಕ್ಷಣಿಕ ಪ್ರಗತಿಯನ್ನು ಕುರಿತು ಹೇಳುವುದಾದರೆ, 'ವಿಶ್ವವಿದ್ಯಾಲಯ ಧನಸಹಾಯ ಆಯೋಗ'ದ ಸಂಲಗ್ನತೆ ಪ್ರಾಪ್ತವಾದುದು, ಕನ್ನಡ ವಿಶ್ವವಿದ್ಯಾಲಯದ ಚರಿತ್ರೆಯಲ್ಲಿಯೇ ಐತಿಹಾಸಿಕ ತಿರುವೆನಿಸಿದೆ. ವಿಶ್ವವಿದ್ಯಾಲಯ ರಾಷ್ಟ್ರೀಯ ಮುಖ್ಯ ಪ್ರವಾಹದಲ್ಲಿ ಸೇರಿಕೊಂಡ ಈ ಪ್ರಕ್ರಿಯೆಯಿಂದಾಗಿ, ಮೊದಲ ಕಂತು ೯೦ ಲಕ್ಷ ರೂಪಾಯಿ ಮಂಜೂರಾಗಿದ್ದು, ಹೆಚ್ಚಿನದಾಗಿ ನಮ್ಮ ಅಧ್ಯಾಪಕರು ವಿವಿಧ ರೀತಿಯ ಲಾಭಗಳನ್ನು ಪಡೆಯಲು ಅನೇಕ ಅವಕಾಶಗಳು ತೆರೆದುಕೊಂಡಿವೆ.

ಇಂತಹದೇ ಇನ್ನೊಂದು ಸಾಧನೆಯೆಂದರೆ, ವಿಶ್ವವಿದ್ಯಾಲಯ ಬಾದಾಮಿಗೆ ಶಿಲ್ಪಕಲಾ ವಿಭಾಗವನ್ನು ವರ್ಗಾಯಿಸುವ ಮೂಲಕ ಈವರೆಗೆ ಏಕಕೇಂದ್ರಿಯವಾಗಿದ್ದ ಈ ವಿಶ್ವವಿದ್ಯಾಲಯವನ್ನು ಬಹುಕೇಂದ್ರೀಯತೆಗೆ ಹೊರಳಿಸಿದುದು. ಈ ವರ್ಷ ಧಾರವಾಡ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಒಂದೊಂದರಂತೆ ಇಂಥ ಇನ್ನೂ ಎರಡು ಕೇಂದ್ರಗಳನ್ನು ತೆರೆಯುವ ಪ್ರಯತ್ನದಲ್ಲಿದ್ದೇವೆ.

ವಿಭಾಗಗಳು ಕ್ರಿಯಾಶೀಲವಾದರೆ ವಿಶ್ವವಿದ್ಯಾಲಯ ಕ್ರಿಯಾಶೀಲವಾಗುತ್ತದೆ. ವಿಭಾಗಗಳು ಬೆಳೆದರೆ ವಿಶ್ವವಿದ್ಯಾಲಯ ಬೆಳೆಯುತ್ತದೆ. ಈ ತಿಳಿವಳಿಕೆಯ ಮೇಲೆ ಹೆಚ್ಚು ಒತ್ತುಕೊಟ್ಟು, ಪ್ರತಿಯೊಂದು ವಿಭಾಗಕ್ಕೆ ಈ ವರ್ಷವೂ ಸಾಂಸ್ಥಿಕ ಯೋಜನೆ, ವೈಯಕ್ತಿಕ ಯೋಜನೆ, ವಿಚಾರ ಸಂಕಿರಣಗಳನ್ನು ವಹಿಸಿಕೊಡಲಾಗಿದೆ. ಇವುಗಳಲ್ಲಿ ಸಾಂಸ್ಥಿಕ ಯೋಜನೆಗಳಾದ ಕರ್ನಾಟಕ ಸಂಸ್ಕೃತಿ ಚರಿತ್ರೆ ಸಂಪುಟಗಳು, ಕರ್ನಾಟಕ ಪುರಾತತ್ವ ಚರಿತ್ರೆ ಸಂಪುಟಗಳು, ಕರ್ನಾಟಕ ಬುಡಕಟ್ಟು ಸಂಸ್ಕೃತಿ ಸಂಪುಟಗಳು, ಕರ್ನಾಟಕ ದೇವಾಲಯ ಕೋಶ, ಕರ್ನಾಟಕ ಜನಸಮುದಾಯ ಕೋಶ, ಶಾಸನ ಸಂಪುಟ, ವೃತ್ತಿ ಪದಕೋಶ ಮುಖ್ಯವೆನಿಸಿವೆ. ಹೆಚ್ಚಿನದಾಗಿ ವೈಯಕ್ತಿಕ ಯೋಜನೆ ಅಡಿಯಲ್ಲಿ ಉತ್ತಮೋತ್ತಮ ಕೃತಿಗಳ ರಚನಾಕಾರ್ಯ ಮುನ್ನಡೆದಿದೆ. ಈ ವರ್ಷವೂ ವಿಚಾರ ಸಂಕಿರಣಗಳಿಗಾಗಿ ವಿಶೇಷ ಗಮನ ಕೊಡಲಾಗಿದ್ದು, ವಿಕೇಂದ್ರಿತ ಅಭಿವೃದ್ಧಿಯ ಆದರ್ಶದಲ್ಲಿ ಮೈಸೂರು ವಿಶ್ವವಿದ್ಯಾಲಯ ಮೊದಲಾದ ದೂರದ ಸಂಸ್ಥೆಗಳ ಸಹಯೋಗದೊಂದಿಗೆ ಇವುಗಳನ್ನು ಜರುಗಿಸಲಾಗಿದೆ. ಇದರಿಂದಾಗಿ ಅಧ್ಯಾಪಕರಲ್ಲಿ ಸಾಂಸ್ಕೃತಿಕ ಜವಾಬ್ದಾರಿ ಈ ವರ್ಷ ಇನ್ನೂ ಜಾಗೃತವಾಗಿ, ಅವರಲ್ಲಿ ಆರೋಗ್ಯ ಪೂರ್ಣ ಸ್ಪರ್ಧೆ ಸೃಷ್ಟಿಯಾಗಿದೆ.

ಇಂದು ಕಲಿಯುವ ಶಿಕ್ಷಣಕ್ಕೂ, ಬದುಕುವ ಜೀವನಕ್ಕೂ ಸಂಬಂಧ ತಪ್ಪಿ ಹೋಗುತ್ತಲಿದೆ. ಇದನ್ನು ಸರಿಪಡಿಸುವ ಉದ್ದೇಶದಿಂದ "ಆನ್ವಯಿಕ ಸ್ನಾತಕೋತ್ತರ ಶಿಕ್ಷಣ" ವೆಂಬ ಹೊಸ ಬಗೆಯ ಶಿಕ್ಷಣವನ್ನು ಆರಂಭಿಸುವ ಸಿದ್ಧತೆಯಲ್ಲಿದ್ದೇವೆ. ಹೊಸದಾಗಿ "ವಿಜ್ಞಾನ ನಿಕಾಯ"ವನ್ನು ಆರಂಭಿಸಿ, ವಿಜ್ಞಾನ ಮತ್ತು ತಂತ್ರಜ್ಞಾನಗಳಿಗೆ ಸಂಬಂಧಪಟ್ಟ ಪಠ್ಯ ಮತ್ತು ಪೂರಕ ಸಾಹಿತ್ಯವನ್ನು ಪ್ರಕಟಿಸುವ ಗುರಿ ನಮ್ಮದಾಗಿದೆ.

ನಾವು ಹೆಮ್ಮೆಯಿಂದ ಹೇಳಿಕೊಳ್ಳಬಹುದಾದ ವಿಭಾಗವೆಂದರೆ ಪ್ರಸಾರಾಂಗ. ಕನ್ನಡ ವಿಶ್ವವಿದ್ಯಾಲಯಕ್ಕೆ ಏಕೈಕ ಆದಾಯ ಮೂಲವಾಗಿರುವ ಈ ಶಾಖೆ, ಜೇನು ಹುಟ್ಟಿನಂತೆ ದುಡಿದು ಕಳೆದ ವರ್ಷ ಪುಸ್ತಕಗಳ ಮಾರಾಟದಿಂದ ೫೦ ಲಕ್ಷ ರೂಪಾಯಿಗಳನ್ನು ಗಳಿಸಿದೆ. ಈ ವರ್ಷವೂ ಆ ದಾರಿಯಲ್ಲಿ ಮುನ್ನಡೆದು ಬೆಳಗಾವಿ, ಸಂಕೇಶ್ವರ, ಧರ್ಮಸ್ಥಳ, ಪುತ್ತೂರು, ಉಡುಪಿ, ತುಮಕೂರು, ಸಾಗರ, ಗಂಗಾವತಿ, ಚಿತ್ರದುರ್ಗ, ಬೆಂಗಳೂರು ಮತ್ತು ಹಾಸನಗಳಿಗೆ ಪುಸ್ತಕ ಸಂಸ್ಕೃತಿ ಯಾತ್ರೆಯನ್ನು ಕೈಕೊಂಡು, ಪುಸ್ತಕ ಮಾರಾಟದಲ್ಲಿ ವೇಗದ ಹೆಜ್ಜೆಯನ್ನು ಹಾಕಿದೆ. ಶಿವಮೊಗ್ಗೆಯ ಕುವೆಂಪು ವಿಶ್ವವಿದ್ಯಾಲಯ, ಧಾರವಾಡದ ಕೃಷಿ ವಿಶ್ವವಿದ್ಯಾಲಯ, ರಾಯಚೂರಿನ ಜಿಲ್ಲಾ ಸಾಹಿತ್ಯ ಪರಿಷತ್‌ನೊಂದಿಗೆ ಜರುಗಿಸಿದ ಉಪನ್ಯಾಸ, ವಿಚಾರ ಸಂಕಿರಣಗಳೂ ಮಂಗಳೂರು, ಧಾರವಾಡ, ಕೊಪ್ಪಳ, ಸಂಕೇಶ್ವರ, ಹೆಬ್ರಿ, ಚೆಳ್ಳಗುರ್ಕಿ ಗ್ರಾಮಗಳಲ್ಲಿ ಜರುಗಿದ ಪ್ರಚಾರೋಪನ್ಯಾಸಗಳೂ ಎತ್ತಿ ಹೇಳಬೇಕಾದುವು.

"ವೇಗ ಮತ್ತು ಗುಣಮಟ್ಟ" (Speed & Quality)ಗಳನ್ನು ಆದರ್ಶವಾಗಿಟ್ಟುಕೊಂಡು ದುಡಿಯುತ್ತಲಿರುವ ಪ್ರಸಾರಾಂಗದ ಮೂಲಕ, ಈ ವರ್ಷ ಒಟ್ಟು ೧೦೦ ಪುಸ್ತಕಗಳು ಪ್ರಕಟವಾಗಿವೆ. ಇವುಗಳಲ್ಲಿ ನಿನ್ನೆ ಜರುಗಿದ "ಆರನೆಯ ನುಡಿಹಬ್ಬಕ್ಕೆ ಅರುವತ್ತು ಪುಸ್ತಕಗಳ ಬಿಡುಗಡೆ" ಕಾರ್ಯಕ್ರಮವು ಅಪೂರ್ವ ಸಾಧನೆಯ ದ್ಯೋತಕವೆನಿಸಿದೆ. ನಮ್ಮ ಅಧ್ಯಾಪಕರಾದ ಡಾ. ಕೆ.ವಿ. ನಾರಾಯಣ, ಡಾ. ಎಚ್.ಎಸ್. ಶ್ರೀಮತಿ, ಡಾ. ರಹಮತ್ ತರೀಕೆರೆ ಬರೆದ ಪುಸ್ತಕಗಳು ಈ ವರ್ಷವೂ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಗೆದ್ದುಕೊಂಡು ಬಂದಿರುವುದು ಹೆಮ್ಮೆಯ ವಿಷಯವಾಗಿದೆ. ಡಾ. ಲಕ್ಷ್ಮಣ್ ತೆಲಗಾವಿ ಅವರಿಗೆ ಭಾರತೀಯ ದಲಿತ ಸಾಹಿತ್ಯ ಅಕಾಡೆಮಿಯ ಪ್ರತಿಷ್ಠಿತ ಪ್ರಶಸ್ತಿಯಾದ "ಡಾ. ಅಂಬೇಡ್ಕರ್ ಫೆಲೋಶಿಪ್" ಪ್ರಾಪ್ತವಾದುದು ನಮಗೆಲ್ಲ ಹೆಮ್ಮೆಯನ್ನುಂಟು ಮಾಡಿದೆ.

ಕನ್ನಡ ವಿಶ್ವವಿದ್ಯಾಲಯ ತನ್ನ ಬಾಹುಳನ್ನು ಕ್ರಮೇಣ ಎಡಬಲಕ್ಕೆ ಚಾಚುತ್ತ ನಡೆದಿದೆ. ಈ ಸಂಸ್ಥೆಯ ಮುಖ್ಯ ಉದ್ದೇಶ ಕನ್ನಡ ಪರಂಪರೆಯನ್ನು ಶೋಧಿಸುತ್ತ ತನ್ನ ಬೇರುಗಳನ್ನು ದ್ರಾವಿಡ ಸಂಸ್ಕೃತಿಯಲ್ಲಿ ಕಂಡುಕೊಳ್ಳುವುದಾಗಿದೆ. ಈ ಉದ್ದೇಶದ ಸಫಲತೆಗಾಗಿ ತಂಜಾವೂರಿನ ತಮಿಳು ವಿಶ್ವವಿದ್ಯಾಲಯದೊಂದಿಗೆ "ಸಂಗಂ ಸಾಹಿತ್ಯ"ದ ಅನುವಾದ ಕಾರ್ಯವನ್ನೂ, ಕುಪ್ಪಂ, ದ್ರಾವಿಡ ವಿಶ್ವವಿದ್ಯಾಲಯದೊಂದಿಗೆ "ತಮಿಳು ಮಹಾಕಾವ್ಯ"ಗಳ ಅನುವಾದ ಕಾರ್ಯವನ್ನೂ, ಹೈದ್ರಬಾದಿನ ತೆಲುಗು ವಿಶ್ವವಿದ್ಯಾಲಯದೊಂದಿಗೆ "ತೆಲುಗು ಸಾಂಸ್ಕೃತಿಕ ಕಾವ್ಯ"ಗಳ ಅನುವಾದ ಕಾರ್ಯವನ್ನೂ ಕೈಗೆತ್ತಿಕೊಳ್ಳುವ ಸಿದ್ಧತೆಯಲ್ಲಿದೆ, ಪ್ರಸಾರಾಂಗ. ಇಂದು ಪ್ರಕಟವಾದ ಕನ್ನಡ ಇನ್‌ಸ್ಕ್ರಿಪ್ಷನ್ಸ್ ಆಫ್ ಆಂಧ್ರಪ್ರದೇಶ, ತೆಲುಗು ದಾಕ್ಷಿಣಾತ್ಯ ಸಾಹಿತ್ಯ, ಬಳ್ಳಾರಿ ಜಿಲ್ಲೆಗೆ ತೆಲುಗರ ವಲಸೆ, ಪ್ರಕಟವಾಗಲಿರುವ ಕರ್ನಾಟದ ಉರ್ದು – ಪರ್ಸೋ-ಅರೇಬಿಕ್ ಶಾಸನ ಸಂಪುಟ ಕೃತಿಗಳು ಈ ದಿಸೆಯ ಆರಂಭಿಕ ಪ್ರಯತ್ನಗಳಾಗಿವೆ.

ಸಾಹಿತ್ಯವನ್ನು ಸುಲಭ ಬೆಲೆಯಲ್ಲಿ ಜನರಿಗೆ ತಲುಪಿಸುವ ವಿನೂತನ ಯೋಜನೆಯನ್ನು ಈ ವರ್ಷದಿಂದ ಆರಂಭಿಸಿ, ೪,೫೦೦ ಪುಟಗಳ, ಆರು ಸಂಪುಟಗಳ ಗಳಗನಾಥರ ೨೨ ಕಾದಂಬರಿಗಳನ್ನು ಕೇವಲ ೭೦೦ ರೂ.ಗಳಿಗೆ ಮಾರಾಟ ಮಾಡಲಾಗುತ್ತಿದೆ. ೫೦೦ಪುಟಗಳ ಹರಿಹರನ ರಗಳೆಗಳ ಸಮಗ್ರ ಸಂಪುಟಕ್ಕೆ ಕೇವಲ ರೂ. ೧೦೦ ಬೆಲೆ ಇಡಲಾಗಿದೆ. ಒಟ್ಟಾರೆ ಇಂದು ಪುಸ್ತಕದ ಉತ್ಪಾದನೆ, ಪ್ರಕಾಶನ, ಗುಣಮಟ್ಟ, ಮಾರಾಟ ವಿಷಯಗಳಲ್ಲಿ ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗ ರಾಜ್ಯದಲ್ಲಿಯೇ ಮುಂಚೂಣಿಯಲ್ಲಿದೆಯೆಂದು ಹೇಳಲು ಸಂತೋಷವೆನಿಸುತ್ತದೆ.

ವಿದೇಶಗಳಲ್ಲಿ ಕನ್ನಡವನ್ನು ಪ್ರಸಾರ ಮಾಡುವ ಸಾಧ್ಯತೆಗಳ ಹಿನ್ನೆಲೆಯಲ್ಲಿ ಜರ್ಮನಿಯ ಟುಬಿಂಗನ್ ವಿಶ್ವವಿದ್ಯಾಲಯದ ಭಾರತೀಯಶಾಸ್ತ್ರ ಪ್ರಾಧ್ಯಾಪಕರಾದ ಶ್ರೀಮತಿ ಬ್ರೂಕ್ನರ್ ಅವರನ್ನು ಇಲ್ಲಿಗೆ ಆಮಂತ್ರಿಸಿ ಅವರೊಂದಿಗೆ, ಮೊದಲ ಸುತ್ತಿನ ಚರ್ಚೆ ನಡೆಸಲಾಗಿದೆ. ಈ ವಿಚಾರದ ಮುಂದುವರಿಕೆಯೆಂಬಂತೆ ಹಾಲೆಂಡ್, ಶ್ರೀಲಂಕಾ, ಥೈಲ್ಯಾಂಡ್, ಇಂಡೋನೇಷಿಯಾ, ಮಲೇಷಿಯಾ, ಪಾಕಿಸ್ತಾನ, ಬಾಂಗ್ಲಾ ದೇಶಗಳ ಇತಿಹಾಸ ವಿದ್ವಾಂಸರು ಕಳೆದ ವಾರ ನೀಡಿದ ಭೇಟಿ, ಮಾಡಿದ ಭಾಷಣ ವಿಶೇಷವೆನಿಸಿವೆ. ಈ ವರ್ಷ ಅಮೇರಿಕೆಯ ಹೂಸ್ಟನ್‌ನಲ್ಲಿ ಜರುಗಲಿರುವ ವಿಶ್ವ ಕನ್ನಡ ಸಮ್ಮೇಳನದಲ್ಲಿ ವಿಶ್ವವಿದ್ಯಾಲಯ ಸಕ್ರಿಯವಾಗಿ ಭಾಗವಹಿಸುವ ಯೋಜನೆ ರೂಪಿಸಿಕೊಂಡಿದೆ. ವಿದೇಶದಲ್ಲಿರುವ

ಕನ್ನಡಿಗರ ಮಕ್ಕಳಿಗಾಗಿ ಪ್ರತಿವರ್ಷ ಸಂಸ್ಕೃತಿ ಬೋಧನ ತರಬೇತಿಯನ್ನು, ಕರ್ನಾಟಕ ಪರವಾಸ ಕಾರ್ಯಕ್ರಮಗಳನ್ನು ಯೋಜಿಸಲಾಗಿದೆ. ಹೀಗೆ ಜಾಗತಿಕ ಮುಖ್ಯ ವಾಹಿನಿಯಲ್ಲಿ ಕನ್ನಡ ವಿಶ್ವವಿದ್ಯಾಲಯವನ್ನು ತೊಡಿಗಸುವ ಅನೇಕ ಯೋಜನೆಗಳು ನಮ್ಮ ಕಣ್ಣ ಮುಂದಿವೆ.

೧. ಈ ವರ್ಷದ ಅಕ್ಟೋಬರ್ ೨೩ ರಿಂದ ಇಡೀ ಒಂದು ವರ್ಷ ಕನ್ನಡ ವಿಶ್ವವಿದ್ಯಾಲಯದ ದಶಮಾನೋತ್ಸವ ಜರುಗಲಿದೆ. ಇದರ ಅಂಗವಾಗಿ ಕೆಲವು ಐತಿಹಾಸಿಕ ಯೋಜನೆಗಳನ್ನು ಹಮ್ಮಿಕೊಳ್ಳಲಿದ್ದೇವೆ. ಇವುಗಳಲ್ಲಿ ಮುಖ್ಯವಾದುದು, “ಕರ್ನಾಟಕ ರಾಜ್ಯಕೋಶ” ಯೋಜನೆಯ ಅಡಿಯಲ್ಲಿ ಕರ್ನಾಟಕ ಭೂಮಿಕೋಶ, ಕರ್ನಾಟಕ ಸಸ್ಯಕೋಶ, ಕರ್ನಾಟಕ ಪ್ರಾಣಿ – ಪಕ್ಷಿಕೋಶ, ಕರ್ನಾಟಕ ಜನಸಮುದಾಯ ಕೋಶ, ಕರ್ನಾಟಕ ಭಾಷಾಕೋಶ – ಪಂಚಕೋಶಗಳನ್ನು ಹೊರತರುವುದು. ಇದಲ್ಲದೆ ‘ಕವಿತಾಗುಣಾರ್ಣವ’ ಶೀರ್ಷಿಕೆಯಲ್ಲಿ ಪಂಪನ ಎರಡೂ ಕೃತಿಗಳನ್ನು, ಕುಮಾರರಾಮನ ಸಾಂಗತ್ಯಗಳ ಸಮಗ್ರ ಸಂಪುಟವನ್ನು, ಕುಮಾರವ್ಯಾಸ ಭಾರತ, ಭರತೇಶ ವೈಭವ ಸಂಪುಟಗಳನ್ನು, ಕುವೆಂಪು – ಬೇಂದ್ರೆ ಕವನಗಳ ಸಮಗ್ರ ಸಂಪುಟಗಳನ್ನು ಪ್ರಕಟಿಸುವುದು.

ಚಿತ್ರ, ಶಿಲ್ಪ, ಸಂಗೀತ, ನೃತ್ಯ ಮೊದಲಾದ ಕಲೆಗಳ ಅಧ್ಯಯನ, ತರಬೇತಿಗಳಿಗಾಗಿ ಒಂದು ಕೋಟಿ ರೂಪಾಯಿ ಮೌಲ್ಯದ ‘ದಶಮಾನೋತ್ಸವ ಸ್ಮಾರಕ ಭವನ’ ವನ್ನು ನಿರ್ಮಿಸುವುದು. ಇದಲ್ಲದೆ ಶೈಕ್ಷಣಿಕ ವಾತಾವರಣಕ್ಕೆ ಪೂರಕವೆಂಬಂತೆ ಕನ್ನಡ ವಿಶ್ವವಿದ್ಯಾಲಯದ ಆವರಣದ ಸಮಗ್ರ ಅಭಿವೃದ್ಧಿ ಯೋಜನೆ ಅಡಿಯಲ್ಲಿ ರಸ್ತೆ ಡಾಂಬರೀಕರಣ, ರಸ್ತೆದೀಪ, ಉದ್ಯಾನ, ನೀರು ಪೂರೈಕೆ, ಅಧ್ಯಾಪಕ-ಅಧ್ಯಾಪಕೇತರ ವಸತಿಗೃಹ, ಪ್ರಾಥಮಿಕ ಶಾಲಾ ಕಟ್ಟಡ, ಅಂಚೆಮನೆ, ಬ್ಯಾಂಕ್ ಕಟ್ಟಡ, ಬಸ್ ನಿಲ್ದಾಣ ಇತ್ಯಾದಿಗಳನ್ನು ನಿರ್ಮಿಸುವುದು. ಇನ್ನೂ ಒಂದು ವಿಷಯವೆಂದರೆ ಇಕ್ಕಟ್ಟಾದ ಬೀದಿಗಳಲ್ಲಿ ಸಂಭವಿಸಬಹುದಾದ ಅಪಘಾತವನ್ನು ತಪ್ಪಿಸಲು ಮತ್ತು ೩ ಕಿ.ಮೀ. ಸುತ್ತು ಬಳಸುವುದನ್ನು ನಿವಾರಿಸಲು ಸುಮಾರು ೨೦ ಲಕ್ಷ ವೆಚ್ಚದಲ್ಲಿ ‘ಕಮಲಾಪುರ ಬೈಪಾಸ್ ರಸ್ತೆ’ಯನ್ನು ನಿರ್ಮಿಸುವುದು ಅವಶ್ಯವಿದೆ. ವಿಶ್ವವಿದ್ಯಾಲಯದ ಘನತೆಗೆ ತಕ್ಕಂತೆ ‘ಹಳ್ಳಿಕೆರೆ’ ಏರಿಯ ಮೇಲೆ ಅಗಲವಾದ ಜೋಡು ರಸ್ತೆ ಅಥವಾ ನೇರ ರಸ್ತೆ ಅಗತ್ಯವಿದೆ. ಈ ಎಲ್ಲ ಕೆಲಸಗಳಿಗಾಗಿ ೧೦ ಕೋಟಿ ರೂಪಾಯಿ ಬೇಕಾಗುತ್ತದೆ. ಬಳ್ಳಾರಿ ಜಲ್ಲೆಯ ಅಭಿವೃದ್ಧಿಗಾಗಿ ಈ ವರ್ಷ ತೆಗೆದಿಟ್ಟಿರುವ ೩,೨೦೦ ಕೋಟಿ ಹಣದಲ್ಲಿ ಮೇಲೆ ಸೂಚಿಸಿದ ೧೦ ಕೋಟಿ ಹಣವನ್ನು ನೀಡಬೇಕೆಂದು ಕೋರುತ್ತೇನೆ.

೨. ಕನ್ನಡ ವಿಶ್ವವಿದ್ಯಾಲಯಕ್ಕೆ ಪ್ರತಿವರ್ಷ ೩ ಕೋಟಿ ಅನುದಾನ ನಿಡುತ್ತ ಬರಲಾಗಿದೆ. ವರ್ಧಿಸಿದ ಶೈಕ್ಷಣಿಕ ಮತ್ತು ಇತರ ಚಟುವಟಿಕೆಗಳಿಂದಾಗಿ ಈ ಹಣ ಏನೂ ಸಾಲುವುದಿಲ್ಲ. ಕಾರಣ ಈ ಮೊತ್ತವನ್ನು ೩ ಕೋಟಿಯಿಂದ ೫ ಕೋಟಿಗೆ ಹೆಚ್ಚಿಸುವುದು ಅವಶ್ಯವಿದೆ.

೩. ಈ ಹಿಂದೆ ಹೆಚ್ಚುವರಿಯಾಗಿ ತುಂಬಿರುವ ೬೯ ಜನ ಕ್ರೋಢೀಕೃತ ನೌಕರರನ್ನು ಖಾಯಂಗೊಳಿಸುವುದು ಇಂದಿನ ಮುಖ್ಯ ತುರ್ತು ಎನಿಸಿದೆ.

ಸನ್ಮಾನ್ಯರಾದ ಕುಲಾಧಿಪತಿಗಳು ಮತ್ತು ಸಮಕುಲಾಧಿಪತಿಗಳು, ಆಗಮಿಸಿರುವ ಸಚಿವರು, ಶಾಸಕರು ಮೇಲೆ ಸೂಚಿಸಿದ ಮೂರೂ ಬೇಡಿಕೆಗಳನ್ನು ಪೂರೈಸಿಕೊಟ್ಟು ಬೆಳೆಯುವ ಹಂತದಲ್ಲಿರುವ ಈ ವಿಶ್ವವಿದ್ಯಾಲಯಕ್ಕೆ ನೆರವಾಗಬೇಕೆಂದು ಕೋರುತ್ತೇನೆ.

‘ಹಣವನ್ನು ನೀರಿನಂತೆ ಗಳಿಸು, ತೀರ್ಥದಂತೆ ಬಳಸು’ ಎಂಬ ನೀತಿ ನಮ್ಮ ಕಣ್ಣ ಮುಂದಿರುವುದರಿಂದ, ತಾವು ನೀಡಲಿರುವ ಪ್ರತಿಯೊಂದು ಪೈಸೆಯನ್ನು ನಾವು ಪವಿತ್ರವಾಗಿ ಬಳಸುತ್ತೇವೆ. ‘ಎಲ್ಲ ರಸ್ತೆಗಳು ರೋಮ್‌ದ ಕಡೆಗೆ’ ಎಂಬಂತೆ ಜಗತ್ತಿನ ಕನ್ನಡದ ಎಲ್ಲ ಹಾದಿಗಳು ಹಂಪಿಯ ಕಡೆಗೆ ಕೇಂದ್ರೀಕರಣಗೊಳ್ಳುವಂತೆ ನಾವೆಲ್ಲ ದುಡಿಯುತ್ತೇವೆ.

೨೧ ಜನವರಿ ೨೦೦೦

# ೬. ಈವರೆಗೆ ಉತ್ಪಾದನೆ – ಇನ್ನು ಮೇಲೆ ವಿಸ್ತರಣೆ

ಕನ್ನಡ ವಿಶ್ವವಿದ್ಯಾಲಯಕ್ಕೆ ಈ ವರ್ಷ ದಶಮಾನೋತ್ಸವದ ಸಂಭ್ರಮ. ಈ ಸಂಭ್ರಮದ ಸಡಗರದಲ್ಲಿ ಜರುಗುತ್ತಲಿರುವ ೭ನೆಯ ಘಟಿಕೋತ್ಸವಕ್ಕೆ ಘನತೆವೆತ್ತ ಕುಲಾಧಿಪತಿಗಳಾದ ಸನ್ಮಾನ್ಯ ಶ್ರೀಮತಿ ವಿ.ಎಸ್. ರಮಾದೇವಿಯರನ್ನು, ಸಮ ಕುಲಾಧಿಪತಿಗಳಾದ ಸನ್ಮಾನ್ಯ ಶ್ರೀ ಜಿ. ಪರಮೇಶ್ವರ ಅವರನ್ನು, ಗೌರವಾನ್ವಿತರಾದ ಪದ್ಮಭೂಷಣ ಡಾ. ಯು.ಆರ್.ರಾವ್, ಪದ್ಮಭೂಷಣ ಡಾ. ಭೀಮಸೇನ ಜೋಶಿ ಅವರನ್ನು, ಗಣ್ಯ ಮಹನೀಯರನ್ನು, ವಿಶ್ವವಿದ್ಯಾಲಯದ ಕಾರ್ಯಕಾರಿ ಮತ್ತು ಆಡಳಿತ ಮಂಡಳಿಯ ಮಾನ್ಯ ಸದಸ್ಯರನ್ನು, ಸರ್ವಸಭಿಕರನ್ನು ಆದರದಿಂದ ಸ್ವಾಗತಿಸುತ್ತೇನೆ.

ಕರ್ನಾಟಕದ ಪ್ರಥಮ ಮಹಿಳಾ ರಾಜ್ಯಪಾಲರಾದ ಘನತೆವೆತ್ತ ಶ್ರೀಮತಿ ವಿ.ಎಸ್. ರಮಾದೇವಿ ಅವರು, ರಾಜಭವನದ ಬಾಗಿಲುಗಳನ್ನು ಪ್ರಜೆಗಳಿಗೆ ತೆರೆಯುವುದರ ಮೂಲಕ ತಾವು ರಾಜಸತ್ತಾಯುಗದ ರಾಜ್ಯಪಾಲರಲ್ಲ, ಪ್ರಜಾಸತ್ತಾಯುಗದ ರಾಜ್ಯಪಾಲರೆಂಬುದನ್ನು ಸಾಬೀತು ಪಡಿಸಿದ್ದಾರೆ. ಪ್ರಜೆಗಳ ಗುಡಿಸಲುಗಳೇ ರಾಜಭವನ ಎಂಬ ಇವರ ಸಾಮಾನ್ಯತಾಪ್ರಜ್ಞೆ ರಾಷ್ಟ್ರದ ಎಲ್ಲ ರಾಜ್ಯಪಾಲರಿಗೂ ಮಾದರಿಯಾಗಿದೆ. ಕನ್ನಡಿಗರ ತಾಯಿಯಾಗಿರುವ ಈ 'ಗವ್ರ್ನರಮ್ಮ'ನಿಗೆ ಕನ್ನಡ ವಿಶ್ವವಿದ್ಯಾಲಯದ ಪರವಾಗಿ ಹಾರ್ದಿಕ ಸ್ವಾಗತವನ್ನು ಕೋರುತ್ತೇನೆ.

ವಿದ್ಯಾಸಚಿವರಾದ ಮಾನ್ಯ ಶ್ರೀ ಜಿ. ಪರಮೇಶ್ವರ ಅವರು ತಮ್ಮ ಹೆಸರಿಗೆ ಹೆಸರು ತರುವ ರೀತಿಯಲ್ಲಿ ನಮ್ಮೊಂದಿಗೆ ನಡೆದುಕೊಳ್ಳುವ ಬಗೆ ಅನನ್ಯವಾದುದು. ನಾವೆಲ್ಲ ಕುಲಪತಿಗಳು ಅವರ ಸೌಜನ್ಯ, ಸಹಕಾರ ಮನೋಭಾವಗಳಿಂದ ತುಂಬ ಪ್ರಭಾವಿತರಾಗಿದ್ದೇವೆ. ಎಲ್ಲ ವಿಶ್ವವಿದ್ಯಾಲಯಗಳ ಬಗ್ಗೆ ಅದರಲ್ಲಿಯೂ ಕನ್ನಡ ವಿಶ್ವವಿದ್ಯಾಲಯದ ಬಗ್ಗೆ ಅಪಾರ ಪ್ರೀತಿಯಿಟ್ಟುಕೊಂಡಿರುವ ಮಾನ್ಯ ಸಮಕುಲಾಧಿಪತಿಗಳಿಗೆ ಆದರದ ಸ್ವಾಗತ ಬಯಸುತ್ತೇನೆ.

ಭಾರತೀಯ ಬಾಹ್ಯಕಾಶ ವಿಜ್ಞಾನದಲ್ಲಿ ಹೊಸ ಅಧ್ಯಾಯ ತೆರೆದು, ಕನ್ನಡಿಗರ ಕೀರ್ತಿಯನ್ನು ಜಾಗತಿಕ ಮಟ್ಟದಲ್ಲಿ ಮೆರೆದ ಮಾನ್ಯ ಶ್ರೀ ಯು.ಆರ್. ರಾವ್ ಅವರಿಗೂ, ಸಂಗೀತಕ್ಕೆ ಇನ್ನೊಂದು ಹೆಸರು ಎಂದೇ ಖ್ಯಾತರಾಗಿ, ಕನ್ನಡದ ಧ್ವನಿಯನ್ನು ಜಗತ್ತಿಗೆ ಕೇಳಿಸಿದ ಮಾನ್ಯ ಶ್ರೀ ಭೀಮಸೇನ ಜೋಶಿ ಅವರಿಗೂ ಗೌರವ ಪೂರ್ವಕ ಸ್ವಾಗತ ಕೋರುತ್ತೇನೆ ಮತ್ತು ಕನ್ನಡ ವಿಶ್ವವಿದ್ಯಾಲಯ ನೀಡಲಿರುವ "ನಾಡೋಜ" ಹೆಸರಿನ ಈ ತವರುಮನೆ ಬಾಗಿನವನ್ನು ಸ್ವೀಕರಿಸಬೇಕೆಂದು ಇಬ್ಬರಲ್ಲಿಯೂ ಭಿನ್ನವಿಸಿಕೊಳ್ಳುತ್ತೇನೆ.

"ಮಾತೆಂಬುದು ಜ್ಯೋತಿರ್ಲಿಂಗ" ಇದು ವಿಶ್ವವಿದ್ಯಾಲಯದ ಧ್ಯೇಯವಾಕ್ಯ ಈ ವಾಕ್ಯವನ್ನು ತಾನು ಬದುಕುವುದು, ಕನ್ನಡಿಗರೂ ಇದನ್ನು ಬದುಕುವಂತೆ ಮಾಡುವುದು, ಕನ್ನಡೇತರರಿಗೂ ಇದರ ಮಹತ್ವವನ್ನು ತಿಳಿಸಿಕೊಡುವುದು. ಹೀಗೆ ಮೂರು ನೆಲೆಗಳಲ್ಲಿ ದುಡಿಯವುದು ಈ ವಿಶ್ವವಿದ್ಯಾಲಯದ ದಾರಿ ಗುರಿ ಏನೆಲ್ಲ ಆಗಿದೆ.

"ಕನ್ನಡ ಮಾತ"ನ್ನು ಈ ವಿಶ್ವವಿದ್ಯಾಲಯ ಬದುಕುವುದೆಂದರೆ, "ಕನ್ನಡ ವಿದ್ಯೆ"ಯನ್ನು ತಾನು ಶೋಧಿಸುವುದು ಮತ್ತು ಉತ್ಪಾದಿಸುವುದು. ಕಳೆದ ಒಂಬತ್ತು ವರ್ಷಗಳಿಂದ ಈ ಶೋಧನ-ಉತ್ಪಾದನ ಕ್ರಿಯೆಗೆ ಈ ವಿದ್ಯಾಸಂಸ್ಥೆ ನೆಲವಾಗಿದೆ, ಒಲವಾಗಿದೆ. ಇಲ್ಲಿಯ ಶಿಕ್ಷಕ – ಶಿಕ್ಷಕೇತರ ಸಿಬ್ಬಂದಿಗಳ ಶ್ರಮದಿಂದಾಗಿ, ಈವರೆಗೆ ಕಳೆದುಹೋಗಿದ್ದ ಕನ್ನಡದ ದಾರಿಗಳು ಮತ್ತೊಮ್ಮೆ ಕಾಣಿಸಿಕೊಂಡಿವೆ. ಹೊಸದಾರಿಗಳು ಹುಟ್ಟಿಕೊಂಡಿವೆ. ಇದಕ್ಕೆ ಈ ಆವರಣದಲ್ಲಿ ಸೃಷ್ಟಿಯಾದ ಭೌತಿಕ ಅಭಿವೃದ್ಧಿ ಮತ್ತು ಶೈಕ್ಷಣಿಕ ಅಭಿವೃದ್ಧಿ ಸಾಕ್ಷಿಯೆನಿಸಿವೆ.

ಈ ವರ್ಷದ ಭೌತಿಕ ಅಭಿವೃದ್ಧಿಯನ್ನು ಕುರಿತು ಹೇಳುವುದಾದರೆ, ಶಿಕ್ಷಕರ ೧೮ ಮನೆಗಳು, ಹೆಚ್ಚಿನದಾಗಿ ಕುಲಸಚಿವರ ಮನೆ, ಕುಲಪತಿ ಭವನ ಇವು ಈ ವರ್ಷದ ನಿರ್ಮಾಣವೆನಿಸಿವೆ. ಇವುಗಳಿಗಾಗಿ ನಾವು ವ್ಯಯಿಸಿದ ಹಣ ಸುಮಾರು ಒಂದೂವರೆ ಕೋಟಿ ರೂಪಾಯಿ. ಇದಲ್ಲದೆ

೮೦ ಲಕ್ಷ ರೂಪಾಯಿ ಮೌಲ್ಯದ ಸರ್ವಜ್ಞ ಹೆಸರಿನ ಗ್ರಂಥಾಲಯ ಕಟ್ಟಡದ ಕಾರ್ಯ ಆರಂಭವಾಗಿದೆ. ಇವುಗಳಿಗೆ ಆರ್ಥಿಕ ನೆರವು ನೀಡಿದ ಸಚಿವೆಯಾದ ಶ್ರೀಮತಿ ಸುಮಾವಸಂತ್ ಅವರಿಗೆ, ಹೈದ್ರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಅಧ್ಯಕ್ಷರಾದ ಶ್ರೀ ಎನ್.ಎಸ್. ಬೋಸರಾಜು ಅವರಿಗೆ, ವಿಶ್ವವಿದ್ಯಾಲಯದ ಧನಸಹಾಯ ಆಯೋಗದ ಚೇರಮನ್ ಶ್ರೀ ಹರಿಗೌತಮ್ ಅವರಿಗೆ ನಾವು ಕೃತಜ್ಞರಾಗಿದ್ದೇವೆ. ರಸ್ತೆಗಳ ಡಾಂಬರೀಕರಣಕ್ಕಾಗಿ ಲೋಕಸಭಾ ಸದಸ್ಯರಾದ ಶ್ರೀ ಹೆಚ್.ಜಿ. ರಾಮುಲು ಅವರು ೫ ಲಕ್ಷ ರೂಪಾಯಿ ನೀಡಿದುದನ್ನು, ರಾಜ್ಯ ಸಭಾ ಸದಸ್ಯರಾದ ಶ್ರೀ ಕೆ.ಸಿ. ಕೊಂಡಯ್ಯ ಅವರು ರಸ್ತೆದೀಪಕ್ಕಾಗಿ ೧೫ ಲಕ್ಷ ರೂಪಾಯಿ ನೀಡಲು ಮುಂದೆ ಬಂದುದನ್ನು, ಬಾದಾಮಿಯ ಶಿಲ್ಪಕಲಾಕೇಂದ್ರದ ಅಭಿವೃದ್ಧಿಗಾಗಿ ಬಾಗಲಕೋಟೆಯ ಲೋಕಸಭಾ ಸದಸ್ಯರಾದ ಮಾನ್ಯ ಶ್ರೀ ಆರ್.ಎಸ್. ಪಾಟೀಲ್ ಅವರು ೫ ಲಕ್ಷ ರೂಪಾಯಿ ನೀಡಿದುದನ್ನು, ಕುಮಾರರಾಮ ಹೆಸರಿನ ಉದ್ಯಾನ ನಿರ್ಮಿತಿಗಾಗಿ ತೋಟಗಾರಿಕೆ ಇಲಾಖೆ ಸಚಿವರಾದ ಶ್ರೀ ಅಲ್ಲಂ ವೀರಭದ್ರಪ್ಪನವರು ೫ ಲಕ್ಷ ರೂಪಾಯಿ ಕೊಡಮಾಡಿರುವುದನ್ನು ಗೌರವದಿಂದ ನೆನೆಯುತ್ತೇನೆ. ನೀರಿನ ಅರವಟ್ಟಿಗೆ ನಿರ್ಮಿತಿಗಾಗಿ ಹುಬ್ಬಳ್ಳಿಯ ಮಾನ್ಯ ಶ್ರೀ ಮುಥಾ ವಾಘಮಲ್ ಭೂರಾಜಿ ಅವರು ೨ ಲಕ್ಷ ರೂಪಾಯಿ ನೀಡಿದುದನ್ನು, ಬಳ್ಳಾರಿ ಜಿಲ್ಲಾ ಪಂಚಾಯತ್ ನೀರು ಪೂರೈಕೆಗೆ ಮುಂದು ಬಂದುದನ್ನು ನೆನೆಯುವುದು ನಮಗೆ ಸಂತೋಷದ ವಿಷಯವಾಗಿದೆ. ಈ ಎಲ್ಲ ಸಹಾಯಗಳಿಂದಾಗಿ ನಿಮ್ಮ ಆವರಣ ಮೈತುಂಬಿಕೊಂಡು ಬೆಳೆಯುವುದರೊಂದಿಗೆ, ಈ ವರ್ಷ ಕುಟುಂಬಗಳು ಇಲ್ಲಿ ವಾಸಮಾಡಲು ಆರಂಭಿಸಿದುದು ವಿಶ್ವವಿದ್ಯಾಲಯದ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯವೆನಿಸಿದೆ. ಇದಕ್ಕೆ ಪೂರಕವೆಂಬಂತೆ ಹೆಲಿಪ್ಯಾಡ್, ಪ್ರಾಥಮಿಕ ಶಾಲೆ, ವ್ಯಾಪಾರ ಮಳಿಗೆ, ಹಾಸ್ಟೆಲ್, ಬಸ್‌ಸ್ಟ್ಯಾಂಡ್, ಆಸ್ಪತ್ರೆಗಳು ನಿರ್ಮಾಣಗೊಂಡರೆ ಈ ಆವರಣ 'ಪೂರ್ಣಗ್ರಾಮ'ವೆನಿಸುತ್ತದೆ. ಆದುದರಿಂದ ದಶಮಾನೋತ್ಸವ ಸಂದರ್ಭದಲ್ಲಿ ಈ ಕೆಲಸಗಳಿಗೆ ಮುಂದುಬರಲು ದಾನಿಗಳಲ್ಲಿ ಭಿನ್ನವಿಸಿಕೊಳ್ಳುತ್ತೇನೆ.

ಈ ಭೌತಿಕ ಬೆಳವಣಿಗೆಯನ್ನು ಮೀರಿ, ಇತ್ತೀಚೆಗೆ ಶೈಕ್ಷಣಿಕ ಹೊಸ ಅಧ್ಯಾಯವೊಂದು ಇಲ್ಲಿ ತೆರೆದುಕೊಂಡಿದೆ. ಮುಖ್ಯವಾಗಿ ಶಿಕ್ಷಕರಲ್ಲಿ, ಅದರಲ್ಲಿಯೂ ಯುವ ಶಿಕ್ಷಕರಲ್ಲಿ ಲೆಕ್ಕಣಿಕೆ ಹಿಡಿಯುವ ಆತ್ಮವಿಶ್ವಾಸವನ್ನು ತುಂಬಲಾಗಿದೆ. ಇವರು ಕೈಗೆತ್ತಿಕೊಂಡ ಯೋಜನೆಗಳ ಫಲವಾಗಿ ಈ ವರ್ಷ ಇಲ್ಲಿಯವರೆಗೆ ಸುಮಾರು ೭೫ ಪುಸ್ತಕಗಳು ಪ್ರಕಟವಾಗಿವೆ. ಈ ನುಡಿಹಬ್ಬ ಸಂದರ್ಭದಲ್ಲಿ ೨೫ ಪುಸ್ತಕಗಳು ಪ್ರಕಟವಾಗಲಿವೆ. ಹೀಗೆ ಕಳೆದ ವರ್ಷದಂತೆ ಈ ವರ್ಷವೂ ೧೦೦ ಪುಸ್ತಕಗಳನ್ನು ಪ್ರಕಟಿಸಿದ್ದೇವೆ. ಇವುಗಳಲ್ಲಿ ಕುಮಾರವ್ಯಾಸ, ತಿಮ್ಮಣಕವಿಗಳ "ಕನ್ನಡ ಭಾರತ" ಪ್ರಕಟಣೆಗಾಗಿ ವಿಜಯನಗರ ಉಕ್ಕಿನ ಉದ್ದಿಮೆಯ ಒಡೆಯರಾದ ಶ್ರೀ ಸಜ್ಜನ ಜಿಂದಾಲ್ ಅವರು ೩ ಲಕ್ಷ ರೂಪಾಯಿ ನೀಡಿದ್ದಾರೆ. "ಜೈನ ಸಾಹಿತ್ಯಮಾಲೆ"ಯ ಸ್ಥಾಪನೆಗಾಗಿ ಹೊಸಪೇಟೆಯ ಶ್ರೀ ಅಭೇರಾಜ ಬಲ್ಡೋಟಾ ಅವರು ಈ ವರ್ಷ ೧ ಲಕ್ಷ ರೂಪಾಯಿ ನೀಡಿದ್ದು, ಮುಂದಿನ ವರ್ಷ ಶಾಶ್ವತನಿಧಿಗಾಗಿ ೧೦ ಲಕ್ಷ ರೂಪಾಯಿ ನೀಡುವ ವಾಗ್ದಾನ ಮಾಡಿದ್ದಾರೆ.

ಕಳೆದ ವರ್ಷ ಗಳಗನಾಥರ ಕಾದಂಬರಿ ಸಮಗ್ರ ಸಂಪುಟಕ್ಕೆ ೬ ಲಕ್ಷ ರೂಪಾಯಿ ನೀಡಿದ್ದ ಲೋಕಶಿಕ್ಷಣ ಟ್ರಸ್ಟ್ ಕಾರ್ಯದರ್ಶಿಗಳಾದ ಶ್ರೀ ಕೆ. ಶ್ಯಾಮರಾವ್ ಅವರು ಈ ವರ್ಷ ಬೆಟಗೇರಿ ಕೃಷ್ಣಶರ್ಮರ ಸಮಗ್ರ ಕೃತಿ ಪ್ರಕಟನೆಗಾಗಿ ೫ ಲಕ್ಷ ರೂಪಾಯಿ ನೀಡುವ ವಾಗ್ದಾನ ಮಾಡಿದ್ದಾರೆ. ಶ್ರೀ ವಿ.ಎಂ. ಕುಮಾರಸ್ವಾಮಿ ಅವರು ಕುವೆಂಪು ಅವರ ಸಮಗ್ರ ಕವನ ಸಂಕಲನ ಪ್ರಕಟಣೆಗಾಗಿ ಅಮೇರಿಕೆಯ ಕನ್ನಡಿಗರಿಂದ ಒಂದು ಸಾವಿರ ಡಾಲರ್ ಒದಗಿಸಿಕೊಡುವ ಪ್ರಯತ್ನದಲ್ಲಿ ತೊಡಗಿದ್ದಾರೆ. ಹೀಗೆ ಸಾರ್ವಜನಿಕರನ್ನು ಬಿಟ್ಟರೂ ಸರಕಾರಿ ಇಲಾಖೆಗಳು ನೀಡಿದ ಕೊಡುಗೆ ಕೆಳಗಿನಂತಿವೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆಯರಾದ ಶ್ರೀಮತಿ ರಾಣಿ ಸತೀಶ್ ಅವರು ಹಂಪಿ ಉತ್ಸವದ ಪ್ರಕಟಣೆಗಾಗಿ ೧ ಲಕ್ಷ, ಶಾಸನ ಪ್ರಕಟಣೆಗಾಗಿ ೨ ಲಕ್ಷ, ಮ್ಯೂಸಿಯಂ ಅಭಿವೃದ್ಧಿಗಾಗಿ ೪ ಲಕ್ಷ ರೂಪಾಯಿ ನೀಡಿದ್ದಾರೆ. ಸಣ್ಣ ನೀರಾವರಿ ಇಲಾಖೆಯ ಸಚಿವರಾದ ಶ್ರೀ ಕುಮಾರ ಬಂಗಾರಪ್ಪ ಅವರು ಕರ್ನಾಟಕದ ಕೆರೆಗಳನ್ನು ಕುರಿತ ಕೃತಿ ಪ್ರಕಟಣೆಗಾಗಿ ೨ ಲಕ್ಷ ನೀಡಿದ್ದಾರೆ. "ಕರ್ನಾಟಕ ರಾಜ್ಯಕೋಶ ಮಾಲೆ"ಯ ಸಸ್ಯಕೋಶ ಸಂಪುಟದ ಪ್ರಕಟಣೆಗಾಗಿ ಸಚಿವರಾದ ಶ್ರೀ ಅಲ್ಲಂ ವೀರಭದ್ರಪ್ಪ ಅವರು ೨.೫ ಲಕ್ಷ ರೂಪಾಯಿ ಮಂಜೂರು ಮಾಡಿದ್ದಾರೆ. ಒಂದೂವರೆ ಸಾವಿರ ಪುಟಗಳ ಕರ್ನಾಟಕ ಚಲನಚಿತ್ರ ಚರಿತ್ರೆ'ಯ ಪ್ರಕಟಣೆಗಾಗಿ ರಾಜ್ಯ ವಾರ್ತಾ ಮತ್ತು ಪ್ರಚಾರ

ಇಲಾಖೆಯ ಸಚಿವರಾದ ಪ್ರೊ. ಬಿ.ಕೆ. ಚಂದ್ರಶೇಖರ ಅವರು ೭ ಲಕ್ಷ ರೂಪಾಯಿ ಮಂಜೂರು ಮಾಡಿದ್ದಾರೆ. ಗಂಗಾವತಿಯ ಶಾಸಕರಾದ ಮಾನ್ಯ ಶ್ರೀ ಶ್ರೀರಂಗದೇವ ರಾಯಲು ಅವರು ತಮ್ಮ ಶಾಸಕರ ನಿಧಿಯಿಂದ ಗ್ರಂಥಾಲಯ ಅಭಿವೃದ್ಧಿಗಾಗಿ ೨ ಲಕ್ಷ ಕೊಡಮಾಡಿದ್ದಾರೆ. ಉರ್ದು, ಪರ್ಶಿಯನ್, ಅರೇಬಿಕ್ ಶಾಸನ ಪ್ರಕಟಣೆಗಾಗಿ ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಅಧ್ಯಕ್ಷರಾದ ಶ್ರೀ ಎನ್.ಎಸ್. ಭೋಸರಾಜು ರೂ. ೧ ಲಕ್ಷ ಮಂಜೂರು ಮಾಡಿದ್ದಾರೆ. ದಶಮಾನೋತ್ಸವದ ವಿಶೇಷ ಸಾಧನೆಯೆಂಬಂತೆ ಎಲ್ಲ ಶರಣರ ಎಲ್ಲ ವಚನಗಳ ಮರುಮುದ್ರಣಕ್ಕಾಗಿ ೧೦ ಲಕ್ಷ ರೂಪಾಯಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನೀಡಿದುದು ಚಾರಿತ್ರಿಕ ದಾಖಲೆಯೆನಿಸಿವೆ. ಸ್ವಾತಂತ್ರ್ಯ ಯೋಧ ಶ್ರೀ ಟೇಕೂರ ಸುಬ್ರಹ್ಮಣ್ಯಂ ಅವರ ಜನ್ಮ ಶತಮಾನೋತ್ಸವ ನೆನಪಿನ ಕನ್ನಡ, ಇಂಗ್ಲೀಷ್ ಪುಸ್ತಕಗಳ ಪ್ರಕಟಣೆಗಾಗಿ ಬಳ್ಳಾರಿ ಜಿಲ್ಲಾಧಿಕಾರಿಗಳು ಆರ್ಥಿಕ ನೆರವು ನೀಡಿದ್ದಾರೆ. ಈ ಎಲ್ಲ ಇಲಾಖೆಗಳನ್ನು ಎಲ್ಲ ಮಹನೀಯರನ್ನು ಕೃತಜ್ಞತೆಯಿಂದ ನೆನೆಯುತ್ತೇವೆ. ಈ ನೆರವುಗಳ ಸರಮಾಲೆಯಲ್ಲಿ ಕರ್ನಾಟಕ ಸರ್ಕಾರ 'ಪುರಂದರದಾಸ ಅಧ್ಯಯನ ಪೀಠ' ಸ್ಥಾಪನೆಗಾಗಿ ೧೦ ಲಕ್ಷ ರೂಪಾಯಿ ಕೊಡಮಾಡಿರುವುದನ್ನು, ದಶಮಾನೋತ್ಸವ ಸಮಾರಂಭ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಘೋಷಿಸಿದ ೫೦ ಲಕ್ಷ ರೂಪಾಯಿಗಳ ಹೆಚ್ಚಿನ ಅನುದಾನವನ್ನು ವಿಶೇಷವಾಗಿ ಸ್ಮರಿಸುತ್ತೇವೆ. ಇದೆಲ್ಲ ಸೇರಿ ಈ ವರ್ಷ ಸರಕಾರದ ವಾರ್ಷಿಕ ಅನುದಾನವನ್ನು ಹೊರತುಪಡಿಸಿ, ಎರಡು ಕೋಟಿ ಹಣವನ್ನು ಅನ್ಯಮೂಲಗಳಿಂದ ಹೆಚ್ಚಿಗೆ ಸಂಗ್ರಹಿಸಿದ ಸಾಧನೆ ನಮ್ಮದಾಗಿದೆ.

ಬೌದ್ಧ ಸಾಹಿತ್ಯದ ಮತ್ತು ಬೌದ್ಧರಿಗೂ ಕರ್ನಾಟಕಕ್ಕೂ ಇರುವ ಸಂಬಂಧಗಳ ಅಧ್ಯಯನದ ಬೃಹತ್ ಯೋಜನೆಗೆ ನಮ್ಮ ಸಿಂಡಿಕೇಟ್ ಸಭೆ ಒಪ್ಪಿಗೆ ನೀಡಿದ್ದು, ಈ ವರ್ಷ ೧೦ ಉತ್ತಮ ಪುಸ್ತಕಗಳನ್ನು ಪ್ರಕಟಿಸುವ ಯೋಜನೆಯಿದಾಗಿದೆ. ಅನುವಾದ ಯೋಜನೆಗೂ ಈ ವರ್ಷ ವಿಶೇಷ ಗಮನಕೊಟ್ಟಿದ್ದು, ತೆಲುಗಿನಿಂದ ಕಾಟಮರಾಜು ಕಥಲು, ಕ್ರೀಡಾಭಿರಾಮಮು, ತಮಿಳಿನಿಂದ ಶಿಲಪ್ಪದಿಗಾರಂ, ಸಂಸ್ಕೃತದಿಂದ ನೀತಿ ವಾಕ್ಯಾಮೃತಂ ಕನ್ನಡಕ್ಕೆ ತರಲಾಗಿದೆ. ವಿಜ್ಞಾನ ಸಂಗಾತಿ, ಚೆಲುವ ಕನ್ನಡ, ಪುಸ್ತಕ ಮಾಹಿತಿಗಳೊಂದಿಗೆ ಮಹಿಳಾ ಅಧ್ಯಯನ, ಕನ್ನಡ ಅಧ್ಯನಗಳನ್ನು ಆರಂಭಿಸಿದ್ದ ನಾವು ಈ ವರ್ಷದಿಂದ ಕರ್ನಾಟಕ ಅಭಿವೃದ್ಧಿ ಹೆಸರಿನ ಹೊಸ ಪತ್ರಿಕೆಯನ್ನು ಆರಂಭಿಸಲಿದ್ದೇವೆ. ನಮ್ಮ ಪ್ರಸಾರಾಂಗದ ಪುಸ್ತಕ ಪ್ರಕಟಣೆ ಮಾರಾಟ ಇತ್ತೀಚೆಗೆ ನಾಲ್ಕು ಪಟ್ಟು ವರ್ಧಿಸಿರುವುದರಿಂದ ಇಲ್ಲಿ ನಡೆಯುತ್ತಲಿರುವುದು ಕೇವಲ ಪುಸ್ತಕದ ಪ್ರಕಟಣೆಯಲ್ಲ, ಪುಸ್ತಕದ ಪವಾಡವೆಂದೇ ಹೇಳಬೇಕು. ಬಹುಶಃ ಇಂದು ಭಾರತದ ಯಾವುದೇ ವಿಶ್ವವಿದ್ಯಾಲಯದಲ್ಲಿ ಪ್ರತಿವರ್ಷ ಇಷ್ಟು ಸಂಖ್ಯೆ ಪುಸ್ತಕ ಪ್ರಕಟವಾಗುವುದು ಅನುಮಾನ.

ಈ ವರ್ಷ ನಮ್ಮ ಶಿಕ್ಷಕ-ಶಿಕ್ಷಕೇತರ ಸಿಬ್ಬಂದಿಗಳಿಗೆ ಪ್ರಶಸ್ತಿ. ಬಹುಮಾನಗಳ ಸುಗ್ಗಿ ಕಾಲ. ಕಳೆದ ವಾರ ಪ್ರಕಟವಾದ ರಾಜ್ಯ ಸಾಹಿತ್ಯ ಅಕಾಡೆಮಿಯ ಬಹುಮಾನಗಳಲ್ಲಿ ೫ ಬಹುಮಾನಗಳನ್ನು ನಮ್ಮ ಸಿಬ್ಬಂದಿಯವರೇ ಗೆದ್ದು ತಂದುದು ಈ ವಿಶ್ವವಿದ್ಯಾಲಯದ, ಏಕೆ ಯಾವುದೇ ವಿಶ್ವವಿದ್ಯಾಲಯದ ಇತಿಹಾಸದಲ್ಲಿ ಚರಿತ್ರಾರ್ಹ ದಾಖಲೆಯೆನಿಸಿದೆ. ಡಾ. ಕರೀಗೌಡ ಬೀಚನಹಳ್ಳಿ, ಶ್ರೀ ಶಿವಾನಂದ ವಿರಕ್ತಮಠ ಹೀಗೆ ಇಬ್ಬರು ಪುರುಷರು, ಡಾ. ಎಚ್.ಎಸ್. ಶ್ರೀಮತಿ, ಶ್ರೀಮತಿ ನಾಗವೇಣಿ, ಡಾ. ಶೈಲಜಾ ಹಿರೇಮಠ ಹೀಗೆ ಮೂವರು ಮಹಿಳೆಯರು ಈ ಗೌರವಕ್ಕೆ ಪಾತ್ರರಾಗಿದ್ದಾರೆ.

ಈ ಐದು ಗೌರವಗಳು ಸಾಲದೆಂಬಂತೆ ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ್, ಡಾ. ಹಿ.ಚಿ.ಬೋರಲಿಂಗಯ್ಯ, ಪ್ರೊ. ಎ.ವಿ.ನಾವಡ, ಡಾ. ಅಮರೇಶ ನುಗಡೋಣಿ, ಶ್ರೀ ಮೊಗಳ್ಳಿ ಗಣೇಶ್, ಡಾ. ಸಿ.ಆರ್. ಗೋವಿಂದರಾಜು ಈ ಆರು ಜನರ ಗ್ರಂಥಗಳಿಗೆ ಆರು ಬಹುಮಾನಗಳು ಪ್ರಾಪ್ತವಾಗಿವೆ. ಈ ವರ್ಷ ಶ್ರೀಮತಿ ನಾಗವೇಣಿ ಅವರ ಒಂದೇ ಪುಸ್ತಕಕ್ಕೆ ೪ ಬಹುಮಾನಗಳು ಬಂದಿವೆ. ನಮ್ಮ ಚರಿತ್ರೆ ವಿಭಾಗದ ಡಾ. ವಿಜಯ ಪೂಣಚ್ಚ ಅವರು ಯುಜಿಸಿ ನೆರವಿನಿಂದ ವಿಶೇಷ ಅಧ್ಯಯನಕ್ಕಾಗಿ ವಿದೇಶಕ್ಕೆ ಹೋಗಿದ್ದಾರೆ. ಇದೆಲ್ಲವನ್ನು ಸಂತೋಷದಿಂದ ಸ್ಮರಿಸುತ್ತೇನೆ.

ಹೀಗೆ ಭೌತಿಕ, ಶೈಕ್ಷಣಿಕ ಉತ್ಪಾದನೆಯ ಪ್ರಕ್ರಿಯೆ ಈ ವಿಶ್ವವಿದ್ಯಾಲಯದಲ್ಲಿ ನಿರಂತರ ನಡೆದಿದ್ದು, ಈಗ ದಶಮಾನೋತ್ಸವದ ತಿರುವು ಬಿಂದುವಿನಲ್ಲಿ ನಾವು ನಿಂತಿದ್ದೇವೆ. ಆದುದರಿಂದ ಈವರೆಗೆ ಉತ್ಪಾದನೆ, ಇನ್ನು ಮೇಲೆ ವಿಸ್ತರಣೆ ಎಂಬ ಘೋಷಣೆಯೊಂದಿಗೆ ನಾವು ಹೊಸ

ಅಧ್ಯಾಯ ತೆರೆಯ ಬಯಸಿದ್ದೇವೆ. ಅಂದರೆ ಈವರೆಗಿನ ಕೇಂದ್ರೀಯ ಅಭಿವೃದ್ಧಿಯನ್ನು ಇನ್ನು ಮೇಲೆ ವಿಕೇಂದ್ರೀಯಗೊಳಿಸುವುದು ನಮ್ಮ ಹೊಸ ಧ್ಯೇಯವಾಗಿದ್ದು, ಈ ವಿಸ್ತರಣೆ ಸ್ಥಾನಿಕ, ಜಾಗತಿಕ ಮತ್ತು ಅನ್ವಯಿಕ ಹೀಗೆ ಮೂರು ನೆಲೆಗಳಲ್ಲಿ ಜರುಗಬೇಕಿದೆ.

೧೯೫೬ ಪೂರ್ವದ ಭಾರತ ಭೂಪಟದಲ್ಲಿ ಕರ್ನಾಟಕದ ನಕ್ಷೆಯೇ ಇರಲಿಲ್ಲ. ಆಮೇಲೆ ಕನ್ನಡನುಡಿಯನ್ನಾಧರಿಸಿ ಈ ಭೂಪಟದಲ್ಲಿ 'ಕನ್ನಡನಾಡು' ಅಸ್ತಿತ್ವಕ್ಕೆ ಬಂದಿತು. ಹೀಗೆ ನುಡಿಯನ್ನಾಧರಿಸಿ ನಾಡು ಹುಟ್ಟಿರುವುದುರಿಂದ ನಮ್ಮ ನಾಡಿನ ಯಾವುದೇ ಚಟುವಟಿಕೆಗಳಿಗೆ ನಮ್ಮ ನುಡಿಯೇ ಮಾನದಂಡವಾಗಬೇಕಾಗುತ್ತದೆ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ನಡೆದುಕೊಂಡು, ನಾವು ಕನ್ನಡ ನುಡಿಯನ್ನು ಮತ್ತು ಈ ನುಡಿಯನ್ನಾಧರಿಸಿದ ಕನ್ನಡನಾಡನ್ನು ಗೌಣಗೊಳಿಸುತ್ತ ನಡೆದಿದ್ದೇವೆ. ಸರಕಾರ ಕನ್ನಡವನ್ನು ಆಡಳಿತ ಮಾಧ್ಯಮ ಮಾಡಬೇಕು, ಶಿಕ್ಷಣ ಮಾಧ್ಯಮ ಮಾಡಬೇಕು ನಿಜ. ಇದೆಲ್ಲಕ್ಕಿಂತ ಮೊದಲು ಸಾಮಾಜಿಕರು ಕನ್ನಡವನ್ನು ಸಮಾಜಮಾಧ್ಯಮ ಮಾಡಬೇಕಿದೆ. ಈ ಉದ್ದೇಶ ಸಾಧನೆಗಾಗಿ ಅಂದರೆ ಈವರೆಗೆ ಏಕೀಕರಣ, ಇನ್ನು ಮೇಲೆ ಕನ್ನಡೀಕರಣ ಎಂದು ಸಾಮಾಜಿಕರು ದೀಕ್ಷೆ ತೊಡುವುದಕ್ಕಾಗಿ ಕನ್ನಡ ವಿಶ್ವವಿದ್ಯಾಲಯ ಶ್ರಮಿಸಬೇಕಾಗಿದೆ. ಕನ್ನಡ ಕೇವಲ 'ಕನ್ನಡಿಗರ ಮಾತೃಭಾಷೆ' ಯಲ್ಲ, 'ಕರ್ನಾಟಕದ ಮಾತೃಭಾಷೆ'. ಅಂದರೆ ಕರ್ನಾಟಕದಲ್ಲಿರುವ ಎಲ್ಲ ಮಾತೃ ಭಾಷೆ ಎಂಬ ಗುರಿ ಸಾಧನೆಗಾಗಿ ಚಳುವಳಿ ರೂಪದ ಹೊಸ ಯೋಜನೆಗಳನ್ನು ಕನ್ನಡ ವಿಶ್ವವಿದ್ಯಾಲಯ ಕೈಗೆತ್ತಿಕೊಳ್ಳಬೇಕಾಗಿದೆ. ಈ ಆದರ್ಶಕ್ಕೆ ಅರ್ಥ ತುಂಬುವ ಸಲುವಾಗಿ, ಕರ್ನಾಟಕದ ಎಲ್ಲ ಸಾಂಸ್ಕೃತಿಕ ಸಂಸ್ಥೆಗಳೊಂದಿಗೆ ಸಂಪರ್ಕವನ್ನಿಟ್ಟು ಕೊಂಡು, ಅವುಗಳಿಗೆ ಸರಿಯಾದ ದಾರಿ ದಿಕ್ಕು ತೋರುವುದು, ಅಲ್ಲಲ್ಲಿಯೇ ಅವು ಕನ್ನಡೀಕರಣದ ಕೆಲಸದಲ್ಲಿ ತೊಡಗುವಂತೆ ಮಾಡುವುದು ಇವೇ ಮೊದಲಾದ ಕೆಲಸಗಳಿಗೂ ಕನ್ನಡ ವಿಶ್ವವಿದ್ಯಾಲಯ ಇನ್ನು ಮೇಲೆ ಆದ್ಯತೆ ಕೊಡಬಯಸಿದೆ.

ಹೀಗೆ ಒಳಗೆ ಕರ್ನಾಟಕವನ್ನು ಕನ್ನಡೀಕರಣಗೊಳಿಸುವುದು ಒಂದು ಹಂತವಾದರೆ, ಹೊರಗೆ ವಾಸಿಸುತ್ತಿರುವ ಕನ್ನಡಿಗರು ಕನ್ನಡಿಗರಾಗಿ ಉಳಿಯುವಂತೆ ನೋಡಿಕೊಳ್ಳುವುದು ಇನ್ನೊಂದು ಹಂತವಾಗಿದೆ. ಇದಕ್ಕಾಗಿ ದೂರದಲ್ಲಿದ್ದರೂ ಅವರು ಕರ್ನಾಟಕವನ್ನು ನೋಡುವ, ಕೇಳುವ ಓದುವ ಸಾಮಾಗ್ರಿಗಳನ್ನು ಸೃಷ್ಟಿಸಿ ವಿತರಿಸುವುದು. ಅವರೊಂದಿಗೆ ವಿಚಾರ ಸಂಕಿರಣ, ಉಪನ್ಯಾಸಗಳ ಮೂಲಕ ನಿರಂತರ ಸಂಪರ್ಕ ಬೆಳೆಸುವುದು ನಮ್ಮ ಉದ್ದೇಶವಾಗಿದೆ.

ಬೇರೆ ದೇಶದ ಪ್ರಜೆಗಳನ್ನು ಕನ್ನಡದತ್ತ ಆಕರ್ಷಿಸುವುದು ನಮ್ಮ ಇನ್ನೊಂದು ಉದ್ದೇಶವಾಗಿದೆ. ಅಂದರೆ ೧ ಕೋಟಿ ರೂಪಾಯಿ ಶಾಶ್ವತನಿಧಿಯನ್ನು ಸ್ಥಾಪಿಸಿ, ಅದರ ಬಡ್ಡಿ ಹಣವನ್ನು ನಮ್ಮ ಭಾಷೆ, ಸಂಸ್ಕೃತಿಗಳ ಅಧ್ಯಯನಕ್ಕೋಸುಗ ಬರಲಿರುವ ವಿದೇಶಿ ವಿದ್ವಾಂಸರು. ವಿದ್ಯಾರ್ಥಿಗಳಿಗಾಗಿ ಉಪಯೋಗಿಸುವುದು ಇದರ ಸ್ವರೂಪವಾಗಿದೆ. ಈ ದೊಡ್ಡ ಮೊತ್ತವನ್ನು ಕರ್ನಾಟಕ ಸರ್ಕಾರ ಪೂರೈಸಬೇಕೆಂದು ಭಿನ್ನವಿಸಿಕೊಳ್ಳುತ್ತೇನೆ. ನಮ್ಮ ವಿಶ್ವವಿದ್ಯಾಲಯದಲ್ಲಿ ಪೀಠಗಳನ್ನು ಸ್ಥಾಪಿಸುವುದರೊಂದಿಗೆ, ವಿದೇಶಗಳಲ್ಲಿ "ಕನ್ನಡಪೀಠ" ಸ್ಥಾಪಿಸುವುದು ಇಂದಿನ ಬಹುಮುಖ್ಯ ಅಗತ್ಯವಾಗಿದೆ. ಕನ್ನಡ ವಿಶ್ವವಿದ್ಯಾಲಯದ ಈ ಕನಸನ್ನು ಕರ್ನಾಟಕ ಸರ್ಕಾರ ನನಸಾಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಹೀಗೆ ಸ್ಥಾನಿಕ ನೆಲೆಯಲ್ಲಿ ಕನ್ನಡವನ್ನು ತುಂಬುವ, ಜಾಗತಿಕ ನೆಲೆಯಲ್ಲಿ ಕನ್ನಡವನ್ನು ವಿಸ್ತರಿಸುವಷ್ಟೇ ಮುಖ್ಯವಾದುದು. ಅನ್ವಯಿಕ ಬೋಧನಕ್ರಮವನ್ನು ಆರಂಭಿಸುವುದು. ಈ ವರೆಗೆ ಪರೀಕ್ಷೆಯಲ್ಲಿ ಪ್ರಶ್ನೆಗೆ ಉತ್ತರ ನೀಡುವ ಬೋಧನಕ್ರಮವನ್ನು ಅನುಸರಿಸಿದ ಪರಿಣಾಮವಾಗಿ, ನಮ್ಮ ಶಿಕ್ಷಣ ಬಹುಮಟ್ಟಿಗೆ ಅಪ್ರಯೋಜಕ ವೆನಿಸಿದೆ. ಈ ಪದ್ಧತಿಗೆ ತಿಲಾಂಜಲಿ ಹೇಳುವ ರೀತಿಯಲ್ಲಿ 'ಅನ್ವಯಿಕ' ಬೋಧನ ಕ್ರಮವನ್ನು ಅಸ್ತಿತ್ವಕ್ಕೆ ತರಬೇಕಾಗಿದೆ. ಕನಿಷ್ಠ ಪಕ್ಷ ಸೃಜನಸಾಹಿತ್ಯ ಕ್ಷೇತ್ರಕ್ಕಾದರೂ ಇದನ್ನು ಅನ್ವಯಿಸಬೇಕಾಗಿದೆ.

ಶಿಕ್ಷಕರೇ ಶಿಕ್ಷಣ ಸಂಸ್ಥೆಯ ಶಕ್ತಿ. ಅದರ ಆಗು ಹೋಗುಗಳಿಗೆ ಅವರೇ ಜವಾಬ್ದಾರರು ಎಂಬ ತಿಳುವಳಿಕೆ ನಮ್ಮೆಲ್ಲರದಾಗಿದೆ. ನಮ್ಮ ವಿಭಾಗದಲ್ಲಿ ಉತ್ಪಾದನೆಗೆ ಅವಕಾಶ ಮಾಡಿಕೊಳ್ಳುತ್ತೇವೆ ಮತ್ತು ನಾವು ಅನ್ವಯಿಕ ಕ್ರಿಯೆಗಳಲ್ಲಿ ತೊಡಗಿಕೊಳ್ಳುತ್ತೇವೆ. ನಮ್ಮ ವಿಭಾಗವನ್ನು

ಸ್ಥಾನಿಕ ನೆಲೆಗಳಲ್ಲಿ ವಿಸ್ತರಿಸುತ್ತೇವೆ ಮತ್ತು ಜಾಗತಿಕ ನೆಲೆಗಳಲ್ಲಿ ಬೆಳೆಸುತ್ತೇವೆ." ಹೀಗೆ ಕನ್ನಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ಏಕಕಾಲಕ್ಕೆ ನಾಲ್ಕು ಮುಖಗಳಲ್ಲಿ ತಮ್ಮ ವಿಭಾಗಗಳನ್ನು ಬೆಳೆಸುವ ಹೊಸ ನಾಂದಿ ಹಾಡುವರೆಂಬ ವಿಶ್ವಾಸ ಈ ವಿದ್ಯಾಸಂಸ್ಥೆಯದಾಗಿದೆ.

ಮಾತು ಮುಗಿಸುವ ಮುನ್ನ ಒಂದು ಮಾತು; ಕನ್ನಡ ವಿಶ್ವವಿದ್ಯಾಲಯಕ್ಕೆ ಕರ್ನಾಟಕದ ಲಲಿತಕಲಾ ಕಾಲೇಜುಗಳನ್ನು ಸಂಲಗ್ನಗೊಳಿಸುವುದು, ೯೯ ಜನ ಕ್ರೋಢೀಕೃತ ನೌಕರರನ್ನು ಖಾಯಂಗೊಳಿಸುವುದು ಈ ಎರಡು ಮುಖ್ಯ ಪ್ರಶ್ನೆಗಳು ಬಗೆಹರಿಯಲಿಲ್ಲ. ನಾವು ಅನೇಕ ಸಲ ಪ್ರಯತ್ನಿಸಿದ್ದಾಯಿತು. ಮಾನ್ಯ ಕುಲಾಧಿಪತಿಗಳು, ಸಮಕುಲಾಧಿಪತಿಗಳು ಈ ಬೇಡಿಕೆಗಳನ್ನು ಬೇಗ ಪೂರೈಸಿಕೊಡಬೇಕೆಂದು ಈ ಘಟಿಕೋತ್ಸವದಲ್ಲಿಯೂ ಮತ್ತೆ ಭಿನ್ನವಿಸಿಕೊಳ್ಳುತ್ತೇನೆ. ಇಷ್ಟು ಮಾತುಗಳೊಂದಿಗೆ ಎಲ್ಲರಿಗೂ ಇನ್ನೊಮ್ಮೆ ಸ್ವಾಗತ ಕೋರುತ್ತೇನೆ.

೨ ಫೆಬ್ರವರಿ ೨೦೦೧

# ೭. ಶೋಧನೆ ಬೋಧನೆಗಳ ಸಾಂಗತ್ಯ

ಕೋಟಿ ಕೋಟಿ ಕನ್ನಡಿಗರ ಹಲವು ವರ್ಷಗಳ ಅಭೀಪ್ಸೆ ಮತ್ತು ಪ್ರಯತ್ನಗಳಿಂದಾಗಿ ಈ ಮಹತ್ವದ ಐತಿಹಾಸಿಕ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಕನ್ನಡ ವಿಶ್ವವಿದ್ಯಾಲಯ ಆರಂಭಗೊಂಡು ಇದೀಗ ೧೦ ವರ್ಷಗಳು ತುಂಬುತ್ತಿವೆ. ಈ ಸಂತೋಷದ, ಸಂಭ್ರಮದ ದಶಮಾನೋತ್ಸವ ಸಂದರ್ಭದಲ್ಲಿ ಜರುಗುತ್ತಿರುವ ೧೦ನೆಯ ನುಡಿಹಬ್ಬಕ್ಕೆ ಆಗಮಿಸಿರುವ ಘನತೆವೆತ್ತ ಸಮಕುಲಾಧಿಪತಿಗಳೂ ಶ್ರೇಷ್ಠ ಶಿಕ್ಷಣ ತಜ್ಞರೂ ಆದ ಸನ್ಮಾನ್ಯ ಡಾ. ಜಿ. ಪರಮೇಶ್ವರ ಅವರೇ, ನಾಡೋಜ ಗೌರವ ಪದವಿ ವಿಭೂಷಿತರಾಗಲಿರುವ ನಾಡಿನ ಪ್ರಥಮ ದರ್ಜೆಯ ಪ್ರತಿಭಾನ್ವಿತ ಕವಿ, ವಿಮರ್ಶಕ, ಪ್ರಾಧ್ಯಾಪಕ, ಚಿಂತಕ ಡಾ. ಜಿ.ಎಸ್. ಶಿವರುದ್ರಪ್ಪ ಅವರೇ, ರಾಷ್ಟ್ರೀಯ ಖ್ಯಾತಿಯ ಸರ್ವಶ್ರೇಷ್ಠ ಭರತನಾಟ್ಯ ಕಲಾವಿದ ಪದ್ಮಭೂಷಣ ಡಾ. ಕೆ.ವೆಂಕಟಲಕ್ಷ್ಮಮ್ಮ ಅವರೇ, ಮುಖ್ಯಅತಿಥಿಗಳಾದ ಜಾನಪದ ವಿದ್ವಾಂಸ ಶ್ರೀ ಮುದೇನೂರು ಸಂಗಣ್ಣ ಅವರೇ, ಗೌರವಾನ್ವಿತ ಅತಿಥಿಗಳೇ, ಶಾಸಕರೇ, ಸದಸ್ಯರೇ, ವಿಶ್ವವಿದ್ಯಾಲಯದ ಕಾರ್ಯಕಾರಿ ಮತ್ತು ಆಡಳಿತ ಮಂಡಳಿಯ ವಾದ್ಯ ಸದಸ್ಯರೇ, ಈ ವಿಶ್ವವಿದ್ಯಾಲಯದ ಪ್ರಗತಿಯಲ್ಲಿ ಕ್ರಿಯಾಪೂರ್ಣವಾದ ಪಾತ್ರವನ್ನು ವಹಿಸಿದ್ದ ಎಲ್ಲ ಮಹನೀಯರೇ, ಮಹಿಳೆಯರೇ, ಸುದ್ದಿ ಮಾಧ್ಯಮಗಳ ಮಿತ್ರರೆ, ತಮ್ಮೆಲ್ಲರನ್ನು ಈ ವಿಶಿಷ್ಟ ಸಮಾರಂಭಕ್ಕೆ ಗೌರವಪೂರ್ವಕವಾಗಿ ಸ್ವಾಗತಿಸುತ್ತಿದ್ದೇನೆ.

ತಮ್ಮಗೆಲ್ಲರಿಗೂ ತಿಳಿದಿರುವಂತೆ ನಮ್ಮ ಈ ಕನ್ನಡ ವಿಶ್ವವಿದ್ಯಾಲಯ ಭಾರತದಲ್ಲೇ ಒಂದು ಅನನ್ಯ ವಿಶ್ವವಿದ್ಯಾಲಯವಾಗಿದೆ. ತನ್ನ ಪರಿಸರದ ಮತ್ತು ಮೂಲದ ದೇಶೀಯ ಸಂಸ್ಕೃತಿಯನ್ನು ಎಲ್ಲ ನಿಟ್ಟುಗಳಲ್ಲಿ ಸಂರಕ್ಷಿಸುತ್ತಲೇ ಅಭಿವೃದ್ಧಿ ಪಡಿಸುತ್ತಲೇ ರಾಷ್ಟ್ರದ ಮತ್ತು ವಿಶ್ವದ ಎಲ್ಲ ಜ್ಞಾನ ವಿಜ್ಞಾನಗಳ ಬೆಳಕುಗಳನ್ನು ತನ್ನೊಳಗೆ ಆಹ್ವಾನಿಸುತ್ತ, ತನ್ನಲ್ಲಿ ಸಂಲಗ್ನಗೊಳಿಸುತ್ತ, ಅದರ ಫಲಿತಗಳನ್ನು ದಿಕ್ಕು ದಿಕ್ಕಿಗೆ ಎತ್ತಿಹಿಡಿಯುವ ಮಹಾನ್ ಕಾಯಕದೊಡನೆ ಈ ವಿಶ್ವವಿದ್ಯಾಲಯ ಆರಂಭವಾಗಿದೆ. ಕನ್ನಡ ಪ್ರಜ್ಞೆಯನ್ನು ವಿಶ್ವಪ್ರಜ್ಞೆಯನ್ನು ಕನ್ನಡ ಪ್ರಜ್ಞೆಯನ್ನಾಗಿಸಿ ಕನ್ನಡ ಭಾಷೆಯ ಮೂಲಕ ಕನ್ನಡಿಗರಿಗೆ ದಕ್ಕಿಸಿಕೊಡುವ ವಿಶಿಷ್ಟ ಉನ್ನತ ಧ್ಯೇಯದೊಡನೆ ಆರಂಭವಾದ ಈ ವಿಶ್ವವಿದ್ಯಾಲಯ ತನ್ನ ಈ ಗುರುತರ ಹೊಣೆಯನ್ನು ಧಾರಣಮಾಡಿಕೊಂಡು ಈ ೧೦ ವರ್ಷಗಳ ಅವಧಿಯನ್ನು ಸಾರ್ಥಕವಾಗಿ ಕ್ರಮಿಸಿದೆ ಎಂದು ತಿಳಿಸಲು ಸಂತೋಷಸುತ್ತೇನೆ. ಕನ್ನಡ ನಾಡನ್ನು ಕನ್ನಡ ವಿಶ್ವವಿದ್ಯಾಲಯದಲ್ಲಿ ನೋಡುವ ಮತ್ತು ಕನ್ನಡ ವಿಶ್ವವಿದ್ಯಾಲಯ ನೋಡಿದಲ್ಲದೆ ಸಮಗ್ರ ಕರ್ನಾಟಕದ ವಿಶಿಷ್ಟ ದರ್ಶನ ಪರಿಪೂರ್ಣವಾಗದು ಎಂಬಂತೆ ಈ ಮಹಾನ್ ಸಂಸ್ಥೆಯನ್ನು ರೂಪುಗೊಳಿಸುವ ಅರ್ಥಪೂರ್ಣ ದೀಕ್ಷೆಯನ್ನು ನಾವು ವಹಿಸಿದ್ದೇವೆ.

ನಮ್ಮ ವಿಶ್ವವಿದ್ಯಾಲಯದಲ್ಲಿ ಕನ್ನಡ ಭಾಷಾಭಿವೃದ್ಧಿ, ಕನ್ನಡ ಭಾಷೆ ಮತ್ತು ಸಾಹಿತ್ಯ, ದ್ರಾವಿಡಸಂಸ್ಕೃತಿ ಅಧ್ಯಯನ, ಮಹಿಳಾ ಅಧ್ಯಯನ, ಅಭಿವೃದ್ಧಿ ಅಧ್ಯಯನ, ಭಾಷಾಂತರ, ಜಾನಪದ, ಬುಡಕಟ್ಟು, ಶಾಸನಶಾಸ್ತ್ರ, ಹಸ್ತಪ್ರತಿ, ಇತಿಹಾಸ, ಪುರಾತತ್ವ ವಿಭಾಗಗಳು ಅಸ್ತಿತ್ವದಲ್ಲಿದ್ದು, ತಮ್ಮ ತಮ್ಮ ವಿಷಯಗಳಲ್ಲಿ ವಿಶಿಷ್ಟವೂ ನವೀನವೂ ಆದ ಸಂಶೋಧನೆಗಳನ್ನು ಕೈಗೊಂಡಿವೆ.

ಮಾತೆಂಬುದು ಜ್ಯೋತಿರ್ಲಿಂಗ ಎಂಬ ಧ್ಯೇಯ ವಾಕ್ಯವನ್ನು ಧಾರಣೆ ಮಾಡಿರುವ ನಮ್ಮ ವಿಶ್ವವಿದ್ಯಾಲಯ ಕನ್ನಡ ಭಾಷೆಯನ್ನು ಸಮಗ್ರ ಕನ್ನಡಿಗರ ಬದುಕನ್ನು ಕಟ್ಟಿಕೊಡುವಂತೆ ಸಮರ್ಥಗೊಳಿಸುವ ಮತ್ತು ಕನ್ನಡ ಬದುಕು ವಿಶ್ವ ವಿಸ್ತೃತವಾಗುವಂತೆ ಮಾಡುವ ಗುರಿಗಳನ್ನು ಮುಟ್ಟುವ ದಾರಿಯಲ್ಲಿ ಆಶಾದಾಯಕವಾಗಿ ಕ್ರಮಿಸುತ್ತದೆ. ಇದರಿಂದಾಗಿ ಕನ್ನಡ ಭಾಷೆ, ಸಾಹಿತ್ಯ, ಇತಿಹಾಸ, ಸಂಸ್ಕೃತಿ, ಜಾನಪದ, ಬುಡಕಟ್ಟು ಮುಂತಾದ ನೆಲೆಗಳಲ್ಲಿ ಕಣ್ಣು ಕೋರೈಸುವ ಹೊಸ ಫಲಿತಗಳನ್ನು ಪಡೆಯುತ್ತ, ಸಮಗ್ರ ಕನ್ನಡದ ಸಮೃದ್ಧಿಯನ್ನು ಹೆಚ್ಚಿಸುತ್ತವೆ. ಮೇಲೆ ಉಲ್ಲೇಖಿಸಿದ ವಿಭಾಗಗಳಲ್ಲದೆ ವಿಶಿಷ್ಟ ಕ್ಷೇತ್ರದ ಅಧ್ಯಯನಕ್ಕೆ ಒತ್ತುಕೊಡುವ ಅಧ್ಯಯನ ಪೀಠಗಳನ್ನು ಪ್ರಾರಂಭಿಸುವ ಮೂಲಕ ಆ ಕ್ಷೇತ್ರದ ಸೂಕ್ಷ್ಮವಾದ ಅಧ್ಯಯನ, ಸಂಶೋಧನೆ ಮತ್ತು ಪ್ರಕಟಣೆಗಳಿಗೆ ಹೊಸ ದಾರಿಯನ್ನು ಕಲ್ಪಿಸಲಾಗಿದೆ. ಈ ದಿಸೆಯಲ್ಲಿ ಈಗಾಗಲೇ ಲೋಹಿಯಾ ಅಧ್ಯಯನ ಪೀಠ, ದಲಿತ ಅಧ್ಯಯನ ಪೀಠ, ಪುರಂದರದಾಸ ಅಧ್ಯಯನ ಪೀಠಗಳನ್ನು ಸ್ಥಾಪಿಸಲಾಗಿದೆ. ಈ ವರ್ಷ ಶಂಬಾ ಜೋಷಿ ಅಧ್ಯಯನ ಪೀಠವನ್ನು ಆರಂಭಿಸಲಾಗಿದೆ. ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಅಧ್ಯಯನ ಪೀಟ, ಕೆರೆ ನೀರಾವರಿ ಅಧ್ಯಯನ ಪೀಠಗಳು ಕೆಲವು ತಿಂಗಳುಗಳಲ್ಲಿ ಆರಂಭವಾಗಲಿದ್ದು ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಜೊತೆಗೆ ಬದುಕಿಗೆ ನೇರವಾಗಿ ಸಂಬಂಧಿಸಿದ ಜ್ವಲಂತ ಸಮಸ್ಯೆಗಳ ವಿಶ್ಲೇಷಣೆ ಮತ್ತು ಪರಿಹಾರಗಳನ್ನು ಕಂಡುಕೊಳ್ಳಲು ದಾರಿ ಮಾಡಿಕೊಡುತ್ತಲಿವೆ. ಇವಲ್ಲದೆ ಸಹಕಾರಿ ಅಧ್ಯಯನ ಪೀಠ, ಪತ್ರಿಕೋದ್ಯಮ ಅಧ್ಯಯನ ಪೀಠ, ಕರ್ನಾಟಕ ಚಲನಚಿತ್ರ ಅಭಿವೃದ್ಧಿ ಅಧ್ಯಯನ ಪೀಠ, ವಿಚಾರ ಸಾಹಿತ್ಯ ಅಧ್ಯಯನ ಪೀಠ, ಜೈನ ಸಂಸ್ಕೃತಿ ಅಧ್ಯಯನ ಪೀಠ, ಕನ್ನಡ ತೆಲುಗು ತೌಲನಿಕ ಅಧ್ಯಯನ ಪೀಠ, ಕನ್ನಡ ತಮಿಳು ತೌಲನಿಕ ಅಧ್ಯಯನ ಪೀಠ, ಕನ್ನಡ ಮಲಯಾಳಂ ತೌಲನಿಕ ಅಧ್ಯಯನ ಪೀಠ, ಕನ್ನಡ ಮರಾಠಿ ತೌಲನಿಕ ಅಧ್ಯಯನ ಪೀಠ ಹಾಗೂ ಕನ್ನಡ ಉರ್ದು ತೌಲನಿಕ ಅಧ್ಯಯನ ಪೀಠಗಳನ್ನು ಸ್ಥಾಪಿಸುವ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಗಾಂಧಿ, ನೆಹರು, ಬುದ್ಧ, ಅಂಬೇಡ್ಕರ್‌ಪೀಠಗಳನ್ನು ಸ್ಥಾಪಿಸುವ ಸಲುವಾಗಿ ವಿಶ್ವವಿದ್ಯಾಲಯ ಧನಸಹಾಯ ಆಯೋಗಕ್ಕೆ ಪ್ರಸ್ತಾವನೆಗಳನ್ನು ಕಳುಹಿಸಲಾಗಿದೆ.

ನಮ್ಮ ವಿಶ್ವವಿದ್ಯಾಲಯದಲ್ಲಿ ಇದುವರೆಗೆ ೩೬ ಜನ ಪಿ.ಎಚ್.ಡಿ. ಪದವಿಯನ್ನು ೪೪ ಜನ ಎಂ.ಫಿಲ್. ಪದವಿಯನ್ನು ಹಾಗೂ ೧೦ ಜನ ಡಿ.ಲಿಟ್ ಪದವಿಯನ್ನು ಪಡೆದಿದ್ದಾರೆ. ಇದುವರೆಗೆ ೨೦೦ ಜನ ಪಿ.ಎಚ್.ಡಿ. ಪದವಿಗಾಗಿ ನೋಂದಣಿ ಮಾಡಿಸಿದ್ದು, ಈ ದಿನ ೧೯ ಜನ ಪಿಎಚ್.ಡಿ. ಪದವಿಯನ್ನು ಮತ್ತು ೨ ಜನ ಡಿ.ಲಿಟ್ ಪದವಿಯನ್ನು ಪಡೆಯಲಿದ್ದಾರೆ.

ಇದುವರೆಗೆ ಸಂಶೋಧನೆಯನ್ನೇ ತನ್ನ ಪ್ರಥಮ ಮತ್ತು ಅಂತಿಮ ಗುರಿಯಾಗಿ ಅವಲಂಬಿಸಿದ್ದ ನಮ್ಮ ವಿಶ್ವವಿದ್ಯಾಲಯ ಇದೀಗ ಶೋಧನೆಯ ಜೊತೆಗೆ ಬೋಧನೆಯ ದಾರಿಯನ್ನು ಒಳಗೊಳ್ಳುತ್ತಿದೆ ಎಂದು ತಿಳಿಸಲು ಸಂತೋಷಿಸುತ್ತೇನೆ.

ಇತರ ವಿಶ್ವವಿದ್ಯಾಲಯಗಳಲ್ಲಿ ಬೋಧಿಸಲಾಗದಿರುವ ಅಸಾಂಪ್ರದಾಯಕವಾದ, ಆದರೆ ಆಧುನಿಕ ಬದುಕಿಗೆ ಅಗತ್ಯವಾದ ಜ್ಞಾನವನ್ನು ಒದಗಿಸುವ ದೂರಶಿಕ್ಷಣ ವಿಧಾನದ ೭ ಡಿಪ್ಲೋಮಾ ಅಧ್ಯಯನಗಳನ್ನು ಈ ವರ್ಷ ಆರಂಭಿಸಲಾಗಿದೆ. ಕರ್ನಾಟಕ ಅಧ್ಯಯನ ಡಿಪ್ಲೋಮಾ, ಆಡಳಿತ ಕನ್ನಡ ಡಿಪ್ಲೋಮಾ, ಕ್ರಿಯಾತ್ಮಕ ಕನ್ನಡ ಡಿಪ್ಲೋಮಾ, ದಲಿತ ಅಧ್ಯಯನ ಡಿಪ್ಲೋಮಾ, ಮಹಿಳಾ ಅಧ್ಯಯನ ಡಿಪ್ಲೋಮಾ, ಜನಪದ ಕಲಾ ಡಿಪ್ಲೋಮಾ ಮತ್ತು ಪುರಾತತ್ವ ಸಂಸ್ಕೃತಿ ಹಾಗೂ ಪ್ರವಾಸೋದ್ಯಮ ಅಧ್ಯಯನ ಡಿಪ್ಲೋಮಾ ತರಗತಿಗಳನ್ನು ಆರಂಭಿಸಲಾಗಿದ್ದು, ಸುಮಾರು ೮೦ ಜನ ವಿದ್ಯಾರ್ಥಿಗಳು ಮೊದಲನೆಯ ವರ್ಷವೇ ವಿವಿಧ ತರಗತಿಗಳಿಗೆ ಪ್ರವೇಶ ಪಡೆದು ಅಧ್ಯಯನ ಮಾಡುತ್ತಿದ್ದಾರೆ. ಬೇರೆ ಬೇರೆ ಉದ್ಯೋಗಗಳಲ್ಲಿದ್ದೂ ಹೊಸ ಜ್ಞಾನ ದಿಗಂತಗಳನ್ನು ದರ್ಶಿಸಬೇಕೆನ್ನುವ, ಸ್ಪರ್ಶಿಸಬೇಕೆನ್ನುವ ಜ್ಞಾನ ದಾಯಿಗಳಿಗೆ ಇದು ಅತ್ಯಂತ ಉಪಯುಕ್ತವಾಗಿದ್ದು, ಪ್ರಥಮ ವರ್ಷದ ಪ್ರತಿಕ್ರಿಯೆ ತುಂಬ ಉತ್ಸಾಹದಾಯಕವಾಗಿದೆ. ತಮ್ಮ ತಮ್ಮ ವಿಷಯಗಳ ಅಧ್ಯಯನ ಮತ್ತು ಸಂಶೋಧನೆಗಳಲ್ಲಿ ನಿರತವಾಗಿದ್ದ ನಮ್ಮ ಬೋಧಕ ವರ್ಗಕ್ಕೆ ಈ ಅಧ್ಯಯನಗಳಿಗೆ ಪಾಠ ಹೇಳುವ, ಪಾಠ ಬರೆಯುವ ಸದಾವಕಾಶ

ದೊರೆತದ್ದರಿಂದ ಅವರ ಚಿಂತನೆ ಮತ್ತು ಪ್ರತಿಭೆಗಳ ವಿಸ್ತರಣಕ್ಕೆ ಹೊಸ ಆಯಾಮ ದೊರೆತಂತಾಗಿದೆ. ಈ ಡಿಪ್ಲೋಮಾ ತರಗತಿಗಳಲ್ಲದೆ ಹಿಂದೂಸ್ತಾನಿ ಮತ್ತು ಕರ್ನಾಟಕ ಸಂಗೀತದಲ್ಲಿ ಪದವಿ ತರಗತಿಗಳೂ ಸಹ ಈ ವರ್ಷ ಪ್ರಾರಂಭವಾಗಿವೆ. ನಮ್ಮ ಬಾದಾಮಿಯ ಕೇಂದ್ರದಲ್ಲಿ ಶಿಲ್ಪಕಲೆ ಮತ್ತು ಚಿತ್ರಕಲೆಗಳಲ್ಲಿ ೫ ವರ್ಷದ ಪದವಿ ತರಗತಿಗಳನ್ನು ಆರಂಭ ಮಾಡಿರುವುದರಿಂದ ಈ ಕಲೆಗಳ ಅಭ್ಯಾಸಿಗಳಿಗೆ ಹಾಗೂ ಈ ಕ್ಷೇತ್ರದಲ್ಲಿ ತಮ್ಮ ವೃತ್ತಿಯನ್ನು ಅರಸಬೇಕೆನ್ನುವವರಿಗೆ ಆಶಾದಾಯಕವಾದ ಮಾರ್ಗವೊಂದು ತೆರೆದಂತಾಗಿದೆ. ಆರಂಭದ ಈ ಪ್ರೋತ್ಸಾಹದಾಯಕ ಪ್ರತಿಕ್ರಿಯೆಯಿಂದಾಗಿ ಮುಂದಿನ ವರ್ಷ ಜಾನಪದ ಸಂಗೀತ, ಜನಪದ ಕರಕುಶಲ ಕಲೆಗಳು, ನಾಟಕ ಕಲೆ, ಸಂವಹನ ಅಧ್ಯಯನ, ಪತ್ರಿಕೋದ್ಯಮ ಡಿಪ್ಲೋಮಾಗಳನ್ನು ತೆರೆಯಲು ಆಲೋಚಿಸಲಾಗಿದೆ. ಹೊಸ ಕಾಲದ ಅಗತ್ಯಗಳಿಗೆ ಮತ್ತು ಅಭೀಪ್ಸೆಗಳಿಗೆ ತಕ್ಕಂತೆ ಪದವಿ ತರಗತಿಗಳಲ್ಲಿ ಹೊಸ ಆವಿಷ್ಕಾರಗಳನ್ನು ಮತ್ತು ನವೀನ ಜ್ಞಾನ ಶಾಖೆಗಳನ್ನು ಅಂತರ್‌ಶಿಸ್ತೀಯವಾಗಿ ಅಧ್ಯಯನ ಮಾಡುವ ಅವಕಾಶವನ್ನು ಒದಗಿಸುವುದು ವಿದ್ಯಾರ್ಥಿಗಳ ಮಾನಸಿಕ ಜ್ಞಾನ ವಿಕಾಸದ ದೃಷ್ಟಿಯಿಂದ ಅತ್ಯವಶ್ಯಕವೆಂಬುದನ್ನು ಮನಗಂಡು ಎಂ.ಎ., (ಅಂತರ್‌ಶಿಸ್ತೀಯ ಅಧ್ಯಯನ), ಎಂ.ಎ., ಪಿ.ಎಚ್.ಡಿ. ೪ ವರ್ಷಗಳ ಸಂಯೋಜಿತ ಅಧ್ಯಯನ ಇವುಗಳನ್ನು ಆರಂಭಿಸುವ ಮೂಲಕ ಹೊಸ ಶಿಸ್ತುಗಳ ಕಲಿಕೆಗೆ ಬಾಗಿಲು ತೆರೆಯಲು ಸಹ ಯೋಜಿಸಲಾಗಿದೆ. ಈ ವರ್ಷ ತೆರೆಯಲಾಗಿರುವ ಹೊಸ ಅಧ್ಯಯನ ವಿಭಾಗಗಳಿಗೆ ಹೊಸ ಅಧ್ಯಾಪಕರನ್ನು ನೇಮಕ ಮಾಡಿಕೊಳ್ಳದೆಯೇ ನಮ್ಮ ವಿಶ್ವವಿದ್ಯಾಲಯದ ಸಂಪನ್ಮೂಲ ವ್ಯಕ್ತಿಗಳ ವಿದ್ವತ್ತನ್ನೇ ಸದುಪಯೋಗಪಡಿಸಿಕೊಳ್ಳಲಾಗುತ್ತಿದೆ ಎಂಬುದನ್ನು ನಾನು ಈ ಸಂದರ್ಭದಲ್ಲಿ ಸಂತೋಷದಿಂದ ತಿಳಿಸಲು ಇಚ್ಚಿಸುತ್ತೇನೆ. ಈಗಾಗಲೇ ವಿಶ್ವವಿದ್ಯಾಲಯದಿಂದ ಕನ್ನಡ ಅಧ್ಯಯನ, ಮಹಿಳಾ ಅಧ್ಯಯನ, ನಮ್ಮ ಕನ್ನಡ, ಚೆಲುವ ಕನ್ನಡ, ಪುಸ್ತಕ ಮಾಹಿತಿ, ವಿಜ್ಞಾನ ಸಂಗಾತಿ ಎಂಬ ಆರು ನಿಯತಕಾಲಿಕೆಗಳನ್ನು ಪ್ರಕಟಿಸಲಾಗುತ್ತಿದ್ದು, ಅವೆಲ್ಲ ಆಯಾ ಕ್ಷೇತ್ರದ ಓದುಗರಿಗೆ ಅತ್ಯಂತ ಪ್ರಿಯವಾಗಿವೆ. ಹಾಗೆಯೇ ವಿಶ್ವವಿದ್ಯಾಲಯದಿಂದ ಶೋಧಿತವಾಗುವ ಹೊಸ ಹೊಸ ಜ್ಞಾನದ ಬೆಳಕಿಂಡಿಗಳಾಗಿಯೂ ಇವು ಕಾರ್ಯನಿರ್ವಹಿಸುತ್ತಿವೆ. ಇವಲ್ಲದೆ ಮೊನ್ನೆಯ ದಶಮಾನೋತ್ಸವ ಸಂದರ್ಭದಲ್ಲಿ ಕರ್ನಾಟಕ ಅಭಿವೃದ್ಧಿ ಅಧ್ಯಯನ, ದ್ರಾವಿಡ ಅಧ್ಯಯನ ಮತ್ತು ಜನಪದ ಕರ್ನಾಟಕ ಎಂಬ ನಿಯತಕಾಲಿಕೆಗಳನ್ನು ಸಿದ್ಧಪಡಿಸಿ ಬಿಡುಗಡೆ ಮಾಡಲಾಗಿದೆ. ಇವು ಆಯಾ ಹೊಸ ಕ್ಷೇತ್ರದ ಸಂಶೋಧಕರ ವಿಶಿಷ್ಟ ಬಗೆಯ ಹೊಸ ಬರಹಗಳನ್ನು ಪ್ರಕಟಿಸುವ ಮೂಲಕ ಕನ್ನಡ ಜ್ಞಾನ ಬಹುಮುಖವಾಗಿ ಅರಳಲು ಸಾಧನವಾಗಿವೆ. ಮುಂದಿನ ವರ್ಷಗಳಲ್ಲಿ ಬುಡಕಟ್ಟು ಕರ್ನಾಟಕ, ಕಲಾ ಕರ್ನಾಟಕ, ನಿಯತಕಾಲಿಕೆಗಳನ್ನು ಪ್ರಕಟಿಸಲು ಯೋಚಿಸಲಾಗುತ್ತಿದೆ. ಇದೇ ವರ್ಷ ಪಿ.ಯು.ಸಿ. ತರಗತಿಯಿಂದ ಹಿಡಿದು ಸ್ನಾತಕೋತ್ತರ ತರಗತಿವರೆಗೆ ವಿದ್ಯಾರ್ಥಿಗಳಿಗೆ ಕನ್ನಡದಲ್ಲಿ ಕಲಿಯಲು ಸಾಧ್ಯವಾಗುವಂತೆ ವಿಜ್ಞಾನ, ತಂತ್ರಜ್ಞಾನ ಮತ್ತು ಮಾನವಿಕಗಳಲ್ಲಿ ಪೂರಕ ಪಠ್ಯಗಳನ್ನು ಪರಿಣಿತರಿಂದ ಬರೆಯಿಸಿ ಪ್ರಕಟಿಸಲು ಪುರಾತತ್ವ ಸಂಸ್ಕೃತಿ ಹಾಗೂ ಪಠ್ಯಪುಸ್ತಕ ವಿಭಾಗವನ್ನು ಮತ್ತು ವಿಜ್ಞಾನ ಲೋಕದ ಅಮಿತ ಸಾಧನೆಗಳನ್ನು ಸಾದರ ಪಡಿಸುವ ವಿಜ್ಞಾನ ಇತಿಹಾಸಕ್ಕೆ ಸಂಬಂಧಿಸಿದ ವಿಜ್ಞಾನ ಇತಿಹಾಸ ವಿಭಾಗವನ್ನು ಆರಂಭಿಸಲಾಗುತ್ತಿದೆ.

ನಮ್ಮ ವಿಶ್ವವಿದ್ಯಾಲಯದ ಅತ್ಯಂತ ಪ್ರಮುಖ ಭಾಗಗಳಲ್ಲಿ ಒಂದಾದ ಪ್ರಸಾರಾಂಗ ಇದುವರೆಗೆ ಬಗೆ ಬಗೆಯ ಜ್ಞಾನ ಕ್ಷೇತ್ರಗಳ ಅರಿವನ್ನು ಸಂಚಯಿಸುವ, ಪ್ರಸಾರ ಮಾಡುವ ಸುಮಾರು ೬೦೦ ಗ್ರಂಥಗಳನ್ನು ಪ್ರಕಟಿಸುವ ಮೂಲಕ ಪ್ರಕಟಣಾ ಇತಿಹಾಸದಲ್ಲಿ ಒಂದು ಹೆದ್ದಾರಿಯನ್ನೇ ತೆರೆದಿದೆ ಎಂಬುದು ಅಭಿಮಾನದ ಸಂಗತಿಯಾಗಿದೆ. ವಿವಿಧ ಜ್ಞಾನ ಶಾಖೆಗಳ ಬಗೆಗಿನ ಪುಸ್ತಕಗಳನ್ನು ಪ್ರಕಟಿಸುವುದಲ್ಲದೆ, ಈ ವಿಶ್ವದಲ್ಲಿ ಸಹಸ್ರಾರು ವರ್ಷಗಳಿಂದ ಮಹಾ ಚಿಂತಕರು, ಜಿಜ್ಞಾಸಕರುಗಳು, ವಿಚಾರವಾದಿಗಳು ನಡೆಸಿದ ಚಿಂತನೆಯ ಫಲವನ್ನು ಶತಮಾನಗಳ ಚಿಂತನೆ ಎಂಬ ಮಾಲೆಯಡಿ ಪ್ರಕಟಿಸಲು, ಕನ್ನಡ ಸಾಹಿತ್ಯ ಚರಿತ್ರೆ, ಇತಿಹಾಸವನ್ನು ೩ ಸಂಪುಟಗಳಲ್ಲಿ ಪ್ರಕಟಿಸಲು ಮತ್ತು ಪರಾಮರ್ಶನ ಗ್ರಂಥ ಮಾಲೆಯ ಮೂಲಕ ಸುಮಾರು ೫೦ ಪುಸ್ತಕಗಳನ್ನು ಪ್ರಕಟಿಸಲು, ಕಾನೂನು ಇಲಾಖೆಯ ನೆರವಿನೊಡನೆ ಸಾಮಾನ್ಯರಿಗೆ ಕಾನೂನು ಎಂಬ ಮಾಲೆಯಲ್ಲಿ ೫೦ ಪುಸ್ತಕಗಳನ್ನು, ಮಹಿಳಾ ಕಲ್ಯಾಣ ಇಲಾಖೆಯ ನೆರವಿನೊಡನೆ ಮಹಿಳಾ ಲೋಕದ ಸಾಧನೆ, ಚಿಂತನೆ ಸಮಸ್ಯೆಗಳನ್ನು ಕುರಿತ ೫೦ ಪುಸ್ತಕಗಳನ್ನು ಪ್ರಕಟಿಸಲು ಕ್ರಮಕೈಗೊಳ್ಳಲಾಗುತ್ತಿದೆ. ಕನ್ನಡ ಪಿಎಚ್.ಡಿ. ವಿವರಣ ಕೋಶ, ಕರ್ನಾಟಕ ಪಿಎಚ್.ಡಿ. ವಿವರಣ ಕೋಶ, ಜಾನಪದ ಸಮಗ್ರ ಸೂಚಿ, ಜಾನಪದ ಅಧ್ಯಯನ ಇತಿಹಾಸ ಹಾಗೂ ಕನ್ನಡದ ಪ್ರಾಚೀನ ಸಂಸ್ಕೃತಿಯ ವಿವಿಧ ನೆಲೆಗಳನ್ನು ಬಿಂಬಿಸುವ ಶಾಸನ ಸಂಪುಟಗಳನ್ನು, ನಿಘಂಟುಗಳನ್ನು ಪ್ರಕಟಿಸುವ ಯೋಜನೆಯನ್ನು

ಹಾಕಿಕೊಳ್ಳಲಾಗಿದೆ. ಜನ ಸಾಮಾನ್ಯರಿಗೆ ತಲುಪುವ ಮಂಟಪ ಮಾಲೆಯ ವಿಶೇಷ ಉಪನ್ಯಾಸಗಳನ್ನೂ ನಡೆಸಲಾಗುತ್ತಿದೆ. ಇದೇ ದಶಮಾನೋತ್ಸವದ ಸಂದರ್ಭದಲ್ಲಿ ಅತ್ಯಂತ ಮಹತ್ತರವಾದ ೨೦ ಹೊಸ ಪುಸ್ತಕಗಳನ್ನು ಮತ್ತು ನಮ್ಮ ಎಲ್ಲ ನಿಯತಕಾಲಿಕೆಗಳ ದಶಮಾನೋತ್ಸವ ವಿಶೇಷ ಸಂಚಿಕೆಗಳನ್ನು ಬಿಡುಗಡೆಗೊಳಿಸಲಾಗಿದೆ. ಕರ್ನಾಟಕದ ಸಮಗ್ರಮುಖ ಚಿಂತನೆ ಮತ್ತು ಸಾಧನೆಗಳನ್ನು ಬಿಂಬಿಸುವ ಕರ್ನಾಟಕ ಸ್ಟಡೀಸ್ ಎಂಬ ಅರ್ಧವಾರ್ಷಿಕ ಪತ್ರಿಕೆಯನ್ನು ಇಂಗ್ಲೀಷ್‌ನಲ್ಲಿ ಪ್ರಕಟಿಸಲು ಎಲ್ಲ ಸಿದ್ಧತೆಗಳು ಮುಗಿದಿದೆ. ಇವಲ್ಲದೆ ವಿಶ್ವವಿದ್ಯಾಲಯ ಪ್ರಕಟಿಸಿರುವ ಕರ್ನಾಟಕ ಚರಿತ್ರೆಯ ೭ ಸಂಪುಟಗಳನ್ನು ಇಂಗ್ಲಿಷ್‌ನಲ್ಲಿ ಪ್ರಕಟಿಸುವ ಹಾಗೂ ಈ ಕನ್ನಡ ಸಂಪುಟಗಳ ವಿದ್ಯಾರ್ಥಿ ಆವೃತ್ತಿಗಳನ್ನು ಹೊರತರುವ ಸಂಕಲ್ಪವನ್ನು ಸಹ ನಾವು ಇಟ್ಟು ಕೊಂಡಿದ್ದೇವೆ. ಕರ್ನಾಟಕದ ಸಮಗ್ರ ಮುಖಗಳ ಸಾಧನಾ ಸೌಂದರ್ಯವನ್ನು ಚಿತ್ರಗಳ ಮೂಲಕ ಪರಿಚಯಿಸುವ ಸಚಿತ್ರ ಕರ್ನಾಟಕ ಸಂಪುಟವನ್ನು ಸಿದ್ಧಪಡಿಸಲಾಗುತ್ತಿದೆ. ಒಟ್ಟಿನಲ್ಲಿ ಕರ್ನಾಟಕದ ಹಾಗೂ ವಿಶ್ವದ ಸಮಗ್ರ ಜ್ಞಾನ ಸಂಪತ್ತನ್ನು ಕನ್ನಡದ ಮೂಲಕ ಕನ್ನಡಿಗರಿಗೆ ದೊರಕಿಸುವ ಮಹದಾಶಯ ನಮ್ಮದು. ಇದನ್ನು ಸಾಕಾರಗೊಳಿಸಲು ಸರ್ಕಾರದ, ಕೇಂದ್ರ ಮಾನವ ಸಂಪನ್ಮೂಲ ಇಲಾಖೆಯ ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಸಂಸತ್ ಸದಸ್ಯರ, ಶಾಸಕರ ಮತ್ತು ಉದಾರಿಗಳಾದ ಸಂಸ್ಕೃತಿ ಶ್ರೀಮಂತರ ಸಹಾಯವನ್ನು ವಿಶ್ವವಿದ್ಯಾಲಯ ಭರವಸೆಯ ಕಣ್ಣುಗಳಿಂದ ನಿರೀಕ್ಷಿಸುತ್ತಿದೆ.

ಮೇಲ್ಕಂಡ ಯೋಜನೆಗಳಲ್ಲದೆ ಸಮಗ್ರ ಕರ್ನಾಟಕವನ್ನು ಅದರೆಲ್ಲ ಪ್ರಕಾಶಮಾನ ಮುಖಗಳೊಂದಿಗೆ ಬಿಂಬಿಸುವ ವಿಸ್ತಾರನೆಲೆಯ 'ಕನ್ನಡ ಲೋಕ' ಎಂಬ ಬೃಹತ್ ವಸ್ತುಸಂಗ್ರಹಾಲಯವನ್ನು ಕನಿಷ್ಟ ೫೦ ಎಕರೆಗಳ ಇಲ್ಲಿನ ಆವರಣದಲ್ಲಿ ಸ್ಥಾಪಿಸಲು ಯೋಜಿಸಲಾಗಿದ್ದು, ವಿವಿಧ ಸಂಪನ್ಮೂಲ ಕ್ಷೇತ್ರಗಳಿಗೆ ಪ್ರಸ್ತಾವನೆಯನ್ನು ಕಳುಹಿಸಲಾಗಿದೆ. ಸರ್ಕಾರದ ಮತ್ತು ಉದಾರಿ ಶ್ರೀಮಂತರ ನೆರವು ಪಡೆದು, ಇದನ್ನೊಂದು ಭಾರತದಲ್ಲೇ ಮೊತ್ತ ಮೊದಲ ಮತ್ತು ಬಹುಮುಖಿ ವಿನ್ಯಾಸದ ಮಾದರಿ ವಸ್ತು ಸಂಗ್ರಹಾಲಯವಾಗಿಸುತ್ತೇವೆ ಎಂದು ಭರವಸೆ ನಮಗಿದೆ.

೭೦೦ ಎಕರೆಗಳ ಭೂವಿಸ್ತಾರವನ್ನು ಹೊಂದಿರುವ ಈ ವಿಶ್ವವಿದ್ಯಾಲಯದ ಪರಿಸರದಲ್ಲಿ ಬೃಹತ್ ಸಂಖ್ಯೆಯಲ್ಲಿ ಸಸ್ಯಗಳನ್ನು ನೆಟ್ಟು ಇಡೀ ವಾತಾವರಣಕ್ಕೆ ಹಸಿರು ಶ್ರೀಮಂತಿಕೆಯ ಶೋಭೆಯನ್ನು ತರಲಾಗುತ್ತಿದೆ. ಈ ವರ್ಷವೇ ಇಲಾಖೆಯ ಮತ್ತು ತೋಟಗಾರಿಕೆ ಇಲಾಖೆಯ ನೆರವಿನೊಡನೆ ೧೦ ಸಾವಿರ ಗಿಡಗಳನ್ನು ನೆಡೆಸಲಾಗಿದೆ. ದಶಮಾನೋತ್ಸವ ವನ, ವಿಜಯ ವನ, ಕುಮಾರ ರಾಮ ಉದ್ಯಾನ, ಚರಕ ವನಗಳನ್ನು ನಿರ್ಮಿಸಲಾಗಿದೆ. ಇದುವರೆಗೆ ನಿರ್ಮಿಸಲಾಗಿದ್ದ ವನಗಳಿಗೆ ಪಂಪವನ, ನೃಪತುಂಗ ವನ, ಹಕ್ಕಬುಕ್ಕ ವನ, ಅಕ್ಷರೋದ್ಯಾನ. ಕದಂಬ ವನ, ಹೊಯ್ಸಳ ವನ, ಚಲುಕ್ಯ ವನ, ಕೃಷ್ಣರಾಜ ವನ, ಮಾನಸ ವನ ಮುಂತಾಗಿ ಕರ್ನಾಟಕದ ಸಂಸ್ಕೃತಿಯನ್ನು ವಿಸ್ತರಿಸಿದ ರಾಜ ಮನೆತನಗಳ ಹೆಸರುಗಳನ್ನು ಇಡುವ ಮೂಲಕ ಇತಿಹಾಸ ಈ ನೆಲದಲ್ಲಿ ಮತ್ತೊಮ್ಮೆ ಕಣ್ತುಂಬುವಂತೆ ಮಾಡಲಾಗಿದೆ. ಇಲ್ಲಿನ ಬೋಧನೆ ಮತ್ತು ಶೋಧನೆ ವಿಭಾಗಗಳ ವಿಸ್ತರಣೆಗಾಗಿ ಹೊಸ ಹೊಸ ಕಟ್ಟಡಗಳನ್ನು ನಿರ್ಮಾಣ ಮಾಡುವ ಯೋಜನೆಯನ್ನು ಹಾಕಿಕೊಳ್ಳಲಾಗಿದ್ದು, 'ಜಕ್ಕಣ್ಣ ಮಂಟಪ'ವನ್ನು ನವೀಕರಿಸಿ ವಿಶಿಷ್ಟ ಕಟ್ಟಡವನ್ನಾಗಿ ರೂಪಿಸಲಾಗಿದೆ. ಅಭಿರುಚಿ ಉಪಹಾರ ಮಂದಿರವನ್ನು ಸ್ಥಾಪಿಸಲಾಗಿದೆ. ದಶಮಾನೋತ್ಸವದ ನೆನಪಿಗಾಗಿ ಸುಮಾರು ೧.೨೫ ಕೋಟಿ ರೂಪಾಯಿ ಅಂದಾಜಿನಲ್ಲಿ 'ದಶಮಾನೋತ್ಸವ ಭವನ'ದ ನಿರ್ಮಾಣವನ್ನು ಆರಂಭಿಸಲಾಗಿದೆ. ಸಮಾಜ ಕಲ್ಯಾಣ ಇಲಾಖೆ ಮಂಜೂರು ಮಾಡಿರುವ ವಿದ್ಯಾರ್ಥಿ ನಿಲಯ ಕಟ್ಟಡ ಇನ್ನೇನು ತಲೆಯೆತ್ತಲಿದೆ. ಸರ್ವಜ್ಞ ಹೆಸರಿನ ಗ್ರಂಥಾಲಯ ಕಟ್ಟಡ ಶೀಘ್ರಗತಿಯಲ್ಲಿ ನಿರ್ಮಾಣವಾಗುತ್ತಿದೆ. ಬಳ್ಳಾರಿ ಜಿಲ್ಲಾ ಪಂಚಾಯತ್, ವೈದ್ಯಕೀಯ ಕೇಂದ್ರವೊಂದನ್ನು ನಿರ್ಮಿಸುವ ಭರವಸೆ ನೀಡಿದೆ. ಬೋಧಕರ ಮತ್ತು ಬೋಧಕೇತರರ ನಿವಾಸಗಳಿಗೆ ಅನುದಾನ ನೀಡಲು ಹೈದ್ರಾಬಾದ್ ಕರ್ನಾಟ ಪ್ರದೇಶ ಅಭಿವೃದ್ಧಿ ಮಂಡಲಿ, ಕರ್ನಾಟಕ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳಿಗೆ ಪ್ರಸ್ತಾವನೆಯನ್ನು ಕಳುಹಿಸಲಾಗಿದೆ. ಈ ಆವರಣಕ್ಕೆ ವಿದ್ಯುತ್ ದೀಪಗಳ ಸೌಕರ್ಯ ಕಲ್ಪಿಸಲು, ರಸ್ತೆಯನ್ನು ಡಾಂಬರೀಕರಣ ಮಾಡಲು ನಮ್ಮ ಸಂಸತ್ ಸದಸ್ಯರು ಮುಂದೆ ಬಂದಿದ್ದಾರೆ. ಇಲ್ಲಿನ ಕಟ್ಟಡಗಳ ನಿರ್ಮಾಣಕ್ಕೆ, ಕುಡಿಯುವ ನೀರಿನ ಯೋಜನೆಗೆ, ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ನೆರವಾಗಲು ನಮ್ಮ ಮಾನ್ಯ ಸಂಸತ್ ಸದಸ್ಯರುಗಳನ್ನು ವಿನಂತಿಸಿಕೊಳ್ಳಲಾಗಿದೆ. ಸನ್ಮಾನ್ಯ ಕೆ.ಸಿ. ಕೊಂಡಯ್ಯ ಅವರು, ಸನ್ಮಾನ್ಯ ಶ್ರೀ ಹೆಚ್.ಜಿ. ರಾಮುಲು ಅವರು ಅನುದಾನದ ಭರವಸೆ ನೀಡಿದ್ದಾರೆ. ಮಾನ್ಯ ಶ್ರೀ ಲಕ್ಷ್ಮಿಸಾಗರ್‌ಅವರು ದಶಮಾನೋತ್ಸವ ನೆನಪಿನ ಕಟ್ಟಡಕ್ಕಾಗಿ ೧೫ ಲಕ್ಷ

ರೂಪಾಯಿಗಳನ್ನು ಮತ್ತು ಯೋಜನಾ ಸಚಿವರಾದ ಶ್ರೀಮತಿ ಸುಮಾ ವಸಂತ್ ಅವರು ೪೦ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಹಾಸನ ರಾಜ್ಯಸಭಾ ಸದಸ್ಯರಾದ ಸನ್ಮಾನ್ಯ ಶ್ರೀ ಎಚ್.ಕೆ. ಜವರೇಗೌಡ ಅವರು ತಮ್ಮ ಜಿಲ್ಲೆಯ ಗ್ರಂಥಾಲಯಗಳಿಗೆ ನಮ್ಮ ವಿಶ್ವವಿದ್ಯಾಲಯ ಪ್ರಕಟಿಸಿರುವ ೨.೫ ಲಕ್ಷ ರೂಪಾಯಿ ಬೆಲೆಯ ಪುಸ್ತಕಗಳನ್ನು ಖರೀದಿಸಿದ್ದಾರೆ. ಜೈನ ಸಂಸ್ಕೃತಿ ಕೇಂದ್ರದ ಸ್ಥಾಪನೆಗಾಗಿ ಶ್ರೀ ಅಭೇರಾಜ ಬಲ್ಡೋಟಾ ಅವರು ೧೧ ಲಕ್ಷ ರೂಪಾಯಿಗಳನ್ನು, ಹೊಂಬುಜ ಮತ್ತು ಶ್ರವಣಬೆಳಗೊಳ ಶ್ರೀಮಠದ ಸ್ವಾಮೀಜಿಗಳು ತಲಾ ೫ ಲಕ್ಷ ರೂಪಾಯಿಗಳನ್ನು ಅನುದಾನವಾಗಿ ನೀಡಲು ಒಪ್ಪಿದ್ದಾರೆ. ಭಗವಾನ್ ಮಹಾವೀರರ ೨೬೦೦ ನೇ ಜಯಂತೋತ್ಸವದ ಕೇಂದ್ರ ಸಮಿತಿ ಈ ಕಟ್ಟಡಕ್ಕೆ ಸಹಾಯ ನೀಡುವ ಭರವಸೆ ನೀಡಿದೆ. ವಿಶ್ವವಿದ್ಯಾಲಯ ಧನ ಸಹಾಯ ಆಯೋಗ ಕಳೆದ ೩ ವರ್ಷಗಳಲ್ಲಿ ೯೦ ಲಕ್ಷ ರೂಪಾಯಿಗಳ ಸಹಾಯ ಧನ ನೀಡಿದ್ದು, ಮುಂದಿನ ವರ್ಷಗಳಲ್ಲಿ ಅದು ಹೆಚ್ಚುವ ಭರವಸೆಯಿದೆ. ಸಂಸ್ಕೃತಿಪ್ರಿಯ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಎಸ್.ಎಂ.ಕೃಷ್ಣ ಅವರು ಹೆಚ್ಚುವರಿಯಾಗಿ ೨೦ ಲಕ್ಷ ರೂಪಾಯಿಗಳ ಅನುದಾನವನ್ನು ವಿಶ್ವವಿದ್ಯಾಲಯಕ್ಕೆ ಈ ವರ್ಷ ನೀಡಿದ್ದಾರೆ. ಮುಂಬವರು ವರ್ಷಗಳಲ್ಲಿ ತಲಾ ೧ ಕೋಟಿ ರೂಪಾಯಿಗಳ ಅಭಿವೃದ್ಧಿ ನಿಧಿ, ಸಂಶೋಧನೆ ನಿಧಿ ಮತ್ತು ಪ್ರಕಟಣಾ ನಿಧಿಗಳನ್ನು ನಮ್ಮ ಶಿಕ್ಷಣ ಮತ್ತು ಸಂಸ್ಕೃತಿ ಪ್ರಿಯರ ಸಹಕಾರದೊಂದಿಗೆ ಸ್ಥಾಪಿಸುವ ಯೋಜನೆಯನ್ನು ವಿಶ್ವವಿದ್ಯಾಲಯ ಹೊಂದಿದೆ.

ಕರ್ನಾಟಕ ಸಮಗ್ರಾಭಿವೃದ್ಧಿಗೆ ಸಂಬಂಧಪಟ್ಟ ಸಾಹಿತ್ಯ ಮತ್ತು ಸಾಹಿತ್ಯೇತರ ವಿಷಯಗಳಲ್ಲಿ ಆಸಕ್ತಿ, ಜಿಜ್ಞಾಸುತನವನ್ನು, ವಿಚಾರಶೀಲತೆಯನ್ನು ಬೆಳೆಸಲು ವಿಚಾರ ಸಂಕಿರಣ, ಕಮ್ಮಟ, ವಿಶೇಷೋಪನ್ಯಾಸ ಮತ್ತು ಬಗೆ ಬಗೆಯ ಸಮಾವೇಶಗಳನ್ನೂ ಸಹ ವಿಶ್ವವಿದ್ಯಾಲಯ ನಡೆಸುತ್ತಿದೆ. ಈ ವರ್ಷ ಮಹಿಳಾ ಸಬಲೀಕರಣ, ಸಮಾವೇಶ, ದೇಶೀ ಸಮ್ಮೇಳನ, ಸಂಶೋಧನಾ ಸಮಾವೇಶ, ದಾಸ ಸಂಸ್ಕೃತಿ ಸಮಾವೇಶ ಮುಂತಾದ ರಾಜ್ಯ ಮಟ್ಟದ ಸಮಾವೇಶಗಳನ್ನು ಸ್ಥಳೀಯರ ನೆರವಿನೊಡನೆ ಹಮ್ಮಿಕೊಂಡು ನಮ್ಮ ಈ ವಿಶ್ವವಿದ್ಯಾಲಯ ನಾಡಿನ ಜನ ಜೀವನದುದ್ದಕ್ಕೂ ಹಬ್ಬಿಕೊಳ್ಳಲು ನಿರಂತರ ಪ್ರಯತ್ನ ಮಾಡುತ್ತಿದೆ.

ನಮ್ಮ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದ ಹಲವು ಲೇಖಕರು ಇದುವರೆಗೆ ಹತ್ತಾರು ವಿಶಿಷ್ಟ ಪ್ರಶಸ್ತಿಗಳನ್ನು ತಮ್ಮ ಕೃತಿಗಳಿಗಾಗಿ ಪಡೆದಿರುವುದು ಮತ್ತು ಈ ವರ್ಷ ಶ್ರೀಮತಿ ಎಚ್. ನಾಗವೇಣಿ ಅವರು ಸಂ.ಶೀ. ಭೂಸನೂರ ಮಠ ಪ್ರಶಸ್ತಿಯನ್ನು, ಡಾ. ವಿರೂಪಾಕ್ಷ ಪೂಜಾರಹಳ್ಳಿ ಅವರು ವೀರನಾಯಕ ಪ್ರಶಸ್ತಿಯನ್ನು, ಡಾ. ವಿರೂಪಾಕ್ಷ ನುಗಡೋಣಿ ಅವರು ಉಗ್ರಾಣ ಪ್ರಶಸ್ತಿಯನ್ನು ಪಡೆದಿರುವುದು ನಮ್ಮ ಹೆಮ್ಮೆಗೆ ಕೋಡು ಮೂಡಿಸಿದೆ. ಡಾ. ರಹಮತ್ ತರೀಕೆರೆ ಅವರು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ಮತ್ತು ಡಾ. ಎಸ್.ಸಿ. ಪಾಟೀಲ್ ಅವರು ಲಲಿತಕಲಾ ಅಕಾಡೆಮಿಗೆ ಸದಸ್ಯರಾಗಿ ಮತ್ತು ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರು ಕನ್ನಡ ಪುಸ್ತಕ ಪ್ರಾಧಿಕರದ ಅಧ್ಯಕ್ಷರಾಗಿ ನೇಮಕಗೊಂಡು ನಮ್ಮ ವಿಶ್ವವಿದ್ಯಾಲಯಕ್ಕೆ ಹೆಸರು ತಂದಿದ್ದಾರೆ.

ವಿಶ್ವವಿದ್ಯಾಲಯದ ಇದುವರೆಗೆ ಪ್ರಗತಿಗೆ ನೈತಿಕವಾಗಿ, ಸಂಪತ್ತಿಕವಾಗಿ ಸಾಂಸ್ಕೃತಿಕವಾಗಿ ಮತ್ತು ಶೈಕ್ಷಣಿಕವಾಗಿ ನೆರವು ನೀಡಿದ ಔದಾರ್ಯ ನಿಧಿಗಳಾದ ಎಲ್ಲ ಮಹನೀಯರನ್ನು, ಇದರ ಅಭಿವೃದ್ಧಿಯ ಬಗ್ಗೆ ಆಶಾವಾದಿಗಳಾಗಿದ್ದು, ಸೃಜನಶೀಲ ಮತ್ತು ಕ್ರಿಯಾಶೀಲ ಸಲಹೆಗಳನ್ನು ನೀಡುತ್ತಿರುವ ಎಲ್ಲ ಹಿರಿಯರನ್ನು ಈ ಸಂದರ್ಭದಲ್ಲಿ ವಿಶೇಷವಾಗಿ ನೆನೆಯುತ್ತ ಅವರಿಗೆ ನೂರು ನೂರು ನಮನಗಳನ್ನು ಅರ್ಪಿಸುತ್ತಿದ್ದೇನೆ. ಹಾಗೆಯೇ ಕರ್ನಾಟಕ ಸರ್ಕಾರ ಕನ್ನಡ ನಾಡಿನ ಸಾಂಸ್ಕೃತಿಕ ಜೀವನಾಡಿಯಾಗಿರುವ ಈ ವಿಶ್ವವಿದ್ಯಾಲಯ ಮತ್ತಷ್ಟು ಉತ್ಕೃಷ್ಟವಾಗಲು ಪ್ರತಿವರ್ಷ ಕನಿಷ್ಟ ೬ ಕೋಟಿ ರೂಪಾಯಿಗಳ ಅನುದಾನವನ್ನು ನೀಡಬೇಕೆಂದು ಮತ್ತು ನಮ್ಮ ಶಿಕ್ಷಣ ತಜ್ಞರು ಹಾಗೂ ಆಡಳಿತ ದಕ್ಷರು ಆದ ಉನ್ನತ ಶಿಕ್ಷಣ ಸಚಿವರು ಇದನ್ನು ಪೂರೈಸಿ ಕೊಡಬೇಕೆಂದು ಭಿನ್ನವಿಸುತ್ತೇನೆ.

ಈ ಎಲ್ಲ ಕ್ಷೇತ್ರಗಳಲ್ಲಿ ಕನ್ನಡ ವಿಶ್ವವಿದ್ಯಾಲಯ ನಡೆದು ಬಂದಿರುವ ದಾರಿ ವಿಶಿಷ್ಟವಾದುದಾಗಿದೆ. ಆದರೆ, ನಾವು ಕ್ರಮಿಸಬೇಕಾದ ಹಾದಿ ಸಾಕಷ್ಟು ದೀರ್ಘವಾಗಿದೆ. ಮತ್ತು ಮುಟ್ಟಬೇಕಾದ ಸಾಧನೆಯ ಶಿಖರಗಳು ಇನ್ನೂ ನೂರಾರಿವೆ ಎಂಬುದನ್ನು ವಿನಯಪೂರ್ವಕವಾಗಿ ಭಿನ್ನವಿಸಿಕೊಳ್ಳುತ್ತೇನೆ. ಈ ವರ್ಷ ನಮ್ಮ ಕರೆಗೆ ಓಗೊಟ್ಟು ನಾಡಿನ ಶ್ರೇಷ್ಠ ಪ್ರಶಸ್ತಿಯಾದ ನಾಡೋಜ ಪ್ರಶಸ್ತಿಯನ್ನು ಸ್ವೀಕರಿಸಲು ಬಂದಿರುವ ಕನ್ನಡದ ಹಿರಿಮೆಯ ಕವಿ, ಶ್ರೇಷ್ಠ ಚಿಂತಕ ಮತ್ತು ಪ್ರಬುದ್ಧ ಪ್ರಾಧ್ಯಾಪಕ, ನೂರಾರು ಲೇಖಕರನ್ನು, ವಿಚಾರವಂತರನ್ನು ತಮ್ಮ ಕಮ್ಮಟದಲ್ಲಿ

ರೂಪಿಸಿದ ಆಚಾರ್ಯ ಶಿಲ್ಪಿ ಡಾ. ಜಿ.ಎಸ್. ಶಿವರುದ್ರಪ್ಪ ಅವರನ್ನು ಮತ್ತು ಸಮಾಜದ ಅತ್ಯಂತ ತಳವರ್ಗದಲ್ಲಿ ಹುಟ್ಟಿ ತಮ್ಮ ಅವಿರತ ಸಾಧನೆಯ ಮೂಲಕ ಭರತನಾಟ್ಯ ಕ್ಷೇತ್ರದ ಅನುಪಮ ಕಲಾವಿದೆ ಎನಿಸಿದ ಕನ್ನಡ ನಾಡಿಗೆ ಕೀರ್ತಿ ತಂದಿರುವ ಡಾ. ವೆಂಕಟಲಕ್ಷ್ಮಮ್ಮ ಅವರನ್ನು ಹಾಗೂ ಹಿರಿಯರ ಜಾನಪದ ತಜ್ಞ, ಸಂಸ್ಕೃತಿ ಚಿಂತಕ ಮಾನ್ಯ ಶ್ರೀ ಮುದೇನೂರು ಸಂಗಣ್ಣ ಅವರನ್ನು ವಿಶ್ವವಿದ್ಯಾಲಯದ ಪರವಾಗಿ ಕನ್ನಡ ನಾಡಿನ ಸಮಸ್ತ ಸಂಸ್ಕೃತಿ ಚಿಂತಕರ ಪರವಾಗಿ ಈ ವಿಶಿಷ್ಟ ಸಮಾರಂಭಕ್ಕೆ ಮತ್ತೊಮ್ಮೆ ಸ್ವಾಗತಿಸುತ್ತೇನೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಪ್ರಗತಿಗೆ ಮೂಲ ಸೆಲೆಯಾಗಿರುವ ಸಮಸ್ತರನ್ನು ಮತ್ತು ಇಲ್ಲಿ ಉಪಸ್ಥಿತರಿರುವ ಸರ್ವರನ್ನು ವಿಶ್ವವಿದ್ಯಾಲಯದ ನನ್ನ ಎಲ್ಲ ಸಹೋದ್ಯೋಗಿಗಳ, ಆಡಳಿತ ಮಂಡಳಿ ಮತ್ತು ಕಾರ್ಯಕಾರಿ ಸಮಿತಿಯ ಪರವಾಗಿ ಮತ್ತು ವೈಯಕ್ತಿಕವಾಗಿ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

೧೮ ಡಿಸೆಂಬರ್ ೨೦೦೧

# ೮. ಶೋಧನೆ-ಬೋಧನೆ ಅಭಿವೃದ್ಧಿ

ಕೋಟಿ ಕೋಟಿ ಕನ್ನಡಿಗರ ಹಲವು ವರ್ಷಗಳ ಅಭೀಪ್ಸೆ ಮತ್ತು ಪ್ರಯತ್ನಗಳಿಂದಾಗಿ ಈ ಮಹತ್ವದ ಐತಿಹಾಸಿಕ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಕನ್ನಡ ವಿಶ್ವವಿದ್ಯಾಲಯ ಆರಂಭಗೊಂಡು ಇದೀಗ ೧೧ ವರ್ಷಗಳು ತುಂಬುತ್ತಿವೆ. ಈ ಸಂತೋಷದ, ಸಂಭ್ರಮದ ಸಂದರ್ಭದಲ್ಲಿ ಜರುಗುತ್ತಿರುವ ೧೧ನೆಯ ನುಡಿಹಬ್ಬಕ್ಕೆ ಆಗಮಿಸಿರುವ ಘನತೆವೆತ್ತ ಕರ್ನಾಟಕದ ರಾಜ್ಯಪಾಲರೂ ಕುಲಾಧಿಪತಿಗಳೂ, ಆಡಳಿತದ ನಾನಾ ಶ್ರೇಣಿಗಳಲ್ಲಿ ಅಪುರೂಪದ ದಕ್ಷತೆಯನ್ನು ಮೆರೆದು ಸರ್ವರ ಗೌರವಕ್ಕೆ ಪಾತ್ರರಾದ ಆದರಣೀಯ ಶ್ರೀ ಟಿ.ಎನ್. ಚತುರ್ವೇದಿ ಅವರೇ, ವಿಶ್ವ ವಿದ್ಯಾಲಯಗಳ ಸಮ ಕುಲಾಧಿಪತಿಗಳೂ ಶ್ರೇಷ್ಠ ಶಿಕ್ಷಣ ತಜ್ಞರೂ ಮತ್ತು ದಕ್ಷ ಆಡಳಿತಗಾರರು ಆದ ಸನ್ಮಾನ್ಯ ಡಾ. ಜಿ. ಪರಮೇಶ್ವರ ಅವರೇ, ನಮ್ಮ ವಿಶ್ವವಿದ್ಯಾಲಯದ ಪ್ರತಿಷ್ಠಿತ ನಾಡೋಜ ಗೌರವ ಪದವಿ ವಿಭೂಷಿತರಾಗಲಿರುವ ಅಂತಾರಾಷ್ಟ್ರೀಯ ಖ್ಯಾತಿಯ ವಿಜ್ಞಾನಿ, ಕರ್ನಾಟಕದ ಸುಪುತ್ರ ಡಾ. ಸಿ.ಎನ್.ಆರ್. ರಾವ್ ಅವರೇ, ಕನ್ನಡ ಕಂಡ ಅಪುರೂಪದ ಭಾವಶೀಲ ಮತ್ತು ಚಿಂತನಶೀಲ ಕವಿವರ್ಯರಾದ, ಪಂಪ ಪ್ರಶಸ್ತಿ ವಿಜೇತ ಶ್ರೀ ಚೆನ್ನವೀರ ಕಣವಿ ಅವರೇ ಮತ್ತು ಕರ್ನಾಟಕ ಆಡಳಿತದ ನಾನಾ ಕ್ಷೇತ್ರಗಳಲ್ಲಿ ಅರ್ಪಣಾ ಮನೋಧರ್ಮದ ಜನಸಮ್ಮುಖಿ ಆಡಳಿತವನ್ನು ನಡೆಸಿ ಖ್ಯಾತರಾದ ಹಾಗೂ ಕರ್ನಾಟಕ ಜಾನಪದ ಜಗತ್ತಿನಲ್ಲಿ ಸುಮಾರು ನಾಲ್ಕು ದಶಕಗಳ ಅವಿಶ್ರಾಂತವಾದ ಅನನ್ಯವಾದ ಸೇವೆಯನ್ನು ಸಲ್ಲಿಸಿ ಏಷಿಯಾದಲ್ಲಿ ಅತ್ಯಂತ ವಿಶಿಷ್ಟವಾದ ಜಾನಪದ ಲೋಕ ಎಂಬ ಅನನ್ಯ ವಸ್ತು ಸಂಗ್ರಹಾಲಯವನ್ನು ನಿರ್ಮಿಸಿ ಕರ್ನಾಟಕಕ್ಕೆ ಕೀರ್ತಿ ತಂದಿರುವ ಸನ್ಮಾನ್ಯ ಶ್ರೀ ಎಚ್.ಎಲ್.ನಾಗೇಗೌಡ ಅವರೇ, ಗೌರವಾನ್ವಿತ ಅತಿಥಿ ಬಂಧುಗಳೇ, ಶಾಸಕರೇ, ನಮ್ಮ ವಿಶ್ವವಿದ್ಯಾಲಯದ ಕಾರ್ಯಕಾರಿ ಮತ್ತು ಆಡಳಿತ ಮಂಡಳಿಯ ಸನ್ಮಾನ್ಯ ಸದಸ್ಯರೇ, ಈ ಅನನ್ಯ ವಿಶ್ವವಿದ್ಯಾಲಯದ ಕ್ಷಿಪ್ರ ಪ್ರಗತಿಯಲ್ಲಿ ಕ್ರಿಯಾಪೂರ್ಣವಾದ ಪಾತ್ರವನ್ನು ವಹಿಸಿದ್ದ ಎಲ್ಲ ಮಹನೀಯರೇ, ಮಹಿಳೆಯರೇ, ಸರ್ವ ಸುದ್ದಿ ಮಾಧ್ಯಮಗಳ ಆತ್ಮೀಯ ಗೆಳೆಯರೇ ಹಾಗೂ ಈ ವಾರ್ಷಿಕ ಪದವಿ ಪ್ರಧಾನ ಸಮಾರಂಭದಲ್ಲಿ ಭಾಗಿಗಳಾಗಿ ಪಿಎಚ್.ಡಿ., ಎಂ.ಫಿಲ್, ಮತ್ತು ಡಿ.ಲಿಟ್. ಪದವಿಗಳನ್ನು ಪಡೆಯಲಿರುವ ಎಲ್ಲ ವಿದ್ವಾಂಸರೆ, ತಮ್ಮೆಲ್ಲರನ್ನೂ ಈ ವಿಶಿಷ್ಟ ಸಮಾರಂಭಕ್ಕೆ ಗೌರವಪೂರ್ವಕವಾಗಿ ಸ್ವಾಗತಿಸುತ್ತಿದ್ದೇನೆ.

ತಮ್ಮಗೆಲ್ಲರಿಗೂ ತಿಳಿದಿರುವಂತೆ ನಮ್ಮ ಈ ಕನ್ನಡ ವಿಶ್ವವಿದ್ಯಾಲಯ ಭಾರತದಲ್ಲೇ ಒಂದು ಅನನ್ಯ ವಿಶಿಷ್ಟವಾದ ವಿಶ್ವವಿದ್ಯಾಲಯವಾಗಿದೆ. ತನ್ನ ಪರಿಸರದ ಮತ್ತು ಮೂಲದ ದೇಶೀಯ ಸಂಸ್ಕೃತಿಯನ್ನು ಎಲ್ಲ ನಿಟ್ಟುಗಳಲ್ಲಿ ಸಂರಕ್ಷಿಸುತ್ತಲೇ, ಅಭಿವೃದ್ಧಿ ಪಡಿಸುತ್ತಲೇ ರಾಷ್ಟ್ರದ ಮತ್ತು ವಿಶ್ವದ ಎಲ್ಲ ಜ್ಞಾನ ವಿಜ್ಞಾನಗಳ ಬೆಳಕುಗಳನ್ನು ತನ್ನೊಳಗೆ ಆಹ್ವಾನಿಸುತ್ತ, ತನ್ನಲ್ಲಿ ಸಂಲಗ್ನಗೊಳಿಸುತ್ತ, ಅದರ ಫಲಿತಗಳನ್ನು ದಿಕ್ಕು ದಿಕ್ಕಿಗೆ ಎತ್ತಿಹಿಡಿಯುವ ಮಹಾನ್ ಕಾಯಕದೊಡನೆ ಈ ವಿಶ್ವವಿದ್ಯಾಲಯ ಆರಂಭವಾಗಿದೆ. ಕನ್ನಡ ಪ್ರಜ್ಞೆಯನ್ನು ವಿಶ್ವ ಪ್ರಜ್ಞೆಯನ್ನಾಗಿಸಿ ಮತ್ತು ವಿಶ್ವ ಪ್ರಜ್ಞೆಯನ್ನು ಕನ್ನಡ ಪ್ರಜ್ಞೆಯನ್ನಾಗಿಸಿ ಕನ್ನಡ ಭಾಷೆಯ ಮೂಲಕ ಕನ್ನಡಿಗರಿಗೆ ದಕ್ಕಿಸಿ ಕೊಡುವ ವಿಶಿಷ್ಟ ಉನ್ನತ ಧ್ಯೇಯದೊಡನೆ

ಆರಂಭವಾದ ಈ ವಿಶ್ವವಿದ್ಯಾಲಯ ತನ್ನ ಈ ಗುರುತರ ಹೊಣೆಯನ್ನು ಧಾರಣ ಮಾಡಿಕೊಂಡು ಈ ೧೧ ವರ್ಷಗಳ ಅವಧಿಯನ್ನು ಸಾರ್ಥಕವಾಗಿ ಕ್ರಮಿಸಿದೆ ಎಂದು ತಿಳಿಸಲು ಸಂತೋಷಿಸುತ್ತೇನೆ. ಕನ್ನಡ ನಾಡನ್ನು ಕನ್ನಡ ವಿಶ್ವವಿದ್ಯಾಲಯದಲ್ಲಿ ನೋಡು ಮತ್ತು ಕನ್ನಡ ವಿಶ್ವವಿದ್ಯಾಲಯ ನೋಡಿದಲ್ಲದೆ ಸಮಗ್ರ ಕರ್ನಾಟಕದ ವಿಶಿಷ್ಟ ದರ್ಶನ ಪರಿಪೂರ್ಣವಾಗದು ಎಂಬಂತೆ ಈ ಮಹಾನ್ ಸಂಸ್ಥೆಯನ್ನು ರೂಪುಗೊಳಿಸುವ ಅರ್ಥಪೂರ್ಣ ದೀಕ್ಷೆಯನ್ನು ನಾವು ವಹಿಸಿದ್ದೇವೆ.

ನಮ್ಮ ವಿಶ್ವವಿದ್ಯಾಲಯದಲ್ಲಿ ಕನ್ನಡ ಭಾಷಾಭಿವೃದ್ಧಿ, ಕನ್ನಡ ಭಾಷೆ ಮತ್ತು ಸಾಹಿತ್ಯ, ದ್ರಾವಿಡ ಸಂಸ್ಕೃತಿ ಅಧ್ಯಯನ, ಮಹಿಳಾ ಅಧ್ಯಯನ, ಅಭಿವೃದ್ಧಿ ಅಧ್ಯಯನ, ಭಾಷಾಂತರ ಅಧ್ಯಯನ, ಜಾನಪದ, ಬುಡಕಟ್ಟು, ಶಾಸನ, ಹಸ್ತಪ್ರತಿ, ಇತಿಹಾಸ, ಪುರಾತತ್ವ, ವಿಜ್ಞಾನ ಇತಿಹಾಸ, ಸಂಗೀತ ಮತ್ತು ನೃತ್ಯ, ಚಿತ್ರಕಲೆ, ಶಿಲ್ಪಕಲೆ ವಿಭಾಗಗಳು ಅಸ್ತಿತ್ವದಲ್ಲಿದ್ದು, ತಮ್ಮ ತಮ್ಮ ವಿಷಯಗಳಲ್ಲಿ ವಿಶಿಷ್ಟವೂ ನವೀನವೂ ಆದ ಸಂಶೋಧನೆಗಳನ್ನು ಕೈಗೊಂಡಿವೆ.

ಮಾತೆಂಬುದು ಜ್ಯೋತಿರ್ಲಿಂಗ ಎಂಬ ಧ್ಯೇಯ ವಾಕ್ಯವನ್ನು ಧಾರಣೆ ಮಾಡಿರುವ ನಮ್ಮ ವಿಶ್ವವಿದ್ಯಾಲಯ ಕನ್ನಡ ಭಾಷೆಯನ್ನು ಸಮಗ್ರ ಕನ್ನಡಿಗರ ಬದುಕನ್ನು ಕಟ್ಟಿಕೊಡುವಂತೆ ಸಮರ್ಥಗೊಳಿಸುವ ಮತ್ತು ಕನ್ನಡ ಬದುಕು ವಿಶ್ವ ವಿಸ್ತೃತವಾಗುವಂತೆ ಮಾಡುವ ಗುರಿಗಳನ್ನು ಮುಟ್ಟುವ ದಾರಿಯಲ್ಲಿ ಆಶಾದಾಯಕವಾಗಿ ಕ್ರಮಿಸುತ್ತದೆ. ಇದರಿಂದಾಗಿ ಕನ್ನಡ ಭಾಷೆ, ಸಾಹಿತ್ಯ, ಇತಿಹಾಸ, ಸಂಸ್ಕೃತಿ, ಜಾನಪದ, ಬುಡಕಟ್ಟು ಮುಂತಾದ ನೆಲೆಗಳಲ್ಲಿ ಕಣ್ಣು ಕೋರೈಸುವ ಹೊಸ ಫಲಿತಗಳನ್ನು ಹಡೆಯುತ್ತ, ಸಮಗ್ರ ಕನ್ನಡದ ಸಮೃದ್ಧಿಯನ್ನು ಹೆಚ್ಚಿಸುತ್ತಿದೆ. ಮೇಲೆ ಉಲ್ಲೇಖಿಸಿದ ವಿಭಾಗಗಳಲ್ಲದೆ ವಿಶಿಷ್ಟ ಕ್ಷೇತ್ರದ ಅಧ್ಯಯನಕ್ಕೆ ಒತ್ತುಕೊಡುವ ಅಧ್ಯಯನ ಪೀಠಗಳನ್ನು ಪ್ರಾರಂಭಿಸುವ ಮೂಲಕ ಆ ಕ್ಷೇತ್ರದ ಸೂಕ್ಷ್ಮವಾದ ಅಧ್ಯಯನ, ಸಂಶೋಧನೆ ಮತ್ತು ಪ್ರಕಟಣೆಗಳಿಗೆ ಹೊಸ ದಾರಿಯನ್ನು ಕಲ್ಪಿಸಲಾಗಿದೆ. ಈ ದಿಸೆಯಲ್ಲಿ ಈಗಾಗಲೇ ಲೋಹಿಯಾ ಅಧ್ಯಯನ ಪೀಠ, ದಲಿತ ಅಧ್ಯಯನ ಪೀಠ, ಪುರಂದರದಾಸ ಅಧ್ಯಯನ ಪೀಠ, ಡಾ. ಶಂಬಾ ಜೋಶಿ ಅಧ್ಯಯನ ಪೀಠ ಮತ್ತು ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಅಧ್ಯಯನ ಪೀಠಗಳನ್ನು ಸ್ಥಾಪಿಸಲಾಗಿದೆ. ಈ ವರ್ಷ ವಾಲ್ಮೀಕಿ ಅಧ್ಯಯನ ಪೀಠವನ್ನು ಸರ್ಕಾರ ಮಂಜೂರು ಮಾಡಿದ್ದು, ಮುಂದಿನ ತಿಂಗಳು ಅದು ಉದ್ಘಾಟನೆಗೊಳ್ಳುತ್ತಿದೆ. ಈ ಪೀಠಗಳು ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಜೊತೆಗೆ ಬದುಕಿಗೆ ನೇರವಾಗಿ ಸಂಬಂಧಿಸಿದ ಜ್ವಲಂತ ಸಮಸ್ಯೆಗಳ ವಿಶ್ಲೇಷಣೆ ಮತ್ತು ಪರಿಹಾರಗಳನ್ನು ಕಂಡುಕೊಳ್ಳಲು ದಾರಿ ಮಾಡಿಕೊಡುತ್ತಲಿವೆ. ಇವಲ್ಲದೆ ದೊಡ್ಡಾಟದ ಅಧ್ಯಯನ ಪೀಠ, ಪತ್ರಿಕೋದ್ಯಮ ಅಧ್ಯಯನ ಪೀಠ, ವಚನ ಸಂಸ್ಕೃತಿ ಅಧ್ಯಯನ ಪೀಠ, ಜೈನ ಸಂಸ್ಕೃತಿ ಅಧ್ಯಯನ ಕೇಂದ್ರ, ಬೌದ್ಧ ಸಂಸ್ಕೃತಿ ಅಧ್ಯಯನ ಕೇಂದ್ರ, ಕನ್ನಡ ತೆಲುಗು ತೌಲನಿಕ ಅಧ್ಯಯನ ಪೀಠ, ಕನ್ನಡ ತಮಿಳು ತೌಲನಿಕ ಅಧ್ಯಯನ ಪೀಠ, ಕನ್ನಡ ಮಲಯಾಳಂ ತೌಲನಿಕ ಅಧ್ಯಯನ ಪೀಠ, ಕನ್ನಡ ಮರಾಠಿ ತೌಲನಿಕ ಅಧ್ಯಯನ ಪೀಠ ಹಾಗೂ ಕನ್ನಡ ಉರ್ದು ತೌಲನಿಕ ಅಧ್ಯಯನ ಪೀಠ, ಮಲೆನಾಡು ಸಂಸ್ಕೃತಿ ಅಧ್ಯಯನ ಪೀಠ, ಹಾಗೂ ಕುವೆಂಪು ಅಧ್ಯಯನ ಪೀಠ, ಹಕ್ಕಬುಕ್ಕ ಅಧ್ಯಯನ ಪೀಠಗಳನ್ನು ಸ್ಥಾಪಿಸುವ ಬಗ್ಗೆ ತೀವ್ರವಾದ ಪ್ರಯತ್ನವನ್ನು ಮಾಡಲಾಗುತ್ತಿದೆ. ಗಾಂಧಿ ಹಾಗೂ ನೆಹರು ಅಧ್ಯಯನ ಪೀಠಗಳನ್ನು ಸ್ಥಾಪಿಸುವ ಸಲುವಾಗಿ ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಸಹಾಯವನ್ನು ಕೋರಲಾಗಿದೆ.

ಇದುವರೆಗೆ ನಮ್ಮ ವಿಶ್ವವಿದ್ಯಾಲಯದಲ್ಲಿ ೫೭ ವಿದ್ಯಾರ್ಥಿಗಳು ಪಿ.ಎಚ್.ಡಿ. ಪದವಿಯನ್ನು, ೪೪ ವಿದ್ಯಾರ್ಥಿಗಳು ಎಂ.ಫಿಲ್. ಪದವಿಯನ್ನು ಹಾಗೂ ೧೩ ಜನ ಡಿ.ಲಿಟ್ ಪದವಿಯನ್ನು ಪಡೆದಿದ್ದಾರೆ. ಇದುವರೆಗೆ ೨೦೦ ಜನ ಪಿ.ಎಚ್.ಡಿ. ನೋಂದಣಿ ಮಾಡಿಸಿದ್ದು, ಈ ದಿನ ೨೪ ಜನ ಪಿಎಚ್.ಡಿ. ಪದವಿ ಮತ್ತು ೩ ಜನ ಡಿ.ಲಿಟ್ ಪದವಿ ಹಾಗೂ ೨೧ ಜನ ಎಂ.ಫಿಲ್. ಪದವಿಯನ್ನು ಪಡೆಯಲಿದ್ದಾರೆ. ಈ ವಿಶ್ವವಿದ್ಯಾಲಯದ ಇತಿಹಾಸದಲ್ಲೇ ಇದು ದೊಡ್ಡ ಸಂಖ್ಯೆಯಾಗಿದ್ದು, ಪ್ರೌಢ ಸಂಶೋಧನಾಸಕ್ತರ, ಗಮನ, ಗೌರವಗಳನ್ನು ಇದು ಅಧಿಕ ಪ್ರಮಾಣದಲ್ಲಿ ಗಳಿಸಿಕೊಳ್ಳುತ್ತಿರುವುದರ ದ್ಯೋತಕವಾಗಿದೆ.

ಇದುವರೆಗೆ ಸಂಶೋಧನೆಯನ್ನೇ ತನ್ನ ಪ್ರಥಮ ಮತ್ತು ಅಂತಿಮ ಗುರಿಯಾಗಿ ಅವಲಂಬಿಸಿದ್ದ ನಮ್ಮ ವಿಶ್ವವಿದ್ಯಾಲಯ ಇದೀಗ ಶೋಧನೆಯ ಜೊತೆಗೆ ಬೋಧನೆಯ ದಾರಿಯನ್ನು ಒಳಗೊಳ್ಳುತ್ತಿದೆ ಎಂದು ತಿಳಿಸಲು ಸಂತೋಷಿಸುತ್ತೇನೆ. ಇತರ ವಿಶ್ವವಿದ್ಯಾಲಯಗಳಲ್ಲಿ

ಬೋಧಿಸಲಾಗದಿರುವ ಅಸಾಂಪ್ರದಾಯಕವಾದ, ಆದರೆ ಆಧುನಿಕ ಬದುಕಿಗೆ ಅಗತ್ಯವಾದ ಜ್ಞಾನವನ್ನು ಒದಗಿಸುವ ದೂರಶಿಕ್ಷಣ ವಿಧಾನದ ೭ ಡಿಪ್ಲೋಮಾ ಅಧ್ಯಯನಗಳನ್ನು ಕಳೆದ ವರ್ಷ ಆರಂಭಿಸಲಾಗಿದೆ. ಕರ್ನಾಟಕ ಅಧ್ಯಯನ ಡಿಪ್ಲೋಮಾ, ಆಡಳಿತ ಕನ್ನಡ ಡಿಪ್ಲೋಮಾ, ಕ್ರಿಯಾತ್ಮಕ ಕನ್ನಡ ಡಿಪ್ಲೋಮಾ, ದಲಿತ ಅಧ್ಯಯನ ಡಿಪ್ಲೋಮಾ, ಮತ್ತು ಪುರಾತತ್ವ, ಸಂಸ್ಕೃತಿ, ಮಹಿಳಾ ಅಧ್ಯಯನ ಡಿಪ್ಲೋಮಾ, ಜನಪದ ಕಲಾ ಡಿಪ್ಲೋಮಾ ಮತ್ತು ಪ್ರವಾಸೋದ್ಯಮ ಅಧ್ಯಯನ ಡಿಪ್ಲೋಮಾ ತರಗತಿಗಳನ್ನು ಆರಂಭಿಸಲಾಗಿದ್ದು, ಸುಮಾರು ೮೦ ಜನ ವಿದ್ಯಾರ್ಥಿಗಳು ಮೊದಲನೆಯ ವರ್ಷವೇ ವಿವಿಧ ತರಗತಿಗಳಿಗೆ ಪ್ರವೇಶ ಪಡೆದಿದ್ದು ಈಗ ಅವುಗಳಿಗೆ ಸಂಬಂಧಿಸಿದ ಪರೀಕ್ಷೆಗಳು ನಡೆಯುತ್ತಿವೆ. ಬೇರೆ ಬೇರೆ ಉದ್ಯೋಗಗಳಲ್ಲಿದ್ದೂ ಹೊಸ ಜ್ಞಾನ ದಿಗಂತಗಳನ್ನು ದರ್ಶಿಸಬೇಕೆನ್ನುವ, ಸ್ಪರ್ಶಿಸಬೇಕೆನ್ನುವ ಜ್ಞಾನದಾಹಿಗಳಿಗೆ ಇದು ಅತ್ಯಂತ ಉಪಯುಕ್ತವಾಗಿದ್ದು, ಪ್ರಥಮ ವರ್ಷದ ಪ್ರತಿಕ್ರಿಯೆ ತುಂಬ ಉತ್ಸಾಹದಾಯಕವಾಗಿದೆ. ತಮ್ಮ ತಮ್ಮ ವಿಷಯಗಳ ಅಧ್ಯಯನ ಮತ್ತು ಸಂಶೋಧನೆಗಳಲ್ಲಿ ನಿರತವಾಗಿದ್ದ ನಮ್ಮ ಬೋಧಕ ವರ್ಗಕ್ಕೆ ಈ ಅಧ್ಯಯನಗಳಿಗೆ ಪಾಠ ಹೇಳುವ, ಪಾಠ ಬರೆಯುವ ಸದಾವಕಾಶ ದೊರೆತದ್ದರಿಂದ ಅವರ ಚಿಂತನೆ ಮತ್ತು ಪ್ರತಿಭೆಗಳ ವಿಸ್ತರಣಕ್ಕೆ ಹೊಸ ಆಯಾಮ ದೊರೆತಂತಾಗಿದೆ. ಆರಂಭದ ಪ್ರೋತ್ಸಾಹದಾಯಕ ಪ್ರತಿಕ್ರಿಯೆಯಿಂದಾಗಿ ಈ ವರ್ಷ ಜನಪದ ಸಂಗೀತ, ಜನಪದ ಕರಕುಶಲ ಕಲೆಗಳು, ನಾಟಕ, ಕಲೆ, ಅಭಿವೃದ್ಧಿ ಸಂವಹನ, ಪಾರಂಪರಿಕ ಜ್ಞಾನ, ಬುಡಕಟ್ಟು ಅಧ್ಯಯನ, ಭಾಷಾಂತರ ಅಧ್ಯಯನ ಡಿಪ್ಲೋಮಾಗಳನ್ನು ಆರಂಭಿಸಲಾಗುತ್ತಿದೆ. ಈ ಡಿಪ್ಲೋಮಾ ತರಗತಿಗಳಲ್ಲದೆ ಹಿಂದೂಸ್ತಾನಿ ಮತ್ತು ಕರ್ನಾಟಕ ಸಂಗೀತದಲ್ಲಿ ಪದವಿ ತರಗತಿಗಳೂ ಸಹ ಕಳೆದ ವರ್ಷ ಪ್ರಾರಂಭವಾಗಿವೆ. ನಮ್ಮ ಬಾದಾಮಿಯ ಕೇಂದ್ರದಲ್ಲಿ ಶಿಲ್ಪಕಲೆ ಮತ್ತು ಚಿತ್ರಕಲೆಗಳಲ್ಲಿ ೫ ವರ್ಷದ ಪದವಿ ತರಗತಿಗಳನ್ನು ಆರಂಭ ಮಾಡಿರುವುದರಿಂದ ಈ ಕಲೆಗಳ ಅಭ್ಯಾಸಿಗಳಿಗೆ ಹಾಗೂ ಆ ಕ್ಷೇತ್ರದಲ್ಲಿ ತಮ್ಮ ವೃತ್ತಿಯನ್ನು ಅರಸಬೇಕೆನ್ನುವವರಿಗೆ ಆಶಾದಾಯಕವಾದ ಮಾರ್ಗವೊಂದು ತೆರೆದಂತಾಗಿದೆ. ಪದವಿ ತರಗತಿಗಳಲ್ಲಿ ಹೊಸ ಕಾಲದ ಅಗತ್ಯಗಳಲ್ಲಿ ಹೊಸ ಆವಿಷ್ಕಾರಗಳನ್ನು ಮತ್ತು ನವೀನ ಜ್ಞಾನ ಶಾಖೆಗಳನ್ನು ಅಂತರ್‌ಶಿಸ್ತೀಯವಾಗಿ ಅಧ್ಯಯನ ಮಾಡುವ ಅವಕಾಶವನ್ನು ಒದಗಿಸುವುದು ವಿದ್ಯಾರ್ಥಿಗಳ ಮಾನಸಿಕ ಜ್ಞಾನ ದೃಷ್ಟಿಯಿಂದ ಅತ್ಯವಶ್ಯಕವೆಂಬುದನ್ನು ಮನಗಂಡು ಎಂ.ಎ., ಪಿ.ಎಚ್.ಡಿ. (೪ ವರ್ಷಗಳ ಸಂಯೋಜಿತ ಅಧ್ಯಯನ)ಯನ್ನು ಕನ್ನಡ ಸಾಹಿತ್ಯ ಮತ್ತು ಜಾನಪದ ವಿಷಯಗಳಲ್ಲಿ ಆರಂಭಿಸಲಾಗಿದ್ದು, ೩೦ ಜನ ವಿದ್ಯಾರ್ಥಿಗಳು ನೋಂದಾಯಿಸಿಕೊಂಡು ಸೆಮಿಸ್ಟರ್‌ಪದ್ಧತಿಯ ವ್ಯಾಸಾಂಗದಲ್ಲಿ ನಿರತರಾಗಿದ್ದಾರೆ. ಇದು ರಾಜ್ಯ ವಿಶ್ವವಿದ್ಯಾಲಯಗಳ ಇತಿಹಾಸದಲ್ಲಿ ಮೊದಲನೆಯ ಪ್ರಯೋಗವಾಗಿದೆ. ಇವುಗಳನ್ನು ಆರಂಭಿಸುವ ಮೂಲಕ ನಮ್ಮ ವಿಶ್ವವಿದ್ಯಾಲಯ ಹೊಸ ಜ್ಞಾನ ಶಿಸ್ತುಗಳ ಕಡೆಗೆ ಬಾಗಿಲು ತೆರೆದಿದೆ. ಹೀಗೆ ತೆರೆಯಲಾಗಿರುವ ಹೊಸ ಅಧ್ಯಯನ ವಿಭಾಗಗಳಿಗೆ ಹೊಸ ಅಧ್ಯಾಪಕರನ್ನು ನೇಮಕ ಮಾಡಿಕೊಳ್ಳದೆಯೇ ನಮ್ಮ ವಿಶ್ವವಿದ್ಯಾಲಯದ ಸಂಪನ್ಮೂಲ ವ್ಯಕ್ತಿಗಳ ವಿದ್ವತ್ ಮತ್ತು ಅನುಭವನ್ನೇ ಮಾಡಿಕೊಳ್ಳಲಾಗುತ್ತಿದೆ ಎಂಬುದನ್ನು ನಾನು ಈ ಸಂದರ್ಭದಲ್ಲಿ ತಿಳಿಸಲು ಇಚ್ಛಿಸುತ್ತೇನೆ. ಈಗಾಗಲೇ ವಿಶ್ವವಿದ್ಯಾಲಯದಿಂದ ಕನ್ನಡ ಅಧ್ಯಯನ, ಮಹಿಳಾ ಅಧ್ಯಯನ, ನಮ್ಮ ಕನ್ನಡ, ಚೆಲುವ ಕನ್ನಡ, ಪುಸ್ತಕ ಮಾಹಿತಿ, ವಿಜ್ಞಾನ ಸಂಗಾತಿ ಎಂಬ ಆರು ನಿಯತಕಾಲಿಕೆಗಳನ್ನು ಪ್ರಕಟಿಸಲಾಗುತ್ತಿದ್ದು, ಅವೆಲ್ಲ ಆಯಾ ಕ್ಷೇತ್ರದ ಓದುಗರಿಗೆ ಅತ್ಯಂತ ಪ್ರಿಯವಾಗಿವೆ. ಹಾಗೆಯೇ ವಿಶ್ವವಿದ್ಯಾಲಯದಿಂದ ಶೋಧಿತವಾಗುವ ಹೊಸ ಹೊಸ ಜ್ಞಾನದ ಬೆಳಕಿಂಡಿಗಳಾಗಿಯೂ ಇವು ಕಾರ್ಯ ನಿರ್ವಹಿಸುತ್ತಿವೆ. ಇವಲ್ಲದೆ ಕಳೆದ ದಶಮಾನೋತ್ಸವ ಸಂದರ್ಭದಲ್ಲಿ ಅಭಿವೃದ್ಧಿ ಅಧ್ಯಯನ, ದ್ರಾವಿಡ ಅಧ್ಯಯನ ಮತ್ತು ಜಾನಪದ ಕರ್ನಾಟಕ ಎಂಬ ಹೊಸ ನಿಯತಕಾಲಿಕೆಗಳನ್ನು ಸಿದ್ಧಪಡಿಸಿ ಬಿಡುಗಡೆ ಮಾಡಲಾಗಿದೆ. ಇವು ಆಯಾ ಹೊಸ ಕ್ಷೇತ್ರದ ಸಂಶೋಧಕರ ವಿಶಿಷ್ಟ ಬಗೆಯ ಹೊಸ ಬರಹಗಳನ್ನು ಪ್ರಕಟಿಸುವ ಮೂಲಕ ಕನ್ನಡ ಜ್ಞಾನ ಬಹುಮುಖವಾಗಿ ಅರಳಲು ಸಾಧನವಾಗಿವೆ. ಮುಂದಿನ ಶೈಕ್ಷಣಿಕ ವರ್ಷಗಳಲ್ಲಿ ಬುಡಕಟ್ಟು ಕರ್ನಾಟಕ ಮತ್ತು ಕಲಾ ಕರ್ನಾಟಕ ನಿಯತಕಾಲಿಕೆಗಳನ್ನು ಪ್ರಕಟಿಸಲು ಯೋಜಿಸಲಾಗುತ್ತಿದೆ. ಇದೇ ವರ್ಷ ಪಿ.ಯು.ಸಿ. ತರಗತಿಯಿಂದ ಹಿಡಿದು ಸ್ನಾತಕೋತ್ತರ ತರಗತಿವರೆಗೆ ವಿದ್ಯಾರ್ಥಿಗಳಿಗೆ ಕನ್ನಡದಲ್ಲಿ ಕಲಿಯಲು ಸಾಧ್ಯವಾಗುವಂತೆ ವಿಜ್ಞಾನ, ತಂತ್ರಜ್ಞಾನ ಮತ್ತು ಮಾನವಿಕಗಳಲ್ಲಿ ಪೂರಕ ಪಠ್ಯಗಳನ್ನು ಪರಿಣಿತರಿಂದ ಬರೆಯಿಸಿ ಪ್ರಕಟಿಸಲು ಪಠ್ಯಪುಸ್ತಕ ವಿಭಾಗವನ್ನು ಮತ್ತು ವಿಜ್ಞಾನ ಲೋಕದ ಅಮಿತ ಸಾಧನೆಗಳನ್ನು ಸಾದರ ಪಡಿಸುವ ವಿಜ್ಞಾನ ಇತಿಹಾಸಕ್ಕೆ ಸಂಬಂಧಿಸಿದ ವಿಜ್ಞಾನ ಇತಿಹಾಸ ವಿಭಾಗವನ್ನು ಆರಂಭಿಸಲಾಗುತ್ತಿದೆ. ಮುಂದಿನ ಶೈಕ್ಷಣಿಕ ವರ್ಷದಲ್ಲಿ ಸಂಗೀತ, ಶಿಲ್ಪ ಮತ್ತು ಚಿತ್ರಕಲೆಗಳಲ್ಲಿ

ಸ್ನಾತಕೋತ್ತರ ಅಧ್ಯಯನಕ್ಕೆ (ಎಂ.ಎಫ್.ಎ) ಅನುವು ಮಾಡಿಕೊಡಲು ಸಿದ್ಧತೆ ನಡೆಯುತ್ತಿದೆ. ಬಳ್ಳಾರಿಯಲ್ಲಿ ಲಲಿತಕಲೆಗಳಿಗೆ ಸಂಬಂಧಿಸಿದ ವ್ಯಾಸಂಗ ಮತ್ತು ತರಬೇತಿ ಕೇಂದ್ರವೊಂದನ್ನು ಸ್ಥಳೀಯರ ನೆರವಿನಿಂದ ಆರಂಭಿಸಲು ಸಹ ಯೋಜನೆಯನ್ನು ತಯಾರಿಸಲಾಗಿದೆ.

ವಿಶ್ವವಿದ್ಯಾಲಯದ ಅತ್ಯಂತ ಪ್ರಮುಖ ಭಾಗಗಳಲ್ಲಿ ಒಂದಾದ ಪ್ರಸಾರಾಂಗ ಇದುವರೆಗೆ ಬಗೆ ಬಗೆಯ ಜ್ಞಾನ ಕ್ಷೇತ್ರಗಳ ಅರಿವನ್ನು ಸಂಚಯಿಸುವ, ಪ್ರಸಾರ ಮಾಡುವ ಸುಮಾರು ೭೦೦ ಗ್ರಂಥಗಳನ್ನು ಪ್ರಕಟಿಸುವ ಮೂಲಕ ಪ್ರಕಟಣಾ ಇತಿಹಾಸದಲ್ಲಿ ಒಂದು ಹೆದ್ದಾರಿಯನ್ನೇ ತೆರೆದಿದೆ ಎಂಬುದು ಅಭಿಮಾನದ ಸಂಗತಿಯಾಗಿದೆ. ವಿವಿಧ ಜ್ಞಾನ ಶಾಖೆಗಳ ಬಗೆಗಿನ ಪುಸ್ತಕಗಳನ್ನು ಪ್ರಕಟಿಸುವುದಲ್ಲದೆ, ಈ ವಿಶ್ವದಲ್ಲಿ ಸಹಸ್ರಾರು ವರ್ಷಗಳಿಂದ ಮಹಾ ಚಿಂತಕರು, ಜಿಜ್ಞಾಸಕರು, ವಿಚಾರವಾದಿಗಳು ನಡೆಸಿದ ಚಿಂತನೆಯ ಫಲವನ್ನು ಶತಮಾನಗಳ ಚಿಂತನೆ ಎಂಬ ಮಾಲೆಯಡಿ ಪ್ರಕಟಿಸಲು, ಕನ್ನಡ ಸಾಹಿತ್ಯ ಚರಿತ್ರೆ, ಇತಿಹಾಸವನ್ನು ೩ ಸಂಪುಟಗಳಲ್ಲಿ ಪ್ರಕಟಿಸಲು ಮತ್ತು ಪರಾಮರ್ಶನ ಗ್ರಂಥ ಮಾಲೆಯ ಮೂಲಕ ಸುಮಾರು ೫೦ ಪುಸ್ತಕಗಳನ್ನು ಪ್ರಕಟಿಸಲು, ಕಾನೂನು ಇಲಾಖೆಯ ನೆರವಿನೊಡನೆ ಸಾಮಾನ್ಯರಿಗೆ ಕಾನೂನು ಎಂಬ ಮಾಲೆಯಲ್ಲಿ ೫೦ ಪುಸ್ತಕಗಳನ್ನು, ಮಹಿಳಾ ಕಲ್ಯಾಣ ಇಲಾಖೆಯ ನೆರವಿನೊಡನೆ ಮಹಿಳಾ ಲೋಕದ ಸಾಧನೆ, ಚಿಂತನೆ ಸಮಸ್ಯೆಗಳನ್ನು ಕುರಿತ ೫೦ ಪುಸ್ತಕಗಳನ್ನು ಹಾಗೂ ವಿವಿಧ ವಿಜ್ಞಾನ ವಿಷಯಗಳನ್ನು ಕುರಿತ ಸುಮಾರು ೧೦ ಪುಸ್ತಕಗಳನ್ನು ಪ್ರಕಟಿಸಲಾಗುತ್ತಿದ್ದು ಕೆಲವು ಮುದ್ರಣದ ಅಂತಿಮ ಹಂತದಲ್ಲಿವೆ. ಇದಲ್ಲದೆ ವಿಜ್ಞಾನಿಗಳ ವಿಶ್ವಕೋಶ ಮತ್ತು ವಿಜ್ಞಾನ ಸಾಹಿತ್ಯ ಚರಿತ್ರೆಯನ್ನು ಕನ್ನಡದಲ್ಲಿ ಮೊಟ್ಟಮೊದಲ ಬಾರಿಗೆ ತಯಾರಿಸಲಾಗುತ್ತಿದೆ. ಕನ್ನಡ ಪಿಎಚ್.ಡಿ. ವಿವರಣ ಕೋಶ, ಕರ್ನಾಟಕ ಪಿಎಚ್.ಡಿ. ವಿವರಣ ಕೋಶ, ಜಾನಪದ ಸಮಗ್ರ ಸೂಚಿ, ಜಾನಪದ ಅಧ್ಯಯನ, ಇತಿಹಾಸ ಹಾಗೂ ಕನ್ನಡದ ಪ್ರಾಚೀನ ಸಂಸ್ಕೃತಿಯ ವಿವಿಧ ನೆಲೆಗಳನ್ನು ಬಿಂಬಿಸುವ ಶಾಸನ ಸಂಪುಟಗಳನ್ನು, ನಿಘಂಟುಗಳನ್ನು ಪ್ರಕಟಿಸುವ ಯೋಜನೆ ಪ್ರಗತಿಯಲ್ಲಿದೆ. ಜನ ಸಾಮಾನ್ಯರಿಗೆ ತಲುಪಲು ಮಂಟಪ ಮಾಲೆಯ ವಿಶೇಷ ಉಪನ್ಯಾಸಗಳನ್ನೂ ನಡೆಸಲಾಗುತ್ತಿದೆ ಮತ್ತು ಈ ಉಪನ್ಯಾಸಗಳನ್ನು ಪುಸ್ತಕ ರೂಪದಲ್ಲಿ ಪ್ರಕಾಶನ ಪಡಿಸಲಾಗುತ್ತಿದೆ. ಪಿ.ಯು.ಸಿ. ಮತ್ತು ಪದವಿ ತರಗತಿಗಳಲ್ಲಿ ವಿಜ್ಞಾನವನ್ನು ಕನ್ನಡದಲ್ಲಿ ಪರಿಣಾಮಕಾರಿಯಾಗಿ ಕಲಿಸಲು ಅನುಕೂಲವಾಗುವಂತೆ ಕನ್ನಡ ವಿಜ್ಞಾನ ಪಠ್ಯಗಳನ್ನು ತಯಾರಿಸಲು ಶಿಕ್ಷಣ ಇಲಾಖೆ ವಿಶ್ವವಿದ್ಯಾಲಯವನ್ನು ಕೋರಿದ್ದು, ಈಗಾಗಲೇ ಪಿ.ಯು.ಸಿ. ಮಟ್ಟದ ಏಳು ವಿಜ್ಞಾನ ಪಠ್ಯಗಳನ್ನು ಪರಿಣಿತರಿಂದ ಸಿದ್ಧಪಡಿಸಲಾಗಿದೆ.

ಕಳೆದ ದಶಮಾನೋತ್ಸವದ ಸಂದರ್ಭದಲ್ಲಿ ಅತ್ಯಂತ ಮಹತ್ತರವಾದ ೨೫ ಹೊಸ ಪುಸ್ತಕಗಳನ್ನು ಮತ್ತು ನಮ್ಮ ಎಲ್ಲ ನಿಯತಕಾಲಿಕೆಗಳ ದಶಮಾನೋತ್ಸವ ವಿಶೇಷ ಸಂಚಿಕೆಗಳನ್ನು ಬಿಡುಗಡೆಗೊಳಿಸಲಾಗಿದೆ. ಈ ವಿಶೇಷ ಸಂಚಿಕೆಗಳು ಆಯಾ ಕ್ಷೇತ್ರದ ಸಮೀಕ್ಷೆಯ ಮುಖ್ಯ ಆಕರಗ್ರಂಥಗಳಾಗಿವೆ. ಈ ಮಧ್ಯೆ ಹಲವಾರು ಗ್ರಂಥಗಳನ್ನು ಪ್ರಕಟಿಸಲಾಗಿದ್ದು, ಅದರಲ್ಲಿ 'ಚರಿತ್ರೆ' ವಿಶ್ವಕೋಶ ಮಹತ್ತರವಾದುದಾಗಿದೆ. ಜಗತ್ತಿನ ಚರಿತ್ರೆಯ ಬಗೆಗೆ ಅಗತ್ಯವಿರುವ ಮತ್ತು ದೊರೆಯಬಹುದಾದ ಎಲ್ಲ ಮಾಹಿತಿಗಳನ್ನು ದೊರಕಿಸಿಕೊಡುವ ಚರಿತ್ರೆ ವಿಶ್ವಕೋಶ ಎಂಬ ಬೃಹತ್ ಗ್ರಂಥವನ್ನು ಬಿಡುಗಡೆ ಮಾಡಲಾಗಿದ್ದು ಇದು ಈ ಕ್ಷೇತ್ರದ ಪ್ರಾತಿನಿಧಿಕ ಗ್ರಂಥವಾಗಿದ್ದು ವಿದ್ವತ್ ಜನರ ಅಪಾರ ಮನ್ನಣೆಗೆ ಪಾತ್ರವಾಗಿದೆ. ಕರ್ನಾಟಕ ಪ್ರಾಣಿ ಪಕ್ಷಿ ಸಂಪುಟ ಎಂಬ ಹೆಸರಿನ ಮತ್ತೊಂದು ಬೃಹತ್ ಸಂಪುಟ ಅಚ್ಚಿನಲ್ಲಿದೆ. ಪರಿಸರ ವಿಶ್ವಕೋಶ ಅಂತಿಮ ಹಂತದಲ್ಲಿದೆ. ಹೊಸಪೇಟೆಯ ತಾಲ್ಲೂಕಿನ ಎಲ್ಲ ಪ್ರಗತಿಯ ಮತ್ತು ವಸ್ತು ಸ್ಥಿತಿಯ ಮಗ್ಗುಲುಗಳನ್ನು ವಾಸ್ತವಿಕವಾಗಿ ಅನಾವರಣ ಮಾಡುವ ಹೊಸಪೇಟೆ ತಾಲ್ಲೂಕು ದರ್ಶನ ಎಂಬ ಅಭ್ಯಾಸಪೂರ್ಣ ಮಹತ್ವದ ಗ್ರಂಥವನ್ನು ಪ್ರಕಟಿಸಲಾಗಿದ್ದು ಇದು ಈ ಕ್ಷೇತ್ರದಲ್ಲಿ ಆಸಕ್ತಿಯುಳ್ಳ ಎಲ್ಲ ಅಧಿಕಾರಿಗಳ ರಾಜಕೀಯಸ್ಥರ ಮತ್ತು ಸಮಾಜ ವಿಜ್ಞಾನಿಗಳ ಕೈಪಿಡಿಯಂತಿದೆ. ಕರ್ನಾಟಕದ ಸಮಗ್ರಮುಖ ಚಿಂತನೆ ಮತ್ತು ಸಾಧನೆಗಳನ್ನು ಬಿಂಬಿಸುವ ಕರ್ನಾಟಕ ಸ್ಟಡೀಸ್ ಎಂಬ ಅರ್ಧವಾರ್ಷಿಕ ಪತ್ರಿಕೆಯನ್ನು ಇಂಗ್ಲೀಷ್‌ನಲ್ಲಿ ಪ್ರಕಟಿಸಲು ಎಲ್ಲ ಸಿದ್ಧತೆಗಳು ಮುಗಿದಿದ್ದು ಅಚ್ಚಿನಲ್ಲಿದೆ. ಈ ನಿಯತಕಾಲಿಕೆ ಕನ್ನಡ ನಾಡಿಗೂ ಮತ್ತಿತ್ತರ ಭಾಷಾ ಪ್ರಾಂತ್ಯಗಳಿಗೂ ಒಂದು ಚಿಂತನ ಸೇತುವೆಯಾಗಿ ಪರಿಣಮಿಸಲಿದೆ ಎಂಬ ಭರವಸೆ ನಮ್ಮದು. ಇವಲ್ಲದೆ ವಿಶ್ವವಿದ್ಯಾಲಯ ಪ್ರಕಟಿಸಿರುವ ಕರ್ನಾಟಕ ಚರಿತ್ರೆಯ ೭ ಸಂಪುಟಗಳನ್ನು ಇಂಗ್ಲಿಷ್‌ನಲ್ಲಿ ಪ್ರಕಟಿಸುವ ಹಾಗೂ ಈ ಕನ್ನಡ ಸಂಪುಟಗಳ ವಿದ್ಯಾರ್ಥಿ ಆವೃತ್ತಿಗಳನ್ನು ಹೊರತರುವ ಸಂಕಲ್ಪ ಈಗ ಈಡೇರದಿದ್ದರೂ ಆ ನಿಟ್ಟಿನಲ್ಲಿ ನಾವು ಕಾರ್ಯೋನ್ಮುಖರಾಗಿದ್ದೇವೆ. ಕರ್ನಾಟಕದ ಸಮಗ್ರ ಮುಖಗಳ ಸಾಧನಾ ಸೌಂದರ್ಯವನ್ನು ಚಿತ್ರಗಳ ಮೂಲಕ ಪರಿಚಯಿಸುವ

ಬಹುವರ್ಣಮಯ ‘ಸಚಿತ್ರ ಕರ್ನಾಟಕ’ ಸಂಪುಟ ಸಿದ್ಧವಾಗಿದ್ದು ಅಚ್ಚಿನ ಮನೆಗೆ ಹೋಗುತ್ತಿದೆ. ಇದು ಪ್ರವಾಸಿಗರಿಗೆ ಮತ್ತು ಕರ್ನಾಟಕವನ್ನು ಅದರ ವಿವಿಧ ರೂಪಗಳಲ್ಲಿ ದರ್ಶಿಸ ಬೇಕೆನ್ನುವವರಿಗೆ ಮತ್ತು ಕರ್ನಾಟಕವನ್ನು ಅದರ ವಿವಿಧ ರೂಪಗಳಲ್ಲಿ ದರ್ಶಿಸ ಬೇಕೆನ್ನುವರಿಗೆ ಒಂದು ಅಧಿಕೃತ ಮಾಹಿತಿ ಗ್ರಂಥವಾಗಲಿದೆ. ಒಟ್ಟಿನಲ್ಲಿ ಕರ್ನಾಟಕದ ಹಾಗೂ ವಿಶ್ವದ ಸಮಗ್ರ ಜ್ಞಾನ ಸಂಪತ್ತನ್ನು ಕನ್ನಡದ ಮೂಲಕ ಕನ್ನಡಿಗರಿಗೆ ದೊರಕಿಸುವ ಮಹದಾಶಯ ನಮ್ಮದು. ಇದನ್ನು ಸಾಕಾರಗೊಳಿಸಲು ಸರ್ಕಾರದ, ಕೇಂದ್ರ ಮಾನವ ಸಂಪನ್ಮೂಲ ಇಲಾಖೆಯ ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಸಂಸತ್ ಸದಸ್ಯರ, ಶಾಸಕರ ಮತ್ತು ಉದಾರಿಗಳಾದ ಸಂಸ್ಕೃತಿ ಶ್ರೀಮಂತರ ಸಹಾಯವನ್ನು ವಿಶ್ವವಿದ್ಯಾಲಯ ಭರವಸೆಯ ಕಣ್ಣುಗಳಿಂದ ನಿರೀಕ್ಷಿಸುತ್ತಿದೆ.

ಮೇಲ್ಕಂಡ ಯೋಜನೆಗಳಲ್ಲದೆ ಸಮಗ್ರ ಕರ್ನಾಟಕವನ್ನು ಅದರೆಲ್ಲ ಪ್ರಕಾಶಮಾನ ಮುಖಗಳೊಂದಿಗೆ ಬಿಂಬಿಸುವ ವಿಸ್ತಾರ ನೆಲೆಯ ‘ಕನ್ನಡಲೋಕ’ ಎಂಬ ಬೃಹತ್ ವಸ್ತುಸಂಗ್ರಹಾಲಯವನ್ನು ಕನಿಷ್ಟ ೫೦ ಎಕರೆಗಳ ಇಲ್ಲಿನ ಆವರಣದಲ್ಲಿ ಸ್ಥಾಪಿಸುವ ನಮ್ಮ ಯೋಜನೆಗೆ ಅಂತಹ ಉತ್ಸಾಹಪೂರ್ಣ ಪ್ರತಿಕ್ರಿಯೆ ಸಂಬಂಧಿಸಿದ ಕ್ಷೇತ್ರಗಳಿಂದ ವ್ಯಕ್ತವಾಗದಿರುವುದರಿಂದ ನಿಧಾನಗತಿಯಲ್ಲಿದೆ. ಇದರ ಕ್ರಿಯಾಕರಣಕ್ಕಾಗಿ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಜಿಲ್ಲಾ ಪಂಚಾಯತ್‌ಗಳಿಗೆ ಪ್ರಸ್ತಾವನೆಯನ್ನು ಕಳುಹಿಸಲಾಗಿದೆ. ಕರ್ನಾಟಕ ಸರ್ಕಾರದ ಸುವರ್ಣ ಕರ್ನಾಟಕ ಯೋಜನೆ ಅಡಿಯಲ್ಲಿ ಈ ಮಹತ್ವದ ಯೋಜನೆಯನ್ನು ಸೇರಿಸಿಕೊಳ್ಳಲು ಸರ್ಕಾರವನ್ನು ವಿನಂತಿಸಲಾಗಿದೆ. ನಮ್ಮ ಆಶಯ ಈಡೇರಿದಲ್ಲಿ ಇದು ಭಾರತದಲ್ಲಿ ಮೊಟ್ಟಮೊದಲ ಮತ್ತು ಬಹುಮುಖಿ ವಿನ್ಯಾಸದ ಮಾದರಿ ವಸ್ತು ಸಂಗ್ರಹಾಲಯವಾಗಿರುತ್ತದೆ ಎಂದು ಭರವಸೆ ನಮಗಿದೆ.

ಮೂಲಭೂತ ಸೌಕರ್ಯಗಳ ಕೊರತೆಯನ್ನು ಅನುಭವಿಸುತ್ತಿದ್ದ ವಿಶ್ವವಿದ್ಯಾಲಯದಲ್ಲಿ ಕಳೆದೆರಡು ವರ್ಷಗಳಿಂದ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ. ರಸ್ತೆಗಳ ಡಾಂಬರೀಕರಣ, ಉಪಾಹಾರ ಗೃಹ ಸೌಲಭ್ಯ, ಹೊಸ ರಸ್ತೆಗಳ ನಿರ್ಮಾಣ, ವಿದ್ಯುದ್ದೀಕರಣ, ಕುಡಿಯುವ ನೀರಿನ ಸೌಲಭ್ಯ, ವಾಹನ ವ್ಯವಸ್ಥೆ, ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯಿಂದ ಕೊಡುಗೆಯಾಗಿ ಹೊಸ ಬಸ್ಸು ಮುಂತಾದವುಗಳನ್ನು ಒದಗಿಸಲಾಗಿದೆ. ತ್ರಿಪದಿ, ತುಂಗಭದ್ರ, ಕೂಡಲ ಸಂಗಮ, ಘಟಿಕಾಲಯ, ಗಿರಿಸೀಮೆ, ಕಾಯಕದ ಮನೆ, ನವರಂಗ, ಜಕ್ಕಣ ಮಂಟಪ ಮುಂತಾದ ಹಳೆಯ ಕಟ್ಟಡಗಳನ್ನು ನವೀಕರಿಸಿ ಸುಸಜ್ಜಿತ ಗೊಳಿಸಲಾಗಿದೆ. ವಿಭಾಗಗಳ ವ್ಯವಸ್ಥೆಗಾಗಿ ೫ ವಿಭಾಗೀಯ ಕಟ್ಟಡಗಳನ್ನು ಸುಮಾರು ೭೫ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿಸಲಾಗಿದೆ. ೪೦ ಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ ವಿದ್ಯಾರ್ಥಿನಿಯರ ವಸತಿ ನಿಲಯ ಇನ್ನೇನು ಮುಗಿಯುತ್ತಿದೆ. ಸುಮಾರು ೮೦ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಹೊಸ ಗ್ರಂಥಾಲಯ ಕಟ್ಟಡವೊಂದನ್ನು ನಿರ್ಮಿಸಲಾಗುತ್ತಿದ್ದು ಅದು ಅಂತಿಮ ಹಂತದಲ್ಲಿದೆ. ದಾಸ್ತಾನು ಸಂಗ್ರಹಕ್ಕಾಗಿ ಒಂದು ದಾಸ್ತಾನು ಭವನವನ್ನು ಹಾಗೂ ಸಸ್ಯಗಳ ಸಂರಕ್ಷಣೆಗಾಗಿ ಹಸಿರು ಮನೆಯೊಂದನ್ನು ನಿರ್ಮಿಸಲಾಗಿದೆ. ಅಭಿರುಚಿ ಎಂಬ ಉಪಾಹಾರಗೃಹ ವನ್ನು ಆರಂಭಿಸಲಾಗಿದೆ. ಮೊದಲನೆಯ ಕುಲಪತಿಗಳ ಕಾಲದಲ್ಲಿ ಆರಂಭಗೊಂಡು ಸ್ಥಗಿತವಾಗಿದ್ದ ಶಿಲ್ಪವನವನ್ನು ವಿಸ್ತರಿಸಿ ಅದಕ್ಕೆ ಆಕರ್ಷಕ ರೂಪವನ್ನು ನೀಡಲಾಗಿದೆ. ಸುಮಾರು ೨೦ ಲಕ್ಷ ರೂಪಾಯಿಗಳ ವೆಚ್ಚದ ಪಂಪ ಸಭಾಂಗಣವನ್ನು ಸಂಸತ್ ಸದಸ್ಯರಾದ ಸನ್ಮಾನ್ಯ ಶ್ರೀ ಹೆಚ್.ಜಿ. ರಾಮುಲು ಮತ್ತು ಸನ್ಮಾನ್ಯ ಶ್ರೀ ರೆಹಮಾನ್ ಖಾನ್‌ಅವರ ನೆರವಿನಿಂದ ನಿರ್ಮಿಸಲು ಆರಂಭಿಸಲಾಗಿದೆ. ಸುಮಾರು ೪೦ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಬೋಧಕೇತರ ನೌಕರಿಗಾಗಿ ನೃಪತುಂಗನಗರ ಎಂಬ ಹೆಸರಿನಲ್ಲಿ ವಸತಿಗೃಹಗಳನ್ನು ಕಟ್ಟಲು ಆರಂಭಿಸಲಾಗಿದೆ. ಮುಂದಿನ ವರ್ಷ ಮತ್ತಷ್ಟು ಅಧ್ಯಾಪಕರ ವಸತಿ ಗೃಹಗಳನ್ನು ವಿಭಾಗೀಯ ಕಟ್ಟಡಗಳನ್ನು ಹಾಗೂ ವಿದ್ಯಾರ್ಥಿ ನಿಲಯವನ್ನು ನಿರ್ಮಿಸಲು ಕ್ರಮಕೈಗೊಳ್ಳಲಾಗುತ್ತಿದೆ. ವಿಶ್ವವಿದ್ಯಾಲಯ ಈ ವರ್ಷ ಹಮ್ಮಿಕೊಂಡಿರುವ ಮತ್ತೊಂದು ದಾಖಲಾರ್ಹ ಯೋಜನೆಯೆಂದರೆ ಸಿರಿಗನ್ನಡ ಗ್ರಂಥಾಲಯ ಎಂಬ ದೇಶದಲ್ಲೇ ವಿಶಿಷ್ಟವಾದ ಪರಾಮರ್ಶನ ಗ್ರಂಥಾಲಯ. ಕನ್ನಡ ಲಿಪಿ ಉಗಮವಾದಂದಿನಿಂದ ಇಲ್ಲಿಯವರೆಗೆ ಪ್ರಕಟವಾದ ಎಲ್ಲ ಪುಸ್ತಕಗಳನ್ನು ಹಾಗೂ ಕರ್ನಾಟಕಕ್ಕೆ ಸಂಬಂಧಿಸಿದ ಎಲ್ಲ ಭಾಷೆಯ ಗ್ರಂಥಗಳನ್ನು ಹಾಗೂ ಇತರ ಮಾಹಿತಿ ದಾಖಲೆಗಳನ್ನು ಸಂಗ್ರಹಿಸಿ ಈ ಗ್ರಂಥಾಲಯದಲ್ಲಿ ವ್ಯವಸ್ಥೆಗೊಳಿಸಲು ಯೋಜಿಸಲಾಗಿದೆ. ನಾಡಿನಾದ್ಯಂತ ಲೇಖಕರನ್ನು, ಪುಸ್ತಕ ಪ್ರಕಾಶಕರನ್ನು, ಸಂಸ್ಥೆಗಳನ್ನು, ಪುಸ್ತಕಗಳನ್ನು, ಪುಸ್ತಕಪ್ರಿಯರನ್ನು ಭೇಟಿ ಮಾಡಿ ಅಖಂಡ ಕರ್ನಾಟಕದ ಜನಸ್ತೋಮದ ನೆರವಿನಿಂದ ಈ

ಗ್ರಂಥಾಲಯವನ್ನು ಮಹತ್ತಾಗಿ ರೂಪಿಸುವುದು ಹಾಗೂ ಕನ್ನಡ ವಿಶ್ವವಿದ್ಯಾಲಯದ ಈ ಗ್ರಂಥ ಭಂಡಾರದಲ್ಲಿ ಕನ್ನಡಕ್ಕೆ ಮತ್ತು ಕರ್ನಾಟಕಕ್ಕೆ ಸಂಬಂಧಿಸಿ ಇಲ್ಲದ ಗ್ರಂಥಗಳೇ ಇಲ್ಲ ಎಂಬಂತೆ ಇದನ್ನು ಸಜ್ಜುಗೊಳಿಸುವುದು ನಮ್ಮ ಆಶಯ. ಮಾರ್ಚ್‌ತಿಂಗಳಿನಿಂದ ಈ ಮಹದಾಶಯದ ಯೋಜನೆ ಕ್ರಿಯಾರೂಪವನ್ನು ತಳೆಯುತ್ತಾ ಹೋಗುತ್ತಿದೆ. ಈ ಯೋಜನೆ ಪೂರ್ಣಗೊಂಡಾಗ ಇದು ಕನ್ನಡ ಕರ್ನಾಟಕ ಬಗೆಗಿನ ಆಸಕ್ತರ ಮತ್ತು ಸಂಶೋಧಕರ ಮಹತ್ವದ ಯಾತ್ರಾಕೇಂದ್ರವಾಗುತ್ತಿದೆ. ಬಳ್ಳಾರಿ ಜಿಲ್ಲಾ ಪಂಚಾಯತ್ ನೆರವಿನಿಂದ ವೈದ್ಯಕೀಯ ಚಿಕಿತ್ಸಾ ಕೇಂದ್ರವನ್ನು ಆರಂಭಿಸಲು ಸಿದ್ಧತೆಗಳು ನಡೆದಿವೆ. ಇಲ್ಲಿನ ನಿವಾಸಿಗಳ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶಿಶುವಿಹಾರ ಮತ್ತು ಕಿರಿಯ ಪ್ರಾಥಮಿಕ ಶಾಲೆಯನ್ನು ತೆರೆಯಲಾಗಿದ್ದು, ಶಿಕ್ಷಣ ಇಲಾಖೆ ಶಾಲಾ ಕಟ್ಟಡವನ್ನು ನಿರ್ಮಿಸಿಕೊಡುವ ಭರವಸೆಯನ್ನು ನೀಡಿದೆ. ವಿಶ್ವವಿದ್ಯಾಲಯ ಧನ ಸಹಾಯ ಆಯೋಗ ಕಳೆದ ಮೂರು ವರ್ಷಗಳಲ್ಲಿ ೬೦ ಲಕ್ಷ ನೀಡಿದ್ದು, ಈ ಯೋಜನಾ ಅವಧಿಯಲ್ಲಿ ಅದು ಹೆಚ್ಚಾಗುವ ಭರವಸೆ ಇದೆ. ಸಂಸ್ಕೃತಿಪ್ರಿಯ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಎಸ್.ಎಂ. ಕೃಷ್ಣ ಅವರು ಹಾಗೂ ನಮ್ಮ ಜನಪ್ರಿಯ ಉನ್ನತ ಶಿಕ್ಷಣ ಸಚಿವರಾದ ಡಾ. ಜಿ. ಪರಮೇಶ್ವರ ಅವರು, ಈ ವಿಶ್ವವಿದ್ಯಾಲಯಕ್ಕೆ ಹಿಂದೆ ದೊಎರೆಯುತ್ತಿದ್ದ ೩ ಕೋಟಿ ರೂಪಾಯಿಗಳ ಅನುದಾನವನ್ನು ೪ ಕೋಟಿಗೆ ಏರಿಸುವ ಮೂಲಕ ವಿಶ್ವವಿದ್ಯಾಲಯದ ಕಾರ್ಯಕ್ರಮಗಳಿಗೆ ಹೊಸ ಚಾಲನೆಯನ್ನು ದೊರೆಕಿಸಿಕೊಟ್ಟಿದ್ದಾರೆ. ಇತರ ಅಭಿವೃದ್ಧಿ ಕಾರ್ಯಗಳಿಗಾಗಿ ಈ ಭಾಗದ ಸಂಸತ್ ಸದಸ್ಯರು, ವಿಧಾನಸಭಾ ಮತ್ತು ವಿಧಾನ ಪರಿಷತ್ ಸದಸ್ಯರನ್ನು ಕೋರಿಕೊಳ್ಳಲಾಗಿದೆ. ಕಳೆದ ಎರಡು ವರ್ಷಗಳಲ್ಲಿ ವಿಶ್ವವಿದ್ಯಾಲಯದ ನೇರ ಅನುದಾನವಲ್ಲದೆ ಸುಮಾರು ೧ ಕೋಟಿಗೂ ಹೆಚ್ಚು ಹಣವನ್ನು ಬೇರೆ ಬೇರೆ ಮೂಲಗಳಿಂದ ಸಂಗ್ರಹಿಸಲಾಗಿದೆ. ಈ ಎಲ್ಲ ಸಂಸ್ಥೆಗಳಿಗೆ ಹಾಗೂ ವ್ಯಕ್ತಿಗಳಿಗೆ ವಿಶ್ವವಿದ್ಯಾಲಯ ಋಣಿಯಾಗಿದೆ.

ಕರ್ನಾಟಕದ ಸಮಗ್ರಾಭಿವೃದ್ಧಿಗೆ ಸಂಬಂಧಪಟ್ಟ ಸಾಹಿತ್ಯ ಮತ್ತು ಸಾಹಿತ್ಯೇತರ ವಿಷಯಗಳಲ್ಲಿ ಆಸಕ್ತಿ, ಜಿಜ್ಞಾಸುತನವನ್ನು, ವಿಚಾರಶೀಲತೆಯನ್ನು ಬೆಳೆಸಲು ವಿಚಾರ ಸಂಕಿರಣ, ಕಮ್ಮಟ, ವಿಶೇಷೋಪನ್ಯಾಸ ಮತ್ತು ಬಗೆ ಬಗೆಯ ಸಮಾವೇಶಗಳನ್ನೂ ಸಹ ವಿಶ್ವವಿದ್ಯಾಲಯ ನಡೆಸುತ್ತಿದೆ. ಕಳೆದ ವರ್ಷ ಕನ್ನಡ ಗಡಿಭಾಗದ ಸಂಕ ಗ್ರಾಮದಲ್ಲಿ ದೇಸಿ ಸಮ್ಮೇಳನವನ್ನು ನಡೆಸಲಾಗಿದ್ದು ಈ ವರ್ಷ ದಾವಣಗೆರೆಯಲ್ಲಿ ಅದನ್ನು ನಡೆಸಲು ಯೋಜಿಸಲಾಗಿದೆ. ಈ ವರ್ಷ ಮಹಿಳಾ ಸಾಹಿತ್ಯ ಸಮಾವೇಶ, ದೇಶೀ ಸಮ್ಮೇಳನ, ವಿಮರ್ಶಾ ಸಮಾವೇಶ, ಸಂಶೋಧನಾ ಸಮಾವೇಶ ಮುಂತಾದ ರಾಜ್ಯಮಟ್ಟದ ಸಮಾವೇಶಗಳನ್ನು ಸ್ಥಳೀಯರ ನೆರವಿನೊಡನೆ ಹಮ್ಮಿಕೊಂಡು ನಡೆಸಲಾಗುತ್ತಿದೆ. ಇದೇ ತಿಂಗಳ ಕೊನೆಯ ವಾರದಲ್ಲಿ ರಾಷ್ಟ್ರಮಟ್ಟದ ಜಾನಪದ ಸಮಾವೇಶವನ್ನು, ಮುಂದಿನ ತಿಂಗಳು ಬುಡಕಟ್ಟು ಲೇಖಕರ ರಾಷ್ಟ್ರೀಯ ಸಮಾವೇಶವನ್ನು ಮತ್ತು ಸಂಸ್ಕಾರ ಭಾರತಿ ಸಹಯೋಗದೊಡನೆ ರಾಷ್ಟ್ರೀಯ ಚಿತ್ರಕಲಾ ಶಿಬಿರವನ್ನು ಮತ್ತು ರಾಷ್ಟ್ರಮಟ್ಟದ ಹಸ್ತಪ್ರತಿ ಕಾರ್ಯಗಾರವನ್ನು ಹಮ್ಮಿಕೊಳ್ಳಲು ಸಿದ್ಧತೆಗಳು ಮುಗಿದಿವೆ. ಇವಲ್ಲದೆ ಪ್ರತಿಯೊಂದು ವಿಭಾಗವು ತನ್ನ ವಿಭಾಗೀಯ ವಿಷಯಗಳನ್ನು ಕುರಿತ ಹಲವು ವಿಚಾರ ಸಂಕಿರಣ ಮತ್ತು ಕಾರ್ಯಗಾರಗಳನ್ನೂ ಕೂಡ ನಡೆಸುತ್ತಿವೆ. ಹೀಗಾಗಿ ರಾಜ್ಯದ ಉದ್ದಗಲಕ್ಕೂ ಕನ್ನಡ ವಿಶ್ವವಿಶ್ವವಿದ್ಯಾಲಯ ತನ್ನ ವಿಶಿಷ್ಟ ಬಗೆಯ ಸಂಶೋಧನೆ, ಬೋಧನೆ ಹಾಗೂ ಚಿಂತನೆಗಳ ಕಾರ್ಯ ಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳುವ ಮೂಲಕ ತನ್ನ ಸ್ಥಾಪನೆಯ ಉದ್ದೇಶವನ್ನು ಸಾಕಾರಗೊಳಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿದೆ ಎಂದು ತಿಳಿಸಲು ಅಭಿಮಾನ ಪಡುತ್ತೇನೆ.

೮೦೦ ಎಕರೆಗಳ ಭೂ ವಿಸ್ತಾರವನ್ನು ಹೊಂದಿರುವ ಈ ವಿಶ್ವವಿದ್ಯಾಲಯದ ವಿದ್ಯಾರಣ್ಯ ಆವರಣದಲ್ಲಿ ಬೃಹತ್ ಸಂಖ್ಯೆಯಲ್ಲಿ ಸಸ್ಯಗಳನ್ನು ನೆಟ್ಟು ಇಡೀ ವಾತಾವರಣಕ್ಕೆ ಹಸಿರು ಶ್ರೀಮಂತಿಕೆಯ ಶೋಭೆಯನ್ನು ತರಲಾಗುತ್ತಿದೆ. ಕಳೆದ ಎರಡು ವರ್ಷಗಳಲ್ಲಿ ಅರಣ್ಯ ಇಲಾಖೆಯ ಮತ್ತು ತೋಟಗಾರಿಕೆ ಇಲಾಖೆಯ ನೆರವಿನೊಡನೆ ಸುಮಾರು ೧೦ ಸಾವಿರ ಬಗೆ ಬಗೆಯ ಗಿಡಗಳನ್ನು ನೆಡೆಸಲಾಗಿದೆ. ದಶಮಾನೋತ್ಸವ ವನ, ವಿಜಯ ವನ, ಕುಮಾರ ರಾಮ ಉದ್ಯಾನ, ಚರಕ ವನಗಳನ್ನು ನಿರ್ಮಿಸಲಾಗಿದೆ. ಇದುವರೆಗೆ ನಿರ್ಮಿಸಲಾಗಿದ್ದ ವನಗಳಿಗೆ ಪಂಪವನ, ನೃಪತುಂಗ ವನ, ಹಕ್ಕಬುಕ್ಕ ವನ, ಅಕ್ಷರೋದ್ಯಾನ. ಕದಂಬ ವನ, ಹೊಯ್ಸಳ ವನ, ಚಾಲುಕ್ಯ ವನ, ಕೃಷ್ಣರಾಜ ವನ, ಮಾನಸ ವನ ಮುಂತಾಗಿ ಕರ್ನಾಟಕದ ಸಂಸ್ಕೃತಿಯನ್ನು ವಿಸ್ತರಿಸಿದ ರಾಜ ಮನೆತನಗಳ ಹೆಸರುಗಳನ್ನು ಇಡುವ ಮೂಲಕ ಇತಿಹಾಸ ಈ ನೆಲದಲ್ಲಿ ಮತ್ತೊಮ್ಮೆ ಕಣ್ತುಂಬುವಂತೆ ಮಾಡಲಾಗಿದೆ.

ನಮ್ಮ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದ ಹಲವು ಲೇಖಕರ ಸಾಹಿತ್ಯ ಮತ್ತು ಸಂಶೋಧನಾ ಸಾಧನೆ ಅಭಿಮಾನಪಡುವಂಥದಾಗಿದ್ದು, ಅವರು ಇದುವರೆಗೆ ಹತ್ತಾರು ವಿಶಿಷ್ಟ ಪ್ರಶಸ್ತಿಗಳನ್ನು, ಬಹುಮಾನಗಳನ್ನು ತಮ್ಮ ಕೃತಿಗಳಿಗಾಗಿ ಪಡೆದಿದ್ದಾರೆ. ಡಾ. ಹಿ.ಚಿ. ಬೋರಲಿಂಗಯ್ಯ ಅವರು ಈ ವರ್ಷದಿಂದ ೩ ವರ್ಷಗಳವರೆಗೆ ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರ, ತಂಜಾವೂರು ಇದರ ಸದಸ್ಯರಾಗಿದ್ದಾರೆ. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರ ತಿಳಿವ ತೇಜದ ಮುಂದೆ ಕೃತಿಗೆ ೨೦೦೨ನೆಯ ಸಾಲಿನ ವರ್ಧಮಾನ ಸಾಹಿತ್ಯ ಪ್ರಶಸ್ತಿ ಹಾಗೂ ಆರ್ಯಭಟ ಸಾಹಿತ್ಯ ಪ್ರಶಸ್ತಿಯನ್ನು ಪಡೆದಿದ್ದಾರೆ. ಡಾ. ರಹಮತ್ ತರೀಕೆರೆ ಅವರು ಅಂಡಮಾನ್ ಕನಸು ಪ್ರವಾಸ ಕಥನಕ್ಕೆ ೨೦೦೧ನೇ ಸಾಲಿನ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುಸ್ತಕ ಬಹುಮಾನ ಪ್ರಶಸ್ತಿಯನ್ನು ಪಡೆದಿದ್ದಾರೆ. ಡಾ. ಕೆ.ಕೆ. ಮಾಧವ ಪರಾಜೆ ಅವರ ಯಕ್ಷಗಾನ ತಾಳಮದ್ದಲೆ ನಮ್ಯೋತ್ತರ ಸಂಕಥನ ಕೃತಿಗೆ ಗುಂಡ್ಮಿ ಚಂದ್ರಶೇಖರ ಐತಾಳ ಜಾನಪದ ಪ್ರಶಸ್ತಿ ಪಡೆದಿದ್ದಾರೆ. ಶ್ರೀ ಮೊಗಳ್ಳಿ ಗಣೇಶ್ ಅವರ ಭೂಮಿ ಕಥಾ ಸಂಕಲನಕ್ಕೆ ಬಿ.ಎಚ್. ಶ್ರೀಧರ ಸಾಹಿತ್ಯ ಪ್ರಶಸ್ತಿ ಹಾಗೂ ಯು.ಆರ್. ಅನಂತಮೂರ್ತಿ ಪ್ರಶಸ್ತಿಯನ್ನು ಪಡೆದು ಇವರೆಲ್ಲ ವಿಶ್ವವಿದ್ಯಾಲಯಕ್ಕೆ ಹೆಸರು ತಂದಿದ್ದಾರೆ.

ವಿಶ್ವವಿದ್ಯಾಲಯದ ಇದುವರೆಗಿನ ಪ್ರಗತಿಗೆ ನೈತಿಕವಾಗಿ, ಸಂಪತ್ತಿಕವಾಗಿ ಸಾಂಸ್ಕೃತಿಕವಾಗಿ ಮತ್ತು ಶೈಕ್ಷಣಿಕವಾಗಿ ನೆರವು ನೀಡಿದ ಔದಾರ್ಯ ನಿಧಿಗಳಾದ ಎಲ್ಲ ಮಹನೀಯರನ್ನು, ಇದರ ಅಭಿವೃದ್ಧಿಯ ಬಗ್ಗೆ ಆಶಾವಾದಿಗಳಾಗಿದ್ದು, ಸೃಜನಶೀಲ ಮತ್ತು ಕ್ರಿಯಾಶೀಲ ಸಲಹೆಗಳನ್ನು ನೀಡುತ್ತಿರುವ ಎಲ್ಲ ಹಿರಿಯರನ್ನು ಈ ಸಂದರ್ಭದಲ್ಲಿ ವಿಶೇಷವಾಗಿ ನೆನೆಯುತ್ತ ಅವರಿಗೆ ನೂರು ನಮನಗಳನ್ನು ಅರ್ಪಿಸುತ್ತಿದ್ದೇನೆ. ಹಾಗೆಯೇ ಕರ್ನಾಟಕ ಸರ್ಕಾರ ಕನ್ನಡ ನಾಡಿನ ಸಾಂಸ್ಕೃತಿಕ ಜೀವನಾಡಿಯಾಗಿರುವ ಈ ವಿಶ್ವವಿದ್ಯಾಲಯ ಮತ್ತಷ್ಟು ಉತ್ಕೃಷ್ಟವಾಗಲು ಪ್ರತಿವರ್ಷ ಕನಿಷ್ಠ ೮ ಕೋಟಿ ರೂಪಾಯಿಗಳ ಅನುದಾನವನ್ನು ನೀಡಬೇಕೆಂದು ಮತ್ತು ನಮ್ಮ ಶಿಕ್ಷಣ ತಜ್ಞರೂ ಹಾಗೂ ಆಡಳಿತ ದಕ್ಷರೂ ಆದ ಉನ್ನತ ಶಿಕ್ಷಣ ಸಚಿವರು ಇದನ್ನು ಪೂರೈಸಿ ಕೊಡಬೇಕೆಂದು ಭಿನ್ನವಿಸುತ್ತೇನೆ. ಇದೇ ಸಂದರ್ಭದಲ್ಲಿ ಎಂಟು ಹತ್ತು ವರ್ಷಗಳಿಂದ ಕೇವಲ ಕ್ರೋಢಿಕೃತ ನೌಕರರಾಗಿ ಅತಂತ್ರ ಸ್ಥಿತಿಯಲ್ಲಿ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯವರನ್ನು ಖಾಯಂಗೊಳಿಸಬೇಕೆಂದು ಶಿಕ್ಷಣ ಸಚಿವರನ್ನು ವಿನಂತಿಸುತ್ತೇನೆ.

ಈ ಎಲ್ಲ ಕ್ಷೇತ್ರಗಳಲ್ಲಿ ಕನ್ನಡ ವಿಶ್ವವಿದ್ಯಾಲಯ ನಡೆದು ಬಂದಿರುವ ದಾರಿ ವಿಶಿಷ್ಟವಾದುದಾಗಿದೆ. ಆದರೆ, ನಾವು ಕ್ರಮಿಸಬೇಕಾದ ಹಾದಿ ಸಾಕಷ್ಟು ದೀರ್ಘವಾಗಿದೆ ಮತ್ತು ಮುಟ್ಟಬೇಕಾದ ಸಾಧನೆಯ ಶಿಖರಗಳು ಇನ್ನೂ ನೂರಾರಿವೆ ಎಂಬುದನ್ನು ವಿನಯಪೂರ್ವಕವಾಗಿ ಭಿನ್ನವಿಸಿಕೊಳ್ಳುತ್ತೇನೆ. ತಮ್ಮ ವಿಶಿಷ್ಟ ಪ್ರತಿಭೆ ಮತ್ತು ಪರಿಶ್ರಮಗಳಿಂದ ಹಾಗೂ ಅಸಾಧಾರಣವಾದ ಆಡಳಿತ ದಕ್ಷತೆಯಿಂದ ಭಾರತದ ಹತ್ತಾರು ಹುದ್ದೆಗಳನ್ನು ಅರ್ಥಪೂರ್ಣವಾಗಿ ಅಲಂಕರಿಸಿ ಆ ಸ್ಥಾನಗಳಿಗೆ ಮಹತ್ತರವಾದ ಶೋಭೆಯನ್ನು, ಅನನ್ಯತೆಯನ್ನು ತಂದುಕೊಟ್ಟು ಎಲ್ಲರ ಪ್ರೀತಿ, ಗೌರವಗಳಿಗೆ ಪಾತ್ರವಾಗಿರುವ ವಿದ್ವತ್‌ಪ್ರಿಯರು, ಸಂಸ್ಕೃತಿಪ್ರಿಯರು, ಪ್ರಗತಿಪರರು ಆದಂತಹ ಕರ್ನಾಟಕ ಗೌರವಾನ್ವಿತ ರಾಜ್ಯಪಾಲರು ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳ ಕುಲಾಧಿಪತಿಗಳೂ ಆದ ಸನ್ಮಾನ್ಯ ಶ್ರೀ ಟಿ.ಎನ್. ಚತುರ್ವೇದಿ ಅವರು ಈ ಘಟಿಕೋತ್ಸವದಲ್ಲಿ ಭಾಗವಹಿಸಿ ಪಿಎಚ್.ಡಿ. ಮತ್ತು ಡಿ.ಲಿಟ್. ಪದವಿಗಳನ್ನು ಹಾಗೂ ನಾಡೋಜ ಪ್ರಶಸ್ತಿಗಳನ್ನು ವಿತರಿಸಲು ಸಂತೋಷದಿಂದ ಒಪ್ಪಿಕೊಂಡು ಆಗಮಿಸಿರುವುದಕ್ಕಾಗಿ ಅವರನ್ನು ಹೃದಯದುಂಬಿ ವಿನಯಪೂರ್ವಕವಾಗಿ ಸ್ವಾಗತಿಸುತ್ತೇನೆ. ಹಾಗೆಯೇ ಕರ್ನಾಟಕ ಕಂಡ ಶ್ರೇಷ್ಠ ಶಿಕ್ಷಣ ಸಚಿವರಲ್ಲಿ, ದಕ್ಷ ಮತ್ತು ಪಾರದರ್ಶಕ ಆಡಳಿತಗಾರರಲ್ಲಿ ಒಬ್ಬರಾದ ದೂರದರ್ಶಿತ್ವ ಮತ್ತು ಯೋಜನಾಶೀಲತೆಗಳನ್ನು ಮೈಗೂಡಿಸಿಕೊಂಡಿರುವ ನಮ್ಮ ಉನ್ನತ ಶಿಕ್ಷಣ ಸಚಿವರಾದ ಸನ್ಮಾನ್ಯ ಡಾ. ಜಿ. ಪರಮೇಶ್ವರ ಅವರನ್ನು ಈ ಮಹತ್ವದ ಸಮಾರಂಭಕ್ಕೆ ಮತ್ತೊಮ್ಮೆ ಸ್ವಾಗತಿಸುತ್ತೇನೆ. ಈ ವರ್ಷ ನಮ್ಮ ಕರೆಗೆ ಓಗೊಟ್ಟು ನಮ್ಮ ವಿಶ್ವವಿದ್ಯಾಲಯದ ಸರ್ವಶ್ರೇಷ್ಠ ಪ್ರಶಸ್ತಿಯಾದ ನಡೋಜ ಪ್ರಶಸ್ತಿಯನ್ನು ಸ್ವೀಕರಿಸಲು ಬಂದಿರುವ ಅಂತರಾಷ್ಟ್ರೀಯ ಖ್ಯಾತೀಯ ನೂರಾರು ವಿಶಿಷ್ಟ ಸಾಧನೆಗಳ ಕರ್ನಾಟಕದ ಮಹಾ ವಿಜ್ಞಾನಿ ಪ್ರೊ. ಸಿ.ಎನ್.ಆರ್.ರಾವ್. ಅವರನ್ನು, ಕರ್ನಾಟಕದ ಹಲವಾರು ಅತ್ಯುನ್ನತ ಹುದ್ದೆಗಳನ್ನು ಅಲಂಕರಿಸಿ, ತಾವು ಏರಿದ ಪ್ರತಿಸ್ಥಾನಕ್ಕೂ ತಮ್ಮ ದಕ್ಷ, ಪಾರದರ್ಶಕ, ಸಮಾಜಮುಖಿ ಆಡಳಿತದಿಂದ ಜನಮಾನಸದಲ್ಲಿ ಹಸಿರಾಗಿರುವ ಹಾಗೂ ತಮ್ಮ ಏಕವ್ಯಕ್ತಿ ಸಾಹಸದಿಂದ ಏಷಿಯಾ, ಖಂಡದಲ್ಲಿ ಅಭೂತಪೂರ್ವ ಎನಿಸಿರುವ ಜಾನಪದ ವಸ್ತುಸಂಗ್ರಹಾಲಯ, ಜಾನಪದ ಲೋಕವನ್ನು ನಿರ್ಮಿಸಿ

ಪ್ರಪಂಚದ ಜಾನಪದಾಸಕ್ತರ ಕಣ್ಣನ್ನು ರಾಮನಗರದ ಕಡೆಗೆ ತಿರುಗಿಸಿದ ಮಹಾ ಕನಸುಗಾರ, ಜಾನಪದ ವಿದ್ವಾಂಸ, ಹಿರಿಯ ಸಾಹಿತಿ ಶ್ರೀ ಎಚ್.ಎಲ್. ನಾಗೇಗೌಡ ಅವರನ್ನು ಮತ್ತು ಕನ್ನಡ ನಾಡಿನ ಶ್ರೇಷ್ಠ ಕವಿಗಳಲ್ಲಿ, ವಿಶಿಷ್ಟ ಚಿಂತಕರಲ್ಲಿ, ನಾಡಿನ ಸಾಂಸ್ಕೃತಿಕ ಹಿರಿಮೆಯನ್ನು ತಮ್ಮ ಕೃತಿಗಳ ಮೂಲಕ ಅನಾದೃಶ್ಯವಾಗಿ ಅಭಿವ್ಯಕ್ತಿಸಿರುವ ಚಿಂತನಶೀಲ ಕವಿ ಶ್ರೇಷ್ಠ ಶ್ರೀ ಚೆನ್ನವೀರಕಣವಿ ಅವರನ್ನು ಕನ್ನಡ ವಿಶ್ವವಿದ್ಯಾಲಯದ ಪರವಾಗಿ, ಅಖಂಡ ಕರ್ನಾಟಕದ ಸಮಸ್ತ ಸಂಸ್ಕೃತಿ ಚಿಂತಕರ ಪರವಾಗಿ, ಶಿಕ್ಷಣ ಲೋಕದ ಪರವಾಗಿ ಈ ವಿಶಿಷ್ಟ ಸಮಾರಂಭಕ್ಕೆ ಮತ್ತೊಮ್ಮೆ ಸ್ವಾಗತಿಸುತ್ತೇನೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಪ್ರಗತಿಗೆ ಮೂಲ ಸೆಲೆಯಾಗಿರುವ ಸಮಸ್ತರನ್ನು ಮತ್ತು ಇಲ್ಲಿ ಉಪಸ್ಥಿತರಿರುವ ಸರ್ವರನ್ನು, ವಿಶ್ವವಿದ್ಯಾಲಯದ ನನ್ನ ಎಲ್ಲ ಸಹೋದ್ಯೋಗಿಗಳ, ಆಡಳಿತ ಮಂಡಳಿ ಮತ್ತು ಕಾರ್ಯಕಾರಿ ಸಮಿತಿಯ ಪರವಾಗಿ ಮತ್ತು ವೈಯಕ್ತಿಕವಾಗಿ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

೧೮ ಡಿಸೆಂಬರ್ ೨೦೦೨

# ೯. ಸರ್ವಮುಖಿ ಅಭಿವೃದ್ಧಿಯ ಪಥದಲ್ಲಿ

ಕೋಟಿ ಕೋಟಿ ಕನ್ನಡಿಗರ ಹಲವು ವರ್ಷಗಳ ಅಭೀಪ್ಸೆ ಮತ್ತು ಪ್ರಯತ್ನಗಳಿಂದಾಗಿ ಈ ಮಹತ್ವದ ಐತಿಹಾಸಿಕ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಕನ್ನಡ ವಿಶ್ವವಿದ್ಯಾಲಯ ಆರಂಭಗೊಂಡು ಇದೀಗ ೧೨ ವರ್ಷಗಳು ತುಂಬುತ್ತಿವೆ. ಈ ಸಂತೋಷದ, ಸಂಭ್ರಮದ ಸಂದರ್ಭದಲ್ಲಿ ಜರುಗುತ್ತಿರುವ ೧೨ನೆಯ ನುಡಿಹಬ್ಬಕ್ಕೆ ಆಗಮಿಸಿರುವ ಘನತೆವೆತ್ತ ಕರ್ನಾಟಕದ ರಾಜ್ಯಪಾಲರೂ ಕುಲಾಧಿಪತಿಗಳೂ, ಆಡಳಿತದ ನಾನಾ ಶ್ರೇಣಿಗಳಲ್ಲಿ ಅಪರೂಪದ ದಕ್ಷತೆಯನ್ನು ಮೆರೆದು ಸರ್ವರ ಗೌರವಕ್ಕೆ ಪಾತ್ರರಾದ ಆದರಣೀಯ ಶ್ರೀ ಟಿ.ಎನ್. ಚರ್ತುವೇದಿ ಅವರೇ, ವಿಶ್ವ ವಿದ್ಯಾಲಯಗಳ ಸಮ ಕುಲಾಧಿಪತಿಗಳೂ ಶ್ರೇಷ್ಠ ಶಿಕ್ಷಣ ತಜ್ಞರೂ ಮತ್ತು ದಕ್ಷ ಆಡಳಿತಗಾರರೂ ಆದ ಸನ್ಮಾನ್ಯ ಡಾ. ಜಿ. ಪರಮೇಶ್ವರ ಅವರೇ, ಕಾನೂನು ಕ್ಷೇತ್ರದಲ್ಲಿ ಮಹಾತಜ್ಞರಾದ, ಉಚ್ಚ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಾಧೀಶರೂ, ಸಾಹಿತ್ಯ, ಸಂಸ್ಕೃತಿಗಳ ಬಗ್ಗೆ ಅಪಾರವಾದ ಒಲವುಳ್ಳ ವಿಚಾರವಂತರಾದ ಸನ್ಮಾನ್ಯ ಶ್ರೀ ವಿ.ಎಸ್. ಮಳೀಮಠ ಅವರೇ, ನಮ್ಮ ವಿಶ್ವವಿದ್ಯಾಲಯದ ಪ್ರತಿಷ್ಠಿತ ನಾಡೋಜ ಗೌರವ ಪದವಿ ವಿಭೂಷಿತರಾಗಲಿರುವ ನಾಡಿನ ಸುಪ್ರಸಿದ್ಧ ಕವಿಗಳೂ ನಾಟಕಕಾರರೂ ಮತ್ತು ಕನ್ನಡ ವಿಶ್ವವಿದ್ಯಾಲಯದ ಪ್ರಥಮ ಕುಲಪತಿಗಳೂ ಆದ ಡಾ. ಚಂದ್ರಶೇಖರ ಕಂಬಾರ ಅವರೇ, ಕನ್ನಡ ಕಂಡ ಅಪುರೂಪದ ಭಾವಶೀಲ ಮತ್ತು ಚಿಮತನಶೀಲ ಕವಿಗಳಾದ ಪ್ರೊ. ಕೆ.ಎಸ್. ನಿಸಾರ್ ಅಹಮದ್ ಅವರೇ, ಕನ್ನಡ ನಾಡು, ನುಡಿ, ಸಂಸ್ಕೃತಿ, ಸಾಹಿತ್ಯಗಳ ಕ್ರಿಯಾಶೀಲ ಅಭಿವೃದ್ಧಿಯ ಬಗ್ಗೆ ನಾಲ್ಕು ದಶಕಗಳಿಗಿಂತಲೂ ಅಧಿಕ ಕಾಲದಿಂದ ಸದ್ದುಗದ್ದಲವಿಲ್ಲದೆ ದುಡಿಯುತ್ತಿರುವ ಸ್ವಾತಂತ್ರ್ಯ ಹೋರಾಟಗಾರರಾದ ಸನ್ಮಾನ್ಯ ಶ್ರೀ ಜಿ. ನಾರಾಯಣ ಅವರೇ, ಗ್ರಾಮೀಣ ಪರಿಸರದಲ್ಲಿ ಹುಟ್ಟಿ ಸಹಜಕೃತಿಯ ಬಗ್ಗೆ ವಿನೂತನವಾದ ಪ್ರಯೋಗಗಳನ್ನು ಮಾಡಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಖ್ಯಾತಿಯನ್ನು ಪಡೆದಿರುವ ಕೃಷಿ ವಿಜ್ಞಾನಿ ಶ್ರೀ ಎಲ್. ನಾರಾಯಣರೆಡ್ಡಿ ಅವರೇ, ಕನ್ನಡ ರಂಗಭೂಮಿಯಲ್ಲಿ ತಮ್ಮ ಸಿರಿಕಂಠದಿಂದ ಮತ್ತು ಅದ್ಭುತ ವೈವಿಧ್ಯಮಯ ಪಾತ್ರಧಾರಿಯಾಗಿ ಕರ್ನಾಟಕದಲ್ಲಿ ಮನೆಮಾತಾಗಿರುವ ಸುಪ್ರಸಿದ್ಧ ಕಲಾವಿದೆ ಶ್ರೀಮತಿ ಸುಭದ್ರಮ್ಮ ಮನ್ಸೂರ್ ಅವರೇ ಮತ್ತು ಕನ್ನಡ ಸಣ್ಣಕತೆ, ಮತ್ತು ಕಾದಂಬರಿ ಕ್ಷೇತ್ರಗಳಲ್ಲಿ ಮತ್ತು ವಿಶೇಷವಾಗಿ ದಲಿತ ಹಾಗೂ ಸ್ತ್ರೀ ಜೀವನ ಚಿತ್ರಣದಲ್ಲಿ ವಿಶಿಷ್ಟ ಸಾಧನೆ ಮಾಡಿರುವ ಹಾಗೂ ಉತ್ತರ ಕರ್ನಾಟಕದ ಹಳ್ಳಿಯ ಭಾಷೆಯ ಜೀವಂತಿಕೆ ಮತ್ತು ಅರ್ಥವಂತಿಕೆಗಳನ್ನು ತಮ್ಮ ಕೃತಿಗಳಲ್ಲಿ ಸಮರ್ಥವಾಗಿ ದುಡಿಸಿಕೊಂಡಿರುವ ಖ್ಯಾತ ಲೇಖಕಿ ಶ್ರೀಮತಿ ಗೀತಾ ನಾಗಭೂಷಣ ಅವರೇ, ನಮ್ಮ ವಿಶ್ವವಿದ್ಯಾಲಯದ ಕಾರ್ಯಕಾರಿ ಮತ್ತು ಆಡಳಿತ ಮಂಡಳಿಯ ಸನ್ಮಾನ್ಯ ಸದಸ್ಯರೇ, ಗೌರವಾನ್ವಿತ ಅತಿಥಿ ಬಂಧುಗಳೇ, ಶಾಸಕರೇ, ಈ ಅನನ್ಯ ವಿಶ್ವವಿದ್ಯಾಲಯದ ಕ್ಷಿಪ್ರ ಪ್ರಗತಿಯಲ್ಲಿ ಕ್ರಿಯಾಪೂರ್ಣವಾದ ಪಾತ್ರವನ್ನು ವಹಿಸಿದ ಎಲ್ಲ ಮಹನೀಯರೇ, ಮಹಿಳೆಯರೇ, ಸರ್ವ ಸುದ್ದಿ ಮಾಧ್ಯಮಗಳ ಆತ್ಮೀಯ ಗೆಳೆಯರೇ ಹಾಗೂ ಈ ವಾರ್ಷಿಕ ಪದವಿ ಪ್ರಧಾನ ಸಮಾರಂಭದಲ್ಲಿ ಭಾಗಿಗಳಾಗಿ ಡಿ.ಲಿಟ್., ಪಿಎಚ್.ಡಿ., ಮತ್ತು

ಎಂ.ಫಿಲ್. ಪದವಿಗಳನ್ನು ಪಡೆಯಲಿರುವ ಎಲ್ಲ ವಿದ್ವಾಂಸರೆ, ತಮ್ಮೆಲ್ಲರನ್ನೂ ಈ ನುಡಿಹಬ್ಬದ ಸಮಾರಂಭಕ್ಕೆ ಗೌರವಪೂರ್ವಕವಾಗಿ ಸ್ವಾಗತಿಸುತ್ತಿದ್ದೇನೆ.

ತಮ್ಮೆಗೆಲ್ಲರಿಗೂ ತಿಳಿದಿರುವಂತೆ ನಮ್ಮ ಈ ಕನ್ನಡ ವಿಶ್ವವಿದ್ಯಾಲಯ ಭಾರತದಲ್ಲೇ ಒಂದು ಅನನ್ಯ ವಿಶಿಷ್ಟವಾದ ವಿಶ್ವವಿದ್ಯಾಲಯವಾಗಿದೆ. ತನ್ನ ಪರಿಸರದ ಮತ್ತು ಮೂಲದ ದೇಶೀಯ ಸಂಸ್ಕೃತಿಯನ್ನು ಎಲ್ಲ ನಿಟ್ಟುಗಳಲ್ಲಿ ಸಂರಕ್ಷಿಸುತ್ತಲೇ ಅಭಿವೃದ್ಧಿ ಪಡಿಸುತ್ತಲೇ ರಾಷ್ಟ್ರದ ಮತ್ತು ವಿಶ್ವದ ಎಲ್ಲ ಜ್ಞಾನ ವಿಜ್ಞಾನಗಳ ಬೆಳಕುಗಳನ್ನು ತನ್ನೊಳಗೆ ಆಹ್ವಾನಿಸುತ್ತ, ತನ್ನಲ್ಲಿ ಸಂಲಗ್ನಗೊಳಿಸುತ್ತ, ಅದರ ಫಲಿತಗಳನ್ನು ದಿಕ್ಕು ದಿಕ್ಕಿಗೆ ಎತ್ತಿ ಹಿಡಿಯುವ ಮಹಾನ್ ಕಾಯಕದೊಡನೆ ಈ ವಿಶ್ವವಿದ್ಯಾಲಯ ಆರಂಭವಾಗಿದೆ. ಕನ್ನಡ ಪ್ರಜ್ಞೆಯನ್ನು ವಿಶ್ವ ಪ್ರಜ್ಞೆಯನ್ನಾಗಿಸಿ ಮತ್ತು ವಿಶ್ವ ಪ್ರಜ್ಞೆಯನ್ನು ಕನ್ನಡ ಪ್ರಜ್ಞೆಯನ್ನಾಗಿಸಿ ಕನ್ನಡ ಭಾಷೆಯ ಮೂಲಕ ಕನ್ನಡಿಗರಿಗೆ ದಕ್ಕಿಸಿಕೊಡುವ ವಿಶಿಷ್ಟ ಉನ್ನತ ಧ್ಯೇಯದೊಡನೆ ಆರಂಭವಾದ ಈ ವಿಶ್ವವಿದ್ಯಾಲಯ ತನ್ನ ಈ ಗುರುತರ ಹೊಣೆಯನ್ನು ಧಾರಣ ಮಾಡಿಕೊಂಡು ಈ ೧೨ ವರ್ಷಗಳ ಅವಧಿಯನ್ನು ಸಾರ್ಥಕವಾಗಿ ಕ್ರಮಿಸಿದೆ ಎಂದು ತಿಳಿಸಲು ಸಂತೋಷಿಸುತ್ತೇನೆ. ಕನ್ನಡ ನಾಡನ್ನು ಕನ್ನಡ ವಿಶ್ವವಿದ್ಯಾಲಯದಲ್ಲಿ ನೋಡು ಮತ್ತು ಕನ್ನಡ ವಿಶ್ವವಿದ್ಯಾಲಯ ನೋಡಿದಲ್ಲದೆ ಸಮಗ್ರ ಕರ್ನಾಟಕದ ವಿಶಿಷ್ಟ ದರ್ಶನ ಪರಿಪೂರ್ಣವಾಗದು ಎಂಬಂತೆ ಈ ಮಹಾನ್ ಸಂಸ್ಥೆಯನ್ನು ರೂಪುಗೊಳಿಸುವ ಅರ್ಥಪೂರ್ಣ ದೀಕ್ಷೆಯನ್ನು ನಾವು ವಹಿಸಿದ್ದೇವೆ.

ನಮ್ಮ ವಿಶ್ವವಿದ್ಯಾಲಯದಲ್ಲಿ ಕನ್ನಡ ಭಾಷಾಧ್ಯಯನ, ಕನ್ನಡ ಸಾಹಿತ್ಯಾಧ್ಯಯನ, ದ್ರಾವಿಡ ಸಂಸ್ಕೃತಿ ಅಧ್ಯಯನ, ಮಹಿಳಾ ಅಧ್ಯಯನ, ಅಭಿವೃದ್ಧಿ ಅಧ್ಯಯನ, ಭಾಷಾಂತರ ಅಧ್ಯಯನ, ಜಾನಪದ, ಬುಡಕಟ್ಟು, ಶಾಸನ, ಹಸ್ತಪ್ರತಿ, ಇತಿಹಾಸ, ಪುರಾತತ್ವ, ವಿಜ್ಞಾನ ಇತಿಹಾಸ, ಸಂಗೀತ ಮತ್ತು ನೃತ್ಯ, ಚಿತ್ರಕಲೆ, ಶಿಲ್ಪಕಲೆ, ವಿಜ್ಞಾನ, ವಿಭಾಗಗಳು ಅಸ್ತಿತ್ವದಲ್ಲಿದ್ದು, ತಮ್ಮ ತಮ್ಮ ವಿಷಯಗಳಲ್ಲಿ ವಿಶಿಷ್ಟವೂ ನವೀನವೂ ಆದ ಸಂಶೋಧನೆಗಳನ್ನು ಕೈಗೊಂಡಿವೆ.

"ಮಾತೆಂಬುದು ಜ್ಯೋತಿರ್ಲಿಂಗ" ಎಂಬ ಧ್ಯೇಯ ವಾಕ್ಯವನ್ನು ಧಾರಣೆ ಮಾಡಿರುವ ನಮ್ಮ ವಿಶ್ವವಿದ್ಯಾಲಯ ಕನ್ನಡ ಭಾಷೆಯನ್ನು ಸಮಗ್ರ ಕನ್ನಡಿಗರ ಬದುಕನ್ನು ಕಟ್ಟಿಕೊಡುವಂತೆ ಸಮರ್ಥಗೊಳಿಸುವ ಮತ್ತು ಕನ್ನಡ ಬದುಕು ವಿಶ್ವ ವಿಸ್ತೃತವಾಗುವಂತೆ ಮಾಡುವ ಗುರಿಗಳನ್ನು ಮುಟ್ಟುವ ದಾರಿಯಲ್ಲಿ ಆಶಾದಾಯಕವಾಗಿ ಕ್ರಮಿಸುತ್ತದೆ. ಇದರಿಂದಾಗಿ ಕನ್ನಡ ಭಾಷೆ, ಸಾಹಿತ್ಯ, ಇತಿಹಾಸ, ಸಂಸ್ಕೃತಿ, ಜಾನಪದ, ಮುಂತಾದ ನೆಲೆಗಳಲ್ಲಿ ಕಣ್ಣು ಕೋರೈಸುವ ಹೊಸ ಫಲಿತಗಳನ್ನು ಹಡೆಯುತ್ತ, ಸಮಗ್ರ ಕನ್ನಡದ ಸಮೃದ್ಧಿಯನ್ನು ಹೆಚ್ಚಿಸುತ್ತಿವೆ. ಮೇಲೆ ಉಲ್ಲೇಖಿಸಿದ ವಿಭಾಗಗಳಲ್ಲದೆ ವಿಶಿಷ್ಟ ಕ್ಷೇತ್ರದ ಅಧ್ಯಯನಕ್ಕೆ ಒತ್ತುಕೊಡುವ ಅಧ್ಯಯನ ಪೀಠಗಳನ್ನು ಪ್ರಾರಂಭಿಸುವ ಮೂಲಕ ಆ ಕ್ಷೇತ್ರದ ಸೂಕ್ಷ್ಮವಾದ ಅಧ್ಯಯನ, ಸಂಶೋಧನೆ ಮತ್ತು ಪ್ರಕಟಣೆಗಳಿಗೆ ಹೊಸ ದಾರಿಯನ್ನು ಕಲ್ಪಿಸಲಾಗಿದೆ. ಈ ದಿಸೆಯಲ್ಲಿ ಈಗಾಗಲೇ ಲೋಹಿಯಾ ಅಧ್ಯಯನ ಪೀಠ, ದಲಿತ ಅಧ್ಯಯನ ಪೀಠ, ಪುರಂದರದಾಸ ಅಧ್ಯಯನ ಪೀಠ, ಡಾ. ಶಂಬಾ ಜೋಶಿ ಅಧ್ಯಯನ ಪೀಠ ಮತ್ತು ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಅಧ್ಯಯನ ಪೀಠ ಹಾಗೂ ವಾಲ್ಮೀಕಿ ಅಧ್ಯಯನ ಪೀಠಗಳನ್ನು ಸ್ಥಾಪಿಸಲಾಗಿದೆ. ಮುಂದಿನ ತಿಂಗಳು ಜೈನ ಸಂಸ್ಕೃತಿ ಅಧ್ಯಯನ ಪೀಠ ಉದ್ಘಾಟನೆಯಾಗಲಿದೆ. ಈ ಪೀಠಗಳು ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಜೊತೆಗೆ ಬದುಕಿಗೆ ನೇರವಾಗಿ ಸಂಬಂಧಿಸಿದ ಜ್ವಲಂತ ಸಮಸ್ಯೆಗಳ ವಿಶ್ಲೇಷಣೆ ಮತ್ತು ಪರಿಹಾರಗಳನ್ನು ಕಂಡುಕೊಳ್ಳಲು ದಾರಿ ಮಾಡಿಕೊಡುತ್ತಲಿವೆ.

ಇದುವರೆಗೆ ನಮ್ಮ ವಿಶ್ವವಿದ್ಯಾಲಯದಲ್ಲಿ ೧೨೩ ವಿದ್ಯಾರ್ಥಿಗಳು ಪಿ.ಎಚ್.ಡಿ. ಪದವಿಯನ್ನು, ೧೧೧ ವಿದ್ಯಾರ್ಥಿಗಳು ಎಂ.ಫಿಲ್. ಪದವಿಯನ್ನು ಹಾಗೂ ೧೫ ಜನ ಡಿ.ಲಿಟ್ ಪದವಿಯನ್ನು ಪಡೆದಿದ್ದಾರೆ. ಇದುವರೆಗೆ ೨೦೦ ಜನ ಪಿ.ಎಚ್.ಡಿ.ಗೆ ನೋಂದಣಿ ಮಾಡಿಸಿದ್ದು, ಈ ದಿನ ೪೪ ಜನ ಪಿಎಚ್.ಡಿ. ಪದವಿ ಮತ್ತು ಇಬ್ಬರು ಡಿ.ಲಿಟ್ ಪದವಿ ಹಾಗೂ ೨೩ ಜನ ಎಂ.ಫಿಲ್. ಪದವಿಯನ್ನು ಪಡೆಯಲಿದ್ದಾರೆ. ಈ ವಿಶ್ವವಿದ್ಯಾಲಯದ ಇತಿಹಾಸದಲ್ಲೇ ಇದು ದೊಡ್ಡ ಸಂಖ್ಯೆಯಾಗಿದ್ದು, ಪ್ರೌಢ ಸಂಶೋಧನಾಸಕ್ತರ, ಗಮನ, ಗೌರವಗಳನ್ನು ಇದು ಅಧಿಕ ಪ್ರಮಾಣದಲ್ಲಿ ಗಳಿಸಿಕೊಳ್ಳುತ್ತಿರುವುದರ ದ್ಯೋತಕವಾಗಿದೆ.

ಇದುವರೆಗೆ ಸಂಶೋಧನೆಯನ್ನೇ ತನ್ನ ಪ್ರಥಮ ಮತ್ತು ಅಂತಿಮ ಗುರಿಯಾಗಿ ಅವಲಂಬಿಸಿದ್ದ ನಮ್ಮ ವಿಶ್ವವಿದ್ಯಾಲಯ ಇದೀಗ ಶೋಧನೆಯ ಜೊತೆಗೆ ಬೋಧನೆಯ ದಾರಿಯನ್ನು ಒಳಗೊಳ್ಳುತ್ತಿದೆ ಎಂದು ತಿಳಿಸಲು ಸಂತೋಷಿಸುತ್ತೇನೆ. ಇತರ ವಿಶ್ವವಿದ್ಯಾಲಯಗಳಲ್ಲಿ ಬೋಧಿಸಲಾಗದಿರುವ ಅಸಾಂಪ್ರದಾಯಕವಾದ, ಆದರೆ, ಆಧುನಿಕ ಬದುಕಿಗೆ ಅಗತ್ಯವಾದ ಜ್ಞಾನವನ್ನು ಒದಗಿಸುವ ದೂರಶಿಕ್ಷಣ ವಿಧಾನದ ೭ ಡಿಪ್ಲೋಮಾ ಅಧ್ಯಯನಗಳನ್ನು ಕಳೆದ ವರ್ಷ ಆರಂಭಿಸಲಾಗಿದೆ. ಬೇರೆ ಬೇರೆ ಉದ್ಯೋಗಗಳಲ್ಲಿದ್ದೂ ಹೊಸ ಜ್ಞಾನ ದಿಗಂತಗಳನ್ನು ದರ್ಶಿಸಬೇಕೆನ್ನುವ, ಸ್ಪರ್ಶಿಸಬೇಕೆನ್ನುವ ಜ್ಞಾನದಾಹಿಗಳಿಗೆ ಅತ್ಯಂತ ಉಪಯುಕ್ತವಾಗಿವೆ. ಆರಂಭದ ಪ್ರೋತ್ಸಾಹದಾಯಕ ಪ್ರತಿಕ್ರಿಯೆಯಿಂದಾಗಿ ಈ ವರ್ಷ ಜನಪದ ಸಂಗೀತ, ಜನಪದ ಕರಕುಶಲ ಕಲೆಗಳು, ನಾಟಕ ಕಲೆ, ಅಭಿವೃದ್ಧಿ ಸಂವಹನ, ಪಾರಂಪರಿಕ ಜ್ಞಾನ, ಬುಕಡಟ್ಟು ಅಧ್ಯಯನ, ಭಾಷಾಂತರ ಅಧ್ಯಯನ ಡಿಪ್ಲೋಮಾ ತರಗತಿಗಳಲ್ಲದೆ ಹಿಂದೂಸ್ತಾನಿ ಮತ್ತು ಕರ್ನಾಟಕ ಸಂಗೀತದಲ್ಲಿ ಪದವಿ ತರಗತಿಗಳೂ ಆರಂಭವಾಗಿದ್ದು ಈ ವರ್ಷ ಸ್ನಾತಕೋತ್ತರ ಚಿತ್ರಕಲೆ ಮತ್ತು ಸಂಗೀತ ಕೋರ್ಸ್‌ಗಳನ್ನು ಆರಂಭಿಸಲಾಗಿವೆ. ಬಾದಾಮಿಯ ಕೇಂದ್ರದಲ್ಲಿ ಶಿಲ್ಪಕಲೆ ಮತ್ತು ಚಿತ್ರಕಲೆಗಳಲ್ಲಿ ೫ ವರ್ಷದ ಪದವಿ ತರಗತಿಗಳನ್ನು ಆರಂಭ ಮಾಡಿರುವುದರಿಂದ ಈ ಕಲೆಗಳ ಅಭ್ಯಾಸಿಗಳಿಗೆ ಹಾಗೂ ಆ ಕ್ಷೇತ್ರದಲ್ಲಿ ತಮ್ಮ ವೃತ್ತಿಯನ್ನು ಅರಸಬೇಕೆನ್ನುವವರಿಗೆ ಆಶಾದಾಯಕವಾದ ಮಾರ್ಗವೊಂದು ತೆರೆದಂತಾಗಿದೆ. ಹೊಸ ಕಾಲದ ಅಗತ್ಯಗಳಿಗೆ ಮತ್ತು ಅಭೀಪ್ಸೆಗಳಿಗೆ ತಕ್ಕಂತೆ ಪದವಿ ತರಗತಿಗಳಲ್ಲಿ ಹೊಸ ಆವಿಷ್ಕಾರಗಳನ್ನು ಮತ್ತು ನವೀನ ಜ್ಞಾನ ಶಾಖೆಗಳನ್ನು ಅಂತರ್‌ಶಿಸ್ತೀಯವಾಗಿ ಅಧ್ಯಯನ ಮಾಡುವ ಅವಕಾಶವನ್ನು ಒದಗಿಸುವುದು ವಿದ್ಯಾರ್ಥಿಗಳ ಮಾನಸಿಕ ಜ್ಞಾನ ವಿಕಾಸದ ದೃಷ್ಟಿಯಿಂದ ಅತ್ಯವಶ್ಯಕವೆಂಬುದನ್ನು ಮನಗಂಡು ಎಂ.ಎ., ಪಿ.ಎಚ್.ಡಿ. (೪ ವರ್ಷಗಳ ಸಂಯೋಜಿತ ಅಧ್ಯಯನ)ಯನ್ನು ಕನ್ನಡ ಸಾಹಿತ್ಯ, ಜಾನಪದ ಮತ್ತು ಮಹಿಳಾ ಅಧ್ಯಯನ ವಿಷಯಗಳನ್ನು ನಮ್ಮ ಕನ್ನಡ, ಚೆಲುವ ಕನ್ನಡ, ಪುಸ್ತಕ ಮಾಹಿತಿ, ವಿಜ್ಞಾನ ಸಂಗಾತಿ ನಿಯತಕಾಲಿಕೆಗಳನ್ನು ಪ್ರಕಟವಾಗುತ್ತಿದ್ದು ಇವುಗಳ ಜೊತೆಗೆ ಜಾನಪದ ಕರ್ನಾಟಕ, ಅಭಿವೃದ್ಧಿ ಅಧ್ಯಯನ, ದ್ರಾವಿಡ ಅಧ್ಯಯನ, ಬುಡಕಟ್ಟು ಅಧ್ಯಯನ, ಶಾಸನ ಅಧ್ಯಯನ, ಹಸ್ತಪ್ರತಿ ಅಧ್ಯಯನ ಎಂಬ ಆರು ನಿಯತಕಾಲಿಕೆಗಳನ್ನು ಪ್ರಕಟಸಿಲಾಗುತ್ತಿದ್ದು, ಅವೆಲ್ಲ ಆಯಾ ಕ್ಷೇತ್ರದ ಓದುಗರಿಗೆ ಅತ್ಯಂತ ಪ್ರಿಯವಾಗಿವೆ. ಇವು ಆಯಾ ಕ್ಷೇತ್ರದ ಸಂಶೋಧಕರ ವಿಶಿಷ್ಟ ಬಗೆಯ ಹೊಸ ಬರಹಗಳನ್ನು ಪ್ರಕಟಿಸುವ ಮೂಲಕ ಕನ್ನಡ ಜ್ಞಾನ ಬಹುಮುಖವಾಗಿ ಅರಳಲು ಸಾಧನವಾಗಿವೆ. ಇದೇ ವರ್ಷ ಪಿ.ಯು.ಸಿ. ತರಗತಿಯಿಂದ ಹಿಡಿದು ಸ್ನಾತಕೋತ್ತರ ತರಗತಿವರೆಗೆ ವಿದ್ಯಾರ್ಥಿಗಳಿಗೆ ಕನ್ನಡದಲ್ಲಿ ಕಲಿಯಲು ಸಾಧ್ಯವಾಗುವಂತೆ ವಿಜ್ಞಾನ, ತಂತ್ರಜ್ಞಾನ ಮತ್ತು ಮಾನವಿಕಗಳಲ್ಲಿ ಪೂರಕ ಪಠ್ಯಗಳನ್ನು ಪರಿಣಿತರಿಂದ ಬರೆಯಿಸಿ ಪ್ರಕಟಿಸಲು ಪಠ್ಯಪುಸ್ತಕ ವಿಭಾಗವನ್ನು ಮತ್ತು ವಿಜ್ಞಾನ ಲೋಕದ ಅಮಿತ ಸಾಧನೆಗಳನ್ನು ಸಾದರ ಪಡಿಸುವ ವಿಜ್ಞಾನ ಇತಿಹಾಸಕ್ಕೆ ಸಂಬಂಧಿಸಿದ ವಿಜ್ಞಾನ ಇತಿಹಾಸ ವಿಭಾಗವನ್ನು ಆರಂಭಿಸಲಾಗುತ್ತಿದೆ.

ವಿಶ್ವವಿದ್ಯಾಲಯದ ಅತ್ಯಂತ ಪ್ರಮುಖ ಭಾಗಗಳಲ್ಲಿ ಒಂದಾದ ಪ್ರಸಾರಾಂಗ ಇದುವರೆಗೆ ಬಗೆ ಬಗೆಯ ಜ್ಞಾನ ಕ್ಷೇತ್ರಗಳ ಅರಿವನ್ನು ಸಂಚಯಿಸುವ, ಪ್ರಸಾರ ಮಾಡುವ ಸುಮಾರು ೮೦೦ ಗ್ರಂಥಗಳನ್ನು ಪ್ರಕಟಿಸುವ ಮೂಲಕ ಪ್ರಕಟಣಾ ಇತಿಹಾಸದಲ್ಲಿ ಒಂದು ಹೆದ್ದಾರಿಯನ್ನೇ ತೆರೆದಿದೆ ಎಂಬುದು ಅಭಿಮಾನದ ಸಂಗತಿಯಾಗಿದೆ. ಪಿ.ಯು.ಸಿ. ಮತ್ತು ಪದವಿ ತರಗತಿಗಳಲ್ಲಿ ವಿಜ್ಞಾನವನ್ನು ಕನ್ನಡದಲ್ಲಿ ಪರಿಣಾಮಕಾರಿಯಾಗಿ ಕಲಿಸಲು ಅನುಕೂಲವಾಗುವಂತೆ ಕನ್ನಡ ವಿಜ್ಞಾನ ಪಠ್ಯಗಳನ್ನು ತಯಾರಿಸಲು ಶಿಕ್ಷಣ ಇಲಾಖೆ ವಿಶ್ವವಿದ್ಯಾಲಯವನ್ನು ಕೋರಿದ್ದು, ಈಗಾಗಲೇ ಪಿ.ಯು.ಸಿ. ಮಟ್ಟದ ಎಂಟು ವಿಜ್ಞಾನ ಪಠ್ಯಗಳನ್ನು ಪರಿಣಿತರಿಂದ ಸಿದ್ಧಪಡಿಸಲಾಗಿದೆ; ವಿಜ್ಞಾನದ ಈಚಿನ ಬೆಳವಣಿಗೆಯನ್ನು ಕುರಿತ ವಿಜ್ಞಾನ ಇತಿಹಾಸ, ವಿಜ್ಞಾನಿಗಳ ಇತಿಹಾಸ ಬೃಹತ್ ಸಂಪುಟಗಳ ಸಿದ್ಧವಾಗುತ್ತಿವೆ. ಪ್ರಾಥಮಿಕ ತರಗತಿಯಿಂದ ಸ್ನಾತಕೋತ್ತರ ತರಗತಿಗಳವರೆಗೆ ಉಪಯುಕ್ತವಾಗುವ ವಿಜ್ಞಾನ ಮತ್ತು ಸಮಾಜವಿಜ್ಞಾನ ಗ್ರಂಥಗಳ ಸಿದ್ಧತೆಗಾಗಿ ಪ್ರತ್ಯೇಕ ಪಠ್ಯಪುಸ್ತಕ ರಚನಾ ವಿಭಾಗವನ್ನು ರಚಿಸಲಾಗುತ್ತಿದೆ. 'ಸಾಮಾನ್ಯರಿಗಾಗಿ ಕಾನೂನು' ಮಾಲೆಯಲ್ಲಿ ಜನಸಾಮಾನ್ಯರಿಗೆ ಕಾನೂನು ಜ್ಞಾನ ನೀಡುವ ಪುಸ್ತಕಗಳನ್ನು ಪ್ರಕಟಿಸಲಾಗುತ್ತಿದೆ.

ಅತ್ಯಂತ ಮಹತ್ತರವಾದ ೨೫ ಹೊಸ ಪುಸ್ತಕಗಳನ್ನು ಮತ್ತು ೫ ನಿಯತಕಾಲಿಕೆಗಳನ್ನು ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ. ಕೃಷ್ಣ ಅವರು ಕಳೆದ ತಿಂಗಳು ಬಿಡುಗಡೆ ಮಾಡಿದ್ದಾರೆ. ಈ ಶೈಕ್ಷಣಿಕ ವರ್ಷದಲ್ಲಿ ಜರ್ನಲ್ ಆಫ್‌ಕರ್ನಾಟಕ ಸ್ಟಡೀಸ್ 'ಇಂಗ್ಲಿಷ್' ಎಂಬ

ನಿಯತಕಾಲಿಕೆಯನ್ನು ಆರಂಭಿಸಲಾಗಿದೆ. ಒಟ್ಟಿನಲ್ಲಿ ಕರ್ನಾಟಕದ ಹಾಗೂ ವಿಶ್ವದ ಸಮಗ್ರ ಜ್ಞಾನ ಸಂಪತ್ತನ್ನು ಕನ್ನಡದ ಮೂಲಕ ಕನ್ನಡಿಗರಿಗೆ ದೊರಕಿಸುವ ಮಹದಾಶಯ ನಮ್ಮದು. ಇದನ್ನು ಸಾಕಾರಗೊಳಿಸಲು ಸರ್ಕಾರದ, ಕೇಂದ್ರ ಮಾನವ ಸಂಪನ್ಮೂಲ ಇಲಾಖೆಯ ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಸಂಸತ್ ಸದಸ್ಯರ, ಶಾಸಕರ ಮತ್ತು ಉದಾರಿಗಳಾದ ಸಂಸ್ಕೃತಿ ಶ್ರೀಮಂತರ ಸಹಾಯವನ್ನು ವಿಶ್ವವಿದ್ಯಾಲಯ ಭರವಸೆಯ ಕಣ್ಣುಗಳಿಂದ ನಿರೀಕ್ಷಿಸುತ್ತಿದೆ.

ಮೂಲಭೂತ ಸೌಕರ್ಯಗಳ ಕೊರತೆಯನ್ನು ಅನುಭವಿಸುತ್ತಿದ್ದ ವಿಶ್ವವಿದ್ಯಾಲಯದಲ್ಲಿ ಕಳೆದ ಮೂರು ವರ್ಷಗಳಿಂದ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ. ರಸ್ತೆಗಳ ಡಾಂಬರೀಕರಣ, ಉಪಾಹಾರ ಗೃಹ ಸೌಲಭ್ಯ, ಹೊಸ ರಸ್ತೆಗಳ ನಿರ್ಮಾಣ, ವಿದ್ಯುದ್ದೀಕರಣ, ಕುಡಿಯುವ ನೀರಿನ ಸೌಲಭ್ಯ, ವಾಹನ ವ್ಯವಸ್ಥೆ, ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯಿಂದ ಕೊಡುಗೆಯಾಗಿ ಹೊಸ ಬಸ್ಸು ಮುಂತಾದವುಗಳನ್ನು ಒದಗಿಸಲಾಗಿದೆ. ತ್ರಿಪದಿ, ತುಂಗಭದ್ರ, ಕೂಡಲ ಸಂಗಮ, ಘಟಿಕಾಲಯ, ಗಿರಿಸೀಮೆ, ಕಾಯಕದ ಮನೆ, ನವರಂಗ, ಜಕ್ಕಣ ಮಂಟಪ ಮುಂತಾದ ಹಳೆಯ ಕಟ್ಟಡಗಳನ್ನು ನವೀಕರಿಸಿ ಸುಸಜ್ಜಿತ ಗೊಳಿಸಲಾಗಿದೆ. ವಿಭಾಗಗಳ ವ್ಯವಸ್ಥೆಗಾಗಿ ಕೇಶಿರಾಜ, ಅಕ್ಕ, ಅಲ್ಲಮ್ಮ, ಹರಿಹರ, ನಾಗವರ್ಮ ಎಂಬ ಹೆಸರಿನ ಐದು ದಶಮಾನೋತ್ಸವ ನೆನಪಿನ ಅಧ್ಯಯನ ವಿಭಾಗ ಕಟ್ಟಡಗಳನ್ನು ಸುಮಾರು ೬೫ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿಸಿ, ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ.ಕೃಷ್ಣ ಅವರಿಂದ ಉದ್ಘಾಟಿಸಲಾಗಿದೆ. ೪೦ ಲಕ್ಷ ರೂಪಾಯಿ ವೆಚ್ಚದಲ್ಲಿ ವಿದ್ಯಾರ್ಥಿನಿಯರ ವಸತಿ ನಿಲಯವನ್ನು ನಿರ್ಮಿಸಲಾಗಿದೆ. ಸುಮಾರು ೯೦ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿಸಿರುವ 'ಸರ್ವಜ್ಞ' ಸಿರಿಗನ್ನಡ ಗ್ರಂಥಾಲಯ ಕಟ್ಟಡವನ್ನು ಮತ್ತು ನೃಪತುಂಗ ನಗರದಲ್ಲಿ ನಿರ್ಮಿಸಿರುವ ಆಡಳಿತಾಂಗ ಸಿಬ್ಬಂದಿ ವಸತಿಗೃಹಗಳನ್ನು ಘನತೆವೆತ್ತ ಕರ್ನಾಟಕದ ರಾಜ್ಯಪಾಲರೂ ಕುಲಾಧಿಪತಿಗಳು ಆದ ಸನ್ಮಾನ್ಯ ಶ್ರೀ ಟಿ.ಎನ್. ಚತುರ್ವೇದಿ ಅವರು ಈಗ ಉದ್ಘಾಟಿಸಿ ಇಲ್ಲಿಗೆ ಆಗಮಿಸಿದ್ದಾರೆ. ಮೊದಲನೆಯ ಕುಲಪತಿಗಳ ಕಾಲದಲ್ಲಿ ಆರಂಭಗೊಂಡು ಸ್ಥಗಿತವಾಗಿದ್ದ ಶಿಲ್ಪವನವನ್ನು ವಿಸ್ತರಿಸಿ ಅದಕ್ಕೆ ಆಕರ್ಷಕ ರೂಪವನ್ನು ನೀಡಲಾಗಿದೆ. ಸಂಸತ್ ಸದಸ್ಯರ ಅನುದಾನದಿಂದ ಸುಮಾರು ೧೦ ಲಕ್ಷ ರೂಪಾಯಿಗಳ ವೆಚ್ಚದ 'ಪಂಪ ಸಭಾಂಗಣ'ದ ನಿರ್ಮಾಣದ ಕಾರ್ಯ ಮುಕ್ತಾಯದ ಹಂತದಲ್ಲಿದೆ. ಮುಂದಿನ ವರ್ಷ ಮತ್ತಷ್ಟು ಅಧ್ಯಾಪಕರ ವಸತಿ ಗೃಹಗಳನ್ನು ವಿಭಾಗೀಯ ಕಟ್ಟಡಗಳನ್ನು ಹಾಗೂ ವಿದ್ಯಾರ್ಥಿ ನಿಲಯವನ್ನು ನಿರ್ಮಿಸಲು ಕ್ರಮಕೈಗೊಳ್ಳಲಾಗುತ್ತಿದೆ.

ವಿಶ್ವವಿದ್ಯಾಲಯ ಈ ವರ್ಷ ಹಮ್ಮಿಕೊಂಡಿರುವ ಮತ್ತೊಂದು ದಾಖಲಾರ್ಹ ಯೋಜನೆಯೆಂದರೆ 'ಸಿರಿಗನ್ನಡ ಗ್ರಂಥಾಲಯ' ಎಂಬ ದೇಶದಲ್ಲೇ ವಿಶಿಷ್ಟವಾದ ಪರಾಮರ್ಶನ ಗ್ರಂಥಾಲಯ. ಕನ್ನಡ ಲಿಪಿ ಉಗಮವಾದಂದಿನಿಂದ ಇಲ್ಲಿಯವರೆಗೆ ಪ್ರಕಟವಾದ ಎಲ್ಲ ಪುಸ್ತಕಗಳನ್ನು ಹಾಗೂ ಕರ್ನಾಟಕಕ್ಕೆ ಸಂಬಂಧಿಸಿದ ಎಲ್ಲ ಭಾಷೆಯ ಗ್ರಂಥಗಳನ್ನು ಹಾಗೂ ಇತರ ಮಾಹಿತಿ ದಾಖಲೆಗಳನ್ನು ಸಂಗ್ರಹಿಸಿ ಈ ಗ್ರಂಥಾಲಯದಲ್ಲಿ ವ್ಯವಸ್ಥೆಗೊಳಿಸಲು ಯೋಜಿಸಲಾಗಿದೆ. ನಾಡಿನಾದ್ಯಂತ ಲೇಖಕರನ್ನು, ಪುಸ್ತಕ ಪ್ರಕಾಶಕರನ್ನು, ಸಂಸ್ಥೆಗಳನ್ನು, ಪುಸ್ತಕ ಪ್ರಿಯರನ್ನು ಭೇಟಿ ಮಾಡಿ ಅಖಂಡ ಕರ್ನಾಟಕದ ಜನಸ್ತೋಮದ ನೆರವಿನಿಂದ ಈ ಗ್ರಂಥಾಲಯವನ್ನು ಮಹತ್ತಾಗಿ ರೂಪಿಸುವುದು ಹಾಗೂ ಕನ್ನಡ ವಿಶ್ವವಿದ್ಯಾಲಯದ ಈ ಗ್ರಂಥ ಭಂಡಾರದಲ್ಲಿ ಕನ್ನಡಕ್ಕೆ ಮತ್ತು ಕರ್ನಾಟಕಕ್ಕೆ ಸಂಬಂಧಿಸಿ ಇಲ್ಲದ ಗ್ರಂಥಗಳೇ ಇಲ್ಲ ಎಂಬಂತೆ ಇದನ್ನು ಸಜ್ಜುಗೊಳಿಸುವುದು ಕಾರ್ಯ ಆರಂಭವಾಗಿದೆ. ಈ ಯೋಜನೆ ಪೂರ್ಣಗೊಂಡಾಗ ಇದು ಕನ್ನಡ ಕರ್ನಾಟಕ ಬಗೆಗಿನ ಆಸಕ್ತರ ಮತ್ತು ಸಂಶೋಧಕರ ಮಹತ್ವದ ಯಾತ್ರಾ ಕೇಂದ್ರವಾಗುತ್ತಿದೆ. ಬಳ್ಳಾರಿ ಜಿಲ್ಲಾ ಪಂಚಾಯತ್ ನೆರವಿನಿಂದ ವೈದ್ಯಕೀಯ ಚಿಕಿತ್ಸಾ ಕೇಂದ್ರವನ್ನು ಆರಂಭಿಸಲು ಸಿದ್ಧತೆಗಳು ನಡೆದಿವೆ. ಇಲ್ಲಿನ ನಿವಾಸಿಗಳ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶಿಶುವಿಹಾರ ಮತ್ತು ಕಿರಿಯ ಪ್ರಾಥಮಿಕ ಶಾಲೆಯನ್ನು ತೆರೆಯಲಾಗಿದ್ದು, ಶಿಕ್ಷಣ ಇಲಾಖೆ ಶಾಲಾ ಕಟ್ಟಡದ ನಿರ್ಮಾಣಕ್ಕೆ ಹಣ ಮಂಜೂರಾಗಿದ್ದು, ಅದನ್ನು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಾದ ಸನ್ಮಾನ್ಯ ಪ್ರೊ. ಬಿ.ಕೆ. ಚಂದ್ರಶೇಖರ್ ಅವರು ಇದೇ ಜನವರಿ ೧೭ರಂದು ಶಿಲಾನ್ಯಾಸವನ್ನು ಮಾಡಲಿದ್ದಾರೆ. ವಿಶ್ವವಿದ್ಯಾಲಯ ಧನ ಸಹಾಯ ಆಯೋಗ ಕಳೆದ ಮೂರು ವರ್ಷಗಳಲ್ಲಿ ೧೯೦ ಲಕ್ಷ ನೀಡಿದ್ದು, ಈ ಯೋಜನಾ ಅವಧಿಯಲ್ಲಿ ಅದು ಹೆಚ್ಚಾಗುವ ಭರವಸೆ ಇದೆ. ಸಂಸ್ಕೃತಿ ಪ್ರಿಯ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಎಸ್.ಎಂ. ಕೃಷ್ಣ ಅವರು ಹಾಗೂ ನಮ್ಮ ಜನಪ್ರಿಯ ಉನ್ನತ ಶಿಕ್ಷಣ ಸಚಿವರಾದ ಡಾ. ಜಿ. ಪರಮೇಶ್ವರ ಅವರು, ಈ ವಿಶ್ವವಿದ್ಯಾಲಯಕ್ಕೆ ಹಿಂದೆ ದೊರೆಯುತ್ತಿದ್ದ ೩ ಕೋಟಿ ರೂಪಾಯಿಗಳ ಅನುದಾನವನ್ನು ೪ ಕೋಟಿಗೆ ಏರಿಸುವ

ಮೂಲಕ ವಿಶ್ವವಿದ್ಯಾಲಯದ ಕಾರ್ಯಕ್ರಮಗಳಿಗೆ ಹೊಸ ಚಾಲನೆಯನ್ನು ದೊರೆಕಿಸಿಕೊಟ್ಟಿದ್ದಾರೆ. ಇತರ ಅಭಿವೃದ್ಧಿ ಕಾರ್ಯಗಳಿಗಾಗಿ ಈ ಭಾಗದ ಸಂಸತ್ ಸದಸ್ಯರು, ವಿಧಾನ ಸಭಾ ಮತ್ತು ವಿಧಾನ ಪರಿಷತ್ ಸದಸ್ಯರನ್ನು ಕೋರಿಕೊಳ್ಳಲಾಗಿದೆ. ಕಳೆದ ಮೂರು ವರ್ಷಗಳಲ್ಲಿ ವಿಶ್ವವಿದ್ಯಾಲಯದ ನೇರ ಅನುದಾನವಲ್ಲದೆ ಸುಮಾರು ಮೂರೂವರೆ ಕೋಟಿಗೂ ಹೆಚ್ಚು ಹಣವನ್ನು ಬೇರೆ ಬೇರೆ ಮೂಲಗಳಿಂದ ಸಂಗ್ರಹಿಸಲಾಗಿದೆ. ಈ ಎಲ್ಲ ಸಂಸ್ಥೆಗಳಿಗೆ ಹಾಗೂ ವ್ಯಕ್ತಿಗಳಿಗೆ ವಿಶ್ವವಿದ್ಯಾಲಯ ಋಣಿಯಾಗಿದೆ.

ಕರ್ನಾಟಕದ ಸಮಗ್ರಾಭಿವೃದ್ಧಿಗೆ ಸಂಬಂಧಪಟ್ಟ ಸಾಹಿತ್ಯ ಮತ್ತು ಸಾಹಿತ್ಯೇತರ ವಿಷಯಗಳಲ್ಲಿ ಆಸಕ್ತಿ, ಜಿಜ್ಞಾಸುತನವನ್ನು, ವಿಚಾರಶೀಲತೆಯನ್ನು ಬೆಳೆಸಲು ವಿಚಾರ ಸಂಕಿರಣ, ಕಮ್ಮಟ, ವಿಶೇಷೋಪನ್ಯಾಸ ಮತ್ತು ಬಗೆ ಬಗೆಯ ಸಮಾವೇಶಗಳನ್ನೂ ಸಹ ವಿಶ್ವವಿದ್ಯಾಲಯ ನಡೆಸುತ್ತಿದೆ. ಈ ವರ್ಷ ಬೀದರ್‌ಜಿಲ್ಲಾ ಕೇಂದ್ರದಲ್ಲಿ ದೇಶಿ ಸಮ್ಮೇಳನವನ್ನು ನಡೆಸಲಾಗಿದೆ. ಮದ್ದೂರಿನಲ್ಲಿ ರಾಜ್ಯಮಟ್ಟದ ಮಹಿಳಾ ಸಾಹಿತ್ಯ ಸಮಾವೇಶವನ್ನು ನಡೆಸಲಾಗಿದೆ. ಬುಡಕಟ್ಟು ಲೇಖಕರ ರಾಷ್ಟ್ರೀಯ ಸಮಾವೇಶವನ್ನು ಮತ್ತು ಸಂಸ್ಕಾರ ಭಾರತಿ ಸಹಯೋಗದೊಡನೆ ರಾಷ್ಟ್ರೀಯ ಚಿತ್ರಕಲಾ ಶಿಬಿರವನ್ನು ಮತ್ತು ರಾಷ್ಟಮಟ್ಟದ ಹಸ್ತಪ್ರತಿ ಕಾರ್ಯಾಗಾರಗಳನ್ನು ನಡೆಸಲಾಗಿದೆ. ರಾಜ್ಯಮಟ್ಟದ ಹಸ್ತಪ್ರತಿ ಸಮ್ಮೇಳನವನ್ನು ಮಂಗಳೂರಿನಲ್ಲಿ ನಡೆಸಲಾಗಿದೆ. ಇದೇ ಜನವರಿ ೩೧ ರಂದು ರಾಜ್ಯಮಟ್ಟದ ದಾಸ ಸಂಸ್ಕೃತಿ ಸಾಹಿತ್ಯ ಸಮಾವೇಶವನ್ನು ರಾಯಚೂರಿನಲ್ಲಿ ನಡೆಸಲಾಗುತ್ತದೆ. ರಾಜ್ಯಮಟ್ಟದ ಕನ್ನಡ ಅಧ್ಯಯನಗಳು ಎಂಬ ಸಂಶೋಧನಾ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ. ಇವಲ್ಲದೆ ಪ್ರತಿಯೊಂದು ವಿಭಾಗವು ತನ್ನ ವಿಭಾಗೀಯ ವಿಷಯಗಳನ್ನು ಕುರಿತು ಹಲವು ವಿಚಾರ ಸಂಕಿರಣ ಮತ್ತು ಕಾರ್ಯಾಗಾರಗಳನ್ನೂ ಕೂಡ ನಡೆಸುತ್ತಿವೆ. ಹೀಗಾಗಿ ರಾಜ್ಯದ ಉದ್ದಗಲಕ್ಕೂ ಕನ್ನಡ ವಿಶ್ವವಿದ್ಯಾಲಯ ತನ್ನ ವಿಶಿಷ್ಟ ಬಗೆಯ ಸಂಶೋಧನೆ, ಬೋಧನೆ ಹಾಗೂ ಚಿಂತನೆಗಳ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳುವ ಮೂಲಕ ತನ್ನ ಸ್ಥಾಪನೆಯ ಉದ್ದೇಶವನ್ನು ಸಾಕಾರಗೊಳಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿದೆ ಎಂದು ತಿಳಿಸಲು ಅಭಿಮಾನ ಪಡುತ್ತೇನೆ.

೮೦೦ ಎಕರೆಗಳ ಭೂ ವಿಸ್ತಾರವನ್ನು ಹೊಂದಿರುವ ಈ ವಿಶ್ವವಿದ್ಯಾಲಯದ ವಿದ್ಯಾರಣ್ಯ ಆವರಣದಲ್ಲಿ ಬೃಹತ್ ಸಂಖ್ಯೆಯಲ್ಲಿ ಸಸ್ಯಗಳನ್ನು ನೆಟ್ಟು ಇಡೀ ವಾತಾವರಣಕ್ಕೆ ಹಸಿರು ಶ್ರೀಮಂತಿಕೆಯ ಶೋಭೆಯನ್ನು ತರಲಾಗುತ್ತಿದೆ. ಕಳೆದ ಎರಡು ವರ್ಷಗಳಲ್ಲಿ ಅರಣ್ಯ ಇಲಾಖೆಯ ಮತ್ತು ತೋಟಗಾರಿಕೆ ಇಲಾಖೆಯ ನೆರವಿನೊಡನೆ ಸುಮಾರು ೧೦ ಸಾವಿರ ಬಗೆ ಬಗೆಯ ಗಿಡಗಳನ್ನು ನೆಡಿಸಲಾಗಿದೆ. ದಶಮಾನೋತ್ಸವ ವನ, ವಿಜಯ ವನ, ಕುಮಾರ ರಾಮ ಉದ್ಯಾನ, ಚರಕ ವನಗಳನ್ನು ನಿರ್ಮಿಸಲಾಗಿದೆ. ಇದುವರೆಗೆ ನಿರ್ಮಿಸಲಾಗಿದ್ದ ವನಗಳಿಗೆ ಪಂಪವನ, ನೃಪತುಂಗ ವನ, ಹಕ್ಕಬುಕ್ಕ ವನ, ಅಕ್ಷರೋದ್ಯಾನ. ಕದಂಬ ವನ, ಹೊಯ್ಸಳ ವನ, ಚಾಲುಕ್ಯ ವನ, ಕೃಷ್ಣರಾಜ ವನ, ಮಾನಸ ವನ ಮುಂತಾಗಿ ಕರ್ನಾಟಕದ ಸಂಸ್ಕೃತಿಯನ್ನು ವಿಸ್ತರಿಸಿದ ರಾಜ ಮನೆತನಗಳ ಹೆಸರುಗಳನ್ನು ಇಡುವ ಮೂಲಕ ಇತಿಹಾಸ ಈ ನೆಲದಲ್ಲಿ ಮತ್ತೊಮ್ಮೆ ಕಣ್ತುಂಬುವಂತೆ ಮಾಡಲಾಗಿದೆ. ಕುವೆಂಪು ಶತಮಾನೋತ್ಸವ ಸ್ಮರಣೆಗಾಗಿ ಕುವೆಂಪು ಶತಮಾನೋತ್ಸವ ಮಕ್ಕಳ ವನ್ಯ ಪಕ್ಷಿಕಾಶಿ ನಾಳೆ ಉದ್ಘಾಟನೆಯಾಗಲಿದೆ.

ನಮ್ಮ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದ ಹಲವು ಲೇಖಕರ ಸಾಹಿತ್ಯ ಮತ್ತು ಸಂಶೋಧನಾ ಸಾಧನೆ ಅಭಿಮಾನ ಪಡುವಂಥದಾಗಿದ್ದು, ಅವರು ಇದುವರೆಗೆ ಹತ್ತಾರು ವಿಶಿಷ್ಟ ಪ್ರಶಸ್ತಿಗಳನ್ನು, ಬಹುಮಾನಗಳನ್ನು ತಮ್ಮ ಕೃತಿಗಳಿಗಾಗಿ ಪಡೆದಿದ್ದಾರೆ. ನಮ್ಮ ವಿಶ್ವವಿದ್ಯಾಲಯದ ವಿವಿಧ ವಿದ್ವಾಂಸರು ಮತ್ತು ಸೆನೆಟ್ ಪಡೆದಿದ್ದಾರೆ. ನಮ್ಮ ವಿಶ್ವವಿದ್ಯಾಲಯದ ವಿವಿಧ ಸಾಹಿತ್ಯಕ, ಸಾಂಸ್ಕೃತಿಕ ಗೌರವ ಪ್ರಶಸ್ತಿ ಮತ್ತು ಪ್ರತಿಷ್ಠಿತ ಸದಸ್ಯತ್ವದ ಸನ್ಮಾನಗಳನ್ನು ಪಡೆದಿರುವುದು ನಮ್ಮ ಘನತೆಯನ್ನು ಹೆಚ್ಚಿಸಿದೆ. ಡಾ. ಕರೀಗೌಡ ಬೀಚನಹಳ್ಳಿಯವರು ಕೇಂದ್ರ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿ ನೇಮಿತರಾಗಿದ್ದಾರೆ. ಡಾ. ಹಿ.ಚಿ. ಬೋರಲಿಂಗಯ್ಯನವರು, ಡಾ. ಶ್ರೀಕಂಠ ಕೂಡಿಗೆ ಯವರು ಮತ್ತು ಡಾ. ಎಂ.ಜಿ. ಈಶ್ವರಪ್ಪನವರು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಜಾನಪದ ತಜ್ಞ ಪ್ರಶಸ್ತಿಯನ್ನು ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಡಾ. ದೇವರಕೊಂಡಾರೆಡ್ಡಿ ಅವರು ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು, ಡಾ. ವಿರೂಪಾಕ್ಷಿ ಪೂಜಾರಹಳ್ಳಿ, ಡಾ.ಕೆ. ರವೀಂದ್ರನಾಥ, ಡಾ. ವೆಂಕಟೇಶ ಇಂದ್ವಾಡಿ ಇವರು ವಿವಿಧ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಪ್ರೊ. ಲಕ್ಷ್ಮಣ್

ತೆಲಗಾವಿಯವರು ರಾಷ್ಟ್ರಮಟ್ಟದ ದಲಿತ ಸಾಹಿತ್ಯ ಪ್ರಶಸ್ತಿ ಪಡೆದಿದ್ದಾರೆ. ವಿಶ್ವವಿದ್ಯಾಲಯದ ಔನ್ನತ್ಯವನ್ನು ಹೆಚ್ಚಿಸಲು ಕಾರಣರಾದ ಈ ವಿದ್ವಾಂಸರಿಗೆ ವಿಶ್ವವಿದ್ಯಾಲಯದ ಅಭಿನಂದನೆಗಳು ಸಲ್ಲುತ್ತವೆ.

ಅಭಿವೃದ್ಧಿ ಕಾರ್ಯದಲ್ಲೂ ವಿಶ್ವವಿದ್ಯಾಲಯ ಹಿಂದೆ ಬಿದ್ದಿಲ್ಲ. ವಾಹನ ಸೌಲಭ್ಯ, ಕುಡಿಯುವ ನೀರಿನ ಸೌಲಭ್ಯ, ಶಾಲಾ ಸೌಲಭ್ಯ, ರಸ್ತೆಗಳ ಡಾಂಬರೀಕರಣ, ಬೀದಿ ದೀಪಗಳ ವ್ಯವಸ್ಥೆ, ವಿದ್ಯಾರ್ಥಿಗಳಿಗೆ (ಪುರುಷ ಮತ್ತು ಸ್ತ್ರೀಯರು) ಪ್ರತ್ಯೇಕ ಹಾಸ್ಟೆಲ್ ವ್ಯವಸ್ಥೆಗಳನ್ನು ಮಾಡಲಾಗಿದೆ. ಇಲ್ಲಿನ ಅಧ್ಯಾಪಕರಿಗೆ, ವಿಭಾಗಗಳಿಗೆ, ವಿದ್ಯಾರ್ಥಿಗಳಿಗೆ ಜಾಗದ ಕೊರತೆಯಿದ್ದುದನ್ನು ಮನಗಂಡು ಸರ್ಕಾರ, ಹೆಚ್.ಕೆ.ಡಿ.ಬಿ., ಯೋಜನಾ ಇಲಾಖೆ, ಸಂಸತ್ ಸದಸ್ಯರ ಅನುದಾನ ಮುಂತಾದವುಗಳಿಂದ ಸಹಾಯವನ್ನು ಪಡೆದು ೫ ವಿಭಾಗೀಯ ಕಟ್ಟಡಗಳನ್ನು ನಿರ್ಮಿಸಲಾಗಿದ್ದು, ಮತ್ತೆ ೩ ಕಟ್ಟಡಗಳನ್ನು ಆರಂಭಿಸಲಾಗುತ್ತಿದೆ. ಸುಮಾರು ಒಂದು ಕೋಟಿ ವೆಚ್ಚದ ಸರ್ವಜ್ಞ ಗ್ರಂಥಾಲಯ ಕಟ್ಟಡ ನಿರ್ಮಾಣಕಾರ್ಯ ಅಂತಿಮ ಹಂತದಲ್ಲಿದೆ. ಆಡಳಿತ ಸಿಬ್ಬಂದಿಗೆ ಸ್ಥಳಾವಕಾಶದ ಕೊರತೆಯಿದ್ದುದರಿಂದ ಕ್ರಿಯಾಶಕ್ತಿ ಕಟ್ಟಡವನ್ನು ವಿಸ್ತರಿಸಲಾಗಿದೆ. ಬೋಧಕೇತರ ಸಿಬ್ಬಂದಿಗಾಗಿ ೧೨ ವಸತಿಗೃಹಗಳನ್ನು ನಿರ್ಮಿಸಲಾಗುತ್ತಿದೆ. 'ಶಿಲ್ಪವನ' ವನ್ನು ಅಭಿವೃದ್ಧಿಪಡಿಸಿ ಆಕರ್ಷಣೀಯವನ್ನಾಗಿ ಮಾಡಲಾಗಿದೆ.

ವಿಶ್ವವಿದ್ಯಾಲಯ ಧನ ಸಹಾಯ ಆಯೋಗಕ್ಕೆ ಸಂಬಂಧಿಸಿದ ನ್ಯಾಕ್ ಪರಿಶೀಲನಾ ಸಮಿತಿಯು ನಮ್ಮ ವಿಶ್ವವಿದ್ಯಾಲಯಕ್ಕೆ ಭೇಟಿಕೊಟ್ಟು ಸಂದರ್ಶಿಸಿ ಇದೊಂದು ಅನನ್ಯ ವಿಶಿಷ್ಟವಾದ ವಿಶ್ವವಿದ್ಯಾಲಯವೆಂದು ಮತ್ತು ಅತ್ಯಂತ ಕ್ಷಿಪ್ರ ಕಾಲದಲ್ಲಿ ಇದು ಅಪೂರ್ವವಾದ ಪ್ರಗತಿಯನ್ನು ಪಡೆದಿದೆಯೆಂದು ಮನತುಂಬಿ ನುಡಿದು ಈ ವಿಶ್ವವಿದ್ಯಾಲಯಕ್ಕೆ ಬಿ++(೮೫) ಸ್ಥಾನಮಾನವನ್ನು ನೀಡಿದೆ ಎಂದು ತಿಳಿಸಲು ಸಂತೋಷಿಸುತ್ತೇನೆ.

ವಿಶ್ವವಿದ್ಯಾಲಯದ ಇದುವರೆಗಿನ ಪ್ರಗತಿಗೆ ನೈತಿಕವಾಗಿ, ಸಂಪತ್ತಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಶೈಕ್ಷಣಿಕವಾಗಿ ನೆರವು ನೀಡಿದ ಔದಾರ್ಯ ನಿಧಿಗಳಾದ ಎಲ್ಲ ಮಹನೀಯರನ್ನು, ಇದರ ಅಭಿವೃದ್ಧಿಯ ಬಗ್ಗೆ ಆಶಾವಾದಿಗಳಾಗಿದ್ದು, ಸೃಜನಶೀಲ ಮತ್ತು ಕ್ರಿಯಾಶೀಲ ಸಲಹೆಗಳನ್ನು ನೀಡುತ್ತಿರುವ ಎಲ್ಲ ಹಿರಿಯರನ್ನು ಈ ಸಂದರ್ಭದಲ್ಲಿ ವಿಶೇಷವಾಗಿ ನೆನೆಯುತ್ತ ಅವರಿಗೆ ನೂರು ನೂರು ನಮನಗಳನ್ನು ಅರ್ಪಿಸುತ್ತಿದ್ದೇನೆ. ಹಾಗೆಯೇ ಕರ್ನಾಟಕ ಸರ್ಕಾರ ಕನ್ನಡ ನಾಡಿನ ಸಾಂಸ್ಕೃತಿಕ ಜೀವನಾಡಿಯಾಗಿರುವ ಈ ವಿಶ್ವವಿದ್ಯಾಲಯ ಮತ್ತಷ್ಟು ಉತ್ಕೃಷ್ಟವಾಗಲು ಪ್ರತಿ ವರ್ಷ ಕನಿಷ್ಟ ೭ ಕೋಟಿ ರೂಪಾಯಿಗಳ ಅನುದಾನವನ್ನು ನೀಡಬೇಕೆಂದು ಮತ್ತು ನಮ್ಮ ಶಿಕ್ಷಣ ತಜ್ಞರು ಹಾಗೂ ಆಡಳಿತ ದಕ್ಷರೂ ಆದ ಉನ್ನತ ಶಿಕ್ಷಣ ಸಚಿವರು ಇದನ್ನು ಪೂರೈಸಿ ಕೊಡಬೇಕೆಂದು ಭಿನ್ನವಿಸುತ್ತೇನೆ. ಇದೇ ಸಂದರ್ಭದಲ್ಲಿ ಎಂಟು ಹತ್ತು ವರ್ಷಗಳಿಂದ ಕೇವಲ ಕ್ರೋಢೀಕೃತ ನೌಕರರಾಗಿ ಅತಂತ್ರ ಸ್ಥಿತಿಯಲ್ಲಿ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಿಬ್ಬಂದಿಯವರನ್ನು ಖಾಯಂಗೊಳಿಸಲು ಚಾರಿತ್ರಿಕ ಸಹಾಯವನ್ನು ಮಾಡಿದ ಮಾನ್ಯ ಶಿಕ್ಷಣ ಸಚಿವರಿಗೆ ಹೃತ್ಪೂರ್ವಕ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಈ ಎಲ್ಲ ಕ್ಷೇತ್ರಗಳಲ್ಲಿ ಕನ್ನಡ ವಿಶ್ವವಿದ್ಯಾಲಯ ನಡೆದು ಬಂದಿರುವ ದಾರಿ ವಿಶಿಷ್ಟವಾದುದಾಗಿದೆ. ಆದರೆ, ನಾವು ಕ್ರಮಿಸಬೇಕಾದ ಹಾದಿ ಸಾಕಷ್ಟು ದೀರ್ಘವಾಗಿದೆ ಮತ್ತು ಮುಟ್ಟಬೇಕಾದ ಸಾಧನೆಯ ಶಿಖರಗಳು ಇನ್ನೂ ನೂರಾರಿವೆ ಎಂಬುದನ್ನು ವಿನಯಪೂರ್ವಕವಾಗಿ ಭಿನ್ನವಿಸಿಕೊಳ್ಳುತ್ತೇನೆ. ತಮ್ಮ ವಿಶಿಷ್ಟ ಪ್ರತಿಭೆ ಮತ್ತು ಪರಿಶ್ರಮಗಳಿಂದ ಹಾಗೂ ಅಸಾಧಾರಣವಾದ ಆಡಳಿತ ದಕ್ಷತೆಯಿಂದ ಭಾರತದ ಹತ್ತಾರು ಹುದ್ದೆಗಳನ್ನು ಅರ್ಥಪೂರ್ಣವಾಗಿ ಅಲಂಕರಿಸಿ ಆ ಸ್ಥಾನಗಳಿಗೆ ಮಹತ್ತರವಾದ ಶೋಭೆಯನ್ನು, ಅನನ್ಯತೆಯನ್ನು ತಂದುಕೊಟ್ಟು ಎಲ್ಲರ ಪ್ರೀತಿ, ಗೌರವಗಳಿಗೆ ಪಾತ್ರವಾಗಿರುವ ವಿದ್ವತ್‌ಪ್ರಿಯರು, ಸಂಸ್ಕೃತಿಪ್ರಿಯರು, ಪ್ರಗತಿಪರರು ಆದಂತಹ ಕರ್ನಾಟಕ ಗೌರವಾನ್ವಿತ ರಾಜ್ಯಪಾಲರು ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳ ಕುಲಾಧಿಪತಿಗಳೂ ಆದ ಸನ್ಮಾನ್ಯ ಶ್ರೀ ಟಿ.ಎನ್. ಚತುರ್ವೇದಿ ಅವರು ಈ ಘಟಿಕೋತ್ಸವದಲ್ಲಿ ಭಾಗವಹಿಸಿ ನಾಡೋಜ, ಪಿಎಚ್.ಡಿ. ಮತ್ತು ಡಿ.ಲಿಟ್. ಪದವಿಗಳನ್ನು ವಿತರಿಸಲು ಸಂತೋಷದಿಂದ ಒಪ್ಪಿಕೊಂಡು ಆಗಮಿಸಿರುವುದಕ್ಕಾಗಿ ಅವರನ್ನು ಹೃದಯದುಂಬಿ ವಿನಯಪೂರ್ವಕವಾಗಿ ಸ್ವಾಗತಿಸುತ್ತೇನೆ. ಹಾಗೆಯೇ ಕರ್ನಾಟಕ ಕಂಡ ಶ್ರೇಷ್ಠ ಶಿಕ್ಷಣ ಸಚಿವರಲ್ಲಿ, ದಕ್ಷ ಮತ್ತು ಪಾರದರ್ಶಕ ಆಡಳಿತಗಾರರಲ್ಲಿ ಒಬ್ಬರಾದ ದೂರದರ್ಶಿತ್ವ ಮತ್ತು ಯೋಜನಾಶೀಲತೆಗಳನ್ನು

ಮೈಗೂಡಿಸಿಕೊಂಡಿರುವ ನಮ್ಮ ಉನ್ನತ ಶಿಕ್ಷಣ ಸಚಿವರಾದ ಸನ್ಮಾನ್ಯ ಡಾ. ಜಿ. ಪರಮೇಶ್ವರ್ ಅವರನ್ನು ಈ ಮಹತ್ವದ ಸಮಾರಂಭಕ್ಕೆ ಮತ್ತೊಮ್ಮೆ ಸ್ವಾಗತಿಸುತ್ತೇನೆ. ಕಾನೂನು ಕ್ಷೇತ್ರದಲ್ಲಿ ಮಹಾತಜ್ಞರಾದ, ಉಚ್ಚ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಾಧೀಶರೂ ಸಾಹಿತ್ಯ, ಸಂಸ್ಕೃತಿಗಳ ಬಗ್ಗೆ ಅಪಾರವಾದ ಒಲವುಳ್ಳ ವಿಚಾರವೇತ್ತರಾದ ಸನ್ಮಾನ್ಯ ಶ್ರೀ ವಿ.ಎಸ್. ಮಳೀಮಠ ಅವರನ್ನೂ, ಈ ವರ್ಷ ನಮ್ಮ ಕರೆಗೆ ಓಗೊಟ್ಟು ನಮ್ಮ ವಿಶ್ವವಿದ್ಯಾಲಯದ ಸರ್ವಶ್ರೇಷ್ಠ ಪ್ರಶಸ್ತಿಯಾದ ನಾಡೋಜ ಪ್ರಶಸ್ತಿಯನ್ನು ಸ್ವೀಕರಿಸಲು ಬಂದಿರುವ ನಾಡಿನ ಸುಪ್ರಸಿದ್ಧ ಕವಿಗಳೂ ನಾಟಕಕಾರರೂ ಮತ್ತು ಕನ್ನಡ ವಿಶ್ವವಿದ್ಯಾಲಯದ ಪ್ರಥಮ ಕುಲಪತಿಗಳೂ ಆದ ಡಾ. ಚಂದ್ರಶೇಖರ ಕಂಬಾರ ಅವರನ್ನು, ಕನ್ನಡ ಕಂಡ ಅಪರೂಪದ ಭಾವಶೀಲ ಮತ್ತು ಚಿಂತನಶೀಲ ಕವಿಗಳಾದ ಪ್ರೊ. ಕೆ.ಎಸ್. ನಿಸಾರ್ ಅಹಮದ್ ಅವರನ್ನು, ಕನ್ನಡ ನಾಡು, ನುಡಿ, ಸಂಸ್ಕೃತಿ, ಸಾಹಿತ್ಯಗಳ ಕ್ರಿಯಾಶೀಲ ಅಭಿವರದ್ಧಿಯ ಬಗ್ಗೆ ನಾಲ್ಕು ದಶಕಗಳಿಗಿಂತಲೂ ಅಧಿಕ ಕಾಲದಿಂದ ಸದ್ದುಗದ್ದಲವಿಲ್ಲದೆ ದುಡಿಯುತ್ತಿರುವ ಸ್ವಾತಂತ್ರ ಹೋರಾಟಗಾರರಾದ ಸನ್ಮಾನ್ಯ ಶ್ರೀ ಜಿ. ನಾರಾಯಣ ಅವರನ್ನು, ಗ್ರಾಮೀಣ ಪರಿಸರದಲ್ಲಿ ಹುಟ್ಟಿ ಸಹಜಕೃತಿಯ ಬಗ್ಗೆ ವಿನೂತನವಾದ ಪ್ರಯೋಗಗಳನ್ನು ಮಾಡಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಖ್ಯಾತಿಯನ್ನು ಪಡೆದಿರುವ ಕೃಷಿ ವಿಜ್ಞಾನಿ ಶ್ರೀ ಎಲ್. ನಾರಾಯಣರೆಡ್ಡಿ ಅವರನ್ನು, ಕನ್ನಡ ರಂಗಭೂಮಿಯಲ್ಲಿ ತಮ್ಮ ಸಿರಿಕಂಠದಿಂದ ಮತ್ತು ಅದ್ಭುತ ವೈವಿಧ್ಯಮಯ ಪಾತ್ರದಾರಿಕೆಯಿಂದ ಕರ್ನಾಟಕದಲ್ಲಿ ಮನೆ ಮಾತಾಗಿರುವ ಸುಪ್ರಸಿದ್ಧ ಕಲಾವಿದ ಶ್ರೀಮತಿ ಸುಭದ್ರಮ್ಮ ಮನ್ಸೂರ್ ಅವರನ್ನು ಮತ್ತು ಕನ್ನಡ ಸಣ್ಣಕತೆ, ಮತ್ತು ಕಾದಂಬರಿ ಕ್ಷೇತ್ರಗಳಲ್ಲಿ ಮತ್ತು ವಿಶೇಷವಾಗಿ ದಲಿತ ಹಾಗೂ ಸ್ತ್ರೀ ಜೀವನ ಚಿತ್ರಣದಲ್ಲಿ ವಿಶಿಷ್ಟ ಸಾಧನೆ ಮಾಡಿರುವ ಹಾಗೂ ಉತ್ತರ ಕರ್ನಾಟಕದ ಹಳ್ಳಿಯ ಭಾಷೆಯ ಜೀವಂತಿಕೆ ಮತ್ತು ಅರ್ಥವಂತಿಕೆಗಳನ್ನು ತಮ್ಮ ಕೃತಿಗಳಲ್ಲಿ ಸಮರ್ಥವಾಗಿ ದುಡಿಸಿಕೊಂಡಿರುವ ಖ್ಯಾತ ಲೇಖಕಿ ಶ್ರೀಮತಿ ಗೀತಾ ನಾಗಭೂಷಣ ಅವರನ್ನು ಕನ್ನಡ ವಿಶ್ವವಿದ್ಯಾಲಯದ ಪರವಾಗಿ, ಅಖಂಡ ಕರ್ನಾಟಕದ ಸಮಸ್ತ ಸಂಸ್ಕೃತಿ ಚಿಂತಕರ ಪರವಾಗಿ, ಶಿಕ್ಷಣ ಲೋಕದ ಪರವಾಗಿ ಈ ವಿಶಿಷ್ಟ ಸಮಾರಂಭಕ್ಕೆ ಮತ್ತೊಮ್ಮೆ ಸ್ವಾಗತಿಸುತ್ತೇನೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಪ್ರಗತಿಗೆ ಮೂಲ ಸೆಲೆಯಾಗಿರುವ ಸಮಸ್ತರನ್ನು ಮತ್ತು ಇಲ್ಲಿ ಉಪಸ್ಥಿತರಿರುವ ಸರ್ವರನ್ನು, ವಿಶ್ವವಿದ್ಯಾಲಯದ ನನ್ನ ಎಲ್ಲ ಸಹೋದ್ಯೋಗಿಗಳ, ಆಡಳಿತ ಮಂಡಳಿ ಮತ್ತು ಕಾರ್ಯಕಾರಿ ಸಮಿತಿಯ ಪರವಾಗಿ ಮತ್ತು ವೈಯಕ್ತಿಕವಾಗಿ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

೫ ಜನವರಿ ೨೦೦೪

# ೧೦. ಕನ್ನಡ ಸಂಸ್ಕೃತಿಯ ಶಕ್ತಿಕೇಂದ್ರ

ಕರ್ನಾಟಕ ರಾಜ್ಯದ ಘನತೆವೆತ್ತ ರಾಜ್ಯಪಾಲರೂ ಕನ್ನಡ ವಿಶ್ವವಿದ್ಯಾಲಯ ಹಂಪಿಯ ಗೌರವಾನ್ವಿತ ಕುಲಾಧಿಪತಿಗಳೂ ಆಗಿರುವ ಸನ್ಮಾನ್ಯ ಶ್ರೀ ಟಿ.ಎನ್. ಚತುರ್ವೇದಿ ಅವರೇ, ಕರ್ನಾಟಕ ರಾಜ್ಯದ ಉನ್ನತಶಿಕ್ಷಣ ಸಚಿವರೂ ಕನ್ನಡ ವಿಶ್ವವಿದ್ಯಾಲಯದ ಸಮಕುಲಾಧಿಪತಿಗಳೂ ಆಗಿರುವ ಸನ್ಮಾನ್ಯ ಶ್ರೀ ಡಿ. ಮಂಜುನಾಥ್ ಅವರೇ, ಕನ್ನಡ ವಿಶ್ವವಿದ್ಯಾಲಯದ ಹದಿಮೂರನೆಯ ನುಡಿಹಬ್ಬದ ಮುಖ್ಯ ಅತಿಥಿಗಳಾಗಿ ಆಗಮಿಸಿರುವ ವಿಶ್ವವಿದ್ಯಾಲಯ ಅನುದಾನ ಆಯೋಗದ ಉಪಾಧ್ಯಕ್ಷರಾಗಿರುವ ಸನ್ಮಾನ್ಯ ಪ್ರೊ. ವಿ.ಎನ್. ರಾಜಶೇಖರನ್ ಪಿಳ್ಳೈ ಅವರೇ, ಈ ನುಡಿಹಬ್ಬದಲ್ಲಿ ನಾಡೋಜ ಗೌರವ ಪದವಿಗಳನ್ನು ಸ್ವೀಕರಿಸಲು ಒಪ್ಪಿಕೊಂಡು ದಯಮಾಡಿಸಿರುವ ಕನ್ನಡದ ಹಿರಿಯ ಸಂಶೋಧಕರಾದ ಡಾ. ಎಂ. ಚಿದಾನಂದಮೂರ್ತಿ ಅವರೇ, ಕರ್ನಾಟಕದ ಹಿರಿಯ ಚಿತ್ರ ಕಲಾವಿದರಾದ ಪ್ರಾಧ್ಯಾಪಕ ಜೆ.ಎಸ್. ಖಂಡೇರಾವ್ ಅವರೇ, ಜಾನಪದ ಹಾಡುಗಳ ಭಂಡಾರದಿಂದಲೇ ನಮಗೆ ಸದಾ ಸ್ಫೂರ್ತಿಯಾಗಿರುವ ಶ್ರೀಮತಿ ಸಿರಿಯಜ್ಜಿ ಅವರೇ, ಕನ್ನಡ ವಿಶ್ವವಿದ್ಯಾಲಯದ ಕಾರ್ಯಕಾರಿ ಸಮಿತಿ ಮತ್ತು ಆಡಳಿತ ಮಂಡಳಿಯ ಸದಸ್ಯರೇ, ಈ ಪ್ರದೇಶದ ಎಲ್ಲ ಜನ ಪ್ರತಿನಿಧಿಗಳೇ, ಮಾಧ್ಯಮದ ಎಲ್ಲ ಸ್ನೇಹಿತರೆ, ವಿಶ್ವವಿದ್ಯಾಲಯ ಕೂಡು ಕುಟುಂಬದ ಶೈಕ್ಷಣಿಕ, ಆಡಳಿತಾತ್ಮಕ ಮತ್ತು ವಿದ್ಯಾರ್ಥಿ ಸಮುದಾಯಗಳ ಆತ್ಮೀಯ ಸದಸ್ಯರೇ, ಆಹ್ವಾನಿತ ಬಂಧುಗಳೇ.

ಕನ್ನಡ ವಿಶ್ವವಿದ್ಯಾಲಯದ ಈ ಹದಿಮೂರನೆಯ ನುಡಿಹಬ್ಬಕ್ಕೆ ತಮ್ಮೆಲ್ಲರನ್ನು ಪ್ರೀತಿ ಗೌರವದಿಂದ ಸ್ವಾಗತಿಸಲು ಬಹಳ ಸಂತೋಷ ಪಡುತ್ತೇನೆ.

ಘನತೆವೆತ್ತ ಕುಲಾಧಿಪತಿಗಳಾದ ಸನ್ಮಾನ್ಯ ಶ್ರೀ ಟಿ.ಎನ್. ಚರ್ತುವೇದಿ ಅವರು ನುಡಿಹಬ್ಬದ ಅಧ್ಯಕ್ಷತೆಯನ್ನು ವಹಿಸಿಕೊಂಡು ಮೂವರು ಹಿರಿಯ ಸಾಧಕರಿಗೆ ನಾಡೋಜ ಗೌರವ ಪದವಿಗಳನ್ನು ಮತ್ತು ಅರ್ಹ ಅಭ್ಯರ್ಥಿಗಳಿಗೆ ಡಿ.ಲಿಟ್. ಮತ್ತು ಪಿಎಚ್.ಡಿ. ಪದವಿಗಳನ್ನು ನೀಡಲು ದಯಮಾಡಿ ಒಪ್ಪಿಕೊಂಡು ಬಂದಿರುತ್ತಾರೆ. ಸಾಹಿತ್ಯ ಮತ್ತು ಸಂಸ್ಕೃತಿ ಪ್ರೇಮಿಗಳೂ ಹಿರಿಯ ಮುತ್ಸದ್ಧಿಗಳೂ ಆಗಿರುವ ಸನ್ಮಾನ್ಯ ಕುಲಾಧಿಪತಿಗಳ ಮಾರ್ಗದರ್ಶನ ಮತ್ತು ಪ್ರೋತ್ಸಾಹದಿಂದ ಕನ್ನಡ ವಿಶ್ವ ವಿದ್ಯಾಲಯವು ಸರ್ವತೋಮುಖ ಪ್ರಗತಿಯಲ್ಲಿ ಮುನ್ನಡೆಯುತ್ತಿದೆ. ಘನತೆವೆತ್ತ ಕುಲಾಧಿಪತಿಗಳಿಗೆ ಕನ್ನಡ ವಿಶ್ವವಿದ್ಯಾಲಯದ ಪರವಾಗಿ ಗೌರವಪೂರ್ವಕ ಸ್ವಾಗತವನ್ನು ಕೋರುತ್ತೇನೆ. ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಸಚಿವರೂ ಕರ್ನಾಟಕದ ಹಿರಿಯ ಅನುಭವಿ ರಾಜಕಾರಣಿಗಳೂಆಗಿರುವ ಸನ್ಮಾನ್ಯ ಶ್ರೀ ಡಿ. ಮಂಜುನಾಥ್ ಅವರು ಕನ್ನಡ ವಿಶ್ವವಿದ್ಯಾಲಯದ ಸಮಕುಲಾಧಿಪತಿಗಳಾಗಿ ಕನ್ನಡ ವಿಶ್ವವಿದ್ಯಾಲಯದ ನುಡಿಹಬ್ಬದಲ್ಲಿ ಪಾಲ್ಗೊಂಡು ಎಂ.ಫಿಲ್ ಪದವೀಧರರಿಗೆ ಪದವಿಗಳನ್ನು ಪ್ರದಾನ ಮಾಡಲಿದ್ದಾರೆ. ಮಾನ್ಯರು ಕನ್ನಡ ವಿಶ್ವವಿದ್ಯಾಲಯವು ಶಿಸ್ತು ಮತ್ತು ಸೃಜನಶೀಲತೆಯಿಂದ ಮುನ್ನಡೆಯಲು ಎಲ್ಲಾ ರೀತಿಯ ಬೆಂಬಲ ಸಹಕಾರಗಳನ್ನು ಕೊಡುತ್ತಿದ್ದಾರೆ. ಸನ್ಮಾನ್ಯ ಉನ್ನತ ಶಿಕ್ಷಣ ಸಚಿವರಾದ ಶ್ರೀ ಡಿ. ಮಂಜುನಾಥ್ ಅವರಿಗೆ ಕನ್ನಡ ವಿಶ್ವವಿದ್ಯಾಲಯದ ವತಿಯಿಂದ ಗೌರವಪೂರ್ವಕ ಸ್ವಾಗತವನ್ನು ಕೋರುತ್ತೇನೆ. ನುಡಿಹಬ್ಬದ ಈ ವರ್ಷದ ಮುಖ್ಯ ಅತಿಥಿಯಾಗಿ ಪ್ರಧಾನ ಭಾಷಣ ಮಾಡಲು ವಿಶ್ವವಿದ್ಯಾಲಯ ಅನುದಾನ ಆಯೋಗದ ಉಪಾಧ್ಯಕ್ಷರೂ ಹಿರಿಯ ಶಿಕ್ಷಣ ತಜ್ಞರೂ ಆಗಿರುವ ಪ್ರೊ. ವಿ.ಎನ್. ರಾಜಶೇಖರನ್ ಪಿಳ್ಳೈ ಅವರು ಆಗಮಿಸಿದ್ದಾರೆ. ಪ್ರೊ. ರಾಜಶೇಖರನ್ ಪಿಳ್ಳೈ ಅವರು ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ ಅನೇಕ ಸಂಘ ಸಂಸ್ಥೆಗಳಲ್ಲಿ ನಿರ್ಣಾಯಕ ಸ್ಥಾನಗಳಲ್ಲಿದ್ದು, ಸಕ್ರಿಯವಾಗಿ ಕೆಲಸ ಮಾಡಿದ ಅನುಭವ ಹೊಂದಿದ್ದಾರೆ. ಕೇರಳದ ಮಹಾತ್ಮಗಾಂಧಿ ವಿಶ್ವವಿದ್ಯಾಲಯದ ಕುಲಪತಿಗಳಾಗಿ, ರಾಷ್ಟ್ರೀಯ ಮೌಲ್ಯಮಾಪನ ಸಮಿತಿಯ (NAAC) ಅಧ್ಯಕ್ಷರಾಗಿ ಈಗ ಯುಜಿಸಿಯ ಉಪಾಧ್ಯಕ್ಷರಾಗಿ ಪ್ರೊ. ಪಿಳ್ಳೈಯವರು ಉನ್ನತ ಶಿಕ್ಷಣದ ಅನೇಕ ಪ್ರಗತಿಪರ ಬದಲಾವಣೆಗಳ ನೇತಾರರಾಗಿದ್ದಾರೆ. ಕನ್ನಡ ವಿಶ್ವವಿದ್ಯಾಲಯದಂತಹ ಸಾಂಸ್ಕೃತಿಕ ವಿಶ್ವವಿದ್ಯಾಲಯವೊಂದನ್ನು ಇನ್ನಷ್ಟು ಎತ್ತರಕ್ಕೆ ಮತ್ತು ಬಿತ್ತರಕ್ಕೆ ಕೊಂಡೊಯ್ಯುವಲ್ಲಿ ಪ್ರೊ. ರಾಜಶೇಖರನ್ ಪಿಳ್ಳೈ ಅವರ ಮಾರ್ಗದರ್ಶನ, ಸಲಹೆ ಸಹಕಾರಗಳು ನಮಗೆ ಬಹಳ ಮುಖ್ಯವಾಗಿವೆ. ಪ್ರೊ. ರಾಜಶೇಖರನ್ ಪಿಳ್ಳೈ ಅವರಿಗೆ ಪ್ರೀತಿ ಆದರಗಳ ಸ್ವಾಗತವನ್ನು ಬಯಸುತ್ತೇನೆ.

ಈ ನುಡಿಹಬ್ಬದಲ್ಲಿ ಕನ್ನಡ ವಿಶ್ವವಿದ್ಯಾಲಯವು ಕೊಡಮಾಡುವ ನಾಡೋಜ ಗೌರವ ಪದವಿಗಳನ್ನು ಸ್ವೀಕರಿಸಲು ಒಪ್ಪಿಕೊಂಡು ಬಂದಿರುವ ಮೂವರು ಹಿರಿಯ ಸಾಧಕರು ನಮ್ಮೊಂದಿಗಿದ್ದಾರೆ. ಡಾ. ಎಂ. ಚಿದಾನಂದಮೂರ್ತಿ ಅವರು ಕನ್ನಡ ಸಂಶೋಧನೆಯ ಕ್ಷೇತ್ರಕ್ಕೆ ಶಿಸ್ತು, ಆಳ, ವಿಸ್ತಾರಗಳನ್ನು ತಂದುಕೊಟ್ಟವರು. ಕನ್ನಡ ಭಾಷೆ, ಸಾಹಿತ್ಯ, ಶಾಸನ, ಜಾನಪದ, ಇತಿಹಾಸ, ಸಂಸ್ಕೃತಿ ಹೀಗೆ ಅನೇಕ ನೆಲೆಗಳಲ್ಲಿ ಕನ್ನಡದ ಶೋಧವನ್ನು ನಡೆಸಿ ಕನ್ನಡ ನಾಡು ನುಡಿಗಳ ಬಗ್ಗೆ ಕನ್ನಡಿಗರಲ್ಲಿ ಪ್ರೀತಿ ಅಭಿಮಾನಗಳು ಉಂಟಾಗಲು ಕಾರಣೀಭೂತರಾದರು. ಕನ್ನಡ ಪ್ರಾಧ್ಯಾಪಕರಾಗಿ ಸಾವಿರಾರು ಮಂದಿ ವಿದ್ಯಾರ್ಥಿಗಳಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿಗಳ ಕುರಿತು ಎಚ್ಚರವನ್ನು ಮೂಡಿಸಿದರು. ಕನ್ನಡ ಚಳುವಳಿಯನ್ನು ಒಂದು ನೋಂಪಿಯಂತೆ ನಿರಂತರವಾಗಿ ಪಾಲಿಸಿಕೊಂಡು ಬಂದವರು.

ಪ್ರೊ. ಜೆ.ಎಸ್. ಖಂಡೇರಾವ್ ಅವರು ಕರ್ನಾಟಕದ ದೃಶ್ಯ ಕಲಾವಿದರಲ್ಲಿ ಪ್ರಮುಖರು. ಕರ್ನಾಟಕದ ದೃಶ್ಯಕಲೆಯ ಮೊದಲ ಘಟ್ಟದ ಪ್ರಮುಖ ಕಲಾವಿದರಾಗಿ ಬೆಳೆದುಬಂದು ಸೃಜನಶೀಲ ದೃಶ್ಯಾನುಭವದಲ್ಲಿ ಅನನ್ಯತೆ ಸಾಧಿಸಿದರು. ವಿಂಡೋ ಸರಣಿಯ ಅಮೂರ್ತಶೈಲಿಯ ಕಲಾಕೃತಿಗಳಿಂದ ಛಾಪು ಮೂಡಿಸಿ ದೃಶ್ಯ ಮಾಧ್ಯಮಕ್ಕೆ ವಿಶಿಷ್ಟ ಪರಿಭಾಷೆ ಒದಗಿಸಿದವರು. ಆರಂಭದಿಂದಲೂ ಭಾವಚಿತ್ರ, ಭೂದೃಶ್ಯ ರಚನೆಯಲ್ಲಿ ಸಿದ್ಧಹಸ್ತರಾಗಿರುವ ಇವರು ಅದಕ್ಕೆ ಪೂರಕವಾದ ಶಕ್ತಿ, ಸತ್ವ ಮತ್ತು ಸಹನೆಯನ್ನು ಉಳಿಸಿಕೊಂಡು ಬಂದವರು.

ಶ್ರೀಮತಿ ಸಿರಿಯಜ್ಜಿ ಅವರು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನ ಯಲಗಟ್ಟಿ ಗೊಲ್ಲರಹಟ್ಟಿಯಲ್ಲಿ ಇದ್ದುಕೊಂಡೇ ಕರ್ನಾಟಕದ ಪ್ರಮುಖ ಜನಪದ ಹಾಡುಗಾರ್ತಿಯಾಗಿದ್ದಾರೆ. ಮೂಲತಃ ಕಾಡುಗೊಲ್ಲ ಸಮುದಾಯಕ್ಕೆ ಸೇರಿದ ಇವರು ನಾಲ್ಕಾರು ರಾತ್ರಿಯವರೆಗೆ ನಿರರ್ಗಳವಾಗಿ ಹಾಡಬಲ್ಲ ಅಸಾಧಾರಣ ನೆನಪಿನ ಶಕ್ತಿ ಉಳ್ಳವರು. ಅನೇಕ ಕಾಲ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ಜಾನಪದ ಸಾಹಿತ್ಯ ಕುರಿತ ಸಂಸ್ಕೃತಿ ಚಿಂತಕರ ಸಂಶೋಧನೆಗೆ ಇವರು ದೊಡ್ಡ ಕಣಜವಾಗಿದ್ದಾರೆ. ಒಂದು ನಾಡಿನ ಸಾಂಸ್ಕೃತಿಕ ಇತಿಹಾಸವನ್ನು ಕಟ್ಟಿಕೊಡುವ ಜನಸಾಮಾನ್ಯರ ವೇದಗಳೆನಿಸಿದ ಜನಪದ ಹಾಡುಗಳ ಮರು ಅನುರಣನಕ್ಕೆ ಶ್ರೀಮತಿ ಸಿರಿಯಜ್ಜಿ ಸಾಕ್ಷಿಯಾಗಿದ್ದಾರೆ.

ಈ ಮೂವರು ಹಿರಿಯ ಸಾಧಕರಾದ ಡಾ. ಎಂ. ಚಿದಾನಂದಮೂರ್ತಿ, ಪ್ರೊ. ಜೆ.ಎಸ್. ಖಂಡೇರಾವ್ ಹಾಗೂ ಶ್ರೀಮತಿ ಸಿರಿಯಜ್ಜಿ ಅವರನ್ನು ಪ್ರೀತಿ ಗೌರವ ಪೂರ್ವಕವಾಗಿ ಸ್ವಾಗತಿಸುತ್ತೇನೆ.
ವಿಶ್ವವಿದ್ಯಾಲಯದ ಕಾರ್ಯಕಾರಿ ಸಮಿತಿ ಮತ್ತು ಆಡಳಿತ ಮಂಡಳಿಯ ಸದಸ್ಯರನ್ನು, ನುಡಿಹಬ್ಬಕ್ಕೆ ಆಗಮಿಸಿರುವ ಗೌರವಾನ್ವಿತ ಜನಪ್ರತಿನಿಧಿಗಳನ್ನು, ವಿಶ್ವವಿದ್ಯಾಲಯದ ಪ್ರಗತಿಗೆ ಸದಾ ಬೆಂಬಲವನ್ನು ಕೊಡುತ್ತಿರುವ ಪತ್ರಿಕಾ ಮತ್ತು ವಿದ್ಯುನ್ಮಾನ ಮಾಧ್ಯಮಗಳ ಸ್ನೇಹಿತರನ್ನು, ವಿಶ್ವವಿದ್ಯಾಲಯದ ಕೂಡುಕುಟುಂಬದ ಸದಸ್ಯರಾದ ಅಧ್ಯಾಪಕ, ಅಧ್ಯಾಪಕೇತರ ಮತ್ತು ವಿದ್ಯಾರ್ಥಿ ಸಮುದಾಯವನ್ನೂ, ಎಲ್ಲ ಆಹ್ವಾನಿತರನ್ನು ಆದರಪೂರ್ವಕವಾಗಿ ಬರಮಾಡಿಕೊಳ್ಳುತ್ತಿದ್ದೇನೆ.

ಕನ್ನಡ ವಿಶ್ವವಿದ್ಯಾಲಯವು ಕನ್ನಡ ಸಂಸ್ಕೃತಿಯ ಬಹುತ್ವದ ನೆಲೆಗಳನ್ನು ಹುಡಕುವ, ಗಟ್ಟಿಗೊಳಿಸುವ, ಹರಡುವ ಕಾಯಕವನ್ನು ನೋಂಪಿಯಂತೆ ನಡೆಸಿಕೊಂಡು ಬಂದಿದೆ. ಕನ್ನಡ ಸಂಸ್ಕೃತಿಯನ್ನು ಮತ್ತೆ ಮತ್ತೆ ನಿರ್ವಚನ ಮಾಡಿಕೊಳ್ಳುವ ಪ್ರಕ್ರಿಯೆಯಲ್ಲಿ ಕನ್ನಡ ವಿಶ್ವವಿದ್ಯಾಲಯವು ಒಂದು ಆಡುಂಬೊಲವಾಗಿ ಕಾರ್ಯ ನಿರ್ವಹಿಸುತ್ತಿದೆ. ನಮಗೆ ಗೊತ್ತಿರುವ ಸಂಸ್ಕೃತಿಯ ಅರ್ಥಗಳ ಆಚೆಗೆ ಅನೂಹ್ಯ ಲೋಕಗಳ ಕಡೆಗೆ ತನ್ನನ್ನು ಮತ್ತು ಕನ್ನಡಿಗರನ್ನು ಒಯ್ಯುವ ಪಯಣದ ದಾರಿಗಳನ್ನು ರೂಪಿಸುವ ಮಹತ್ವದ ಸಾಹಸದ ಹೆಜ್ಜೆಗಳು ಮೂಡಿಬಂದಿವೆ. ಇದು ನಿರಂತರ ನಡೆಯಬೇಕಾದ ಬಹುದಾರಿಗಳ ಮಹಾಯಾನ.

ಕಳೆದ ಜನವರಿಯಲ್ಲಿ ನಡೆದ ನುಡಿಹಬ್ಬದಿಂದ ಈ ನುಡಿಹಬ್ಬದ ನಡುವಿನ ಸುಮಾರು ಹತ್ತು ತಿಂಗಳ ಅವಧಿಯಲ್ಲಿ ವಿಶ್ವವಿದ್ಯಾಲಯದಲ್ಲಿ ಸಾಕಷ್ಟು ಅಭಿವೃದ್ಧಿ ಚಟುವಟಿಕೆಗಳು ನಡೆದಿವೆ. ಶ್ರೀ ಅಭೇರಾಜ್. ಎಚ್.ಬಲ್ಡೋಜ ಜೈನ ಸಂಸ್ಕೃತಿ ಅಧ್ಯಯನ ಕೇಂದ್ರ ಸ್ಥಾಪನೆ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದಿಂದ ಆದಿಪುರಾಣ ಸಾಂಸ್ಕೃತಿಕ ಮುಖಾಮುಖಿ ಕುರಿತ ವಿಚಾರಸಂಕಿರಣ, ಕನ್ನಡ ಭಾಷಾಧ್ಯಯನ ವಿಭಾಗದಿಂದ ಕನ್ನಡ ಭಾಷಾ ರಚನೆ ಅಧ್ಯಯನ ಕಮ್ಮಟ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದಿಂದ ಮೈಲಾರ ಕುರಿತ ವಿಚಾರಸಂಕಿರಣ, ಶಾಸನಶಾಸ್ತ್ರ ವಿಭಾಗದಿಂದ ಶಾಸನಶಾಸ್ತ್ರ ಕಾರ್ಯಾಗಾರ, ವಾಲ್ಮೀಕಿ ಅಧ್ಯಯನ ಪೀಠ ಮತ್ತು ದಲಿತ ಅಧ್ಯಯನ ಪೀಠದಿಂದ ದಲಿತರು ಮತ್ತು ಭಾರತದ ಸಂವಿಧಾನ ಹಾಗೂ ಅಸ್ಪೃಶ್ಯತೆ ಮತ್ತು ಜಾಗತೀಕರಣ ಕುರಿತು ಸಮ್ಮೇಳನಗಳು, ಶಂಬಾ ಅಧ್ಯಯನ ಪೀಠದಿಂದ ಸಂಶೋಧನ ವಿದ್ಯಾರ್ಥಿಗಳಿಗೆ ಸಂಶೋಧನ ಕಾರ್ಯಾಗಾರ, ಅಭಿವೃದ್ಧಿ ಅಧ್ಯಯನ ವಿಭಾಗದಿಂದ ಅಭಿವೃದ್ಧಿ ಸಂವಾದ, ರೈತರು ಮತ್ತು ಮಾರುಕಟ್ಟೆ, ಅಂಗನವಾಡಿ ಕಾರ್ಯಕರ್ತೆಯರ ತರಬೇತಿ ಮತ್ತು ಶಾಲಾಭಿವೃದ್ಧಿ ಸಮಿತಿ ಸದಸ್ಯರಿಗೆ ಕಾರ್ಯಾಗಾರ, ದೃಶ್ಯಕಲಾ ವಿಭಾಗದಿಂದ ದೃಶ್ಯ ಕಲಾ ಪ್ರದರ್ಶನ, ಪುರಂದರ ಅಧ್ಯಯನ ಪೀಠದಿಂದ ಮೂರನೇ ದಾಸ ಸಂಸ್ಕೃತಿ ಅಧ್ಯಯನ ಕುರಿತ ರಾಜ್ಯಮಟ್ಟದ ಸಮ್ಮೇಳನ, ಆಡಳಿತಾಂಗದಿಂದ ಸಂಶೋಧನ ವಿದ್ಯಾರ್ಥಿಗಳಿಗಾಗಿ ಕರ್ನಾಟಕ ಅಧ್ಯಯನ ಸಂಶೋಧನ ಸಮಾವೇಶ ಹಾಗೂ ಕುವೆಂಪು ಚಿಂತನೆ ಕುರಿತು ವಿಚಾರ ಸಂಕಿರಣ ಇಂತಹ ಅನೇಕ ಬೌದ್ಧಿಕ ಕಾರ್ಯಕ್ರಮಗಳನ್ನು ನಡೆಸಲಾಗಿದೆ. ಬಹುತೇಕ ಎಲ್ಲ ವಿಭಾಗಗಳು ಜನಸಾಮಾನ್ಯರ ಜೊತೆಗೆ ಸೇರಿಕೊಂಡು ಪರಸ್ಪರ ಕಲೆತು ಅಭಿವೃದ್ಧಿಪರ ಚಿಂತನೆಗಳನ್ನು ನಡೆಸಿವೆ.

ಕನ್ನಡ ವಿಶ್ವವಿದ್ಯಾಲಯಕ್ಕೆ ಕಳೆದ ಸುಮಾರು ಹತ್ತು ತಿಂಗಳಲ್ಲಿ ವಿಶ್ವವಿದ್ಯಾಲಯ ಅನುದಾನ ಆಯೋಗ ಮತ್ತು ಮತ್ತಿತರ ಸಂಪನ್ಮೂಲ ಕೇಂದ್ರಗಳಿಂದ ಉತ್ತಮ ಬೆಂಬಲ, ಪ್ರೋತ್ಸಾಹ ದೊರೆತಿದೆ. ಯು.ಜಿ.ಸಿ.ಯಿಂದ ಯುವ ವಿಶ್ವವಿದ್ಯಾಲಯ ಯೋಜನೆಯಲ್ಲಿ ರೂ. ಇಪ್ಪತ್ತು ಲಕ್ಷ, ಡೇ ಕೇರ್ ಕೇಂದ್ರಕ್ಕೆ ರೂ. ಮೂರು ಲಕ್ಷ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪುರುಷ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣಕ್ಕೆ ರೂ.

ಹನ್ನೆರಡು ಲಕ್ಷ ಐವತ್ತು ಸಾವಿರ ದೊರೆತಿದೆ. ಈ ತಿಂಗಳಷ್ಟೆ ಯು.ಜಿ.ಸಿ.ಯಿಂದ ನಮ್ಮ ವಿಶ್ವವಿದ್ಯಾಲಯಕ್ಕೆ ಕೆಲವು ಮಹತ್ವದ ಯೋಜನೆಗಳು ಮಂಜೂರಾಗಿವೆ. ಅವುಗಳಲ್ಲಿ ಬಹು ಮುಖ್ಯವಾದವು ಸುಮಾರು ರೂ. ಐವತ್ತು ಲಕ್ಷ ಅನುದಾನವುಳ್ಳ ಮಹಿಳಾ ಅಧ್ಯಯನ ಕೇಂದ್ರ, ಬುಡಕಟ್ಟು ಅಧ್ಯಯನ ವಿಭಾಗಕ್ಕೆ ರೂ. ಇಪ್ಪತ್ತೆರಡು ಲಕ್ಷದ ವಿಶೇಷ ಅನುದಾನ ಯೋಜನೆಯಲ್ಲಿ ಕಾರ್ಯಕ್ರಮ, ಕನ್ನಡ ಸಾಹಿತ್ಯ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ, ಶಾಸನಶಾಸ್ತ್ರ, ಹಸ್ತಪ್ರತಿಶಾಸ್ತ್ರ ವಿಭಾಗಗಳ ನಾಲ್ವರು ಪ್ರಾಧ್ಯಾಪಕರಿಗೆ ನಾಲ್ಕು ಬೃಹತ್ ಸಂಶೋಧನ ಯೋಜನೆ, ಸಾಂಸ್ಕೃತಿಕ ಅಧ್ಯಯನಕ್ಕಾಗಿ ಒಬ್ಬರಿಗೆ ಕಿರು ಸಂಶೋಧನ ಯೋಜನೆ, ದೆಹಲಿಯ ಇಂದಿರಾಗಾಂಧಿ ರಾಷ್ಟ್ರೀಯ ಕಲಾ ಕೇಂದ್ರದಿಂದ ಹಸ್ತಪ್ರತಿ ಮಿಶನ್ ಯೋಜನೆಯಲ್ಲಿ ರೂ. ಹತ್ತು ಲಕ್ಷ, ಕೇಂದ್ರ ಸರ್ಕಾರದ ಪ್ರವಾಸೋದ್ಯಮ ಇಲಾಖೆಯಿಂದ ಸ್ಥಳೀಯ ವಸ್ತುಸಂಗ್ರಹಾಲಯದ ಸ್ಥಾಪನೆಗಾಗಿ ರೂ. ಐದು ಲಕ್ಷ ಎಪ್ಪತ್ತು ಸಾವಿರ, ದೂರಶಿಕ್ಷಣ ಕೌನ್ಸಿಲ್‌ನಿಂದ ದೂರಶಿಕ್ಷನ ಕಾರ್ಯಕ್ರಮಗಳಿಗಾಗಿ ರೂ. ಹತ್ತು ಲಕ್ಷ ಇವು ಕೆಲವು ಮುಖ್ಯ ಶೈಕ್ಷಣಿಕ ಕೊಡುಗೆಗಳು. ಜೊತೆಗೆ ಭಾರತೀಯ ಚಾರಿತ್ರಿಕ ಸಂಶೋಧನ ಕೇಂದ್ರದಿಂದಲೂ ನೆರವು ದೊರೆತಿದೆ.

ಯು.ಜಿ.ಸಿ. ಅನುದಾನದಿಂದ ಚರಿತ್ರೆ ಮತ್ತು ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಎರಡು ಪುನರ್ಮನನ ಶಿಬಿರಗಳನ್ನು ಇದೇ ನವಂಬರ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ನಡೆಸಲು ಯೋಜಿಸಲಾಗಿದೆ. ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗದಿಂದ ಕಾಸರಗೋಡಿನಲ್ಲಿ ದ್ರಾವಿಡ ಛಂದಸ್ಸಿನ ಸಮ್ಮೇಳನ, ಜಾನಪದ ಅಧ್ಯಯನ ವಿಭಾಗದಿಂದ ಕೃಷಿ, ಸ್ಥಳೀಯ ಜ್ಞಾನಕ್ಕೆ ಸಂಬಂಧಿಸಿದಂತೆ ಹಾಸನದಲ್ಲಿ ದೇಸಿ ಸಮ್ಮೇಳನ ಇವು ಡಿಸೆಂಬರ ತಿಂಗಳಿನಲ್ಲಿ ತಕ್ಷಣ ನಡೆಯುವ ಕಾರ್ಯಕ್ರಮಗಳು. ಜೊತೆಗೆ ಮುಂದಿನ ದಿನಗಳಲ್ಲಿ ಎಲ್ಲ ಅಧ್ಯಯನ ವಿಭಾಗಗಳು ಹಾಗೂ ಹತ್ತು ಅಧ್ಯಯನ ಪೀಠಗಳು ತಮ್ಮ ಯೋಜನೆಗಳನ್ನು ರೂಪಿಸಿ ಕಾರ್ಯಕ್ರಮಗಳನ್ನು ನಡೆಸಲು ಸಿದ್ಧತೆ ನಡೆಸಿವೆ. ನಿನ್ನೆ ತಾನೇ ನಮ್ಮ ವಿಶ್ವವಿದ್ಯಾಲಯದ ಪ್ರಸಾರಾಂಗ ಪ್ರಕಟಿಸಿರುವ ನಲವತ್ತು ಗ್ರಂಥಗಳು ಬಿಡುಗಡೆಯಾಗಿವೆ. ಪ್ರಸಾರಾಂಗವು ವರ್ಷವಿಡೀ ನಡೆಸುವ ‘ಪುಸ್ತಕ ಪಯಣ’ ಎಂಬ ನಿರಂತರ ಯಾತ್ರೆಗೆ ನಿನ್ನೆ ಸನ್ಮಾನ್ಯ ಉನ್ನತಶಿಕ್ಷಣ ಸಚಿವರು ಚಾಲನೆ ಕೊಟ್ಟಿದ್ದಾರೆ. ನಮ್ಮ ವಿಶ್ವವಿದ್ಯಾಲಯದ ಎಂಟು ಸಂಶೋಧನ ಪತ್ರಿಕೆಗಳು ಸಕಾಲಕ್ಕೆ ಹೊಸ ಹೊಸ ವಸ್ತು ವಿಷಯಗಳನ್ನು ಒಳಗೊಂಡು ಸಕಾಲದಲ್ಲಿ ಪ್ರಕಟವಾಗುತ್ತಿವೆ. ಇದೇ ನವಂಬರ್ ೩ ರಂದು ನಡೆದ ಹಂಪಿ ಉತ್ಸವದಲ್ಲಿ ಕರ್ನಾಟಕ ಸರ್ಕಾರದ ನೆರವಿನಿಂದ ನಮ್ಮ ವಿಶ್ವವಿದ್ಯಾಲಯ ಪ್ರಕಟಿಸಿದ ‘ರಾಘವಾಂಕನ ಸಮಗ್ರಕಾವ್ಯ’ ಸಂಪುಟ ಬಿಡುಗಡೆಯಾಗಿದೆ. ವಿಶ್ವವಿದ್ಯಾಲಯದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳಿಗಾಗಿ ತಿಂಗಳಿಗೊಮ್ಮೆ ಬೆಳುದಿಂಗಳ ಕಾರ್ಯಕ್ರಮ, ಬೌದ್ಧಿಕ ಚಟುವಟಿಕೆಗಳಿಗಾಗಿ ಹದಿನೈದು ದಿನಕ್ಕೊಮ್ಮೆ ವಿಚಾರ ಮಂಡನೆಯ ಕಾರ್ಯಕ್ರಮಗಳು ಆರಂಭವಾಗಿವೆ. ಕಾವ್ಯ ರಸಿಕರಿಗಾಗಿ ಮುಂದೆ ನಿಗದಿತವಾಗಿ ಕಾವ್ಯದ ಹಬ್ಬಗಳು ನಡೆಯುತ್ತವೆ. ವಿಶ್ವವಿದ್ಯಾಲಯದ ಆವರಣ ಅಭಿವೃದ್ಧಿಗಾಗಿ ಸಮಿತಿಯೊಂದು ರಚನೆಗೊಂಡು ಕಾರ್ಯಪ್ರವೃತ್ತವಾಗಿದೆ. ಬೌದ್ಧಿಕವಾಗಿ ಹಾಗೂ ಭೌತಿಕವಾಗಿ ಸಮಪ್ರಮಾಣದಲ್ಲಿ ಕನ್ನಡ ವಿಶ್ವವಿದ್ಯಾಲಯ ಬೆಳೆಯಬೇಕೆಂಬುದು ನಮ್ಮೆಲ್ಲರ ಹಂಬಲ.

ಇಪ್ಪತ್ತೊಂದನೆಯ ಶತಮಾನದ ಆರಂಭದಲ್ಲಿ ಜಾಗತೀಕರಣದ ಈ ಸಂಕ್ರಮಣ ಸ್ಥಿತಿಯಲ್ಲಿ ಕನ್ನಡ ವಿಶ್ವವಿದ್ಯಾಲಯದ ರಚನೆ ಮತ್ತು ಕಾರ್ಯಗಳು ಸವಾಲಿನವು ಮತ್ತು ಜವಾಬ್ದಾರಿಯವೂ ಆಗಿವೆ. ‘ಕನ್ನಡ’ ಎನ್ನುವ ಪರಿಕಲ್ಪನೆಯನ್ನು ಭಾಷೆ, ಸಾಹಿತ್ಯ, ಬದುಕು ಮತ್ತು ಅದರ ಆಧುನಿಕ ಸನ್ನಿವೇಶಗಳಲ್ಲಿ ಅರ್ಥೈಸುವ ಮತ್ತೆ ಕಟ್ಟುವ ಕೆಲಸವನ್ನು ಕನ್ನಡ ವಿಶ್ವವಿದ್ಯಾಲಯ ಒಂದು ಕಾಯಕದಂತೆ ಕೈಗೆತ್ತಿಕೊಂಡಿದೆ. ‘ಕನ್ನಡ’ ಮತ್ತು ‘ಅಭಿವೃದ್ಧಿ’ ಎನ್ನುವ ಎರಡು ಪರಿಕಲ್ಪನೆಗಳು ಎದುರುಬದುರಾಗುವ ಆತಂಕ ಒಂದು ಕಡೆಯಾದರೆ, ಅವು ಒಂದನ್ನೊಂದು ಪ್ರಭಾವಿಸಿ ನೆರವಾಗುವ ಆವರಣವನ್ನು ನಿರ್ಮಾಣ ಮಾಡುವುದು ಇನ್ನೊಂದೆಡೆ ಇರುತ್ತದೆ. ಇಂತಹ ಸಂದರ್ಭದಲ್ಲಿ ಕನ್ನಡ ವಿಶ್ವವಿದ್ಯಾಲಯವು ಈ ಸಂಬಂಧಿಯಾದ ಹೊಸ ಆಲೋಚನೆಗಳ ಸಂವಾದ ಮತ್ತು ಅದರ ಆನ್ವಯಿಕ ಬಳಕೆಯಲ್ಲಿ ತನ್ನನ್ನು ತೊಡಿಗಿಸಿಕೊಳ್ಳಲು ಬಯಸಿದೆ.

ಮಾಹಿತಿ ತಂತ್ರಜ್ಞಾನವು ಜಾಗತೀಕರಣದ ಪ್ರಮುಖ ಅಸ್ತವಾಗಿ ಪ್ರಯೋಗವಾಗುತ್ತಿರುವಾಗ ಈ ಅಸ್ತ್ರವನ್ನು ಕನ್ನಡದ ಅಭಿವೃದ್ಧಿಗಾಗಿ ಬಳಸುವ ಹೊಣೆಗಾರಿಕೆಯು ಕನ್ನಡ ವಿಶ್ವವಿದ್ಯಾಲಯದ ಮೇಲೆ ಇದೆ. ಕನ್ನಡ ತಂತ್ರಾಂಶಗಳ ಅಭಿವೃದ್ಧಿಯ ಎಲ್ಲಾ ತೊಡಕುಗಳನ್ನು

ನಿವಾರಿಸಿಕೊಂಡು ಮುಂದೆ ಸಾಗಬೇಕೆನ್ನುವ ಉದ್ದೇಶದಿಂದ ಕನ್ನಡ ವಿಶ್ವವಿದ್ಯಾಲಯ ಈ ಸಂಬಂಧ ಸಾಹಿತಿಗಳ, ಭಾಷಾತಜ್ಞರ, ತಂತ್ರಜ್ಞರ ಸಮಾಲೋಚನೆಯನ್ನು ನಡೆಸಿ ಕನ್ನಡವು ಸರ್ವವ್ಯಾಪಿಯಾಗಿ ಬೆಳೆಯಲು ಶ್ರಮಿಸುತ್ತಿದೆ. ಕೇಂದ್ರ ಸರ್ಕಾರವು ಕನ್ನಡವನ್ನು ಶಾಸ್ತ್ರೀಯ ಭಾಷೆಯನ್ನಾಗಿ ಮಾನ್ಯ ಮಾಡುವ ದೃಷ್ಟಿಯಿಂದ ಅದಕ್ಕೆ ಸಂಬಂಧಿಸಿದ ಶೈಕ್ಷಣಿಕ ಸಾಮರ್ಥ್ಯದ ವರದಿಯನ್ನು ಕನ್ನಡ ವಿಶ್ವವಿದ್ಯಾಲಯವು ಸಿದ್ಧಪಡಿಸಿದೆ.

ಕನ್ನಡ ವಿಶ್ವವಿದ್ಯಾಲಯವು ಜನಪರ ಕಾರ್ಯಕ್ರಮಗಳನ್ನು ಇನ್ನಷ್ಟು ಪ್ರಮಾಣದಲ್ಲಿ ಹಮ್ಮಿಕೊಂಡು ಸರ್ಕಾರದ ಯೋಜನೆಗಳ ಸಮರ್ಪಕ ಅನುಷ್ಠಾನಕ್ಕೆ ನೆರವಾಗುವ ಉದ್ದೇಶವನ್ನು ಹೊಂದಿದೆ. ಕರ್ನಾಟಕದ ಸರ್ವಾಂಗೀಣ ಅಭಿವೃದ್ಧಿಯನ್ನು ಕುರಿತ ನೀಲಿ ನಕಾಶೆಯೊಂದನ್ನು ಸಿದ್ಧಪಡಿಸಲು ಯೋಜನೆಯೊಂದನ್ನು ರೂಪಿಸಲಾಗಿದ್ದು ಕನ್ನಡ ಸಾಹಿತ್ಯವನ್ನು ಸಮಗ್ರವಾಗಿ ಅಂತರ್‌ಜಾಲದಲ್ಲಿ ಅಳವಡಿಕೆ, ಆನ್ವಯಿಕ ವಿಜ್ಞಾನಗಳ ಅಧ್ಯಯನ ಹಾಗೂ ಪ್ರಸರಣ ಕೇಂದ್ರ, ಪ್ರದರ್ಶನಾತ್ಮಕ ಜನಪದ ಕಲೆಗಳ ತರಬೇತಿ ಕೇಂದ್ರ, ರಂಗಭೂಮಿ ಪ್ರದರ್ಶನ ಕಲೆಯ ಕೇಂದ್ರ, ವಿದೇಶಿ ವಿದ್ಯಾರ್ಥಿಗಳಿಗೆ ಕನ್ನಡ ಭಾಷೆ ಮತ್ತು ಸಂಸ್ಕೃತಿಯಲ್ಲಿ ತರಬೇತಿ ಕೊಡುವ ಕೇಂದ್ರ ಇವು ಕನ್ನಡ ವಿಶ್ವವಿದ್ಯಾಲಯದ ಮುಂದಿನ ಕೆಲವು ಯೋಜನೆಗಳು. ಕನ್ನಡದಿಂದ ಬೇರೆ ಭಾಷೆಗಳಿಗೆ ಮತ್ತು ಬೇರೆ ಭಾಷೆಗಳಿಂದ ಕನ್ನಡಕ್ಕೆ ಅಮೂಲ್ಯ ಕೃತಿಗಳನ್ನು ಅನುವಾದ ಮಾಡುವ ಉದ್ದೇಶದಿಂದ ಅನುವಾದ ಕೇಂದ್ರವೊಂದನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನೆರವಿನಿಂದ ಆರಂಭಿಸಬೇಕು ಎಂಬ ಹಂಬಲ ನಮ್ಮದು. ನಮ್ಮ ದೇಶದ ಒಳಗೆ ಮತ್ತು ಹೊರಗಿರುವ ಭಾಷೆ, ಸಾಹಿತ್ಯ, ಸಂಸ್ಕೃತಿಗಳಿಗೆ ಸಂಬಂಧಪಟ್ಟ ವಿಶ್ವವಿದ್ಯಾಲಯಗಳು ಮತ್ತು ಅಧ್ಯಯನ ಕೇಂದ್ರಗಳ ಜೊತೆಗೆ ಸಂಪರ್ಕ ಜಾಲವೊಂದನ್ನು ನಿರ್ಮಾಣ ಮಾಡುವುದು ತೀರ ತುರ್ತಾಗಿ ಮಾಡಬೇಕಾದ ಕೆಲಸ. ಭಾಷೆ ಹಾಗೂ ಸಂಸ್ಕೃತಿ ಕೇಂದ್ರಿತ ವಿಶ್ವವಿದ್ಯಾಲಯಗಳು ಪರಸ್ಪರ ಕಲೆಯುವ ಮತ್ತು ಕಲಿಯುವ ಪ್ರಕ್ರಿಯೆ ನಡೆಯಲು ಕನ್ನಡ ವಿಶ್ವವಿದ್ಯಾಲಯವು ಒಂದು ಚಾಲನಶಕ್ತಿಯಾಗಿ ಕೆಲಸ ಮಾಡಲು ಉದ್ದೇಶಿಸಿದೆ. ಕರ್ನಾಟಕದ ಸಂಸ್ಕೃತಿಯನ್ನು ಸಂರಕ್ಷಣೆ ಮಾಡುವ ಹಾಗೂ ಕ್ರಿಯಾಶೀಲಗೊಳಿಸುವ ಮತ್ತು ಹೊರಜಗತ್ತಿಗೆ ತೋರ್ಪಡಿಸುವ ಉದ್ದೇಶದಿಂದ ಸೂಕ್ತ ಅನುದಾನ ಸಂಸ್ಥೆಗಳ ನೆರವಿನಿಂದ ಸಂಸ್ಕೃತಿ ಗ್ರಾಮ ಹಾಗೂ ಕರಕುಶಲ ಗ್ರಾಮಗಳನ್ನು ನಿರ್ಮಾಣ ಮಾಡುವ ಹೊಣೆಗಾರಿಕೆಯನ್ನು ಹೊತ್ತುಕೊಳ್ಳಲು ಕನ್ನಡ ವಿಶ್ವವಿದ್ಯಾಲಯ ಸಿದ್ಧವಿದೆ.

ಕನ್ನಡ ವಿಶ್ವವಿದ್ಯಾಲಯವು ಬೋಧನೆ, ಸಂಶೋಧನೆ, ಪ್ರಸರಣದ ಕೆಲಸಗಳ ಜೊತೆಗೆ ಕನ್ನಡ ಸಂಸ್ಕೃತಿಯನ್ನು ಕುರಿತ ಸೃಜನಶೀಲ ವಿನ್ಯಾಸಗಳನ್ನು ರೂಪಿಸುವ ಮತ್ತು ಅವುಗಳಿಗೆ ಸೂಕ್ತ ಪ್ರಮಾಣದ ದಾರಿಗಳನ್ನು ಕಂಡುಕೊಳ್ಳುವ ಆಸಕ್ತಿಯನ್ನು ಹೊಂದಿದೆ. ವಿಶ್ವ ಪರಂಪರೆಯ ಕೇಂದ್ರವಾಗಿ 'ಹಂಪಿ' ಇರುವಂತೆ ಕನ್ನಡ ಸಂಸ್ಕೃತಿಯ ಶಕ್ತಿ ಕೇಂದ್ರವಾಗಿ 'ಕನ್ನಡ ವಿಶ್ವವಿದ್ಯಾಲಯ'ವು ವಿಶ್ವ ಸಾಂಸ್ಕೃತಿಕ ನಕ್ಷೆಯಲ್ಲಿ ಸ್ಥಾನ ಪಡೆಯಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ, ಯು.ಜಿ.ಸಿ.ಯ ಎಲ್ಲಾ ಜನವರ್ಗದವರ ಮಾರ್ಗದರ್ಶನ, ಸಹಕಾರ ಮತ್ತು ಬೆಂಬಲವನ್ನು ಪಡೆಯಲು ಹಂಬಲಿಸುತ್ತಿದೆ.

ಕನ್ನಡ ವಿಶ್ವವಿದ್ಯಾಲಯವು ಹನ್ನೆರಡು ಸಾರ್ಥಕ ಸಂವತ್ಸರಗಳನ್ನು ಪೂರ್ಣ ಗೊಳಿಸುವ ಮೂಲಕ ಮತ್ತೆ ಹೊಸ ಪಯಣಕ್ಕೆ ಸಿದ್ಧವಾಗಿದೆ. ಜಾಗತೀಕರಣಕ್ಕೆ ಪ್ರತಿಯಾಗಿ ಮತ್ತು ಪ್ರತಿಕ್ರಿಯೆಯಾಗಿ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳನ್ನು ಹೊಸದಾಗಿ ಕಟ್ಟುವ ಕಾಯಕಕ್ಕೆ ಕನ್ನಡ ವಿಶ್ವವಿದ್ಯಾಲಯವನ್ನು ಸಿದ್ಧಗೊಳಿಸುವಲ್ಲಿ ಎಲ್ಲರ ಸಹಕಾರವನ್ನು ಕೋರುತ್ತೇನೆ.

'ಓ ನನ್ನ ಚೇತನ, ಆಗು ನಿ ಅನಿಕೇತನ' ಎನ್ನುವ ಕುವೆಂಪು ಅವರ ಕವಿವಾಣಿಯನ್ನು ಕನ್ನಡ ವಿಶ್ವವಿದ್ಯಾಲಯವು ಒಂದು ಆದರ್ಶ ಮತ್ತು ವಾಸ್ತವವಾಗಿ ಸ್ವೀಕರಿಸಿದೆ. ವಿಶ್ವವಿದ್ಯೆಯ ಆಲಯವನ್ನು ಬಯಲಿಗೊಯ್ಯುವ ಬಯಲೇ ಆಲಯವಾಗುವ ಪ್ರಕ್ರಿಯೆಯಲ್ಲಿ ತನ್ನನ್ನು ಪುನಶ್ಚೇತನಗೊಳಿಸಿಕೊಳ್ಳಲು ಈ ನುಡಿಹಬ್ಬ ಪ್ರೇರಕವಾಗಲೆಂದು ಆಶಿಸುತ್ತೇನೆ.

ನಮಸ್ಕಾರ

೧೪ ನವೆಂಬರ್ ೨೦೦೪

# ೧೧. ಕನ್ನಡ ಅರಿವಿನ ಮುಂದಣ ಹೆಜ್ಜೆ

ಕರ್ನಾಟಕ ರಾಜ್ಯದ ಘನತೆವೆತ್ತ ರಾಜ್ಯಪಾಲರೂ ಕನ್ನಡ ವಿಶ್ವವಿದ್ಯಾಲಯ ಹಂಪಿಯ ಗೌರವಾನ್ವಿತ ಕುಲಾಧಿಪತಿಗಳೂ ಆಗಿರುವ ಸನ್ಮಾನ್ಯ ಶ್ರೀ ಟಿ.ಎನ್. ಚತುರ್ವೇದಿ ಅವರೇ, ಕರ್ನಾಟಕ ರಾಜ್ಯದ ಉನ್ನತ ಶಿಕ್ಷಣ ಸಚಿವರೂ ಕನ್ನಡ ವಿಶ್ವವಿದ್ಯಾಲಯದ ಸಮಕುಲಾಧಿಪತಿಗಳೂ ಆಗಿರುವ ಸನ್ಮಾನ್ಯ ಶ್ರೀ ಡಿ. ಮಂಜುನಾಥ್ ಅವರೇ, ಕನ್ನಡ ವಿಶ್ವವಿದ್ಯಾಲಯದ ಹದಿನಾಲ್ಕನೆಯ ನುಡಿಹಬ್ಬದ ಮುಖ್ಯ ಅತಿಥಿಗಳಾಗಿ ಆಗಮಿಸಿರುವ ಭಾರತದ ಸುಪ್ರೀಂಕೋರ್ಟ್‌ನ ಮಾಜಿ ನ್ಯಾಯಮೂರ್ತಿಗಳೂ ಭಾರತ ಸರ್ಕಾರದ ಮಾನವ ಹಕ್ಕುಗಳ ಆಯೋಗದ ಸದಸ್ಯರೂ ಆಗಿರುವ ಸನ್ಮಾನ್ಯ ಜಸ್ಟೀಸ್ ಡಾ. ಶಿವರಾಜ್ ವಿ. ಪಾಟೀಲ್ ಅವರೇ, ಈ ನುಡಿಹಬ್ಬದಲ್ಲಿ ನಾಡೋಜ ಗೌರವ ಪದವಿಗಳನ್ನು ಸ್ವೀಕರಿಸಲು ಒಪ್ಪಿಕೊಂಡು ದಯಮಾಡಿಸಿರುವ ಕನ್ನಡದ ಹಿರಿಯ ನಿಘಂಟುಕಾರ ವಿದ್ವಾಂಸರಾದ ಪ್ರೊ. ಸಿ. ವೆಂಕಟಸುಬ್ಬಯ್ಯ ಅವರೇ, ಹಿರಿಯ ಸಮಾಜ ವಿಜ್ಞಾನಿ, ದಲಿತ ಹಾಗೂ ಮಹಿಳೆಯರ ಪರವಾದ ಕಾಳಜಿಯುಳ್ಳ ಪ್ರೊ. ಸಿ. ಪಾರ್ವತಮ್ಮ ಅವರೇ, ಆಧುನಿಕ ಕನ್ನಡ ಸಾಹಿತ್ಯಕ್ಕೆ ಮಹಿಳೆಯರ ಭಿನ್ನ ಸಾಂಸ್ಕೃತಿಕ ಧ್ವನಿಗಳನ್ನು ತಂದುಕೊಟ್ಟಿರುವ ಹಿರಿಯ ಲೇಖಕಿ ಶ್ರೀಮತಿ ಸಾರಾ ಅಬೂಬಕ್ಕರ್ ಅವರೇ, ಕನ್ನಡ ನಾಟಕ ರಂಗಭೂಮಿಯನ್ನು ಕಳೆದ ಎಂಬತ್ತು ವರ್ಷದಿಂದ ಸಚೇತನವಾಗಿ ಬೆಳೆಸಿದ ಕನ್ನಡ ಪರ ಹೋರಾಟಗಾರ ಹಿರಿಯ ನಾಟಕಕಾರ, ನಟ ಶ್ರೀ ಏಣಗಿ ಬಾಳಪ್ಪನವರೇ, ಕಾಷ್ಠ ಶಿಲ್ಪ ಕಲೆಗೆ ಜೀವಧಾತು ತುಂಬಿ ಮರದ ಕೆತ್ತನೆಗಳನ್ನು ಅಮರವಾಗಿಸಿರುವ ಧಾರು ವಿಶ್ವಕರ್ಮಿ ಶ್ರೀ ನಾಗಣ್ಣ ಮೋನಪ್ಪ ಬಡಿಗೇರ ಅವರೇ, ಹರಿಕಥೆಯ ಮಾಧ್ಯಮದಲ್ಲಿ ಕರ್ನಾಟಕದ ಕೀರ್ತನ ಸಾಹಿತ್ಯ ಮತ್ತು ಸಂಗೀತವನ್ನು ಮೌಖಿಕ ಪರಂಪರೆಯಲ್ಲಿ ಸುಮಾರು ಐದು ದಶಕಗಳ ಕಾಲ ಕನ್ನಡಿಗರಿಗೆ ಪರಿಣಾಮಕಾರಿಯಾಗಿ ಸಂವಹನ ಮಾಡಿರುವ ಹರಿದಾಸ ಶ್ರೀ ಭದ್ರಗಿರಿ ಅಚ್ಯುತದಾಸರೇ, ಕನ್ನಡ ವಿಶ್ವವಿದ್ಯಾಲಯದ ಕಾರ್ಯಕಾರಿ ಸಮಿತಿ ಮತ್ತು ಆಡಳಿತ ಮಂಡಳಿಯ ಸದಸ್ಯರೇ, ಈ ಪರಿಸರದ ಎಲ್ಲ ಜನ ಪ್ರತಿನಿಧಿಗಳೇ, ಮಾಧ್ಯಮದ ಎಲ್ಲ ಗೆಳೆಯರೇ, ಕನ್ನಡ ವಿಶ್ವವಿದ್ಯಾಲಯ ವಿಶ್ವ ಕುಟುಂಬದ ಎಲ್ಲಾ ಪ್ರೀತಿಯ ಬಂಧುಗಳೇ, ಆಹ್ವಾನಿತರೇ ಮತ್ತು ಸ್ನೇಹಿತರೇ.

ಕನ್ನಡ ವಿಶ್ವವಿದ್ಯಾಲಯದ ಈ ಹದಿನಾಲ್ಕನೆಯ ನುಡಿಹಬ್ಬಕ್ಕೆ ತಮ್ಮೆಲ್ಲರನ್ನು ಪ್ರೀತಿ ಗೌರವದಿಂದ ಸ್ವಾಗತಿಸಲು ಬಹಳ ಸಂತೋಷ ಪಡುತ್ತೇನೆ.

ಘನತೆವೆತ್ತ ಕುಲಾಧಿಪತಿಗಳಾದ ಸನ್ಮಾನ್ಯ ಶ್ರೀ ಟಿ.ಎನ್. ಚರ್ತುವೇದಿ ಅವರು ಈ ನುಡಿಹಬ್ಬದ ಅಧ್ಯಕ್ಷತೆಯನ್ನು ವಹಿಸಿಕೊಂಡು ಆರು ಹಿರಿಯ ಸಾಧಕರಿಗೆ ನಾಡೋಜ ಗೌರವ ಪದವಿಗಳನ್ನು ಮತ್ತು ಅರ್ಹ ಅಭ್ಯರ್ಥಿಗಳಿಗೆ ಡಿ.ಲಿಟ್. ಮತ್ತು ಪಿಎಚ್.ಡಿ. ಪದವಿಗಳನ್ನು ನೀಡಲು ದಯಮಾಡಿ ಒಪ್ಪಿಕೊಂಡು ಬಂದಿರುತ್ತಾರೆ. ಸಾಹಿತ್ಯ ಮತ್ತು ಸಂಸ್ಕೃತಿ ಪ್ರೇಮಿಗಳೂ ಹಿರಿಯ ಮುತ್ಸದ್ಧಿಗಳೂ ಆಗಿರುವ ಸನ್ಮಾನ್ಯ ಕುಲಾಧಿಪತಿಗಳ ಮಾರ್ಗದರ್ಶನ ಮತ್ತು ಪ್ರೋತ್ಸಾಹದಿಂದ ಕನ್ನಡ ವಿಶ್ವ ವಿದ್ಯಾಲಯವು ಸರ್ವತೋಮುಖ ಪ್ರಗತಿಯಲ್ಲಿ ಮುನ್ನಡೆಯುತ್ತಿದೆ. ಘನತೆವೆತ್ತ ಕುಲಾಧಿಪತಿಗಳಿಗೆ ಕನ್ನಡ ವಿಶ್ವವಿದ್ಯಾಲಯದ ಪರವಾಗಿ ಗೌರವಪೂರ್ವಕ ಸ್ವಾಗತವನ್ನು ಕೋರುತ್ತೇನೆ. ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಸಚಿವರೂ ಕರ್ನಾಟಕದ ಹಿರಿಯ ಅನುಭವಿ ರಾಜಕಾರಣಿಗಳೂ ಆಗಿರುವ ಸನ್ಮಾನ್ಯ ಶ್ರೀ ಡಿ. ಮಂಜುನಾಥ್ ಅವರು ಕನ್ನಡ ವಿಶ್ವವಿದ್ಯಾಲಯದ ಸಮಕುಲಾಧಿಪತಿಗಳಾಗಿ ಕನ್ನಡ ವಿಶ್ವವಿದ್ಯಾಲಯದ ನುಡಿಹಬ್ಬದಲ್ಲಿ ಪಾಲ್ಗೊಂಡು ಎಂ.ಫಿಲ್ ಪದವೀಧರರಿಗೆ ಪದವಿಗಳನ್ನು ಪ್ರಧಾನ ಮಾಡಲಿದ್ದಾರೆ. ಮಾನ್ಯರು ಕನ್ನಡ ವಿಶ್ವವಿದ್ಯಾಲಯವು ಶಿಸ್ತು ಮತ್ತು ಸೃಜನಶೀಲತೆಯಿಂದ ಮುನ್ನಡೆಯಲು ಎಲ್ಲಾ ರೀತಿಯ ಬೆಂಬಲ ಸಹಕಾರಗಳನ್ನು ಕೊಡುತ್ತಿದ್ದಾರೆ. ಸನ್ಮಾನ್ಯ ಉನ್ನತ ಶಿಕ್ಷಣ ಸಚಿವರಾದ ಶ್ರೀ ಡಿ. ಮಂಜುನಾಥ್ ಅವರಿಗೆ ಕನ್ನಡ ವಿಶ್ವವಿದ್ಯಾಲಯದ ವತಿಯಿಂದ ಗೌರವಪೂರ್ವಕವಾಗಿ ಸ್ವಾಗತವನ್ನು ಕೋರುತ್ತೇನೆ. ನುಡಿಹಬ್ಬದ ಈ ಸರ್ವೋನ್ನತ ನ್ಯಾಯಾಲಯದ ಹಿಂದಿನ ನ್ಯಾಯಮೂರ್ತಿಗಳೂ ಭಾರತ ಸರ್ಕಾರ ಮಾನವ ಹಕ್ಕುಗಳ ಆಯೋಗದ ಸದಸ್ಯರೂ ಆಗಿರುವ ಡಾ. ಜಸ್ಟೀಸ್ ಶಿವರಾಜ್ ವಿ. ಪಾಟೀಲ್ ಅವರು ಆಗಮಿಸಿದ್ದಾರೆ. ಕನ್ನಡಿಗರಾದ ಡಾ ಶಿವರಾಜ್ ವಿ. ಪಾಟೀಲ್ ಅವರು ರಾಯಚೂರು ಜಿಲ್ಲೆಯ ಮಳದಕಲ್ಲಿನಲ್ಲಿ ೧೯೪೦ರ

ಜನವರಿ ೧೨ರಂದು ಜನಿಸಿದರು. ೧೯೬೨ ರಲ್ಲಿ ಗುಲಬರ್ಗಾದಲ್ಲಿ ವಕೀಲರಾಗಿ ಸೇವೆ ಸಲ್ಲಿಸಿ ಉತ್ತಮ ನ್ಯಾಯವಾದಿ ಎಂದು ಹೆಸರು ಪಡೆದರು. ಗುಲ್ಬರ್ಗಾದ ಸೇಠ್ ಶಂಕರ್‌ಲಾಲ್ ಲಾಹೋಠಿ ಕಾನೂನು ಕಾಲೇಜಿನಲ್ಲಿ ೧೯೬೭-೭೫ ರವರೆಗೆ ಉಪನ್ಯಾಸಕರಾಗಿ ಸೇವೆಯನ್ನು ಸಲ್ಲಿಸಿದ ಅವರು ೧೯೭೫-೭೮ ರವರೆಗೆ ಕಾನೂನು ಕಾಲೇಜಿನ ಗೌರವ ಪ್ರಾಚಾರ್ಯರಾಗಿ ಕೆಲಸ ಮಾಡಿದರು. ೧೯೭೯ ರಲ್ಲಿ ಕರ್ನಾಟಕದ ಹೈಕೋರ್ಟ್‌ನಲ್ಲಿ ನ್ಯಾಯವಾದಿಗಳಾಗಿ ಸೇವೆಯನ್ನು ಆರಂಭಿಸಿದ ಮಾನ್ಯ ಪಾಟೀಲರು ೧೯೮೦ ರಲ್ಲಿ ಬೆಲ್ಗ್ರೇಡ್ ಮತ್ತು ಬರ್ಲಿನ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ನ್ಯಾಯವಾದಿಗಳ ಸಮ್ಮೇಳನದಲ್ಲಿ ಭಾಗವಹಿಸಿದ್ರು. ೧೯೮೭ ರಲ್ಲಿ ಸೋವಿಯಟ್ ರಷ್ಯಾ ಮತ್ತು ಯುರೋಪಿನ ದೇಶಗಳು, ೧೯೯೬ ರಲ್ಲಿ ಇಂಗ್ಲೆಂಡ್‌ನ್ನು ಸಂದರ್ಶಿಸಿ ಆ ದೇಶಗಳ ನ್ಯಾಯಾಲಯಗಳ ಕಾರ್ಯ ಸ್ವರೂಪವನ್ನು ಅಧ್ಯಯನ ಮಾಡಿದರು. ೧೯೯೦ ರಲ್ಲಿ ಕರ್ನಾಟಕ ಹೈಕೋರ್ಟ್‌ನ ನ್ಯಾಯಾಧೀಶರಾಗಿ ನೇಮಕಗೊಂಡ ಡಾ ಶಿವರಾಜ್ ವಿ. ಪಾಟೀಲ್ ಅವರು ೧೯೯೪ ರಿಂದ ೯೮ರವರೆಗೆ ಮದ್ರಾಸ್ ಹೈಕೋರ್ಟಿನಲ್ಲಿ ನ್ಯಾಯಾಧೀಶರಾಗಿದ್ದು, ೧೯೯೯ ರಲ್ಲಿ ರಾಜಸ್ಥಾನದ ಹೈಕೋರ್ಟಿನ ಮುಖ್ಯನ್ಯಾಯಾಧೀಶರಾಗಿ ನೇಮಕಗೊಂಡರು. ಡಾ ಶಿವರಾಜ ವಿ. ಪಾಟೀಲ್ ಅವರು ೨೦೦೧ ಇಸವಿಯಲ್ಲಿ ಭಾರತದ ಸುಪ್ರೀಂಕೋರ್ಟಿನ ನ್ಯಾಯಾಧೀಶರಾಗಿ ಪದೋನ್ನತಿ ಹೊಂದಿದ್ದರು. ೨೦೦೫ ಜನವರಿವರೆಗೆ ಸುಪ್ರೀಂ ಕೋರ್ಟಿನ ನ್ಯಾಯಾಧೀಶರಾಗಿದ್ದ ಶ್ರೀ ಪಾಟೀಲ್ ಅವರು ೨೦೦೫ ಫೆಬ್ರವರಿಯಲ್ಲಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಸದಸ್ಯರಾಗಿ ನೇಮಕಗೊಂಡರು. ಇವರಿಗೆ ೨೦೦೪ ರಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ಪದವಿಯನ್ನು ಕೊಟ್ಟು ಗೌರವಿಸಿದೆ. ಕನ್ನಡ ಸಾಹಿತ್ಯದ ಬಗ್ಗೆ ಅಪಾರ ಆಸಕ್ತಿಯುಳ್ಳ, ಸಂಸ್ಕೃತಿವಂತರಾದ ನ್ಯಾಯಮೂರ್ತಿ ಡಾ. ಶಿವರಾಜ್ ವಿ. ಪಾಟೀಲ್ ಅವರನ್ನು ಕನ್ನಡ ವಿಶ್ವವಿದ್ಯಾಲಯದ ಈ ನುಡಿಹಬ್ಬಕ್ಕೆ ಪ್ರೀತಿ ಆದರಗಳಿಂದ ಸ್ವಾಗತಿಸುತ್ತೇನೆ.

ಈ ನುಡಿಹಬ್ಬದಲ್ಲಿ ಕನ್ನಡ ವಿಶ್ವವಿದ್ಯಾಲಯವು ಕೊಡಮಾಡುವ ನಾಡೋಜ ಗೌರವ ಪದವಿಗಳನ್ನು ಸ್ವೀಕರಿಸಲು ಒಪ್ಪಿಕೊಂಡು ಬಂದಿರುವ ಆರು ಹಿರಿಯ ಸಾಧಕರು ನಮ್ಮೊಂದಿಗಿದ್ದಾರೆ.

ಪ್ರೊ. ಜಿ. ವೆಂಕಟಸುಬ್ಬಯ್ಯನವರು ಕಳೆದು ಸುಮಾರು ಎಪ್ಪತ್ತು ವರ್ಷಗಳಿಂದ ಕನ್ನಡ ನಿಘಂಟುಶಾಸ್ತ್ರ, ಪ್ರಾಚೀನ ಸಾಹಿತ್ಯದಂತಹ ಕ್ಷೇತ್ರದಲ್ಲಿ ಸಾಧನೆ ಮಾಡಿದ ಹಿರಿಯ ವಿದ್ವಾಂಸರು. ಕನ್ನಡ ನಿಘಂಟು ಶಾಸ್ತ್ರದ ಬ್ರಹ್ಮ ಮತ್ತು ಸಾರ್ವಭೌಮ ಆಗಿರುವ ಪ್ರೊ. ಜಿ.ವಿ. ಅವರು ಕನ್ನಡದ ಪದಕೋಶ ಜೀವಿ. ಪಂಡಿತ ಪಾಮರರಿಗೆ ಕನ್ನಡ ಪದಗಳನ್ನು 'ಇಗೋ' ಎಂದು ತೆಗೆದುಕೊಡುತ್ತಿರುವ ಬತ್ತದ ಶಬ್ದಸಾಗರ ಪ್ರೊ. ಜಿ.ವೆಂಕಟಸುಬ್ಬಯ್ಯ.

ಪ್ರೊ. ಸಿ. ಪಾರ್ವತಮ್ಮ ಅವರು ಕರ್ನಾಟಕದ ಸಮಾಜವಿಜ್ಞಾನ ಕ್ಷೇತ್ರದಲ್ಲಿ ದಲಿತ ಹಾಗೂ ಮಹಿಳೆಯರಿಗೆ ಸಂಬಂಧಿಸಿದ ವಿಶಿಷ್ಟ ಸಂಶೋಧನೆಯನ್ನು ನಡೆಸಿ ಜನಪರ ಅಧ್ಯಯನ ಮಾಡಿರುವ ಹಿರಿಯ ಪ್ರಾಧ್ಯಾಪಕ ವಿದ್ವಾಂಸರು. ಶೈಕ್ಷಣಿಕ ಅಧ್ಯಯನ ಮತ್ತು ಸಾಮಾಜಿಕ ಅಧ್ಯಯನಗಳು, ಸಂವೇದನೆಯ ಆಂಧೋಲನವಾಗಿ ರೂಪಾಂತರಗೊಳ್ಳಬೇಕು ಎನ್ನುವುದನ್ನು ತಮ್ಮ ಬರಹ ಮತ್ತು ಬದುಕಿನಲ್ಲಿ ಮಾಡಿ ತೋರಿಸಿದ ಅಂತಾರಾಷ್ಟ್ರೀಯ ಖ್ಯಾತಿ ಸಮಾಜವಿಜ್ಞಾನಿ ಪ್ರೊ. ಸಿ. ಪಾರ್ವತಮ್ಮ ಅವರು.

ಶ್ರೀಮತಿ ಸಾರಾ ಅಬೂಬಕ್ಕರ್ ಅವರು ಆಧುನಿಕ ಕನ್ನಡ ಸಾಹಿತ್ಯಕ್ಕೆ ಮುಸ್ಲಿಂ ಮಹಿಳೆಯರ ಸಂವೇದನೆಯನ್ನು ಮೊಟ್ಟಮೊದಲಿಗೆ ತಂದುಕೊಟ್ಟು, ತಮ್ಮ ಕಾದಂಬರಿಗಳು ಸಣ್ಣ ಕಥೆಗಳು ಹಾಗೂ ವೈಚಾರಿಕ ಬರಹಗಳ ಮೂಲಕ ಮಹಿಳೆಯರ ವಿಮೋಚನೆಯನ್ನು ಒಂದು ಕಾಯಕ ಎಂಬಂತೆ ಸಾಧಿಸಿ ತೋರಿಸಿದವರು. ಏಳು ಭಾಷೆಗಳಿಗೆ ಅನುವಾದಗೊಂಡ ಅವರ ಮೊದಲನೆಯ ಕಾದಂಬರಿ ಚಂದ್ರಗಿರಿಯ ತೀರದಲ್ಲಿ. ಕನ್ನಡದ ಸಾಹಿತ್ಯ ಕೃತಿಯೊಂದು ಭಾರತೀಯ ಭಾಷೆಗಳಲ್ಲಿ ಅನುರಣಗೊಂಡ ಅನನ್ಯ ಪ್ರತೀಕವಾಗಿದೆ. ಸಾಹಿತ್ಯ ನಿರ್ಮಾಣ ಮತ್ತು ಮಹಿಳೆಯರ ಆಂದೋಲನಗಳನ್ನು ಅಭಿನ್ನವಾಗಿ ನಡೆಸಿಕೊಂಡು ಬರುತ್ತಿರುವವರು ಶ್ರೀಮತಿ ಸಾರಾ ಅಬೂಬಕ್ಕರ್ ಅವರು.

ಶ್ರೀ ಏಣಗಿ ಬಾಳಪ್ಪನವರು ಸುಮಾರು ಎಂಬತ್ತು ವರ್ಷಗಳ ಕಾಲ ಕನ್ನಡದ ನಾಟಕ ರಂಗಭೂಮಿಯಲ್ಲಿ ನಟರಾಗಿ, ನಾಟಕಕಾರರಾಗಿ ಜನಮನ್ನಣೆಯನ್ನು ಪಡೆದಿರುವ ಶ್ರೇಷ್ಠ ಕಲಾವಿದರು. ವೃತ್ತಿ ರಂಗಭೂಮಿಗೆ ಗುರುತನ್ನು ಮತ್ತು ಗೌರವವನ್ನು, ಅಭಿಮಾನವನ್ನು ಮತ್ತು ಅನ್ನವನ್ನು ತಂದುಕೊಟ್ಟವರು ಶ್ರೀ ಏಣಗಿ ಬಾಳಪ್ಪನವರು. ಬೆಳಗಾವಿಯನ್ನು ಕರ್ನಾಟಕದ ಅವಿಭಾಜ್ಯ ಅಂಗವೆಂದು ಸ್ಥಾಪಿಸಲು ಕನ್ನಡ ನಾಟಕಗಳ ಮಾಧ್ಯಮವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡ ಕನ್ನಡದ ಅಪ್ಪಟ ಹೋರಾಟಗಾರ ಶ್ರೀ ಏಣಗಿ ಬಾಳಪ್ಪನವರು.

ಶ್ರೀ ನಾಗಣ್ಣ ಮೋನಪ್ಪ ಬಡಿಗೇರ ಅವರು ಕಾಷ್ಠ ಶಿಲ್ಪ ಕಲೆಯಲ್ಲಿ ಸೃಜನಶೀಲ ಕಲಾಕೃತಿಯನ್ನು ನೋಂಪಿಯಂತೆ ಕಳೆದ ಎಪ್ಪತ್ತೈದು ವರ್ಷಗಳಿಂದ ನಡೆಸಿಕೊಂಡು ಬಂದ ಹಿರಿಯ ಕಲಾವಿದರು. ಶ್ರೀ ನಾಗಣ್ಣ ಮೋನಪ್ಪ ಬಡಿಗೇರ ಅವರಿಂದ ಮರ ಅಮರವಾಯಿತು. ಗ್ರಾಮದೇವತೆಗಳಿಂದ ತೊಡಗಿ ದೇವಾಲಯಗಳವರೆಗೆ, ರಥ ಪಲ್ಲಕ್ಕಿಗಳಿಂದ ತೊಡಗಿ ಕಂಬ ತೋರಣಗಳವರೆಗೆ ಮರದ ಕುಸರಿ ಕೆಲಸವನ್ನು ಅದ್ಭುತವಾಗಿ ಸಾಧಿಸಿದ ಅಮರ ವಿಶ್ವಕರ್ಮಿ ಶ್ರೀ ನಾಗಣ್ಣ ಬಡಿಗೇರ ಅವರು.

ಶ್ರೀ ಭದ್ರಗಿರಿ ಅಚ್ಯುತದಾರು ಕರ್ನಾಟಕದ ಸ್ವಾತಂತ್ರೋತ್ತರ ಹರಿದಾಸ ಸಾಹಿತ್ಯ ಪರಂಪರೆಯನ್ನು ಸಮಾಜಮುಖಿಯಾಗಿ ಮಾಡಿದ ಜನಮುಖಿ ಹರಿದಾಸರು. 'ದಾಸರೆಂದರೆ ಶ್ರೀ ಭದ್ರಗಿರಿ ಅಚ್ಯುತದಾಸರಯ್ಯ' ಎನ್ನುವಂತೆ ಸರ್ವಧರ್ಮ ಸಮನ್ವಯವನ್ನು ಜನಪರ ಚಿಂತನೆಯನ್ನು ಹರಿಕಥೆಯ ಮಾಧ್ಯಮದ ಮುಲಕ ಜನಸಾಮಾನ್ಯರಿಗೆ ಕಾಂತಾಸಮ್ಮಿತ ಮಾದರಿಯಲ್ಲಿ ಸಂವಹನ ಮಾಡಿದರು ಹರಿದಾಸ ಸಾಹಿತ್ಯ ಮತ್ತು ಕೀರ್ತನೆಗಳನ್ನು ಕರ್ನಾಟಕದ ಸಂಗೀತ ಪರಂಪರೆ ಮೂಲಕ ಬೆಸುಗೆ ಮಾಡಿ ಮುಂದುವರಿಸಿಕೊಂಡು ಬಂದವರು ಹರಿದಾಸ ಶ್ರೀ ಭದ್ರಗಿರಿ ಅಚ್ಯುತದಾಸರು.

ವಿಶ್ವವಿದ್ಯಾಲಯದ ಕಾರ್ಯಕಾರಿ ಸಮಿತಿ ಮತ್ತು ಆಡಳಿತ ಮಂಡಳಿಯ ಸದಸ್ಯರನ್ನು, ನುಡಿಹಬ್ಬಕ್ಕೆ ಆಗಮಿಸಿರುವ ಗೌರವಾನ್ವಿತ ಜನಪ್ರತಿನಿಧಿಗಳನ್ನು, ವಿಶ್ವವಿದ್ಯಾಲಯದ ಪ್ರಗತಿಗೆ ಸದಾ ಬೆಂಬಲವನ್ನು ಕೊಡುತ್ತಿರುವ ಪತ್ರಿಕಾ ಮತ್ತು ವಿದ್ಯುನ್ಮಾನ ಮಾಧ್ಯಮಗಳ ಸ್ನೇಹಿತರನ್ನು, ವಿಶ್ವವಿದ್ಯಾಲಯದ ವಿಶ್ವ ಕುಟುಂಬದ ಸದಸ್ಯರನ್ನು-ಅಧ್ಯಾಪಕರು, ಆಡಳಿತ ಸಿಬ್ಬಂದಿಯವರು, ಸಂಶೋಧಕರು ಮತ್ತು ವಿದ್ಯಾರ್ಥಿಗಳು ಎಲ್ಲ ಆಹ್ವಾನಿತರನ್ನು ಆದರ ಪೂರ್ವಕವಾಗಿ ಬರಮಾಡಿಕೊಳ್ಳುತ್ತಿದ್ದೇನೆ.

ಕನ್ನಡ ವಿಶ್ವವಿದ್ಯಾಲಯವು ಕನ್ನಡ ಸಂಸ್ಕೃತಿಯ ಬಹುತ್ವದ ನೆಲೆಗಳನ್ನು ಹುಡುಕುವ, ಗಟ್ಟಿಗೊಳಿಸುವ, ಹರಡುವ ಕಾಯಕವನ್ನು ನೋಂಪಿಯಂತೆ ನಡೆಸಿಕೊಂಡು ಬಂದಿದೆ. ಕನ್ನಡ ಸಂಸ್ಕೃತಿಯನ್ನು ಮತ್ತೆ ಮತ್ತೆ ನಿರ್ವಚನ ಮಾಡಿಕೊಳ್ಳುವ ಪ್ರಕ್ರಿಯೆಯಲ್ಲಿ ಕನ್ನಡ ವಿಶ್ವವಿದ್ಯಾಲಯವು ಒಂದು ಆಡುಂಬೊಲವಾಗಿ ಕಾರ್ಯ ನಿರ್ವಹಿಸುತ್ತಿದೆ. ನಮಗೆ ಗೊತ್ತಿರುವ ಸಂಸ್ಕೃತಿಯ ಅರ್ಥಗಳಾಚೆಗೆ ಅನೂಹ್ಯ ಲೋಕಗಳ ಕಡೆಗೆ ತನ್ನನ್ನು ಮತ್ತು ಕನ್ನಡಿಗರನ್ನು ಒಯ್ಯುವ ಪಯಣದ ದಾರಿಗಳನ್ನು ರೂಪಿಸುವ ಮಹತ್ವದ ಸಾಹಸದ ಹೆಜ್ಜೆಗಳು ಮೂಡಿಬಂದಿವೆ. ಇದು ನಿರಂತರ ನಡೆಯಬೇಕಾದ ಬಹುದಾರಿಗಳ ಮಹಾಯಾನ.

ಕಳೆದ ವರ್ಷ ನವೆಂಬರ್‌ನಲ್ಲಿ ನಡೆದ ನುಡಿಹಬ್ಬದಿಂದ ಈ ನುಡಿಹಬ್ಬದ ನಡುವಿನ ಸುಮಾರು ಒಂದು ವರ್ಷ ಒಂದು ತಿಂಗಳ ಅವಧಿಯಲ್ಲಿ ನಮ್ಮ ವಿಶ್ವವಿದ್ಯಾಲಯದಲ್ಲಿ ಅಭಿವೃದ್ಧಿ ಚಟುವಟಿಕೆಗಳು ವಿಶಿಷ್ಟವಾಗಿ ನಡೆದಿವೆ. ಭೌತಿಕ ಮತ್ತು ಬೌದ್ಧಿಕವಾಗಿ ಕನ್ನಡ ವಿಶ್ವವಿದ್ಯಾಲಯ ಹೆಚ್ಚು ವಿಸ್ತಾರಗೊಂಡಿದೆ. ಕಾಲ ಮತ್ತು ಅವಕಾಶಗಳನ್ನು ನಿರ್ಮಿಸುವುದು, ತುಂಬುವುದು, ವಿಸ್ತರಿಸುವುದು ಬಹು ಬಗೆಗಳಲ್ಲಿ, ಬಹುನೆಲೆಗಳಲ್ಲಿ ಕಳೆದ ಒಂದು ವರ್ಷದಲ್ಲಿ ಸಾಧ್ಯವಾಗಿದೆ.

ಕನ್ನಡ ವಿಶ್ವವಿದ್ಯಾಲಯದ ಎಲ್ಲ ಹದಿನೈದು ಅಧ್ಯಯನ ವಿಭಾಗಗಳು ಅಧ್ಯಯನ, ಪ್ರಕಟಣೆ ಮತ್ತು ವಿಸ್ತರಣೆಯ ಕೆಲಸವನ್ನು ತುಂಬ ಉತ್ಸಾಹ ಮತ್ತು ವ್ಯವಸ್ಥಿತವಾಗಿ ನಡೆಸಿವೆ. ವಿಚಾರ ಸಂಕಿರಣ, ಕಮ್ಮಟ, ವಿಶೇಷ ಉಪನ್ಯಾಸ, ವೈಯಕ್ತಿಕ ಮತ್ತು ಸಾಂಸ್ಥಿಕ ಸಂಶೋಧನಾ ಯೋಜನೆಗಳು ಎಲ್ಲಾ ವಿಭಾಗಗಳಲ್ಲೂ ಪೂರ್ಣಪ್ರಮಾಣದಲ್ಲಿ ನಡೆದಿವೆ. ಕನ್ನಡ ಸಾಹಿತ್ಯ ಮತ್ತು ಚರಿತ್ರೆ ವಿಷಯಗಳಲ್ಲಿ ಎರಡು

ಪುನರ್ಮನನ ಶಿಬಿರಗಳನ್ನು ನಡೆಸಲಾಗಿದೆ. ಸಂಶೋಧನೆಯನ್ನು ತನ್ನ ಪ್ರಧಾನ ಕಾಳಜಿಯನ್ನಾಗಿಟ್ಟುಕೊಂಡಿರುವ ಕನ್ನಡ ವಿಶ್ವವಿದ್ಯಾಲಯವು ಡಿ.ಲಿಟ್ ಮತ್ತು ಪಿಎಚ್.ಡಿಯನ್ನು ಇನ್ನಷ್ಟು ಖಚಿತಗೊಳಿಸುವ ಮತ್ತು ಪರಿಣಾಮಕಾರಿಯಾಗಿ ಮಾಡುವ ದೃಷ್ಟಿಯಿಂದ ಅವುಗಳ ನಿಯಮಾವಳಿಯನ್ನು ಪರಿಷ್ಕರಿಸಿ ಈ ವರ್ಷದಿಂದಲೇ ಜಾರಿಗೆ ತಂದಿದೆ. ಸಂಶೋಧನೆಯ ವಿನ್ಯಾಸ ಮತ್ತು ಗುಣಗಳನ್ನು ಹೆಚ್ಚು ಪಾರದರ್ಶಕವಾಗಿ ಮತ್ತು ಉತ್ತಮಿಕೆಯ ಮಾದರಿಯಾಗಿ ಇರುವಂತೆ ಈ ನಿಯಮಾವಳಿಗಳನ್ನು ರೂಪಿಸಲಾಗಿದೆ.

ಕನ್ನಡ ಭಾಷಾಧ್ಯಯನ ವಿಭಾಗದಿಂದ, ಭಾಷೆ ಮತ್ತು ತಂತ್ರಜ್ಞಾನ ರಾಷ್ಟ್ರೀಯ ವಿಚಾರ ಸಂಕಿರಣ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದಿಂದ ಅಕ್ಕಮಹಾದೇವಿ ವಚನಗಳು: ಸಾಂಸ್ಕೃತಿ ಮುಖಾಮುಖಿ (ಚಿತ್ರದುರ್ಗ), ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗದಿಂದ ದ್ರಾವಿಡ ಛಂದಸ್ಸು (ಕಾಸರಗೋಡು), ಮೌಖಿಕ ಪರಂಪರೆ ಮತ್ತು ದಕ್ಷಿಣ ಭಾರತದ ಇತಿಹಾಸ (ದೆಹಲಿ), ಭಾಷಾಂತರ ವಿಭಾಗದಿಂದ ಭಾಷಾಂತರ ಕಮ್ಮಟ ಮತ್ತು ಭಾಷಾಂತರ ಉಪನ್ಯಾಸ ಮಾಲೆ, ಹಸ್ತಪ್ರತಿಶಾಸ್ತ್ರ ಅಧ್ಯಯನ ವಿಭಾಗದಿಂದ ಕನ್ನಡ ಹಸ್ತಪ್ರತಿ ಸಮ್ಮೇಳನ (ಬಿಜಾಪುರ), ಡಿ.ಎಲ್. ನರಸಿಂಹಾಚಾರ್: ಶತಮಾನದ ಸ್ಮರಣೆ (ಬೆಂಗಳೂರು), ಹಸ್ತಪ್ರತಿ ತರಬೇತಿ ಶಿಬಿರಗಳು ಮತ್ತು ಜಾಗೃತಿ ಶಿಬಿರಗಳನ್ನು ನಡೆಸಲಾಗಿದೆ. ಈ ವಿಭಾಗದಲ್ಲಿರುವ ಹಸ್ತಪ್ರತಿ ಸಂಪನ್ಮೂಲ ಕೇಂದ್ರವು ನ್ಯಾಷನಲ್ ಮ್ಯಾನ್‌ಸ್ಕ್ರಿಪ್ಟ್ ಮಿಷನ್‌ನ ನೆರವಿನಿಂದ ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ಹಸ್ತಪ್ರತಿ ಜಾಗೃತಿ ಶಿಬಿರಗಳನ್ನು ನಡೆಸಿ ಹಸ್ತಪ್ರತಿಗಳನ್ನು ಸಂಗ್ರಹಿಸಿದೆ. ಈ ಯೋಜನೆಯ ಭಾಗವಾಗಿ ಸುಮಾರು ೧೪೦೦ ಹಸ್ತಪ್ರತಿಗಳ ಸೂಚೀಕರಣದ ಕೆಲಸ ನಡೆದಿದೆ. ಈ ಕೇಂದ್ರದ ಪ್ರಗತಿಗೆ ನ್ಯಾಷನಲ್ ಮ್ಯಾನ್‌ಸ್ಕ್ರೀಪ್ಟ್ ಮಿಷನ್ ಮೆಚ್ಚುಗೆ ವ್ಯಕ್ತಪಡಿಸಿದೆ. ಮಹಿಳಾ ಅಧ್ಯಯನ ವಿಭಾಗದಿಂದ ಮಹಿಳಾ ಅಧ್ಯಯನ ಮತ್ತು ಅನ್ಯ ಜ್ಞಾನಶಿಸ್ತುಗಳ ಕಮ್ಮಟ (ಗುಲ್ಬರ್ಗಾ), ಜಾನಪದ ಅಧ್ಯಯನ ವಿಭಾಗದಿಂದ ದೇಸಿ ಸಮ್ಮೇಳನ (ಹಾಸನ), ಚರಿತ್ರೆ ವಿಭಾಗದಿಂದ ಕರ್ನಾಟಕ ಚರಿತ್ರೆಯ ಚಿಂತನಾ ನೆಲೆಗಳು ವಿಚಾರ ಸಂಕಿರಣ, ಶಾಸನಶಾಸ್ತ್ರದ ವಿಧಿ ವಿಧಾನಗಳು (ಕಾರ್ಕಳ) ವಿಚಾರ ಸಂಕಿರಣ ನಡೆದಿವೆ. ಬೀದರ್ ಮತ್ತು ಬಾಗಲಕೋಟೆ ಜಿಲ್ಲೆಯ ಶಾಸನ ಸಂಪುಟಗಳು ಪ್ರಕಟಣೆಗೆ ಸಿದ್ಧವಾಗಿದ್ದು, ಅವು ೨೦೦೯ ರಲ್ಲಿ ಪ್ರಕಟವಾಗುತ್ತವೆ. ಮುಂದಿನ ಯೋಜನೆಯಾಗಿ ಗುಲ್ಬರ್ಗಾ ಮತ್ತು ಉತ್ತರ ಕರ್ನಾಟಕದ ಇತರೆ ಜಿಲ್ಲೆಗಳ ಶಾಸನ ಸಂಗ್ರಹ ಆರಂಭವಾಗುತ್ತದೆ. ಅಭಿವೃದ್ಧಿ ಅಧ್ಯಯನ ವಿಭಾಗದಿಂದ ಶಾಲಾಶಿಕ್ಷಕರಿಗೆ ಪಠ್ಯಪುಸ್ತಕ ಕಮ್ಮಟ, ಪೊಲೀಸ್‌ರಿಗೆ ಮಾನವ ಹಕ್ಕುಗಳ ಕಮ್ಮಟ, ಬುಡಕಟ್ಟು ಅಧ್ಯಯನ ವಿಭಾಗದಿಂದ ಬುಡಕಟ್ಟು ಪ್ರತಿನಿಧಿಗಳ ಕಮ್ಮಟ, ಬಾದಾಮಿ ಶಿಲ್ಪ ಮತ್ತು ವರ್ಣ ಚಿತ್ರಕಲಾ ವಿಭಾಗದಿಂದ ಲಲಿತಕಲಾ ಅಕಾಡೆಮಿ ಮತ್ತು ಶಿಲ್ಪಕಲಾ ಅಕಾಡೆಮಿಗಳ ಸಹಯೋಗದಲ್ಲಿ ಸಾಂಪ್ರದಾಯಿಕ ಶಿಲ್ಪ ಮತ್ತು ಚಿತ್ರಕಲಾ ನಡೆದಿದೆ. ಸಂಗೀತ ವಿಭಾಗದಿಂದ ಬೇರೆ ಬೇರೆ ಶಿಕ್ಷಣ ಸಂಸ್ಥೆಗಳಲ್ಲಿ ಸಂಗೀತ ಯಾತ್ರೆ ಅಭಿಯಾನ ನಡೆದಿದೆ. ಪುರಂದರದಾಸ ಅಧ್ಯಯನ ಪೀಠದಿಂದ ಕನಕದಾಸ ಸಾಹಿತ್ಯ – ಮರು ಓದು ವಿಚಾರ ಸಂಕಿರಣ (ಮಂಗಳೂರು ವಿ.ವಿ.) ಮತ್ತು ದಾಸಸಂತ ರಾಷ್ಟ್ರೀಯ ಸಮ್ಮೇಳನ (ಪಂಢರಾಪುರ); ದಲಿತ ಅಧ್ಯಯನ ಪೀಠದಿಂದ ದಲಿತರು ಮತ್ತು ಪರ್ಯಾಯ ರಾಜಕಾರಣ ವಿಚಾರ ಸಂಕಿರಣ (ಮೈಸೂರು); ಶಂಬಾಜೋಶಿ ಅಧ್ಯಯನ ಪೀಠದಿಂದ ಸಂಶೋಧನಾ ಕಮ್ಮಟ ಮತ್ತು ಅಧ್ಯಯನದ ವಿಧಿವಿಧಾನಗಳು ಕಮ್ಮಟಗಳು ನಡೆದಿವೆ. ಯುಜಿಸಿ ಆರ್ಥಿಕ ನೆರವಿನ ವಿಶೇಷ ಸಹಾಯ ಯೋಜನೆಯಡಿ ಯಲ್ಲಿ ಬುಡಕಟ್ಟು ಅಧ್ಯಯನ ವಿಭಾಗದಿಂದ ಸುಮಾರು ೫೦ ಬುಡಕಟ್ಟುಗಳ ಸಮೀಕ್ಷೆ ಮತ್ತು ಅಧ್ಯಯನ ಪ್ರಗತಿಯಲ್ಲಿದೆ. ಕರ್ನಾಟಕ ಸರ್ಕಾರದ ಪರಿಶಿಷ್ಟ ವರ್ಗದ ಕಲ್ಯಾಣ ನಿರ್ದೇಶನಾಲಯವು ಪರಿಶಿಷ್ಟ ವರ್ಗಗಳ ಸಂಶೋಧನೆ ಮತ್ತು ಮೌಲ್ಯಮಾಪನಕ್ಕೆ ಸಂಬಂಧಪಟ್ಟಂತೆ ಬುಡಕಟ್ಟು ಅಧ್ಯಯನ ವಿಭಾಗವನ್ನು ಸಂಪನ್ಮೂಲ ಕೇಂದ್ರವಾಗಿ ಗುರುತಿಸಿ ಈ ವಿಭಾಗದ ಮೂಲಕ ಯೋಜನೆಗಳು ಆರಂಭವಾಗಿವೆ. ಯುಜಿಸಿ ಆರ್ಥಿಕ ನೆರವಿನಿಂದ ಸ್ಥಾಪನೆಗೊಂಡ ಮಹಿಳಾ ಅಧ್ಯಯನ ಕೇಂದ್ರವು ಮಾರ್ಚ್ ೨೦೦೫ ರಂದು ಉದ್ಘಾಟನೆಗೊಂಡು ಮಹಿಳಾ ಅಧ್ಯಯನಗಳು ಮತ್ತು ಮಹಿಳಾ ಚಳುವಳಿಗಳು ಸಂವಾದ ಕಾರ್ಯಕ್ರಮವನ್ನು ನಡೆಸಿದೆ. ಮಹಿಳಾ ಅಧ್ಯಯನ ಕೇಂದ್ರದ ವತಿಯಿಂದ ಕಮಲಾಪುರದ ಪ್ರಾಥಮಿಕ ಆರೋಗ್ಯಕೇಂದ್ರದ ಸಹಾಯದಿಂದ ಪರಿಸರದ ಮಹಿಳೆಯರಿಗಾಗಿ ಸಂತಾನಾರೋಗ್ಯ ಸಲಹಾ ಕೇಂದ್ರವನ್ನು ಆರಂಭಿಸಲಾಗಿದೆ. ಬಳ್ಳಾರಿ ಜಿಲ್ಲೆಯ ಬೇರೆ ಬೇರೆ ಪ್ರದೇಶಗಳಲ್ಲಿ ಮಹಿಳಾ ಜಾಗೃತಿ ಶಿಬಿರಗಳನ್ನು ನಡೆಸಲಾಗುತ್ತಿದೆ. ಈ ಕೇಂದ್ರದ ಆಶ್ರಯದಲ್ಲಿ ಮಹಿಳಾ ಅಧ್ಯಯನ ಸ್ನಾತಕೋತ್ತರ ಡಿಪ್ಲೋಮಾ ಆರಂಭವಾಗಿದೆ. ಮಹಿಳಾ ಅಧ್ಯಯನದ ಪಾರಿಭಾಷಿಕ ಪದಕೋಶ, ಮಹಿಳಾ ಅಧ್ಯಯನ ವಿಶ್ವಕೋಶ, ಮಹಿಳಾ ಅಧ್ಯಯನ ಸರ್ಟಿಫಿಕೇಟ್ ಕೋರ್ಸ್, ಮಹಿಳಾ ಅಧ್ಯಯನಕ್ಕೆ ಸಂಬಂಧಪಟ್ಟಂತೆ ಕಿರು ಪುಸ್ತಕ ಪ್ರಕಟಣೆ ಮುಂದಿನ ಮುಖ್ಯ ಯೋಜನೆಗಳಾಗಿವೆ. ಕನ್ನಡ

ವಿಶ್ವವಿದ್ಯಾಲಯದ ದೂರಶಿಕ್ಷಣ ಕೇಂದ್ರವು ಪ್ರಸ್ತುತ ಕನ್ನಡ ಸಾಹಿತ್ಯ ಎಂ.ಎ. ಪದವಿ, ಹದಿನೈದು ವಿವಿಧ ಸ್ನಾತಕೋತ್ತರ ಡಿಪ್ಲೋಮಾಗಳು ಮತ್ತು ನಾಲ್ಕು ಸರ್ಟಿಫಿಕೇಟ್ ಕೋರ್ಸ್‌ಗಳನ್ನು ನಡೆಸುತ್ತಿದೆ. ಈ ವರ್ಷ ಚರಿತ್ರೆ, ಪತ್ರಿಕೋದ್ಯಮ ಮತ್ತು ಮಾಧ್ಯಮ ಶಿಕ್ಷಣ ಎನ್ನುವ ಇನ್ನೆರಡು ಸ್ನಾತಕೋತ್ತರ ಕೋರ್ಸ್‌ಗಳನ್ನು ಆರಂಭಿಸಿದೆ. ದೂರಶಿಕ್ಷಣ ಕೇಂದ್ರವು ಪ್ರಾದೇಶಿಕ ಅಧ್ಯಯನ ಕೇಂದ್ರಗಳನ್ನು ರಾಜ್ಯದ ಬೇರೆ ಬೇರೆ ಕಡೆಗಳಲ್ಲಿ ತೆರೆಯುವ ಮೂಲಕ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ.

ಕಳೆದ ಶೈಕ್ಷಣಿಕ ವರ್ಷದಲ್ಲಿ ಆರಂಭಿಸಿದ ಭಾಷಾಂತರ ಕೇಂದ್ರದಿಂದ ಕನ್ನಡದ ಮಹತ್ವದ ಕೃತಿಗಳನ್ನು ಇಂಗ್ಲಿಷ್ ಭಾಷೆಗೆ ಭಾಷಾಂತರಿಸುವ ಕಾರ್ಯ ಆರಂಭವಾಗಿದೆ. ಕನ್ನಡದ ಐದುನೂರು ವಚನಗಳ ಇಂಗ್ಲಿಷ್ ಅನುವಾದ ಪ್ರಗತಿಯಲ್ಲಿದ್ದು ಮಾರ್ಚ್ ೨೦೦೬ ರಲ್ಲಿ ಪೂರ್ಣಗೊಳ್ಳುತ್ತದೆ. ಕನ್ನಡ ಜನಪದ ಮಹಾಕಾವ್ಯಗಳ ಮುಖ್ಯ ಭಾಗಗಳ ಸಂಕಲನದ ಇಂಗ್ಲೀಷ್ ಅನುವಾದದ ಕಾರ್ಯ ಆರಂಭದ ಹಂತದಲ್ಲಿದೆ. ಕನ್ನಡದ ಮೊತ್ತ ಮೊದಲ ಗದ್ಯ ಗ್ರಂಥ ವಡ್ಡಾರಾಧನೆ ಇಂಗ್ಲಿಷ್ ಅನುವಾದವು ಭಾಷಾಂತರ ಕೇಂದ್ರದ ಮುಂದಿನ ವರ್ಷದ ಇನ್ನೊಂದು ಮುಖ್ಯ ಯೋಜನೆ.

ಕನ್ನಡ ಸಂಶೋಧನೆಗೆ ಸಂಬಂಧಿಸಿದಂತೆ ಈವರೆಗೆ ನಡೆದಿರುವ ಕೆಲಸಗಳನ್ನು ಶೇಖರಿಸುವ ಮತ್ತು ವ್ಯವಸ್ಥಿತಗೊಳಿಸುವ ನವೀನ ಯೋಜನೆಗಳನ್ನು ಸಿರಿಗಿನ್ನಡ ಗ್ರಂಥಾಲಯದಲ್ಲಿ ಸಂಶೋಧನಾ ಕರ್ನಾಟಕ ಎನ್ನುವ ಹೆಸರಿನಲ್ಲಿ ಆರಂಭಿಸಲಾಗಿದೆ. ಕನ್ನಡ ಭಾಷೆ, ಸಾಹಿತ್ಯ, ವಿಜ್ಞಾನ, ಸಮಾಜ ವಿಜ್ಞಾನ, ಆಡಳಿತ ನಿರ್ವಹಣೆ ಮುಂತಾದ ಕರ್ನಾಟಕ ಸಂಬಂಧಿಯಾದ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಜಗತ್ತಿನ ಯಾವುದೇ ವಿಶ್ವವಿದ್ಯಾಲಯದಲ್ಲಿ ಯಾವುದೇ ಭಾಷೆಯಲ್ಲಿ ಪಿಎಚ್.ಡಿ., ಎಂ.ಫಿಲ್ ಅಧ್ಯಯನ ನಡೆದಿದ್ದರೂ ಅದನ್ನು ಸಂಗ್ರಹಿಸಿಡುವ ಕೆಲಸ ಆರಂಭವಾಗಿದೆ.

ಈ ಯೋಜನೆಯಲ್ಲಿ ಈ ವರೆಗೆ ೬೫೦೦ ಸಂಶೋಧನಾ ಪ್ರಬಂಧಗಳ ಮಾಹಿತಿಗಳನ್ನು ಸಂಗ್ರಹಿಸುವುದರ ಜೊತೆಗೆ ಅದರ ಸಾರಾಂಶವನ್ನು ಸಂಗ್ರಹಿಸುವ ಕೆಲಸ ನಡೆದಿದೆ. ೨೦೦೬ ನವೆಂಬರ್ ವೇಳೆಗೆ ಈ ಯೋಜನೆಯನ್ನು ಬಹುಮಟ್ಟಿಗೆ ಪೂರ್ಣಗೊಳಿಸಿ ಅಂತರ್ಜಾಲದಲ್ಲಿ ಅಳವಡಿಸುವ ಗುರಿ ಇಟ್ಟುಕೊಳ್ಳಲಾಗಿದೆ. ನಮ್ಮ ವಿಶ್ವವಿದ್ಯಾಲಯದ ಮಾಹಿತಿಕೇಂದ್ರದಲ್ಲಿ ಕರ್ನಾಟಕಕ್ಕೆ ಸಂಬಂಧಿಸಿದಂತೆ ಬೇರೆ ಬೇರೆ ಮಾಹಿತಿಗಳನ್ನು ಕೆಲಹಾಕಿ ದತ್ತಕಣಜದ ಮಾದರಿಯಲ್ಲಿ ಕಾರ್ಯಕ್ರಮ ರೂಪಿಸುವ ಕೆಲಸ ಆರಂಭವಾಗಿದೆ. ಮೊದಲ ಹಂತವಾಗಿ ಕರ್ನಾಟಕದ ಕಲಾವಿದರು, ಕರ್ನಾಟಕದ ಬರಹಗಾರರು, ಕರ್ನಾಟಕದ ಜಲಸಂಬಂಧಿ ಯೋಜನೆ, ಕರ್ನಾಟಕದ ಪ್ರಾಣಿ ಪಕ್ಷಿಗಳು ಎನ್ನುವ ಯೋಜನೆಗಳನ್ನು ಆರಂಭಿಸಲಾಗಿದೆ. ಇವುಗಳಿಗೆ ಸಂಬಂಧಿಸಿದಂತೆ ಮಾಹಿತಿ ಸಂಗ್ರಹಿಸುವ ಕಾರ್ಯ ಪ್ರಗತಿಯಲ್ಲಿದೆ. ಮುಂದಿನ ವರ್ಷ ಈ ಯೋಜನೆಗಳನ್ನು ವಿಸ್ತರಿಸುವ ಮತ್ತು ಅಂತರ್ಜಾಲದಲ್ಲಿ ಸೇರಿಸುವ ಕಾರ್ಯ ನಡೆಯುತ್ತಿದೆ. ಕುಪ್ಪಳ್ಳಿಯಲ್ಲಿ ಇರುವ ಕುವೆಂಪು ಅಧ್ಯಯನ ಕೇಂದ್ರದಲ್ಲಿ ಕುವೆಂಪು ಅವರ ಬರಹ ಮತ್ತು ಭಾವಚಿತ್ರಗಳ ಸಮಗ್ರ ಮಾಹಿತಿಯನ್ನು ಕಲೆಹಾಕಲಾಗಿದೆ. ಕಳೆದ ವರ್ಷ ಕುವೆಂಪು ನಾಟಕಗಳ ಸಮಗ್ರ ಸಂಪುಟವನ್ನು ಪ್ರಕಟಿಸಲಾಗಿದೆ. ಮುಂದಿನ ವರ್ಷ ಕುವೆಂಪು ಅವರ ಗದ್ಯ ಬರಹಗಳ ಮತ್ತು ಪತ್ರಗಳ ಎರಡು ಸಂಪುಟಗಳನ್ನು ಪ್ರಕಟಿಸಲು ಸಂಪಾದನಾಕಾರ್ಯ ನಡೆದಿದೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಘಟಕದಿಂದ ವಿದ್ಯಾರ್ಥಿಗಳಿಗೆ ಶಿಷ್ಯವೇತನ, ವಸತಿ ನಿಲಯ ವೇತನವನ್ನು ಸಮರ್ಪಕವಾಗಿ, ಸಕಾಲದಲ್ಲಿಸ ಒದಗಿಸಲಾಗಿದೆ. ವಿದ್ಯಾರ್ಥಿಗಳ ಶಿಷ್ಯವೇತನಕ್ಕೆ ಸಂಬಂಧಿಸಿದಂತೆ ಡಿಸೆಂಬರ್ ೨೦೦೫ ರಿಂದ ಪಿಎಚ್.ಡಿ., ಎಂ.ಫಿಲ್ ಶಿಷ್ಯವೇತನವನ್ನು ಹೆಚ್ಚಿಸಿ ವಿಶ್ವವಿದ್ಯಾಲಯದ ವತಿಯಿಂದ ಕೊಡಲು ನಿರ್ಧರಿಸಿದ್ದಾರೆ. ಈ ವರ್ಷ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಮತ್ತು ಔದ್ಯೋಗಿಕ ಮಾಹಿತಿ ಕೊಡಲು ಅರಿವಿನ ಶಿಬಿರವನ್ನು ಈ ಘಟಕದ ಮೂಲಕ ನಡೆಸಲಾಗಿದೆ. ಯುಜಿಸಿ ನೆರವಿನಿಂದ ಕಳೆದ ವರ್ಷ ನಮ್ಮ ವಿಶ್ವವಿದ್ಯಾಲಯದಲ್ಲಿ ರಾಷ್ಟ್ರೀಯ ಅರ್ಹತಾ ಪರೀಕ್ಷೆ (NET) ನಡೆಸುವ ಘಟಕ ಸ್ಥಾಪಿಸಲಾಗಿದೆ. ಇದರ ವತಿಯಿಂದ ಜೂನ್ ೨೦೦೫ ರಲ್ಲಿ ನಡೆದ ರಾಷ್ಟ್ರೀಯ ಅರ್ಹತಾ ಪರೀಕ್ಷೆಗೆ ಸಿದ್ಧತೆಯ ತರಬೇತಿಯನ್ನು ಸಮರ್ಪಕವಾಗಿ ನಡೆಸಲಾಗಿದ್ದು, ಮೊದಲ ತಂಡದಲ್ಲಿಯೇ ಏಳು ಮಂದಿ ವಿದ್ಯಾರ್ಥಿಗಳು ಕನ್ನಡ ಸಾಹಿತ್ಯದಲ್ಲಿ ಎನ್‌ಇಟಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವುದು ಸಂತೋಷದ ಸಂಗತಿ.

ಕನ್ನಡ ವಿಶ್ವವಿದ್ಯಾಲಯವು ೨೦೦೫ ರಲ್ಲಿ ಎರಡು ಶೈಕ್ಷಣಿಕ ಒಡಂಬಡಿಕೆಗಳಿಗೆ ಸಹಿ ಹಾಕಿದೆ. ಜೂನ್ ೭, ೨೦೦೫ ರಂದು ಜರ್ಮನಿಯ ವೂರ್ಜ್‌ಬರ್ಗ್ ವಿಶ್ವವಿದ್ಯಾಲಯದೊಂದಿಗೆ ಕನ್ನಡ ವಿಶ್ವವಿದ್ಯಾಲಯವು ಶೈಕ್ಷಣಿಕ ಕೊಡುಕೊಳ್ಳುವಿಕೆಯ ಒಡಂಬಡಿಕೆಗೆ ಸಹಿ ಹಾಕಿದೆ. ಇದರ ಮುಂದುವರಿಕೆಯಾಗಿ ಜರ್ಮನಿಯ ವೂರ್ಜ್‌ಬರ್ಗ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಅಕ್ಟೋಬರ್‌ನಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ಭೇಟಿಕೊಟ್ಟು ಸಮಾಲೋಚನೆ ನಡೆಸಿದ್ದಾರೆ. ದಕ್ಷಿಣ ಭಾರತದ ಭಾಷೆಗಳಿಗೆ ಸಂಬಂಧಪಟ್ಟ ನಾಲ್ಕು ವಿಶ್ವವಿದ್ಯಾಲಯಗಳ ಕುಲಪತಿಗಳು- ಕನ್ನಡ ವಿಶ್ವವಿದ್ಯಾಲಯ ಹಂಪಿ, ತಮಿಳು ವಿಶ್ವವಿದ್ಯಾಲಯ ತಂಜಾವೂರು, ತೆಲುಗು ವಿಶ್ವವಿದ್ಯಾಲಯ ಹೈದರಬಾದ್, ದ್ರಾವಿಡ ವಿಶ್ವವಿದ್ಯಾಲಯ ಕುಪ್ಪಂ-ತಂಜಾವೂರಿನಲ್ಲಿ ಆಗಸ್ಟ್ ೨೦೦೫ ರಲ್ಲಿ ಸಭೆ ಸೇರಿ ಈ ನಾಲ್ಕು ವಿಶ್ವವಿದ್ಯಾಲಯಗಳ ನಡುವೆ ಶೈಕ್ಷಣಿಕ ಸಹಯೋಗಕ್ಕೆ ಸಂಬಂಧಪಟ್ಟಂತೆ ಒಡಂಬಡಿಕೆಗೆ ಸಹಿ ಹಾಕಿದ್ದಾರೆ. ಇದರ ಮುಂದುವರಿಕೆಯಾಗಿ ದ್ರಾವಿಡ ಭಾಷೆ ಸಾಹಿತ್ಯ ಸಂಸ್ಕೃತಿಗಳಿಗೆ ಸಂಬಂಧಿಸಿದಂತೆ ವಿಚಾರ ಸಂಕಿರಣ, ಕಮ್ಮಟ, ಪ್ರಕಟಣೆಗಳು, ಸಹಯೋಗದ ರೂಪದಲ್ಲಿ ನಡೆಯಲಿವೆ.

ನಮ್ಮ ಪ್ರಸಾರಾಂಗವು ಕಳೆದ ಒಂದು ವರ್ಷದಲ್ಲಿ ಸುಮಾರು ೫೦ ರಷ್ಟು ಬೇರೆ ಬೇರೆ ವಿಷಯಗಳಿಗೆ ಸಂಬಂಧಿಸಿದಂತೆ ಪುಸ್ತಕಗಳನ್ನು ಪ್ರಕಟಿಸಿದೆ. ಈ ವರ್ಷ ಹಂಪಿ ಉತ್ಸವ ಸಂದರ್ಭದಲ್ಲಿ ಬಿಡುಗಡೆಗೊಂಡ 'ಪ್ರವಾಸಿ ಕಂಡ ವಿಜಯನಗರ ಸಹಿತ ನಮ್ಮ ಅಧ್ಯಾಪಕರ ಸಂಶೋಧನಾ ಯೋಜನೆಗಳ ವಿಶಿಷ್ಟ ಪ್ರಕಟಣೆಗಳೂ ಸೇರಿದೆ. ನಿನ್ನೆ ತಾನೇ ಪ್ರಸಾರಾಂಗದ ವತಿಯಿಂದ ಸಾಹಿತ್ಯ-ಸಂಸ್ಕೃತಿಗೆ ಸಂಬಂಧಪಟ್ಟಂತೆ ೧೦ ಪುಸ್ತಕಗಳು, ವಿಜ್ಞಾನ-ಸಮಾಜವಿಜ್ಞಾನಕ್ಕೆ ಸಂಬಂಧಪಟ್ಟಂತೆ ೧೦ ಪುಸ್ತಕಗಳು ಬಿಡುಗಡೆಯಾಗಿವೆ. ಪದವಿಪೂರ್ವ ಶಿಕ್ಷಣದ ತರಗತಿಗಳಿಗೆ ವಿಜ್ಞಾನ ಮತ್ತು ಸಮಾಜವಿಜ್ಞಾನದ ಪಠ್ಯಪುಸ್ತಕಗಳನ್ನು ಕನ್ನಡ ಮಾಧ್ಯಮದಲ್ಲಿ ಸಿದ್ಧಗೊಳಿಸಿ ಪ್ರಕಟಿಸಲಾಗಿದೆ. ಸುವರ್ಣ ಕರ್ನಾಟಕದ ನೆನಪಿಗಾಗಿ ಕರ್ನಾಟಕದ ಬೇರೆ ಬೇರೆ ಅರಿವಿನ ಕ್ಷೇತ್ರಗಳಿಗೆ ಸಂಬಂಧಪಟ್ಟಂತೆ ೫೦ ಪುಸ್ತಕಗಳನ್ನು ಪ್ರಕಟಿಸುವ ಯೋಜನೆ ಆರಂಭವಾಗಿದೆ. ಕನ್ನಡವನ್ನು ಕಟ್ಟಿದ ಹಿರಿಯರ ಒಂದೊಂದು ಕೃತಿಯನ್ನು ಪ್ರಕಟಿಸುವ ಹಿರಿಯರ ಕರ್ನಾಟಕ ಯೋಜನೆ ೨೦೦೬ರೊಳಗೆ ಪೂರ್ಣಗೊಳ್ಳಲಿದೆ. ಕನ್ನಡದ ಪ್ರಾಚೀನ ಜೈನಸಾಹಿತ್ಯ ಕೃತಿಗಳನ್ನು ಸಂಪುಟಗಳ ರೂಪದಲ್ಲಿ ಪ್ರಕಟಿಸುವ ಯೋಜನೆಗೆ ಕರ್ನಾಟಕ ಸರ್ಕಾರವು ೨೫ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದೆ. ಇದರಲ್ಲಿ ೨೧ ಲಕ್ಷ ಪ್ರಾಚೀನ ಜೈನಸಾಹಿತ್ಯ ಸಂಪುಟಗಳನ್ನು ಸಂಪಾದಿಸಿ ಪ್ರಕಟಿಸುವ ಕೆಲಸ ಆರಂಭವಾಗಿದೆ. ಐದು ಸಂಪುಟಗಳನ್ನು ಫೆಬ್ರವರಿ ೨೦೦೬ರೊಳಗೆ ಹೊರತರುವ ಕೆಲಸ ಪ್ರಗತಿಯಲ್ಲಿದೆ. ಇದನ್ನು ವಿಶ್ವವಿದ್ಯಾಲಯವು ಜೈನ ಸಂಸ್ಕೃತಿ ಅಧ್ಯಯನ ಪೀಠ ಮತ್ತು ಪ್ರಸಾರಾಂಗದ ಮೂಲಕ ಕಾರ್ಯಗತಗೊಳಿಸಲಿದೆ.

ಕನ್ನಡ ವಿಶ್ವವಿದ್ಯಾಲಯಕ್ಕೆ ಕರ್ನಾಟಕದ ಹಿರಿಯ ಮುತ್ಸದ್ಧಿಗಳು, ಕನ್ನಡದ ಹಿರಿಯ ಲೇಖಕರು, ಚಿಂತಕರು, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವಿದ್ವಾಂಸರು ಆಗಮಿಸಿ ಮಾರ್ಗದರ್ಶನ ಮತ್ತು ಸಹಕಾರವನ್ನು ನೀಡಿದ್ದಾರೆ. ಕರ್ನಾಟಕ ಸರ್ಕಾರದ ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಎಂ. ಪಿ. ಪ್ರಕಾಶ್, ಉನ್ನತ ಶಿಕ್ಷಣ ಸಚಿವರಾದ ಶ್ರೀ ಡಿ. ಮಂಜುನಾಥ್, ಮಾಜಿ ಸಚಿವೆಯರಾದ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್, ಶ್ರೀಮತಿ ಮೋಟಮ್ಮ, ಹಿರಿಯ ರಾಜಕಾರಣಿ ಶ್ರೀ ಎನ್. ತಿಪ್ಪಣ್ಣ, ಮಂಗಳೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಿ. ಹನುಮಯ್ಯ, ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀಮತಿ ಶೋಭಾ ನಂಬೀಶನ್, ಕರ್ನಾಟಕ ಸರ್ಕಾರದ ಅನೇಕ ಉನ್ನತ ಅಧಿಕಾರಿಗಳು ವಿಶ್ವವಿದ್ಯಾಲಯವನ್ನು ಸಂದರ್ಶಿಸಿ ಮಾರ್ಗದರ್ಶನ ನೀಡಿದ್ದಾರೆ. ಅಮೇರಿಕಾದ ಮಾನವವಿಜ್ಞಾನಿ ಪ್ರೊ. ಪೀಟರ್ ಜೆ. ಕ್ಲಾಸ್, ಜರ್ಮನಿಯ ಭಾರತಶಾಸ್ತ್ರಜ್ಞೆ ಪ್ರೊ. ಹೈಡ್ರೂನ್ ಬ್ರೂಕ್ನರ್, ಸ್ವಿಜರ್‌ಲ್ಯಾಂಡಿನ ಬಾಸೆಲ್‌ನ ಇತಿಹಾಸಕಾರ ಪ್ರೊ. ಪೌಲ್ ಜೆನ್ಕಿನ್ಸ್, ಸಾಹಿತಿಗಳಾದ ಡಾ.ಯು. ಆರ್. ಅನಂತಮೂರ್ತಿ, ಪ್ರೊ. ಜಿ. ವೆಂಕಟಸುಬ್ಬಯ್ಯ, ಶ್ರೀಮತಿ ಗೀತಾನಾಗಭೂಷಣ, ಶ್ರೀಮತಿ ಸಾರಾ ಅಬೂಬಕ್ಕರ್, ಡಾ. ಸಿ.ಎನ್. ರಾಮಚಂದ್ರನ್, ಡಾ. ಭಕ್ತವತ್ಸಲ ರೆಡ್ಡಿ, ಡಾ. ರಾಘವನ್ ಪಯ್ಯನಾಡ್, ಪ್ರೊ. ವೆಲೇರಿಯನ್ ರೋಡ್ರಿಗಸ್, ಪ್ರೊ. ಬರಗೂರು ರಾಮಚಂದ್ರಪ್ಪ, ಪ್ರೊ. ಪುರುಷೋತ್ತಮ ಬಿಳಿಮಲೆ, ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ, ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀ. ಪ್ರೊ. ಕಿ.ರಂ. ನಾಗರಾಜ, ಡಾ. ಪ್ರಧಾನ್ ಗುರುದತ್ತ, ಡಾ. ಶಿವರಾಮ ಪಡಿಕ್ಕಲ್, ಡಾ. ಎಚ್.ಎಸ್. ರಾಘವೇಂದ್ರರಾವ್, ಹಂಪಿಯ ವಿಶ್ವ ಪರಂಪರೆಯ ಸಮಿತಿಯ ತಜ್ಞರು ಮತ್ತು ಅನೇಕ ಅಧಿಕಾರಿಗಳು, ಶ್ರೀ ಅನುರಾಗ ಅರೋರ, ರಾಷ್ಟ್ರೀಯ ಹಸ್ತಪ್ರತಿ ಮಿಷನ್, ನವದೆಹಲಿ ಮತ್ತು ಅನೇಕ ಸಾಹಿತಿಗಳು ಹಾಗೂ ಚಿಂತಕರು ಉಪನ್ಯಾಸ ಮತ್ತು ಸಂವಾದಗಳಲ್ಲಿ ಭಾಗವಹಿಸಿದ್ದಾರೆ.

ನಮ್ಮ ವಿಶ್ವವಿದ್ಯಾಲಯದ ಪ್ರೊ. ಲಕ್ಷ್ಮಣ್ ತೆಲಗಾವಿ ಅವರಿಗೆ ದೆಹಲಿ ದಲಿತ ಸಾಹಿತ್ಯ ಅಕಾಡೆಮಿ ವತಿಯಿಂದ ಮಹಾತ್ಮ ಜ್ಯೋತಿಬಾ ಪುಲೆ ರಾಷ್ಟ್ರೀಯ ಪ್ರಶಸ್ತಿ, ಎ.ವಿ.ನಾವಡ ಅವರಿಗೆ ತುಳು ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ, ಪ್ರೊ. ಮಲ್ಲೆಪುರಂ ಜಿ. ವೆಂಕಟೇಶ ಅವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಡಾ. ಕರೀಗೌಡ ಬೀಚನಹಳ್ಳಿ ಅವರಿಗೆ ವಿ.ಎಂ. ಇನಾಂದರ್ ವಿಮರ್ಶಾ ಪ್ರಶಸ್ತಿ, ಡಾ. ಎಚ್.ಎಸ್. ಶ್ರೀಮತಿ ಅವರಿಗೆ ಶಾಶ್ವತಿ ಪ್ರಶಸ್ತಿ, ಡಾ. ಟಿ. ಆರ್. ಚಂದ್ರಶೇಖರ ಅವರಿಗೆ ಕಾವ್ಯಾನಂದ ಪುರಸ್ಕಾರ, ಡಾ. ಕೆ.ಎಂ. ಮೈತ್ರಿ ಅವರಿಗೆ ಕರ್ನಾಟಕ ಬುಡಗಜಂಗಮ ಕ್ಷೇಮಾಭಿವೃದ್ಧಿ ಸಂಘ ಕೊಡಮಾಡಿರುವ ಬುಡಗರತ್ನ ಪ್ರಶಸ್ತಿ ಡಾ. ಎಸ್.ಸಿ.ಪಾಟೀಲ್ ಅವರಿಗೆ ಲಲಿತಕಲಾ ಅಕಾಡೆಮಿ ಪ್ರಶಸ್ತಿ, ಡಾ ಶೈಲಜ ಇಂ. ಹಿರೇಮಠ ಅವರಿಗೆ ಗುಲ್ಬರ್ಗಾ ವಿಶ್ವವಿದ್ಯಾಲಯದ ಕನ್ನಡ ರಾಜ್ಯೋತ್ಸವ ಸಾಹಿತ್ಯ ಪುರಸ್ಕಾರ ಮತ್ತು ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಸಾವಿತ್ರಮ್ಮ ದತ್ತಿನಿಧಿ ಸಾಹಿತ್ಯ ಪ್ರಶಸ್ತಿ, ಡಾ ಎಫ್.ಟಿ. ಹಳ್ಳಿಕೇರಿ ಮತ್ತು ಶ್ರೀ ಸುಜ್ಞಾನಮೂರ್ತಿ ಅವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪುಸ್ತಕ ಬಹುಮಾನಗಳು ಬಂದಿವೆ. ಈ ಎಲ್ಲ ಪ್ರಶಸ್ತಿ, ಗೌರವ, ಬಹುಮಾನ ಪಡೆದು ಕನ್ನಡ ವಿಶ್ವವಿದ್ಯಾಲಯಕ್ಕೆ ಗೌರವದ ಗರಿಗಳನ್ನು ಜೋಡಿಸಿದ ನಮ್ಮ ಸಾಧಕರಿಗೆ ಹಾರ್ದಿಕ ಅಭಿನಂದನೆಗಳು. ನಮ್ಮ ವಿಶ್ವವಿದ್ಯಾಲಯದ ಅನೇಕ ಅಧ್ಯಾಪಕರ ಪುಸ್ತಕಗಳು ಬೇರೆ ಬೇರೆ ಪ್ರಕಾಶನ ಸಂಸ್ಥೆಗಳಿಂದ ಪ್ರಕಟವಾಗಿ ಮೆಚ್ಚುಗೆ ಪಡೆದಿದೆ. ನಮ್ಮ ಅನೇಕ ಅಧ್ಯಾಪಕರು ತಮ್ಮ ಸೃಜನಶೀಲ ಬರವಣಿಗೆಗಳಿಂದ (ಕವನ, ಕಥೆ, ಕಾದಂಬರಿ) ನಮ್ಮ ವಿಶ್ವವಿದ್ಯಾಲಯಕ್ಕೆ ವಿಶೇಷ ಮನ್ನಣೆಯನ್ನು ತಂದುಕೊಟ್ಟಿದ್ದಾರೆ. ನಮ್ಮವರು ರಾಷ್ಟ್ರೀಯ ಮತ್ತು ರಾಜ್ಯಮಟ್ಟದ ವಿಚಾರ ಸಂಕಿರಣ, ಕಮ್ಮಟ, ವಿಶೇಷ ಉಪನ್ಯಾಸಗಳಲ್ಲಿ ಪಾಲ್ಗೊಂಡು ಕನ್ನಡ ವಿಶ್ವವಿದ್ಯಾಲಯಕ್ಕೆ ಅನನ್ಯ, ಬೌದ್ಧಿಕ ಕೇಂದ್ರ ಎಂಬ ಒಳ್ಳೆಯ ಹೆಸರು ಬರಲು ಕಾರಣರಾಗಿದ್ದಾರೆ.

ಕನ್ನಡ ವಿಶ್ವವಿದ್ಯಾಲಯದ ಆವರಣ ವಿದ್ಯಾರಣ್ಯವು ಕಳೆದ ಒಂದು ವರ್ಷದಲ್ಲಿ ಮಲೆಯ ನೀರನ್ನು ತುಂಬ ಸಂತೋಷದಿಂದ ತುಂಬಿಕೊಂಡಿವೆ. ಮರಗಿಡಗಳು ಬಹುಕಾಲದ ಬಳಿಕ ಹಸನಾಗಿ ಸಾವಿರ ಗಿಡಗಳನ್ನು ಮತ್ತೆ ನೆಡಲಾಗಿದೆ. ಹೊಸ ಕೊಳವೆಬಾವಿಗಳ ನೀರು ವಿಶ್ವವಿದ್ಯಾಲಯದ ನೀರಿನ ಕೊರತೆಯನ್ನು ಬಹುಮಟ್ಟಿಗೆ ನೀಗಿಸಿದೆ. ವಾಣಿಜ್ಯ ಸಂಕೀರ್ಣ ಕಟ್ಟಡ, ಆಡಳಿತ ಸಿಬ್ಬಂದಿ ವಸತಿಗೃಹಗಳ ನಾಲ್ಕು ಮನೆಗಳು ಮತ್ತು ನರ್ಸರಿ ಶಾಲೆ ಕಟ್ಟಡ – ಇವು ಪೂರ್ಣಗೊಂಡಿದೆ. ಸಂಗೀತ ವಿಭಾಗದ ಕಟ್ಟಡವನ್ನು ಪೂರ್ಣಗೊಳಿಸಿ ವಿಭಾಗದ ಚಟುವಟಿಕೆಗಳಿಗೆ ಒಪ್ಪಿಸಲಾಗಿದೆ. ಬಹುಕಾಲದ ಬೇಡಿಕೆಯಾದ ಪಾಪಿನಾಯಕನಹಳ್ಳಿ ರಸ್ತೆಯಿಂದ ವಿದ್ಯಾರಣ್ಯಕ್ಕೆ ಸಂಪರ್ಕ ಕಲ್ಪಿಸುವ ಹೊಸ ರಸ್ತೆ ಬಳ್ಳಾರಿ ಜಿಲ್ಲಾ ಪಂಚಾಯತ್‌ನವರ ಪೂರ್ಣ ಸಹಕಾರದಿಂದ ನಿರ್ಮಾಣಗೊಂಡು ಡಾಂಬರೀಕರಣವಾಗಿ ಸಂಚಾರಕ್ಕೆ ತೆರೆದುಕೊಂಡಿರುವುದು ಸಂತೋಷದ ಸಂಗತಿ. ಗುಲ್ಬರ್ಗಾ ವಿದ್ಯುತ್ ಪೂರೈಕೆಯ ಸಂಪರ್ಕ ಕಲ್ಪಿಸಲಾಗಿದ್ದು, ಇಪ್ಪತ್ತನಾಲ್ಕು ಗಂಟೆಗಳ ವಿದ್ಯುತ್ ಪೂರೈಕೆಯ ಸಮೃದ್ಧಿ ಪ್ರಾಪ್ತವಾಗಿದೆ.

ವಿಶ್ವವಿದ್ಯಾಲಯದ ಅಕ್ಷರ ಕಟ್ಟಡದಲ್ಲಿ ಪ್ರಸಾರಾಂಗದ ಹೊಸ ಪುಸ್ತಕ ಮಳಿಗೆ ಮತ್ತು ಕರಕುಶಲ ಕೇಂದ್ರಗಳನ್ನು ತೆರೆಯಲಾಗಿದೆ. ಅಕ್ಷರ ಸಂಸ್ಕೃತಿ ಮತ್ತು ಕಾಯಕ ಸಂಸ್ಕೃತಿಯ ಎರಡು ಮಳಿಗೆಗಳು ಕನ್ನಡ ವಿಶ್ವವಿದ್ಯಾಲಯದ ಆಶಯವನ್ನು ಪ್ರತಿಬಿಂಬಿಸುತ್ತವೆ. ಇಲ್ಲಿ ವಿಶ್ವವಿದ್ಯಾಲಯದ ದೃಶ್ಯಕಲೆ ಮತ್ತು ಚಿತ್ರಕಲೆ ಹಾಗೂ ಶಿಲ್ಪಕಲೆ ವಿಭಾಗಗಳ ಚಿತ್ರಗಳು ಮತ್ತು ಶಿಲ್ಪಗಳು ಪ್ರದರ್ಶನ ಮತ್ತು ಮಾರಾಟಕ್ಕೆ ದೊರೆಯುತ್ತವೆ. ಕರ್ನಾಟಕದ ಕರಕುಶಲ ಕಲೆಗಳಿಗೆ ಪ್ರೋತ್ಸಾಹ ಕೊಡುವ ಮತ್ತು ವಿಶ್ವವಿದ್ಯಾಲಯವೇ ಕರಕುಶಲಕೇಂದ್ರವೊಂದನ್ನು ತೆರೆದು ಕರ್ನಾಟಕದ ದೇಸಿಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸುವ ದೃಷ್ಟಿಯಿಂದ ಈ ಕರಕುಶಲಕೇಂದ್ರವು ನಮ್ಮ ಅನನ್ಯತೆಯ ಪ್ರತೀಕ.

ವಿಶ್ವವಿದ್ಯಾಲಯದ ಆವರಣದಲ್ಲಿ ಕಂಪ್ಯೂಟರ್ ಸಂಪನ್ಮೂಲ ಕೇಂದ್ರವೊಂದರ ಹೊಸ ಕಟ್ಟಡದ ಕೆಲಸ ಆರಂಭವಾಗಿದೆ. ಇಲ್ಲಿ ವಿಶ್ವವಿದ್ಯಾಲಯದಲ್ಲಿ ಎಲ್ಲ ವಿಭಾಗಗಳ ನಡುವೆ ಅಂತರ್ ಸಂಬಂಧವನ್ನು ಏರ್ಪಡಿಸುವ ಮತ್ತು ಎಲ್ಲ ವಿಭಾಗಗಳಿಗು ಅಂತರ್ಜಾಲದ ಸೌಲಭ್ಯವನ್ನು ಒದಗಿಸುವ ಹಾಗೂ ತರಬೇತಿ ಕೊಡುವ ಕೆಲಸ ನಡೆಯುತ್ತದೆ. ಈ ವರ್ಷ ಎಲ್ಲ ವಿಭಾಗಗಳಿಗೆ ಕಂಪ್ಯೂಟರ್‌ಗಳನ್ನು ಒದಗಿಸಲಾಗಿದೆ. ಮತ್ತು ತರಬೇತಿಯನ್ನು ಕೊಡಲಾಗಿದೆ.

ಮಹಿಳೆಯರ ವಸತಿಗೃಹ, ಸಂಶೋಧಕರ ವಸತಿಗೃಹ, ಆಡಳಿತ ಸಿಬ್ಬಂದಿಯ ವಸತಿಗೃಹ – ಇವು ಈಗ ಹೊಸದಾಗಿ ನಿರ್ಮಾಣಗೊಳ್ಳುತ್ತಿರುವ ಇತರ ಮೂರು ಕಟ್ಟಡಗಳು. ಪರಿಶಿಷ್ಟ ಜಾತಿ-ಪಂಗಡಗಳ ವಿದ್ಯಾರ್ಥಿ ವಸತಿ ನಿಲಯ, ಅಧ್ಯಯನ ವಿಭಾಗಗಳ ಮೂರು ಕಟ್ಟಡಗಳು ೨೦೦೬ ರಲ್ಲಿ ಆರಂಭವಾಗಿ ಪೂರ್ಣಗೊಳ್ಳುತ್ತವೆ. ಹೊಸಪೇಟೆ ಶಾಸಕರಾದ ಶ್ರೀ ಎಚ್.ಆರ್. ಗವಿಯಪ್ಪ ಅವರು ವಿಶ್ವವಿದ್ಯಾಲಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಹಾಗೂ ಹಿಂದುಳಿದವರ್ಗಗಳ ವಸತಿ ನಿಲಯಗಳಿಗೆ ಪೀಠೋಪಕರಣಗಳನ್ನು ದಾನವಾಗಿ ಕೊಡಮಾಡಿರುವುದನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ನೆರವಿನಿಂದ ಪ್ರಾದೇಶಿಕ ವಿಜ್ಞಾನ ಕೇಂದ್ರವನ್ನು ತೆರೆಯುವ ಪ್ರಸ್ತಾವನೆಯೊಂದು ಸಿದ್ಧವಾಗಿದ್ದು ಅದನ್ನು ಸರ್ಕಾರದ ಅಂಗೀಕಾರಕ್ಕೆ ಕಳುಹಿಸಲಾಗುತ್ತಿದೆ.

ನಮ್ಮ ವಿಶ್ವವಿದ್ಯಾಲಯದ ಬಾದಾಮಿಯ ಕೇಂದ್ರದಲ್ಲಿ ಕಂದಾಯ ಇಲಾಖೆಯ ಭೂಮಿಯನ್ನು ವಿಶ್ವವಿದ್ಯಾಲಯ ಕೊಂಡುಕೊಂಡಿರುವುದಲ್ಲದೆ ಮೂರು ಕೊಳವೆ ಬಾವಿಗಳ ಮೂಲಕ ಸಮೃದ್ಧ ನೀರನ್ನು ಆವರಣಕ್ಕೆ ಒದಗಿಸಲಾಗಿದೆ. ಇದಲ್ಲದೆ ವಸತಿ ನಿಲಯಗಳು ಮತ್ತು ಆರ್ಟ್ ಗ್ಯಾಲರಿಯನ್ನು ನಿರ್ಮಿಸುವ ಸಿದ್ಧತೆ ನಡೆದಿದೆ. ಬಾದಾಮಿ ಕೇಂದ್ರದ ಚಿತ್ರ- ಶಿಲ್ಪಕಲೆ ವಿಭಾಗ ಮತ್ತು ವಿದ್ಯಾರಣ್ಯದ ದೃಶ್ಯಕಲಾ ವಿಭಾಗದ ವಿದ್ಯಾರ್ಥಿಗಳು ನಾಡಿನಾದ್ಯಂತ ತಮ್ಮ ಸೃಜನಶೀಲ ಚಿತ್ರಗಳನ್ನು ಪ್ರದರ್ಶಿಸಿ ಪ್ರತಿಭೆಯನ್ನು ಪ್ರಕಟಿಸಿದ್ದಾರೆ. ವಿಶ್ವವಿದ್ಯಾಲಯವನ್ನು ಬಣ್ಣರೇಖೆಗಳ ಮೂಲಕ ತುಂಬುವ, ಇಡೀ ಆವರಣವನ್ನು ಒಂದು ಭಿತ್ತಿಯಾಗಿ ಬಳಸಿಕೊಳ್ಳುವ ಯೋಜನೆಯನ್ನು ಅವರು ಕೈಗೊಂಡಿದ್ದಾರೆ.

೨೦೦೬ ಜನವರಿ ಮತ್ತು ಫೆಬ್ರವರಿಯಲ್ಲಿ ಯುಜಿಸಿ ಪ್ರಾಯೋಜಿತ ಎರಡು ಪುನರ್ಮನನ ಶಿಬಿರಗಳು ಕನ್ನಡ ಸಾಹಿತ್ಯ ಮತ್ತು ಚರಿತ್ರೆ ವಿಷಯಗಳಲ್ಲಿ ನಡೆಯಲಿವೆ. ಕನ್ನಡ ಸಾಹಿತ್ಯಾಧ್ಯಯನ ವಿಭಾಗದಿಂದ ಈ ಡಿಸೆಂಬರ್‌ನಲ್ಲಿ ಹರಿಶ್ಚಂದ್ರ ಚಾರಿತ್ರ: ಸಾಂಸ್ಕೃತಿಕ ಮುಖಾಮುಖಿ, ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ ಅನುಕ್ರಮವಾಗಿ ಧರ್ಮಾಮೃತ ಮತ್ತು ಮಲೆಮಹದೇಶ್ವರ: ಸಾಂಸ್ಕೃತಿಕ ಮುಖಾಮುಖಿ ವಿಚಾರ ಸಂಕಿರಣಗಳು ನಡೆಯುತ್ತವೆ. ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗದಿಂದ ಮಾರ್ಚ್‌ನಲ್ಲಿ ದ್ರಾವಿಡ ವಿಶ್ವವಿದ್ಯಾಲಯ ಕುಪ್ಪಂ ಸಹಯೋಗದಲ್ಲಿ ರಾಷ್ಟ್ರೀಯ ವಿಚಾರ ಸಂಕಿರಣ, ಭಾಷಾಂತರ ಅಧ್ಯಯನ ವಿಭಾಗದ ವತಿಯಿಂದ ಜನವರಿಯಲ್ಲಿ ಸಮಾಜ ವಿಜ್ಞಾನಗಳಲ್ಲಿ ಭಾಷಾಂತರ ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿದೆ. ಭಾಷಾಂತರ ವಿಭಾಗದಲ್ಲಿ ಕನ್ನಡದಿಂದ ಬೇರೆ ಭಾಷೆಗಳಿಗೆ ಬೇರೆ ಭಾಷೆಯಿಂದ ಕನ್ನಡಕ್ಕೆ ಭಾಷಾಂತರಗೊಂಡಿರುವ ಕೃತಿಗಳ ಮಾಹಿತಿ ದತ್ತ ಕಣಜ ರೂಪಿಸುವ ಕೆಲಸ ಆರಂಭವಾಗಿ ಪ್ರಗತಿಯಲ್ಲಿದೆ. ಹಸ್ತಪ್ರತಿ ಅಧ್ಯಯನ ವಿಭಾಗದಿಂದ ಫೆಬ್ರವರಿಯಲ್ಲಿ ವಿಭಾಗದ ದಶಮಾನೋತ್ಸವ ಸಮಾರಂಭ ಮತ್ತು ಹತ್ತು ಪುಸ್ತಕಗಳ ಪ್ರಕಟಣೆ, ಭಾರತೀಯ ಗ್ರಂಥ ಸಂಪಾದನೆ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣ ನಡೆಯಲಿವೆ. ಚರಿತ್ರೆ ವಿಭಾಗದಿಂದ ಚರಿತ್ರೆ ಪಠ್ಯಪುಸ್ತಕ ರಚನೆ ಮತ್ತು ಬೋಧನೆ ಎಂಬ ಕಮ್ಮಟ ಜನವರಿಯಲ್ಲಿ ನಡೆಯಲಿವೆ. ಅಭಿವೃದ್ಧಿ ಅಧ್ಯಯನ ವಿಭಾಗದಿಂದ ತಿಳುವಳಿಕೆ ಮೂಡಿಸುವ ಉದ್ದೇಶದಿಂದ ಪ್ರಾಥಮಿಕ ಶಾಲಾ ಶಿಕ್ಷಕರಿಗೆ, ಮಾನವ ಹಕ್ಕುಗಳ ಬಗ್ಗೆ ಪೊಲೀಸ್‌ರಿಗೆ, ಸ್ತ್ರೀಶಕ್ತಿ ಕುರಿತು, ಪೋಷಕರು ಹಾಗೂ ಶಿಕ್ಷಕರಿಗೆ ಲಿಂಗ ಸಮಾನತೆ ಕುರಿತು, ನಾಲ್ಕು ಕಮ್ಮಟಗಳನ್ನು ಹಮ್ಮಿಕೊಳ್ಳಲಾಗಿದೆ. ಸುವರ್ಣ ಕರ್ನಾಟಕದ ಈ ವರ್ಷ 'ಭವಿಷ್ಯದ ಕರ್ನಾಟಕ'ವನ್ನು ಕುರಿತು ಮಹತ್ವದ ಅಭಿವೃದ್ಧಿ ಸಂವಾದವನ್ನು ೨೦೦೬ ರಲ್ಲಿ ನಡೆಸಲಾಗುವುದು. ಸ್ವಾತಂತ್ರ್ಯೋತ್ತರ ಅಭಿವೃದ್ಧಿ ವಿಶ್ವಕೋಶ, ಅಭಿವೃದ್ಧಿ ಡಾಟಾ ಬ್ಯಾಂಕ್‌ಗಳ ಯೋಜನೆಗಳು ಈ ವಿಭಾಗದಿಂದ ಈ ವರ್ಷ ಕಾರ್ಯಾರಂಭ ಮಾಡುತ್ತವೆ. ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗವು ಉತ್ತರ ಕರ್ನಾಟಕದ ಜಿಲ್ಲೆಗಳ ಜಿಲ್ಲಾವಾರು ದೇವಾಲಯಗಳ ಕೋಶ ಸಿದ್ಧಪಡಿಸುತ್ತಿದ್ದು, ಕಳೆದ ವರ್ಷ ಧಾರವಾಡ ಜಲ್ಲೆ, ಬಿಜಾಪುರ ಜಿಲ್ಲೆ, ಬಾಗಲಕೋಟೆ ಜಿಲ್ಲೆಗಳ ದೇವಾಲಯ ಕೋಶಗಳ ಕೆಲಸಗಳನ್ನು ಪೂರ್ಣಗೊಳಿಸಲಾಗಿದೆ. ಗುಲ್ಬರ್ಗಾ ಮತ್ತು ಗದಗ ಜಿಲ್ಲೆಯ ದೇವಾಲಯ ಕೋಶಗಳ ಕೆಲಸ ಪ್ರಗತಿಯಲ್ಲಿದೆ. ಧಾರವಾಡ, ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳ ದೇವಾಲಯ ಕೋಶಗಳು ೨೦೦೬ ರಲ್ಲಿ ಪ್ರಕಟಗೊಳ್ಳುತ್ತವೆ. ಬುಡಕಟ್ಟು ಅಧ್ಯಯನ ವಿಭಾಗದ ವತಿಯಿಂದ ಬರುವ ಜನವರಿ ಫೆಬ್ರವರಿ ತಿಂಗಳಲ್ಲಿ ಕರ್ನಾಟಕ ಪರಿಶಿಷ್ಟ ವರ್ಗಗಳ ಸ್ವಸಹಾಯ ಸ್ತ್ರೀ ಗುಂಪುಗಳಿಗೆ ತರಬೇತಿ, ಸಮುದಾಯಗಳ ಅಧ್ಯಯನದಲ್ಲಿ ಕ್ಷೇತ್ರಕಾರ್ಯದ ಮಹತ್ವ, ಕರ್ನಾಟಕ ಪರಿಶಿಷ್ಟವರ್ಗಗಳ

ಯುವಜನರ ತರಬೇತಿ, ಕರ್ನಾಟಕ ಬುಡಕಟ್ಟುಗಳ ಮುಂದಿರುವ ಸವಾಲುಗಳು, ಸ್ವಯಂ ಸೇವಾ ಸಂಸ್ಥೆಗಳಿಗೆ ತರಬೇತಿ, ಸೋಲಿಗರು ಅಂದು-ಇಂದು ಕಮ್ಮಟಗಳು ನಡೆಯುತ್ತವೆ. ಜಾನಪದ ಅಧ್ಯಯನ ವಿಭಾಗದಿಂದ ದೇಸಿ ಸಮ್ಮೇಳನ, ಜೀ.ಶಂ. ಪರಮಶಿವಯ್ಯ ನೆನಪಿನ ವಿಚಾರಸಂಕಿರಣ, ಮರಳಿ ಹಳ್ಳಿಗೆ ಪಯಣ, ಜನಪದ ಕಲಾವಿದರೊಂದಿಗೆ ಸಂವಾದದಂತಹ ಕಾರ್ಯಕ್ರಮಗಳು ನಡೆಯುತ್ತವೆ. ದಲಿತ ಪೀಠದಿಂದ ದಲಿತರು ಮತ್ತು ಭಾಷೆ ವಿಚಾರ ಸಂಕಿರಣ, ಲೋಹಿಯಾ ಅಧ್ಯಯನ ಪೀಠದಿಂದ ಸಂಡೂರು ಮತ್ತು ಹೆಬ್ಬಳ್ಳಿ ಭೂ ಹೋರಾಟಗಳ ಬಗ್ಗೆ ಲೋಹಿಯಾ ಚಳುವಳಿಕಾರರೊಂದಿಗೆ ಸಂದರ್ಶನ ಸಂಪುಟಗಳ ಪ್ರಕಟಣೆ, ಶಂಬಾ ಅಧ್ಯಯನ ಪೀಠದಿಂದ ಜನವರಿಯಲ್ಲಿ ಸಂಶೋಧನಾ ಕಮ್ಮಟ, ವಾಲ್ಮೀಕಿ ಅಧ್ಯಯನ ಪೀಠದಿಂದ ಬೇಡ ಬುಡಕಟ್ಟಿನ ಚರಿತ್ರೆ ವಿಚಾರ ಸಂಕಿರಣ ಹಾಗೂ ಕರ್ನಾಟಕದಲ್ಲಿ ತಳವಾರಿಕೆ ಯೋಜನೆ ಇವು ತಕ್ಷಣದಲ್ಲಿ ಕಾರ್ಯರೂಪಕ್ಕೆ ಬರುವ ಕಾರ್ಯಕ್ರಮಗಳು. ಈ ಎಲ್ಲ ಕಮ್ಮಟ, ವಿಚಾರ ಸಂಕಿರಣ, ಶಿಬಿರಗಳ ಜೊತೆಗೆ ಎಲ್ಲಾ ಅಧ್ಯಾಪಕರು ತಮ್ಮ ಸಂಶೋಧನೆಯ ಫಲಿತಾಂಶಗಳನ್ನು ಪ್ರಕಟಣೆಯ ರೂಪದಲ್ಲಿ ಹೊರತಂದಿದ್ದಾರೆ. ಮತ್ತು ೨೦೦೬ ಜೂನ್ ಒಳಗೆ ತಮ್ಮ ಸಂಶೋಧನಾ ಯೋಜನೆಗಳನ್ನು ಮುಗಿಸಿ ಹೊಸ ಯೋಜನೆಗಳಿಗೆ ಸಿದ್ಧರಾಗುತ್ತಾರೆ.

ಕನ್ನಡ ವಿಶ್ವವಿದ್ಯಾಲಯವು ಬೋಧನೆ, ಸಂಶೋಧನೆ, ಪ್ರಸರಣದ ಕೆಲಸಗಳ ಜೊತೆಗೆ ಕನ್ನಡ ಸಂಸ್ಕೃತಿಯನ್ನು ಕುರಿತ ಸೃಜನಶೀಲ ವಿನ್ಯಾಸಗಳನ್ನು ರೂಪಿಸುವ ಮತ್ತು ಅವುಗಳಿಗೆ ಸೂಕ್ತ ಪ್ರಮಾಣದ ದಾರಿಗಳನ್ನು ಕಂಡುಕೊಳ್ಳುವ ಆಸಕ್ತಿಯನ್ನು ಹೊಂದಿದೆ. ವಿಶ್ವ ಪರಂಪರೆಯ ಕೇಂದ್ರವಾಗಿ 'ಹಂಪಿ' ಇರುವಂತೆ ಕನ್ನಡ ಸಂಸ್ಕೃತಿಯ ಶಕ್ತಿ ಕೇಂದ್ರವಾಗಿ 'ಕನ್ನಡ ವಿಶ್ವವಿದ್ಯಾಲಯ'ವು ವಿಶ್ವ ಸಾಂಸ್ಕೃತಿಕ ನಕ್ಷೆಯಲ್ಲಿ ಸ್ಥಾನ ಪಡೆಯಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ, ಯು.ಜಿ.ಸಿ.ಯ ಎಲ್ಲಾ ಜನವರ್ಗದವರ ಮಾರ್ಗದರ್ಶನ, ಸಹಕಾರ ಮತ್ತು ಬೆಂಬಲವನ್ನು ಕೋರುತ್ತೇನೆ.

ಕನ್ನಡ ವಿಶ್ವವಿದ್ಯಾಲಯವು ಹದಿನಾಲ್ಕು ಸಾರ್ಥಕ ಸಂವತ್ಸರಗಳನ್ನು ಪೂರ್ಣ ಗೊಳಿಸುವ ಮೂಲಕ ಮತ್ತೆ ಹೊಸ ಪಯಣಕ್ಕೆ ಸಿದ್ಧವಾಗಿದೆ. ಜಾಗತೀಕರಣಕ್ಕೆ ಪ್ರತಿಯಾಗಿ ಮತ್ತು ಪ್ರತಿಕ್ರಿಯೆಯಾಗಿ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳನ್ನು ಹೊಸದಾಗಿ ಕಟ್ಟುವ ಕಾಯಕಕ್ಕೆ ಕನ್ನಡ ವಿಶ್ವವಿದ್ಯಾಲಯವನ್ನು ಸಿದ್ಧಗೊಳಿಸುವಲ್ಲಿ ಎಲ್ಲರ ಸಹಕಾರವನ್ನು ಕೋರುತ್ತೇನೆ.

ಅಲ್ಲಮನ ಒಂದು ವಚನ ಈ ರೀತಿ ಹೇಳುತ್ತದೆ.

*"ಅರಿವು ಅರಿವೆನುತ್ತಿಪ್ಪಿರಿ ಅವರಿ ಸಾಮಾನ್ಯವೆ*
*ಹಿಂದಣ ಹೆಜ್ಜೆಯ ನೋಡಿ ಕಂಡಲ್ಲದೆ*
*ನಿಂದ ಹೆಜ್ಜೆಯನರಿಬಾರದು*
*ಮುಂದಣ ಹೆಜ್ಜೆಯಳಿದಲ್ಲದೆ*
*ಒಂದು ಪಾದ ನೆಲೆಗೊಳ್ಳದು*
*ನೆಲನ ಬಿಟ್ಟು ಆಕಾಶದಲ್ಲಿ ನಿಂದು*
*ಮುಗಿಲೊಳಗೆ ಮಿಂಚಿದಲ್ಲದೆ ತಾನಾಗಬಾರದು*
*ಗುಹೇಶ್ವರನೆಂಬುದು ಬರಿದೆ ಬಹುದೆ ಹೇಳಿರೆ"*

ಅರಿವಿನ ಕಾಯಕದ ಮುಂದಣ ಹೆಜ್ಜೆಗಳನ್ನು ಇಡಲು ಮತ್ತು ಪಾದಗಳನ್ನು ನೆಲೆಗೊಳಿಸಲು ಈ ನುಡಿಹಬ್ಬ ಹೊಸ ಚೈತನ್ಯವನ್ನು ಕೊಡಲಿ ಎಂದು ಹಾರೈಸುತ್ತೇನೆ.

ಎಲ್ಲರಿಗೂ ನಮಸ್ಕಾರ

೨೨ ಡಿಸೆಂಬರ್ ೨೦೦೫

# ೧೨. ಅಂತರಂಗದ ಅರಿವು ಬಹಿರಂಗದ ಕ್ರಿಯೆ

ಕರ್ನಾಟಕ ರಾಜ್ಯದ ಘನತೆವೆತ್ತ ರಾಜ್ಯಪಾಲರೂ ಕನ್ನಡ ವಿಶ್ವವಿದ್ಯಾಲಯದ ಕುಲಾಧಿಪತಿಗಳೂ ಆಗಿರುವ ಸನ್ಮಾನ್ಯ ಶ್ರೀ ಟಿ.ಎನ್. ಚತುರ್ವೇದಿ ಅವರೇ, ಕರ್ನಾಟಕ ರಾಜ್ಯದ ಉನ್ನತ ಶಿಕ್ಷಣ ಸಚಿವರೂ ಕನ್ನಡ ವಿಶ್ವವಿದ್ಯಾಲಯದ ಸಮಕುಲಾಧಿಪತಿಗಳೂ ಆಗಿರುವ ಸನ್ಮಾನ್ಯ ಶ್ರೀ ಡಿ. ಎಚ್. ಶಂಕರಮೂರ್ತಿ ಅವರೇ, ಕನ್ನಡ ವಿಶ್ವವಿದ್ಯಾಲಯದ ೧೫ನೇ ನುಡಿಹಬ್ಬದ ಮುಖ್ಯ ಅತಿಥಿಗಳಾಗಿ ಆಗಮಿಸಿರುವ ಕನ್ನಡದ ಹಿರಿಯ ಧೀಮಂತ ಪತ್ರಕರ್ತರೂ ಸ್ವಾತಂತ್ರ್ಯ ಹೋರಾಟಗಾರರೂ ಕರ್ನಾಟಕ ಏಕೀಕರಣದ ರೂವಾರಿಗಳೂ ಆಗಿರುವ ನಾಡೋಜ ಡಾ. ಪಾಟೀಲ ಪುಟ್ಟಪ್ಪನವರೇ, ಈ ನುಡಿಹಬ್ಬದಲ್ಲಿ ನಾಡೋಜ ಗೌರವ ಪದವಿಗಳನ್ನು ಸ್ವೀಕರಿಸಲು ಒಪ್ಪಿಕೊಂಡು ದಯಮಾಡಿಸಿರುವ ಕನ್ನಡದ ಹಿರಿಯ ಕವಿ ಕರ್ನಾಟಕ ಏಕೀಕರಣದ ಹೋರಾಟಗಾರ ಡಾ. ಕಯ್ಯಾರ ಕಿಞ್ಞಣ್ಣ ರಯ ಅವರೇ, ಕನ್ನಡ ಸಾಹಿತ್ಯ ಹಿರಿಯ ಲೇಖಕಿ ಹಾಗೂ ಕನ್ನಡಿಗರ ಮತ್ತು ಮಹಿಳೆಯರ ಅಭಿವೃದ್ಧಿಗಾಗಿ ನಿರಂತರ ಹೋರಾಟ ಮಾಡುತ್ತಿರುವ ಡಾ. ಸರೋಜಿನಿ ಮಹಿಷಿ ಅವರೇ, ಹಿರಿಯ ನಾಟಕಕಾರ ಜಾನಪದ ವಿದ್ವಾಂಸ ಹಾಗೂ ಕರ್ನಾಟಕ ಏಕೀಕರಣದ ಸಾಂಸ್ಕೃತಿಕ ಶಕ್ತಿಯಾಗಿರುವ ಶ್ರೀ ಮುದೇನೂರ ಸಂಗಣ್ಣ ಅವರೇ, ಕನ್ನಡ ಸಂಶೋಧನೆಗೆ ಅಪೂರ್ವ ಕೊಡುಗೆಯನ್ನು ಕೊಟ್ಟಿರುವ ಜೈನ ಸಂಸ್ಕೃತಿಯ ಮಹತ್ವದ ಶೋಧಕರೂ ಸಂಘಟಕರೂ ಆಗಿರುವ ಡಾ. ಹಂಪ. ನಾಗರಾಜಯ್ಯ ಅವರೇ, ಜನಪದ ಮಹಾಕಾವ್ಯಗಳ ಅಪೂರ್ವ ಭಂಡಾರವಾಗಿ, ಮೌಖಿಕ ಪರಂಪರೆಯ ಶ್ರೇಷ್ಠ ಪ್ರತಿನಿಧಿಯಾಗಿರುವ ಶ್ರೀಮತಿ ಬುರ್ರಕಥಾ ಈರಮ್ಮ ಅವರೇ, ಕನ್ನಡ ವಿಶ್ವವಿದ್ಯಾಲಯದ ಕಾರ್ಯಕಾರಿ ಸಮಿತಿ ಮತ್ತು ಆಡಳಿತ ಮಂಡಳಿ ಸದಸ್ಯರೇ, ಈ ಪರಿಸರದ ಎಲ್ಲಾ ಪ್ರತಿನಿಧಿಗಳೇ; ಮಾಧ್ಯಮದ ಗೆಳೆಯರೇ, ಕನ್ನಡ ವಿಶ್ವವಿದ್ಯಾಲಯದ ಕೂಡುಕುಟುಂಬದ ನನ್ನ ಪ್ರೀತಿಯ ಬಂಧುಗಳೇ, ಆಹ್ವಾನಿತರೇ ಮತ್ತು ಸ್ನೇಹಿತರೇ.

ಕನ್ನಡ ವಿಶ್ವವಿದ್ಯಾಲಯದ ೧೫ನೇ ನುಡಿಹಬ್ಬಕ್ಕೆ ತಮ್ಮೆಲ್ಲರನ್ನು ಆದರ ಅಭಿಮಾನಿಗಳಿಂದ ಬರಮಾಡಿಕೊಳ್ಳಲು ಆನಂದ ಪಡುತ್ತೇನೆ.

ಘನತೆವೆತ್ತ ಕುಲಾಧಿಪತಿಗಳಾದ ಸನ್ಮಾನ್ಯ ಶ್ರೀ ಟಿ.ಎನ್. ಚತುರ್ವೇದಿ ಅವರು ಈ ನುಡಿಹಬ್ಬದ ಅಧ್ಯಕ್ಷತೆಯನ್ನು ವಹಿಸಿಕೊಂಡು ಕನ್ನಡ ಭಾಷೆ, ಸಾಹಿತ್ಯ ಸಂಸ್ಕೃತಿ ಕ್ಷೇತ್ರದಲ್ಲಿ ಅಪಾರವಾದ ಕೊಡುಗೆಗಳನ್ನು ಕೊಟ್ಟಿರುವ ಐದು ಮಂದಿ ಹಿರಿಯರಿಗೆ ನಾಡೋಜ ಗೌರವ ಪದವಿಗಳನ್ನು ಮತ್ತು ಅರ್ಹ ಅಭ್ಯರ್ಥಿಗಳಿಗೆ ಡಿ.ಲಿಟ್. ಮತ್ತು ಪಿಎಚ್.ಡಿ. ಪದವಿಯನ್ನು ನೀಡಲು ಒಪ್ಪಿಕೊಂಡು ಬಂದಿರುತ್ತಾರೆ. ಸಾಹಿತ್ಯ ಮತ್ತು ಸಂಸ್ಕೃತಿಯ ಬಗ್ಗೆ ಆಳವಾದ ತಿಳುವಳಿಕೆಯುಳ್ಳ ಮಾನವಿಕ ಕಾಳಜಿಯುಳ್ಳ ಹಿರಿಯ ಮುತ್ಸದ್ದಿಯಾಗಿರುವ ಘನತೆವೆತ್ತ ಕುಲಾಧಿಪತಿಗಳ ಮಾರ್ಗದರ್ಶನ ಮತ್ತು ಬೆಂಬಲದಿಂದ ಕನ್ನಡ ವಿಶ್ವವಿದ್ಯಾಲಯವು ಬಹುಮುಖ ಪ್ರಗತಿಯನ್ನು ಸಾಧಿಸುತ್ತಿದೆ. ಘನತೆವೆತ್ತ ಕುಲಾಧಿಪತಿಗಳಿಗೆ ಕನ್ನಡ ವಿಶ್ವವಿದ್ಯಾಲಯದ ಪರವಾಗಿ ಗೌರವಪೂರ್ವಕ ಸ್ವಾಗತ ಕೋರುತ್ತೇನೆ. ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಸಚಿವರೂ ಕನ್ನಡ ವಿಶ್ವವಿದ್ಯಾಲಯದ ಸಮಕುಲಾಧಿಪತಿಗಳೂ ಆಗಿರುವ ಸನ್ಮಾನ್ಯ ಶ್ರೀ ಡಿ.ಎಚ್. ಶಂಕರಮೂರ್ತಿ ಅವರು ಈ ನುಡಿಹಬ್ಬದಲ್ಲಿ ಪಾಲ್ಗೊಂಡು ಎಂ.ಫಿಲ್ ಪದವೀಧರರಿಗೆ ಪದವಿ ಪ್ರದಾನ ಮಾಡಲಿದ್ದಾರೆ. ನಮ್ಮ ವಿಶ್ವವಿದ್ಯಾಲಯಕ್ಕೆ ನಿರಂತರ ಮಾರ್ಗದರ್ಶನ ನೀಡುತ್ತಿರುವ ಸನ್ಮಾನ್ಯ ಉನ್ನತ ಶಿಕ್ಷಣ ಸಚಿವರಾದ ಶ್ರೀ. ಡಿ.ಎಚ್. ಶಂಕರಮೂರ್ತಿ ಅವರಿಗೆ ಗೌರವ ಪೂರ್ವಕ ಸ್ವಾಗತವನ್ನು ಕೋರುತ್ತೇನೆ. ಈ ವರ್ಷದ ನುಡಿಹಬ್ಬದಲ್ಲಿ ಮುಖ್ಯ ಅತಿಥಿಗಳಾಗಿ ಭಾಷಾಣ ಮಾಡಲು ಕನ್ನಡದ ಹಿರಿಯ ಧೀಮಂತ ಪತ್ರಕರ್ತರು, ಭಾರತ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಏಕೀಕರಣದ ರೂವಾರಿಗಳು ಆಗಿರುವ ನಾಡೋಜ ಪಾಟೀಲ ಪುಟ್ಟಪ್ಪನವರು ಆಗಮಿಸಿದ್ದಾರೆ. ಪ್ರಪಂಚ, ಸಂಗಮ, ವಿಶ್ವವಾಣಿ, ಮನೋರಮ, ಸ್ತ್ರೀ ಇಂತಹ ದಿನಪತ್ರಿಕೆ, ವಾರಪತ್ರಿಕೆ, ಪಾಕ್ಷಿಕ, ಮಾಸಪತ್ರಿಕೆಗಳನ್ನು ಹೊರತಂದು ಕರ್ನಾಟಕದ ಸಾಂಸ್ಕೃತಿಕ, ರಾಜಕೀಯ ಬೆಳವಣಿಗೆಗೆ ಅಪಾರವಾದ ಕೊಡುಗೆಗಳನ್ನು ಕೊಟ್ಟಿದ್ದಾರೆ. ನನ್ನದು ಈ ಕನ್ನಡ ನಾಡು, ನಮ್ಮದು ಈ ಭರತ ಭೂಮಿ, ಕರ್ನಾಟಕದ ಕಥೆಯಂತಹ ಕೃತಿಗಳು ಪಾಪು ಅವರ ಭಾಷಾಭಿಮಾನ ಮತ್ತು ದೇಶಾಭಿಮಾನದ ಜೀವಂತ ನಿದರ್ಶನಗಳು. ಉತ್ತಮ ಸಣ್ಣಕಥೆಗಾರರಾಗಿ, ಅಂಕಣಕಾರರಾಗಿ ಪಾಪು ಪ್ರಪಂಚವನ್ನೇ ನಿರ್ಮಿಸಿದ ಪಾಟೀಲ ಪುಟ್ಟಪ್ಪನವರು

ಕರ್ನಾಟಕ ಏಕೀಕರಣದ ದಿಗ್ಗಜರಲ್ಲಿ ಒಬ್ಬರು. ಕರ್ನಾಟಕ ಕಾವಲು ಮತ್ತು ಗಡಿ ಸಲಹಾ ಸಮಿತಿ ಅಧ್ಯಕ್ಷರಾಗಿ ಇವರು ಮಾಡಿರುವ ಕನ್ನಡದ ಹೋರಾಟ ವಿಶೇಷವಾದದ್ದು. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (೧೯೭೭), ಕರ್ನಾಟಕ ವಿಶ್ವವಿದ್ಯಾಲಯದ ಡಿ.ಲಿಟ್ (೧೯೯೪), ಪತ್ರಿಕಾ ಅಕಾಡೆಮಿ ಪ್ರಶಸ್ತಿ (೧೯೯೩), ಪ್ರಥಮ ಟಿಎಸ್‌ಆರ್ ಪತ್ರಿಕೋದ್ಯಮ ಪ್ರಶಸ್ತಿ (೧೯೯೪), ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪದವಿ (೧೯೯೭), ಸುವರ್ಣ ಕರ್ನಾಟಕ ಏಕೀಕರಣ ಪ್ರಶಸ್ತಿ (೨೦೦೭) ಅಂತಹ ಅನೇಕ ಗೌರವ ಪ್ರಶಸ್ತಿಗಳನ್ನು ಪಡೆದ, ಕನ್ನಡ ಸಾಹಿತ್ಯ, ಪತ್ರಿಕೋದ್ಯಮದ ಭೀಷ್ಮರೂ ಕರ್ನಾಟಕ ಏಕೀಕರಣದ ಮೂಲಕ ಕನ್ನಡನಾಡಿನ ಸರ್ವತೋಮುಖ ಬೆಳವಣಿಗೆ ಬಗ್ಗೆ ಅಪಾರ ಕಾಳಜಿ ಉಳ್ಳವರೂ ಆದ ನೇರ ನಡೆನುಡಿಯ ನಾಡೋಜ ಪಾಟೀಲ ಪುಟ್ಟಪ್ಪನವರನ್ನು ಈ ಸುವರ್ಣ ಕರ್ನಾಟಕದ ನುಡಿಹಬ್ಬಕ್ಕೆ ಗೌರವ ಆದರಗಳಿಂದ ಸ್ವಾಗತಿಸುತ್ತೇನೆ.

ಸುವರ್ಣ ಕರ್ನಾಟಕದ ಈ ನುಡಿಹಬ್ಬದ ಸಂದರ್ಭದಲ್ಲಿ ಕನ್ನಡ ವಿಶ್ವವಿದ್ಯಾಲಯ ಕೊಡಮಾಡುವ ನಾಡೋಜ ಗೌರವ ಪದವಿಗಳನ್ನು ಸ್ವೀಕರಿಸಲು ಬಂದಿರುವ ಐದು ಮಂದಿ ಹಿರಿಯ ಸಾಧಕರು ನಮ್ಮೊಡನೆ ಇದ್ದಾರೆ.

ಡಾ. ಕಯ್ಯಾರ ಕಿಞ್ಞಣ್ಣರೈ ಕಳೆದ ೭೦ ವರ್ಷಗಳಿಂದ ಕನ್ನಡದ ಕವಿಯಾಗಿ, ಅನುವಾದಕರಾಗಿ, ಕನ್ನಡ ಪಠ್ಯಪುಸ್ತಕ ರಚನೆಕಾರರಾಗಿ, ಸ್ವಾತಂತ್ರ್ಯ ಹೋರಾಟಗಾರರಾಗಿ, ಪತ್ರಕರ್ತರಾಗಿ ಕರ್ನಾಟಕ ಏಕೀಕರಣದ ನಿರಂತರ ಹೋರಾಟಗಾರರಾಗಿ ವಿಶೇಷ ಸಾಧನೆಯನ್ನು ಮಾಡಿರುವ ಹಿರಿಯರು. 'ಕಾಸರಗೋಡು ಕನ್ನಡನಾಡು' ಎನ್ನುವ ದಿವ್ಯಮಂತ್ರವನ್ನು ಇಂದಿಗೂ ಪಠಿಸುತ್ತಿರುವ ಅಪ್ಪಟ ಗಾಂಧಿವಾದಿ ಮತ್ತು ಕನ್ನಡವಾದಿ, ಕವಿ ಡಾ. ಕಯ್ಯಾರ ಕಿಞ್ಞಣ್ಣ ರೈ.

ಡಾ. ಸರೋಜಿನಿ ಮಹಿಷಿ ಅವರು ಕನ್ನಡ ಸಾಹಿತ್ಯದ ಲೇಖಕಿಯಾಗಿ ಸಂಶೋಧಕಿಯಾಗಿ ಕನ್ನಡಪರ ಆಡಳಿತದ ನೇತಾರರಾಗಿ ಭಾರತ ಸರ್ಕಾರದ ಸಚಿವರಾಗಿ ಮಹಿಳಾಪರ ಚಿಂತಕರಾಗಿ ವಿಶೇಷವಾದ ಕೊಡುಗೆಗಳನ್ನು ಕೊಟ್ಟವರು. ಕನ್ನಡಿಗರಿಗೆ ಉದ್ಯೋಗಾವಕಾಶಗಳನ್ನು ಕೊಟ್ಟಿರುವ ಮಹಿಷಿ ವರದಿಯು ಇಂದು ಹೆಚ್ಚು ಪ್ರಸ್ತುತವಾಗಿದೆ. ಕವಯಿತ್ರಿಯಾಗಿ, ಸಂಶೋಧಕರಾಗಿ, ರಾಜಕಾರಣಿಯಾಗಿ, ಹೋರಾಟಗಾರರಾಗಿ, ಕನ್ನಡಿಗರ ಮತ್ತು ಮಹಿಳೆಯರ ಪ್ರಗತಿಗೆ ಅಪೂರ್ವ ಕೊಡುಗೆಗಳನ್ನು ಕೊಟ್ಟವರು ಡಾ. ಸರೋಜಿನಿ ಮಹಿಷಿ ಅವರು.

ಶ್ರೀ ಮುದೇನೂರ ಸಂಗಣ್ಣ ಅವರು ನಾಟಕಕಾರರಾಗಿ, ಜಾನಪದ ವಿದ್ವಾಂಸರಾಗಿ, ರಂಗಭೂಮಿ ತಜ್ಞರಾಗಿ, ಅನುವಾದಕರಾಗಿ, ಕೋಶ ನಿರ್ಮಾಪಕರಾಗಿ, ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗಳನ್ನು ವಿಶೇಷವಾಗಿ ಬೆಳೆಸಿದ್ದರು. ಕನ್ನಡ ಸಾಹಿತ್ಯ ಮತ್ತು ಜಾನಪದವನ್ನು ಸಮಾಜವಾದಿ ನೆಲೆಯಲ್ಲಿ ಕಟ್ಟಿದ್ದವರು ಮತ್ತು ವಿಸ್ತರಿಸಿದವರು ಶ್ರೀ ಮುದೇನೂರ ಸಂಗಣ್ಣ ಅವರು ಕನ್ನಡದ ಹಿರಿಯ ಪ್ರಾಧ್ಯಾಪಕರೂ ಸಾಹಿತಿಗಳೂ ಸಂಶೋಧಕರೂ ಸಂಘಟಕರೂ ಆಗಿರುವ ಡಾ. ಹಂಪ ನಾಗರಾಜಯ್ಯ ಅವರು ಭಾಷಾ ವಿಜ್ಞಾನ ಮತ್ತು ಪ್ರಾಚೀನ ಕನ್ನಡ ಕಾವ್ಯಗಳ ಸಂಪಾದನೆಗೆ, ಜೈನ ಸಾಹಿತ್ಯ ಸಂಶೋಧನೆಗೆ ಹೊಸ ಆಯಾಮಗಳನ್ನು ನೀಡಿದವರು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಕನ್ನಡ ಸಾಹಿತ್ಯ ಮತ್ತು ಸಂಘಟನೆಗಳ ಅಪೂರ್ವ ಸಂಗಮವಾಗಿರುವ ಚೈತನ್ಯದ ಚಿಲುಮೆ ಡಾ. ಹಂಪ ನಾಗರಾಜಯ್ಯ ಅವರು.

ಶ್ರೀಮತಿ ಬುರ್ರಕಥಾ ಈರಮ್ಮನವರು ಪರಿಶಿಷ್ಟ ಜಾತಿಗೆ ಸೇರಿದ ಬುಡಕಟ್ಟು ಅಲೆಮಾರಿ ಜನಾಂಗದವರಾಗಿದ್ದು, ಜನಪದ ಮಹಾ ಕಾವ್ಯಗಳ ಭಂಡಾರವಾಗಿರುವ ಪ್ರತಿಭಾವಂತ ಕಲಾವಿದೆ. ಮೌಖಿಕ ಪರಂಪರೆಯ ಸಾಂಸ್ಕೃತಿಕ ರೂಪಕವಾಗಿರುವ ಬುರ್ರಕಥಾ ಈರಮ್ಮ ಅವರು ಸಾಮಾಜಿಕ ಕಾಳಜಿಯನ್ನು ಬದುಕಿನ ಆದರ್ಶವಾಗಿಟ್ಟುಕೊಂಡು ಸಾಧನೆ ಮಾಡುತ್ತಿರುವ ನಡೆದಾಡುವ ಜನಪದ ಮಹಾಕಾವ್ಯ.

ವಿಶ್ವವಿದ್ಯಾಲಯದ ಕಾರ್ಯಕಾರಿ ಸಮಿತಿ ಮತ್ತು ಆಡಳಿತ ಮಂಡಳಿ ಸದಸ್ಯರನ್ನು, ನುಡಿಹಬ್ಬಕ್ಕೆ ಆಗಮಿಸುತ್ತಿರುವ ಮಾನ್ಯ ಜನಪ್ರತಿನಿಧಿಗಳನ್ನು, ಕನ್ನಡ ವಿಶ್ವವಿದ್ಯಾಲಯದ ಪ್ರಗತಿಗೆ ಸದಾ ಬೆಂಬಲವನ್ನು ಕೊಡುತ್ತಿರುವ ಪತ್ರಿಕಾ ಮತ್ತು ವಿದ್ಯುನ್ಮಾನ ಮಾಧ್ಯಮದ

ಗೆಳೆಯರನ್ನು, ನಮ್ಮ ವಿಶ್ವವಿದ್ಯಾಲಯದ ಅವಿಭಕ್ತ ಕುಟುಂಬದ ಸದಸ್ಯರಾದ ಅಧ್ಯಾಪಕರು, ಆಡಳಿತ ಸಿಬ್ಬಂದಿಯವರು, ಸಂಶೋಧಕರು ಹಾಗೂ ವಿದ್ಯಾರ್ಥಿಗಳನ್ನು ಮತ್ತು ಎಲ್ಲಾ ಆಹ್ವಾನಿತರನ್ನು ಪ್ರೀತಿಯಿಂದ ಬರಮಾಡಿಕೊಳ್ಳುತ್ತಿದ್ದೇನೆ.

ಕನ್ನಡ ವಿಶ್ವವಿದ್ಯಾಲಯವು ಕನ್ನಡ ಸಂಸ್ಕೃತಿಯ ಬಹುತ್ವದ ನೆಲೆಗಳನ್ನು ಹುಡುಕುವ, ಗಟ್ಟಿಗೊಳಿಸುವ, ಹರಡುವ ಕಾಯಕವನ್ನು ನೋಂಪಿಯಂತೆ ನಡೆಸಿಕೊಂಡು ಬಂದಿದೆ. ಕನ್ನಡ ಸಂಸ್ಕೃತಿಯನ್ನು ಮತ್ತೆ ಮತ್ತೆ ನಿರ್ವಚನ ಮಾಡಿಕೊಳ್ಳುವ ಪ್ರಕ್ರಿಯೆಯಲ್ಲಿ ಕನ್ನಡ ವಿಶ್ವವಿದ್ಯಾಲಯವು ಒಂದು ಆಡುಂಬೊಲವಾಗಿ ಕಾರ್ಯ ನಿರ್ವಹಿಸುತ್ತಿದೆ. ನಮಗೆ ಗೊತ್ತಿರುವ ಸಂಸ್ಕೃತಿಯ ಅರ್ಥಗಳಾಚೆಗೆ ಅನೂಹ್ಯ ಲೋಕಗಳ ಕಡೆಗೆ ತನ್ನನ್ನು ಮತ್ತು ಕನ್ನಡಿಗರನ್ನು ಒಯ್ಯುವ ಪಯಣದ ದಾರಿಗಳನ್ನು ರೂಪಿಸುವ ಮಹತ್ವದ ಸಾಹಸದ ಹೆಜ್ಜೆಗಳನ್ನು ಮೂಡಿಬಂದಿವೆ. ಇದು ನಿರಂತರ ನಡೆಯಬೇಕಾದ ಬಹುದಾರಿಗಳ ಮಹಾಯಾನ.

ಕಳೆದ ವರ್ಷ ಡಿಸೆಂಬರ್ ೨೦೦೫ ರಿಂದ ಇಂದಿನ ನುಡಿಹಬ್ಬದವರೆಗಿನ ಸುಮಾರು ಹನ್ನೊಂದುವರೆ ತಿಂಗಳ ಅವಧಿಯಲ್ಲಿ ನಮ್ಮ ವಿಶ್ವವಿದ್ಯಾಲಯವು ಬಹುಮುಖಿಯಾಗಿ, ಭೌತಿಕವಾಗಿ ಮತ್ತು ಬೌದ್ಧಿಕವಾಗಿ ಬೆಳೆದಿದೆ ಮತ್ತು ವಿಸ್ತಾರಗೊಂಡಿದೆ. ಅವಕಾಶಗಳನ್ನು ಹೊಸತಾಗಿ ರೂಪಿಸುವ ಮತ್ತು ಆವರಿಸಿಕೊಳ್ಳುವ ಕೆಲಸಗಳು ಕನ್ನಡ ನಾಡಿನ ತುಂಬೆಲ್ಲ ಬಹುಬಗೆಗಳಲ್ಲಿ ನಡೆದಿವೆ.

ಕನ್ನಡ ವಿಶ್ವವಿದ್ಯಾಲಯದ ಎಲ್ಲ ಶೈಕ್ಷಣಿಕ ವಿಭಾಗಗಳಲ್ಲಿ ಅಧ್ಯಯನ, ಪ್ರಕಟಣೆ ಮತ್ತು ವಿಸ್ತರಣೆಯ ಚಟುವಟಿಕೆಗಳು ನಿರಂತರವಾಗಿ, ವೈವಿಧ್ಯಮಯವಾಗಿ, ಜನಮುಖಿಯಾಗಿ ನಡೆದಿವೆ. ವಿಚಾರ ಸಂಕಿರಣ, ಕಮ್ಮಟ, ತರಬೇತಿ ಶಿಬಿರ, ವಿಶೇಷ ಉಪನ್ಯಾಸ, ಸಮ್ಮೇಳನ, ವೈಯಕ್ತಿಕ ಮತ್ತು ಸಾಂಸ್ಥಿಕ ಸಂಶೋಧನ ಯೋಜನೆಗಳು ವರ್ಷದ ಉದ್ದಕ್ಕೂ ವಿಶೇಷವಾಗಿ ನಡೆದಿವೆ. ಕನ್ನಡ ಭಾಷಾಧ್ಯಯನ ವಿಭಾಗದಿಂದ ತೀ.ನಂ.ಶ್ರೀ. ಜನ್ಮಶತಮಾನೋತ್ಸವದ ಅಂಗವಾಗಿ ಕನ್ನಡ ಭಾಷಾಧ್ಯಯನದ ಮುಂದಿನ ಹೆಜ್ಜೆಗಳು, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದಿಂದ ಹರಿಶ್ಚಂದ್ರ ಚಾರಿತ್ರ್ಯ: ಸಾಂಸ್ಕೃತಿಕ ಮುಖಾಮುಖಿ ಮಲೆಮಾದೇಶ್ವರ, ಇಂಗ್ಲೀಷ್ ಗೀತೆಗಳು: ಸಾಂಸ್ಕೃತಿಕ ಮುಖಾಮುಖಿ ಎಂಬ ನಾಲ್ಕು ವಿಚಾರ ಸಂಕಿರಣಗಳು; ದ್ರಾವಿಡ ಸಂಸ್ಕೃತಿ ವಿಭಾಗದಿಂದ ಅಭೇರಾಜ್ ಜೈನ ಸಂಸ್ಕೃತಿ ಅಧ್ಯಯನ ಪೀಠದ ಸಹಯೋಗದಲ್ಲಿ ದಕ್ಷಿಣ ಭಾರತದಲ್ಲಿ ಜೈನಧರ್ಮ (ಮೂಡಬಿದರೆ) ಎಂಬ ರಾಷ್ಟ್ರೀಯ ವಿಚಾರ ಸಂಕಿರಣ; ಭಾಷಾಂತರ ಅಧ್ಯಯನ ವಿಭಾಗದಿಂದ ಸಮಾಜವಿಜ್ಞಾನಗಳಲ್ಲಿ ಭಾಷಾಂತರ (ಕಾಸರಗೋಡು) ರಾಷ್ಟ್ರೀಯ ವಿಚಾರಸಂಕಿರಣ, ಡಾ. ಶ್ರೀಕಂಠೇಶಗೌಡರ ಕುರಿತು ವಿಚಾರ ಸಂಕಿರಣ (ಬೆಂಗಳೂರು), ಯುವ ಭಾಷಾಂತರ ಕಮ್ಮಟ (ಕುಂದಾಪುರ)ಗಳನ್ನು ನಡೆಸಲಾಗಿದೆ; ಕನ್ನಡ-ಮರಾಠಿ ಭಾಷಾಂತರ ಪ್ರಕ್ರಿಯೆಗಳು ಎಂಬ ವಿಷಯ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಬೆಳಗಾವಿ ಜಿಲ್ಲೆಯ ಹಾರೋಗೇರಿಯಲ್ಲಿ ಏರ್ಪಡಿಸಲಾಗಿದೆ. ಹಸ್ತಪ್ರತಿ ಅಧ್ಯಯನ ವಿಭಾಗದಿಂದ ಅಖಿಲ ಕರ್ನಾಟಕ ಹಸ್ತಪ್ರತಿ ಸಮ್ಮೇಳನ (ತುಮಕೂರು), ಹಸ್ತಪ್ರತಿ ವಿಭಾಗದ ದಶಮಾನೋತ್ಸವ, ದಕ್ಷಿಣ ಭಾರತೀಯ ಗ್ರಂಥ ಸಂಪಾದನೆ ರಾಷ್ಟ್ರೀಯ ವಿಚಾರಸಂಕಿರಣ ಹಸ್ತಪ್ರತಿ ತರಬೇತಿಯ ಜಾಗೃತಿ ಶಿಬಿರಗಳನ್ನು ನಡೆಸಲಾಗಿದೆ. ದಶಮಾನೋತ್ಸವದ ಅಂಗವಾಗಿ ಹಸ್ತಪ್ರತಿ ಅಧ್ಯಯನಕ್ಕೆ ಸಂಬಂಧಿಸಿದಂತೆ ಹತ್ತು ಪ್ರಕಟಣೆಗಳನ್ನು ಹೊರತರಲಾಗಿದೆ. ಹಸ್ತಪ್ರತಿಗಳ ಸರ್ವೇಕ್ಷಣೆ, ಸೂಚೀಕರಣ ಕಾರ್ಯ ಸಮರ್ಪಕವಾಗಿ ಮುಂದುವರಿದಿದೆ. ಈ ವಿಭಾಗದಲ್ಲಿರುವ ಹಸ್ತಪ್ರತಿ ಸಂಪನ್ಮೂಲ ಕೇಂದ್ರವು ನ್ಯಾಷನಲ್ ಮ್ಯಾನ್‌ಸ್ಕ್ರಿಪ್ಟ್ ಮಿಷನ್ನಿನ ನೆರವಿನಿಂದ ಹಸ್ತಪ್ರತಿಗಳ ಸರ್ವೇಕ್ಷಣೆ, ಸಂಗ್ರಹ ಮತ್ತು ಜಾಗೃತಿ ಶಿಬಿರಗಳನ್ನು ವ್ಯಾಪಕವಾಗಿ ನಡೆಸಿದೆ. ಮಹಿಳಾ ಅಧ್ಯಯನ ವಿಭಾಗವು ಸ್ತ್ರೀವಾದಿ ಸಂಶೋಧನ ವಿಧಾನಗಳ ಕಮ್ಮಟ ನಡೆಸಿದೆ. ಚರಿತ್ರೆ ವಿಭಾಗವು ಕರ್ನಾಟಕ ಇತಿಹಾಸ ಕಾಂಗ್ರೆಸ್‌ನ ೧೮ನೇ ಅಧಿವೇಶನವನ್ನು ಕನ್ನಡ ವಿಶ್ವವಿದ್ಯಾಲಯದಲ್ಲಿ ವ್ಯವಸ್ಥಿತವಾಗಿ ನಡೆಸಿದ್ದು, ಅದರಲ್ಲಿ ಕರ್ನಾಟಕ ಏಕೀಕರಣ ಕುರಿತು ವಿಶೇಷ ವಿಚಾರ ಸಂಕಿರಣ ಏರ್ಪಡಿಸಿದೆ. ಚರಿತ್ರೆ ವಿಭಾಗದಿಂದ ಪಠ್ಯಪುಸ್ತಕ ರಚನೆ ಕುರಿತು ಕಮ್ಮಟ ಮತ್ತು ಚರಿತ್ರೆ ಪುನರ್ಮನನ ಶಿಬಿರಗಳನ್ನು ನಡೆಸಲಾಗಿದೆ. ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದಿಂದ ತಮಿಳು ವಿಶ್ವವಿದ್ಯಾಲಯದ ಸಹಯೋಗದಲ್ಲಿ Recent Discoveries and otheir inpect on South Indian History ಎಂಬ ರಾಷ್ಟ್ರೀಯ ವಿಚಾರ ಸಂಕಿರಣವನ್ನು ತಂಜಾವೂರಿನಲ್ಲಿ, ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಮಾಲೆಯ ಅಡಿಯಲ್ಲಿ ಹಾನಗಲ್ಲ ಪಟ್ಟಣಕ್ಕೆ ಸಂಬಂಧಿಸಿದಂತೆ ವಿಚಾರ ಸಂಕಿರಣ (ಹಾನಗಲ್ಲ)ವನ್ನು

ನಡೆಸಲಾಗಿದೆ. ಕರ್ನಾಟಕ ದೇವಾಲಯ ಕೋಶ (ಧಾರವಾಡ ಜಲ್ಲೆ), ಕರ್ನಾಟಕ ದೇವಾಲಯ ಕೋಶ (ಬಿಜಾಪುರ ಜಿಲ್ಲೆ) ಪ್ರಕಟವಾಗಿದೆ. ಕರ್ನಾಟಕ ದೇವಾಲಯ ಕೋಶ (ಗದಗ) ಯೋಜನೆಯನ್ನು ಪೂರ್ಣಗೊಳಿಸಿದೆ. ಗುಲ್ಬರ್ಗಾ, ಬಾಗಲಕೋಟೆ ದೇವಾಲಯ ಕೋಶಗಳು ಪ್ರಗತಿಯಲ್ಲಿವೆ. ಶಾಸನಶಾಸ್ತ್ರ ವಿಭಾಗದಿಂದ ಬೀದರ ಮತ್ತು ಬಾಗಲಕೋಟೆ ಜಿಲ್ಲೆಯ ಶಾಸನ ಸಂಪುಟಗಳು ಬಿಡುಗಡೆಯಾಗಿವೆ. ಹಾವೇರಿ, ಗುಲ್ಬರ್ಗಾ, ಗದಗ, ಬಿಜಾಪುರ, ಬೆಳಗಾವಿ ಜಿಲ್ಲೆಗಳ ಶಾಸನ ಸಂಪುಟಗಳು ಪ್ರಗತಿಯಲ್ಲಿವೆ. ಶೃಂಗೇರಿ ಮಹಾ ಸಂಸ್ಥಾನ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣವನ್ನು ಶೃಂಗೇರಿಯಲ್ಲಿ ನಡೆಸಲಾಗಿದೆ. ಅಭಿವೃದ್ಧಿ ಅಧ್ಯಯನ ವಿಭಾಗದಿಂದ ಪ್ರಾಥಮಿಕ ಶಾಲಾ ಸಮಾಜವಿಜ್ಞಾನ ಶಿಕ್ಷಕರ ಕಮ್ಮಟ (ದೇವದುರ್ಗ), ಪ್ರಾಥಮಿಕ ಶಿಕ್ಷಕರಿಗೆ ಲಿಂಗಸಂಬಂಧಿ ಕಮ್ಮಟ (ದೇವದುರ್ಗ) ಗ್ರಾಮೀನ ಪೊಲೀಸರಿಗೆ ಮಾನವ ಹಕ್ಕುಗಳ ಕಮ್ಮಟ (ಕೊಪ್ಪಳ), ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಪ್ರಾಥಮಿಕ ಶಿಕ್ಷಣದ ಗತಿಶೀಲತೆ ಕುರಿತು ಮೂರು ದಿನಗಳ ವಿಚಾರ ಸಂಕಿರಣ, ಕರ್ನಾಟಕ ದಲಿತ ವಿಮೋಚನೆಯ ಮಾನವ ಹಕ್ಕುಗಳ ಸಂಸ್ಥೆಯ ಸಹಯೋಗದೊಂದಿಗೆ ದಲಿತ ಪಂಚಾಯತ್ ಸದಸ್ಯರಿಗೆ ಪಂಚಾಯತ್ ಕಾರ್ಯ ವಿಧಾನ ಕುರಿತು ತರಬೇತಿ ಕಾರ್ಯಾಗಾರಗಳನ್ನು ನಡೆಸಲಾಗಿದೆ. ಜಾನಪದ ಅಧ್ಯಯನ ವಿಭಾಗದಿಂದ ಗ್ರೀನ್ ಪ್ರತಿಷ್ಠಾನದ ಸಹಯೋಗದೊಂದಿಗೆ ಅಪೂರ್ವ ದೇಶಿ ಬೀಜಗಳ ಪ್ರದರ್ಶನ ಮತ್ತು ಸಂವಾದದ ಬೀಜ ಸಂರಕ್ಷಕರ ಜಾತ್ರೆಯನ್ನು ನಡೆಸಲಾಗಿದೆ. ಬುಡಕಟ್ಟು ಅಧ್ಯಯನ ವಿಭಾಗದಲ್ಲಿ ಯುಜಿಸಿ ಪ್ರಾಯೋಜಿತ ವಿಶೇಷ ಸಹಾಯ ಯೋಜನೆಯಡಿಯಲ್ಲಿ ಕರ್ನಾಟಕದ ಐವತ್ತು ಬುಡಕಟ್ಟುಗಳ ಅಧ್ಯಯನ ಮುಂದುವರೆದಿದೆ. ಕರ್ನಾಟಕ ಸರ್ಕಾರದ ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯದ ಬುಡಕಟ್ಟು ಸಂಶೋಧನ ಸಂಸ್ಥೆಯ ಸಹಯೋಗದಲ್ಲಿ ಗಿರಿಜನ ಆಶ್ರಮ ಶಾಲಾ ಶಿಕ್ಷಕರ ತರಬೇತಿ ಶಿಬಿರಗಳು (ಮೂರು), ಬುಡಕಟ್ಟು ಯುವಕ-ಯುವತಿಯರಿಗಾಗಿ ಜಾಗೃತಿ ಶಿಬಿರಗಳು (ಮೂರು), ಬುಡಕಟ್ಟು ಮಹಿಳಾ ಸದಸ್ಯರ ತರಬೇತಿ ಶಿಬಿರಗಳು (ಎರಡು), ಬುಡಕಟ್ಟು ಮಾಹಿತಿ ಸಂಪನ್ಮೂಲ ಶಿಬಿರ (ಒಂದು) ಇಂತಹ ಹನ್ನೊಂದು ಶಿಬಿರಗಳನ್ನು ನಡೆಸಲಾಗಿದೆ. ಇದರಲ್ಲಿ ಸುಮಾರು ಮುನ್ನೂರಕ್ಕೂ ಮೇಲ್ಪಟ್ಟು ಕರ್ನಾಟಕದ ಬೇರೆ ಬೇರೆ ಬುಡಕಟ್ಟುಗಳ ಯುವಕ-ಯುವತಿಯರು ಭಾಗವಹಿಸಿದ್ದಾರೆ. ಇದರೊಂದಿಗೆ ವಿಭಾಗದ ಅಧ್ಯಾಪಕರು ಕರ್ನಾಟಕ ಬುಡಕಟ್ಟುಗಳ ಕುಲ ಶಾಸ್ತ್ರೀಯ ಅಧ್ಯಯನ, ಕರ್ನಾಟಕ ಬುಡಕಟ್ಟು ಮಹಿಳೆ, ಅರಣ್ಯವಾಸಿ ಬುಡಕಟ್ಟುಗಳ ಅಧ್ಯಯನ ಬುಡಕಟ್ಟುಗಳು ಮತ್ತು ನಕ್ಸಲಬಾರಿ ಯೋಜನೆಗಳನ್ನು ಆರಂಭಿಸಿ ನಿರ್ವಹಿಸುತ್ತಿದ್ದಾರೆ. ಕರ್ನಾಟಕ ಸರ್ಕಾರದ ಹಿಂದುಳಿದ ವರ್ಗದ ಕಲ್ಯಾಣ ನಿರ್ದೇಶನಾಲಯದ ಆಶ್ರಯದಲ್ಲಿ ದೇವರಾಜ ಅರಸು ಸಂಶೋಧನ ಕೇಂದ್ರದ ಕೋರಿಕೆಯಂತೆ ಅರೆಅಲೆಮಾರಿ ಸಮುದಾಯಗಳಿಗೆ ಸೇರಿದ ಕುಣಬಿ, ಬುಂಡೆಬೆಸ್ತ, ಸಿಕ್ಕಲಿಗಾರ, ಗೌಳಿಗ, ಹೆಳವ ಸಮುದಾಯದ ಅಧ್ಯಯನಗಳನ್ನು ಪೂರ್ಣಗೊಳಿಸಲಾಗಿದೆ. ದೃಶ್ಯಕಲಾ ವಿಭಾಗದಿಂದ ಕರ್ನಾಟಕ ಚಿತ್ರಕಲೆ ವಿಚಾರ ಸಂಕಿರಣ, ನಿಸರ್ಗಚಿತ್ರ ರಚನೆಯ ಕಾರ್ಯಾಗಾರ ಮತ್ತು ಕಲಾ ಪ್ರಾತ್ಯಕ್ಷಿಕೆ ನಡೆಸಲಾಗಿದೆ. ಬಾದಾಮಿಯಲ್ಲಿರುವ ಶಿಲ್ಪ ಮತ್ತು ವರ್ಣಚಿತ್ರಕಲಾ ವಿಭಾಗದಿಂದ ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಮತ್ತು ಬಾಗಲಕೋಟೆ ಜಿಲ್ಲಾಡಳಿತದ ಸಹಯೋಗದೊಂದಿಗೆ ಚಾಲುಕ್ಯ ಶಿಲ್ಪರಚನಾ ಶಿಬಿರ ನಡೆಸಲಾಗಿದೆ. ನುಡಿಹಬ್ಬದ ಸಂದರ್ಭದಲ್ಲಿ ಬಾದಾಮಿಯ ಮತ್ತು ದೃಶ್ಯಕಲಾ ವಿಭಾಗದ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಶಿಲ್ಪವನದ ಇನ್ನಷ್ಟು ಬಂಡೆಗಳಿಗೆ ಆಕಾರ, ಬಣ್ಣ ಮತ್ತು ಜೀವವನ್ನು ತುಂಬಿದ್ದಾರೆ. ಅದ್ಭುತ ಸೃಜನಶೀಲ ಚಿತ್ರಗಳನ್ನು ನಿರ್ಮಿಸಿದ್ದಾರೆ. ಕುಪ್ಪಳ್ಳಿಯಲ್ಲಿರುವ ಕನ್ನಡ ಅಧ್ಯಯನ ಕೇಂದ್ರವನ್ನು ಭೌತಿಕವಾಗಿ ಮತ್ತು ಶೈಕ್ಷಣಿಕವಾಗಿ ವಿಸ್ತರಿಸಲಾಗಿದ್ದು, ಕುಪ್ಪಳ್ಳಿಯ ಕುವೆಂಪು ಪ್ರತಿಷ್ಠಾನದಿಂದ ಸ್ಥಳಾವಕಾಶವನ್ನು ಪಡೆದು ಕುವೆಂಪು ಗ್ರಂಥಾಲಯವೊಂದನ್ನು ರೂಪಿಸಲಾಗಿದೆ. ಕುವೆಂಪು ತಂತ್ರಾಂಶ ಅಭಿವೃದ್ಧಿಗಾಗಿ ಪ್ರತ್ಯೇಕ ಕೊಠಡಿ ಮತ್ತು ಉಪಕರಣಗಳನ್ನು ಜೋಡಿಸಿ ಘಟಕವೊಂದನ್ನು ಸ್ಥಾಪಿಸಲಾಗಿದೆ. ಕುವೆಂಪು ದೃಶ್ಯ ಶ್ರವ್ಯ ದಾಖಲಾತಿ ಕೇಂದ್ರವನ್ನು ಮುಂದಿನ ವರ್ಷ ಸ್ಥಾಪಿಸಲಾಗುವುದು.

ಯುಜಿಸಿ ಆರ್ಥಿಕ ನೆರವಿನೊಂದಿಗೆ ಸ್ಥಾಪಿತವಾದ ಮಹಿಳಾ ಅಧ್ಯಯನ ಕೇಂದ್ರದಿಂದ ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆಯನ್ನು ಪ್ರಕಟಿಸಲಾಗಿದೆ. ಮಹಿಳೆಯ ಸಬಲೀಕರಣದ ಭಾಗವಾಗಿ ವಿಶ್ವವಿದ್ಯಾಲಯದ ಪರಿಸರದ ಗ್ರಾಮೀಣ ಪ್ರದೇಶದಲ್ಲಿ ಆರು ಸ್ವಸಹಾಯ ಗುಂಪುಗಳನ್ನು ಕಟ್ಟಲಾಗಿದೆ. ಹೊಸದಾಗಿ ಇನ್ನೂ ಆರು ಮಹಿಳಾ ಸ್ವಸಹಾಯ ಗುಂಪುಗಳನ್ನು ಕಟ್ಟಲು ಕ್ರಮ ಕೈಗೊಳ್ಳಲಾಗಿದೆ. ಕಾಲೇಜು ವಿದ್ಯಾರ್ಥಿನಿಯರಿಗಾಗಿ ಮಹಿಳಾ ಜಾಗೃತಿ ಶಿಬಿರವನ್ನು ನಡೆಸಲಾಗಿದೆ. ಗ್ರಾಮೀಣ ಮಹಿಳೆಯರಿಗಾಗಿ ಮಹಿಳಾ ಆರೋಗ್ಯ ಮತ್ತು ಚಿಕಿತ್ಸಾ ಶಿಬಿರಗಳನ್ನು ಕೇಂದ್ರದ ವತಿಯಿಂದ ನಡೆಸಲಾಗುತ್ತಿದೆ. ಈ ಕೇಂದ್ರದಿಂದ ಸುಮಾರು ೭೦೦ ಮಹಿಳೆಯರು ಪ್ರಯೋಜನವನ್ನು ಪಡೆದಿದ್ದಾರೆ.

ಮಹಿಳಾ ಕೇಂದ್ರದ ವತಿಯಿಂದ ಸಂತಾನೋತ್ಪತ್ತಿ ಕೇಂದ್ರ ಸ್ಥಾಪಿಸಲಾಗಿದ್ದು ವಾರದಲ್ಲಿ ಎರಡು ದಿನ ಕಮಲಾಪುರದ ಆರೋಗ್ಯ ಕೇಂದ್ರದ ವತಿಯಿಂದ ಚಿಕಿತ್ಸೆಯನ್ನು ಕೊಡಲಾಗುತ್ತಿದೆ. ಮಹಿಳಾ ಅಧ್ಯಯನದ ವಿಷಯ ವಿಶ್ವಕೋಶವನ್ನು ಆರಂಭಿಸಲಾಗಿದ್ದು, ಈ ಕುರಿತು ತಜ್ಞರ ಶಿಬಿರವೊಂದು ಕಳೆದ ವಾರವಷ್ಟೇ ನಡೆದಿದೆ. ಮಹಿಳಾ ಅಧ್ಯಯನ ಪೂರಕ ಸಾಹಿತ್ಯದ ದೃಷ್ಟಿಯಿಂದ ಇಪ್ಪತ್ತು ಪುಸ್ತಕಗಳನ್ನು ಪ್ರಕಟಿಸುವ ಯೋಜನೆ ಆರಂಭಿಸಲಾಗಿದೆ. ಮಹಿಳಾ ಅಧ್ಯಯನ ಪಾರಿಭಾಷಿಕ ಪದಕೋಶ ಈ ವರ್ಷ ಆರಂಭಿಸುವ ಇನ್ನೊಂದು ಮಹತ್ವದ ಯೋಜನೆ, ವಿಶ್ವವಿದಾಲಯದ ಭಾಷಾಂತರ ಕೇಂದ್ರದಿಂದ ಆರಂಭಿಸಲಾಗಿದ್ದ ಐನೂರು ವಚನಗಳ ಇಂಗ್ಲಿಷ್ ಭಾಷಾಂತರ ಮತ್ತು ಆಯ್ದ ಕನ್ನಡ ಮೌಖಿಕ ಕಾವ್ಯಗಳ ಇಂಗ್ಲಿಷ್ ಭಾಷಾಂತರ ಎಂಬ ಎರಡು ಯೋಜನೆಗಳು ಪೂರ್ಣಗೊಂಡಿದ್ದು, ಪ್ರಕಟಣೆಗೆ ಸಿದ್ಧವಾಗಿವೆ. ಕನಕದಾಸರ ರಾಮಧಾನ್ಯಚರಿತೆ, ನಳಚರಿತೆ, ಆಯ್ದ ಕೀರ್ತನೆಗಳ ಇಂಗ್ಲಿಷ್ ಭಾಷಾಂತರ ಯೋಜನೆ ಪೂರ್ಣಗೊಂಡಿದ್ದು ಪ್ರಕಟಣೆಗೆ ಸಿದ್ಧವಾಗಿವೆ. ಬರುವ ಜನವರಿಯಲ್ಲಿ ಈ ಮೂರು ಮಹತ್ವದ ಪ್ರಕಟಣೆಗಳು ಹೊರಬರಲಿವೆ. ಮುಂದಿನ ವರ್ಷ ವಡ್ಡಾರಾಧನೆ ಹಾಗೂ ಸರ್ವಜ್ಞ ವಚನಗಳ ಇಂಗ್ಲಿಷ್ ಭಾಷಾಂತರಗಳು ಪೂರ್ಣಗೊಳ್ಳಲಿವೆ.

ದೂರಶಿಕ್ಷಣ ಕೇಂದ್ರವು ಪ್ರಾದೇಶಿಕ ಅಧ್ಯಯನ ಕೇಂದ್ರಗಳನ್ನು ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ತೆರೆಯುವ ಮೂಲಕ ಕನ್ನಡ ಮಾಧ್ಯಮದಲ್ಲಿ ಕನ್ನಡ, ಚರಿತ್ರೆ, ಪತ್ರಿಕೋದ್ಯಮ ಮತ್ತು ಮಾಧ್ಯಮ ಶಿಕ್ಷಣ ಎಂಬ ಸ್ನಾತಕೋತ್ತರ ಕೋರ್ಸ್‌ಗಳನ್ನು ಹಾಗೂ ಕನ್ನಡ ಭಾಷೆ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಡಿಪ್ಲೋಮಾ ಕೋರ್ಸ್‌ಗಳನ್ನು ಜನಪ್ರಿಯಗೊಳಿಸಲಾಗಿದೆ. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ದಕ್ಷಿಣ ಏಷ್ಯಾ ಅಧ್ಯಯನ ವಿಭಾಗದ ಪ್ರೊ. ಡೇವಿಡ್ ವಾಶ್‌ಬ್ರೂಕ್ ಅವರು ದೂರಶಿಕ್ಷಣ ಕೇಂದ್ರದ ವತಿಯಿಂದ ದಕ್ಷಿಣ ಏಷ್ಯಾ ಅಧ್ಯಯನದ ಹೊಸ ಪ್ರವೃತ್ತಿಗಳು ಎಂಬ ವಿಶೇಷ ಉಪನ್ಯಾಸವನ್ನು ನೀಡಿದ್ದಾರೆ.

ಲೋಹಿಯಾ ಅಧ್ಯಯನ ಪೀಠದಿಂದ ಲೋಹಿಯಾವಾದಿ ಚಳುವಳಿಗಾರರ ಸಂದರ್ಶನ ಸಂಪುಟ, ಸಂಡೂರು ಭೂ ಹೋರಾಟ, ಹೆಬ್ಬಳ್ಳಿ ಭೂ ಹೋರಾಟ, ಲೋಹಿಯಾ ಜೀವನ ಮತ್ತು ಕಾರ್ಯ ಎಂಬ ಯೋಜನೆಗಳು ಪೂರ್ಣಗೊಂಡಿದ್ದು ಈ ವರ್ಷ ಅವು ಪ್ರಕಟಗೊಳ್ಳುತ್ತವೆ. ಜೈನಸಂಸ್ಕೃತಿ ಅಧ್ಯಯನ ಪೀಠವು ಮೂಡುಬಿದರೆಯಲ್ಲಿ ದಕ್ಷಿಣ ಭಾರತದಲ್ಲಿ ಜೈನಧರ್ಮ ಎಂಬ ರಾಷ್ಟ್ರೀಯ ವಿಚಾರ ಸಂಕಿರಣ ನಡೆಸಿದೆ. ಶಂಬಾ ಜೋಶಿ ಅಧ್ಯಯನ ಪೀಠದಿಂದ ಸಂಶೋಧನ ಕಮ್ಮಟವನ್ನು ನಡೆಸಲಾಗಿದೆ ಮತ್ತು ಅಧ್ಯಯನ ವಿಧಿವಿಧಾನಗಳು ಎಂಬ ಪುಸ್ತಕವನ್ನು ಪ್ರಕಟಣೆಗೆ ಸಿದ್ಧಪಡಿಸಲಾಗಿದೆ. ದಲಿತ ಸಂಸ್ಕೃತಿ ಅಧ್ಯಯನ ಪೀಠದಿಂದ ದಲಿತರು, ಭಾಷೆ ಮತ್ತು ಸಮಾಜ ಎಂಬ ವಿಚಾರ ಸಂಕಿರಣ (ಬೆಂಗಳೂರು)ವನ್ನು ನಡೆಸಲಾಗಿದೆ; ದಲಿತರು ಮತ್ತು ಪರ್ಯಾಯ ರಾಜಕಾರಣ ಎಂಬ ಗ್ರಂಥ ಪ್ರಕಟಿಸಲಾಗಿದೆ. ವಾಲ್ಮೀಕಿ ಅಧ್ಯಯನ ಪೀಠದಿಂದ ಕರ್ನಾಟಕದ ಬೇಡ ಸಮುದಾಯ: ಚರಿತ್ರೆ ಮತ್ತು ಸಂಸ್ಕೃತಿ ಎಂಬ ವಿಚಾರ ಸಂಕಿರಣ (ಕೂಡ್ಲಿಗಿ)ವನ್ನು ನಡೆಸಲಾಗಿದೆ. ಕರ್ನಾಟಕದಲ್ಲಿ ತಳವಾರಿಕೆ, ತರೀಕೆರೆ ಪಾಳೆಗಾರ ಸರ್ಜಪ್ಪನಾಯಕನ ಕಥನಕಾವ್ಯ, ಕಾಮಗೇತಿ ವಂಶಜರ ಚರಿತ್ರೆ, ವಾಲ್ಮೀಕಿ ಸಮುದಾಯದ ಪ್ರಾತಃಸ್ಮರಣೀಯರು ಎಂಬ ನಾಲ್ಕು ಗ್ರಂಥಗಳನ್ನು ಪ್ರಕಟಿಸಲಾಗಿದೆ.

ಕನ್ನಡ ಸಂಶೋಧನೆಗೆ ಸಂಬಂಧಿಸಿದಂತೆ ಸಿರಿಗನ್ನಡ ಗ್ರಂಥಾಲಯದಲ್ಲಿ ಆರಂಭಿಸಲಾದ ಸಂಶೋಧನಾ ಕರ್ನಾಟಕ ಪೂರ್ಣಗೊಂಡಿದ್ದು ರಾಜ್ಯ, ಹೊರರಾಜ್ಯಗಳ ಒಟ್ಟು ಐವತ್ತಾರು ವಿಶ್ವವಿದ್ಯಾಲಯಗಳಿಂದ ೬೭೦ ಸೂಕ್ಷ್ಮಾತಿ ಸೂಕ್ಷ್ಮ ಜ್ಞಾನಶಿಸ್ತುಗಳಿಗೆ ಸಂಬಂಧಿಸಿದ ೭೪೭೧ ಸಂಶೋಧನಾ ಮಾಹಿತಿಗಳನ್ನು ಕಂಪ್ಯೂಟರ್ ಜಾಲಕ್ಕೆ ಅಳವಡಿಸಲಾಗಿದೆ. ಕನ್ನಡ ಮತ್ತು ಕನ್ನಡತ್ವಕ್ಕೆ ಸಂಬಂಧಿಸಿದ ಈ ಮಾಹಿತಿಯನ್ನು ಹೊಸ ವರ್ಷದ ಆರಂಭದಲ್ಲಿ ಅಂತರ್‌ಜಾಲದಲ್ಲಿ ಸಂಶೋಧಕರ ಬಳಕೆಗೆ ತೆರೆಯಲಾಗುತ್ತದೆ. ವಿಶ್ವವಿದ್ಯಾಲಯದ ಮಾಹಿತಿ ಕೇಂದ್ರದಲ್ಲಿ ಕಳೆದ ವರ್ಷ ಆರಂಭಿಸಲಾದ ಕರ್ನಾಟಕದ ಕಲಾವಿದರು, ಕರ್ನಾಟಕದ ಬರಹಗಾರರು, ಕರ್ನಾಟಕದ ಜಲಸಂಪತ್ತು, ಕರ್ನಾಟಕದ ಪ್ರಾಣಿಪಕ್ಷಿಗಳು ಎನ್ನುವ ಯೋಜನೆಗಳು ಹೆಚ್ಚಿನ ಪ್ರಗತಿಯನ್ನು ಸಾಧಿಸಿದ್ದು, ಈ ಅಪೂರ್ವ ಮಾಹಿತಿಯನ್ನು ದತ್ತಕಣಜದಲ್ಲಿ ಸಂಗ್ರಹಿಸಿ ಇಡಲಾಗಿದೆ. ಮುಂದಿನ ವರ್ಷದಲ್ಲಿ ಇವನ್ನು ಅಂತರ್ಜಾಲದಲ್ಲಿ ಕನ್ನಡಿಗರಿಗೆ ಸಮರ್ಪಿಸುವ ಕಾರ್ಯ ನಡೆಯಲಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಘಟಕ ಮತ್ತು ಹಿಂದುಳಿದ ವರ್ಗಗಳ ಘಟಕಗಳು ಕ್ರಿಯಾತ್ಮಕವಾಗಿ ಕೆಲಸ ಮಾಡುತ್ತಿದ್ದು, ವಿದ್ಯಾರ್ಥಿಗಳಿಗೆ

ಶಿಷ್ಯವೇತನ ಮತ್ತು ಇತರ ಸೌಲಭ್ಯಗಳನ್ನು ಒದಗಿಸಲಾಗಿದೆ; ಅರಿವಿನ ಶಿಬಿರ ಮತ್ತು ಸಂವಾದ ಗೋಷ್ಠಿಗಳನ್ನು ನಡೆಸಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಘಟಕದಿಂದ ಲೋಕಸೇವಾ ಆಯೋಗ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗೆ ಪ.ಜಾ ಮತ್ತು ಪ.ಪಂ., ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ತರಬೇತಿ ಶಿಬರ ಏರ್ಪಡಿಸಲಾಗಿದೆ. ಇದರಲ್ಲಿ ಮೂವರು ವಿದ್ಯಾರ್ಥಿಗಳು ಮುಖ್ಯಪರೀಕ್ಷೆಯಲ್ಲಿ ಅರ್ಹತೆ ಪಡೆದಿದ್ದಾರೆ. ರಾಷ್ಟ್ರೀಯ ಮಟ್ಟದ ರಾಜೀವ್‌ಗಾಂಧಿ ಶಿಷ್ಯವೇತನವು ಪ.ಜಾ ಮತ್ತು ಪ.ಪಂ., ಹಿಂದುಳಿದವರ್ಗದ ಮೂವರು ವಿದ್ಯಾರ್ಥಿಗಳಿಗೆ ದೊರೆತಿದೆ. ಯುಜಿಸಿಯ ರಾಷ್ಟ್ರೀಯ ಅರ್ಹತಾ ಘಟಕವು ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿದ್ದು, ಮೂರು ತಂಡಗಳು ತರಬೇತಿ ಪಡೆದಿದ್ದು, ಒಂದು ತಂಡದ ತರಬೇತಿ ಈಗ ನಡೆಯುತ್ತಿದೆ. ಇಲ್ಲಿ ತರಬೇತಿಗೊಂಡ ವಿದ್ಯಾರ್ಥಿಗಳು ರಾಷ್ಟ್ರೀಯ ಅರ್ಹತಾ ಪರೀಕ್ಷೆಯಲ್ಲಿ ಶೇಕಡ. ೮೦ ರಷ್ಟು ಫಲಿತಾಂಶವನ್ನು ತಂದಿದ್ದಾರೆ. ಮತ್ತು ಇಬ್ಬರು ವಿದ್ಯಾರ್ಥಿಗಳು ಜೆ.ಆರ್.ಎಫ್. ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಶಿಷ್ಯವೇತನ ಪಡೆಯುತ್ತಿದ್ದಾರೆ. ಅಕ್ಷರ ಗ್ರಂಥಾಲಯದ ಸಂಪೂರ್ಣ ಗಣಕೀಕರಣ ಕಾರ್ಯ ಈ ವರ್ಷ ಪೂರ್ಣಗೊಳ್ಳುತ್ತದೆ. ವಸ್ತು ಸಂಗ್ರಹಾಲಯದ ವತಿಯಿಂದ ಕ್ಷೇತ್ರಕಾರ್ಯ, ದತ್ತಿ ಉಪನ್ಯಾಸವನ್ನು ನಡೆಸುತ್ತಿದೆ.

ನಮ್ಮ ಪ್ರಸಾರಾಂಗವು ಬೇರೆ ಬೇರೆ ವಿಷಯಗಳಿಗೆ ಸಂಬಂಧಿಸಿದಂತೆ ಒಟ್ಟು ೬೨ ಪುಸ್ತಕಗಳನ್ನು ಈ ವರ್ಷ ಪ್ರಕಟಿಸಿದೆ. ನಿನ್ನೆ ತಾನೇ ೩೨ ಪುಸ್ತಕಗಳು ಬಿಡುಗಡೆಯಾಗಿವೆ. ಈ ದಿನ ಬೆಳಿಗ್ಗೆ ಘನತೆವೆತ್ತ ರಾಜ್ಯಪಾಲರು ನಮ್ಮ ಪ್ರತಿಷ್ಠಿತ ಗ್ರಂಥವಾದ ಪ್ರಾಣಿಪಕ್ಷಿ ಸಂಪುಟವನ್ನು ಲೋಕಾರ್ಪಣೆ ಮಾಡಿದ್ದಾರೆ. ವಿಜ್ಞಾನ ಮತ್ತು ಸಮಾಜವಿಜ್ಞಾನಕ್ಕೆ ಸಂಬಂಧಪಟ್ಟ ಕನ್ನಡ ಮಾಧ್ಯಮದ ಪಠ್ಯಪುಸ್ತಕಗಳು, ಕನ್ನಡದ ಶ್ರೇಷ್ಠ ಆಕರಗ್ರಂಥಗಳಾದ ಜನಪದ ನುಡಿಗಟ್ಟುಗಳ ಕೋಶ, ಕರ್ನಾಟಕದ ನಾಥಪಂಥ, ಮೌಖಿಕ ಕಥನ, ಕೇರಳ ಕಥನ, ಹಂಪಿ ಸಂಪುಟ, ದಲಿತ ಕಥನ, ದಲಿತ ಅಧ್ಯಯನ, ದಲಿತರು ಮತ್ತು ಚರಿತ್ರೆ, ಕನ್ನಡ ಶೈಲಿ ಕೈಪಿಡಿ, ಗೋಣಿ ಬಸಪ್ಪನ ಕಾವ್ಯ, ಜೀರ್ಣ ವಿಜಯನಗರ ದರ್ಶನಂ ಎಂಬ ಮಹತ್ವಪೂರ್ಣ ಗ್ರಂಥಗಳು ಹೊರಬಂದಿವೆ. ವಿಜ್ಞಾನ ಸಂಗಾತಿ ಮಾಸಪತ್ರಿಕೆಯು ಹೊಸರೂಪ ಮತ್ತು ವೈವಿಧ್ಯಮಯ ವಿಷಯಗಳೊಂದಿಗೆ ಮತ್ತೆ ಪ್ರಕಟವಾಗಿ ಓದುಗರ ಮೆಚ್ಚುಗೆಯನ್ನು ಗಳಿಸಿದೆ.

ಸುವರ್ಣ ಕರ್ನಾಟಕದ ಅಂಗವಾಗಿ ಕರ್ನಾಟಕ ಗೆಜೆಟಿಯರ್ ಇಲಾಖೆಯ ನೆರವಿನಲ್ಲಿ ಸುವರ್ಣ ಕರ್ನಾಟಕ ಸಾಹಿತ್ಯ-ಸಂಸ್ಕೃತಿ ಪಥ, ಅಭಿವೃದ್ಧಿ ಪಥ, ಬೃಹತ್ ಕರ್ನಾಟಕ ಎಂಬ ಮೂರು ಬೃಹತ್ ಸಂಪುಟಗಳ ಕಾರ್ಯ ಮುಗಿದಿದ್ದು, ಮುದ್ರಣ ಪ್ರಕ್ರಿಯೆಯಲ್ಲಿವೆ. ಸಮಗ್ರ ಜೈನ ಸಾಹಿತ್ಯ ಮಾಲೆಯ ಇಪ್ಪತ್ತು ಬೃಹತ್ ಸಂಪುಟಗಳ ಸಂಪಾದನೆ ಮತ್ತು ಮುದ್ರಣಕಾರ್ಯ ಮುಗಿದಿದ್ದು, ಲೋಕಾರ್ಪಣೆಗೆ ಸಿದ್ಧವಾಗಿವೆ. ಸುವರ್ಣ ಕರ್ನಾಟಕದ ನೆನಪಿಗಾಗಿ ಕನ್ನಡವನ್ನು ಕಟ್ಟಿದ ಹಿರಿಯ ಸಾಹಿತಿಗಳ ಹೊಸ ಪುಸ್ತಕಗಳ ಪ್ರಕಟಣೆ ಹೊನ್ನಾರು ಮಾಲೆಯಲ್ಲಿ ೪೦ ಪುಸ್ತಕಗಳನ್ನು ಹೊರತರಲು ಯೋಜಿಸಲಾಗಿದ್ದು, ೧೦ ಹಸ್ತಪ್ರತಿಗಳು ಮುದ್ರಣ ಹಂತದಲ್ಲಿವೆ. ಸುವರ್ಣ ಕರ್ನಾಟಕದ ಅರಿವಿನಂಗಣ ಮಾಲೆಯಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದ ೧೦ ಹಸ್ತಪ್ರತಿಗಳು ಪ್ರಕಟನೆಗೆ ಸಿದ್ಧವಾಗುತ್ತಿವೆ. ಈ ವರ್ಷ ಪ್ರಸಾರಾಂಗವು ಪುಸ್ತಕ ಸಂಸ್ಕೃತಿ ಯಾತ್ರೆಯ ಮೂಲಕ ೩೦ ಲಕ್ಷ ರೂಪಾಯಿಗಳ ಮಾರಾಟವನ್ನು ಮಾಡಿ ದಾಖಲೆಯನ್ನು ನಿರ್ಮಿಸಿದೆ. ಮುಂದಿನ ಪ್ರಕಟಣೆಯಲ್ಲಿ ಭಾಷೆ ವಿಶ್ವಕೋಶ, ತುಳು ಸಾಹಿತ್ಯ ಚರಿತ್ರೆ, ಪರಿಸರ ಕೋಶ, ಶಾಸನ ಸಂಪುಟಗಳು, ದೇವಾಲಯ ಕೋಶಗಳು, ಹಸ್ತಪ್ರತಿಸೂಚಿಗಳು, ಮಹಿಳಾ ವಿಶ್ವಕೋಶ, ದೇಜಗೌ ಅವರ ಕುವೆಂಪು ದರ್ಶನ, ಸಿಂಪಿ ಲಿಂಗಣ್ಣ ಅವರ ಜನಪದ ಸಾಹಿತ್ಯ ಸಂಪುಟಗಳು ಸಿದ್ಧಗೊಂಡು ಹೊರಬರಲಿವೆ.

ಆಧುನಿಕ ತಂತ್ರಜ್ಞಾನದ ಯುಗದಲ್ಲಿ ಕನ್ನಡವನ್ನು ಸಮರ್ಥವಾಗಿ ಬಳಸುವ ದೃಷ್ಟಿಯಿಂದ ಕಳೆದ ಒಂದು ವರ್ಷದಿಂದ ಕುವೆಂಪು ತಂತ್ರಾಂಶ ಅಭಿವೃದ್ಧಿ ಕಾರ್ಯ ಸಮರ್ಪಕವಾಗಿ ನಡೆದಿದ್ದು ಇನ್ನೊಂದು ತಿಂಗಳಲ್ಲಿ ಇದನ್ನು ಸಾರ್ವಜನಿಕ ಉಪಯೋಗಕ್ಕೆ ತೆರೆದಿಡಲಾಗವುದು. ಅಕ್ಷರ ವಿನ್ಯಾಸದ ವೈವಿಧ್ಯ, ಕೀಲಿಮಣೆಯ ಸಾಧ್ಯತೆಗಳು, ತಂತ್ರಾಂಶಗಳ ನಡುವಿನ ಪರಿವರ್ತಕಗಳು, ಅಂಚಿನ ವಿನ್ಯಾಸದ ಹೊಸ ರೂಪಗಳು ಈ ತಂತ್ರಾಂಶದಲ್ಲಿ ಲಭ್ಯವಾಗಲಿವೆ.

ಕನ್ನಡ ವಿಶ್ವವಿದ್ಯಾಲಯವು ದಕ್ಷಿಣ ಏಷ್ಯಾ ಭಾಷಾ ವಿಶ್ಲೇಷಣೆ (SALA) ಎನ್ನುವ ಸಂಸ್ಥೆಯ ೨೬ನೇ ಅಂತಾರಾಷ್ಟ್ರೀಯ ಭಾಷಾ ಸಮ್ಮೇಳನವನ್ನು ಮೈಸೂರಿನ ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆಯ ಸಹಯೋಗದಲ್ಲಿ ಮೈಸೂರಿನಲ್ಲಿ ಇದೇ ಡಿಸೆಂಬರ್ ೧೯, ೨೦, ೨೧ ರಂದು ನಡೆಸಲಿದೆ. ಇದರಲ್ಲಿ ಭಾರತದ ಭಾಷಾತಜ್ಞರ ಜೊತೆಗೆ ಸುಮಾರು ೧೫ಕ್ಕೂ ಹೆಚ್ಚಿನ ಬೇರೆ ಬೇರೆ ದೇಶಗಳ ವಿದ್ವಾಂಸರು ಭಾಗವಹಿಸುತ್ತಿದ್ದಾರೆ. ಬರುವ ಜನವರಿ ೧೯, ೨೦, ೨೧ ರಂದು ಭವಿಷ್ಯದ ಸುವರ್ಣ ಕರ್ನಾಟಕ ಎನ್ನುವ ಮೂರು ದಿನಗಳ ರಾಷ್ಟ್ರೀಯ ಅಭಿವೃದ್ಧಿ ಸಂವಾದವನ್ನು ಅಭಿವೃದ್ಧಿ ಅಧ್ಯಯನ ವಿಭಾಗದಿಂದ ಹಮ್ಮಿಕೊಳ್ಳಲಾಗಿದೆ. ಪೆಬ್ರವರಿ ಕೊನೆಯ ವಾರದಲ್ಲಿ 'ಸಾಂವಿಧಾನಿಕ ಚೌಕಟ್ಟು ಮತ್ತು ದಲಿತ ಆಂದೋಲನ' ಎಂಬ ರಾಷ್ಟ್ರೀಯ ವಿಚಾರಸಂಕಿರಣವನ್ನು ನಡೆಸಲಾಗುವುದು. ಗ್ರಾಮೀನ ಜನರ ಸಹಭಾಗಿತ್ವದೊಂದಿಗೆ ಜನಾಯೋಜನೆ ರೂಪಿಸುವ ಮಾದರಿಯನ್ನು ಅಭಿವೃದ್ಧಿ ಅಧ್ಯಯನ ವಿಭಾಗ ಸಿದ್ಧಪಡಿಸಿದ್ದು, ಈ ಮಾದರಿಯನ್ನು ಕರ್ನಾಟಕ ಸರ್ಕಾರದ ಗ್ರಾಮೀನ ಉದ್ಯೋಗ ಖಾತರಿ ಕಾರ್ಯಕ್ರಮ ಮತ್ತು ಪಂಚಾಯಿತಿಗಳಿಗೆ ಯೋಜನೆ ಸಿದ್ಧಪಡಿಸಲು ಬಳಸಲಾಗುತ್ತಿದೆ. ಬರುವ ಜನವರಿ ೨ನೇ ವಾರದಲ್ಲಿ ದ್ರಾವಿಡ ಸಂಸ್ಕೃತಿ ಅಧ್ಯಯನದ ವಿಭಾಗದ ಮೂಲಕ ದಕ್ಷಿಣ ಭಾರತದ ಜನಪದ ರಂಗಭೂಮಿ ಎನ್ನುವ ರಾಷ್ಟ್ರೀಯ ವಿಚಾರಸಂಕಿರಣ ಮತ್ತು ಕಲಾಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿದೆ.

ಕನ್ನಡ ವಿಶ್ವವಿದ್ಯಾಲಯದ ಅಧ್ಯಾಪಕರು ತಮ್ಮ ಸಂಶೋಧನೆ, ಪ್ರಕಟಣೆ ಮತ್ತು ಸಾಹಿತ್ಯ ನಿರ್ಮಾಣದ ಮೂಲಕ ಬೌದ್ಧಿಕವಾಗಿ ಮನ್ನಣೆಯನ್ನು ಪಡೆದಿದ್ದಾರೆ. ಪ್ರೊ. ಲಕ್ಷ್ಮಣ್ ತೆಲಗಾವಿ ಅವರಿಗೆ ಭಾರತ ದಲಿತ ಸಾಹಿತ್ಯ ಅಕಾಡೆಮಿಯ ಡಾ. ಅಂಬೇಡ್ಕರ್ ರಾಷ್ಟ್ರೀಯ ಪ್ರಶಸ್ತಿ, ಡಾ. ಎಚ್. ನಾಗವೇಣಿ ಅವರಿಗೆ ಭಾರತೀಸುತ ಕಥಾ ಪ್ರಶಸ್ತಿ ಮತ್ತು ಯು.ಆರ್. ಅನಂತಮೂರ್ತಿ ಸಾಹಿತ್ಯ ಪ್ರಶಸ್ತಿ, ಪ್ರೊ. ವಿ.ಎಸ್. ಬಡಿಗೇರ ಅವರಿಗೆ ಉತ್ತರ ಕರ್ನಾಟಕದ ಶ್ರೇಷ್ಠ ಯುವಸಾಹಿತಿ ಪ್ರಶಸ್ತಿ, ಪ್ರೊ. ಎಫ್.ಟಿ. ಹಳ್ಳಿಕೇರಿ ಅವರಿಗೆ ಕಂಠಪತ್ರ ಕೃತಿಗೆ ಗುಲ್ಬರ್ಗಾ ವಿಶ್ವವಿದ್ಯಾಲಯದ ರಾಜ್ಯೋತ್ಸವ ಪುಸ್ತಕ ಪ್ರಶಸ್ತಿ ದೊರೆತಿವೆ. ಡಾ. ಮೊಗಳ್ಳಿ ಗಣೇಶ್ ಅವರು ಸಾಹಿತ್ಯ ಅಕಾಡೆಮಿ ನವದೆಹಲಿಯ ಯೋಜನೆಯಡಿ ಅಕ್ಟೋಬರ್ ೨೦೦೬ ರಂದು ಜರ್ಮನಿಯಲ್ಲಿ ನಡೆದ ಅಂತಾರಾಷ್ಟ್ರೀಯ ಲೇಖಕರ ಮೇಳ, ಫ್ರಾಂಕ್‌ಫರ್ಟ್ ಪುಸ್ತಕ ಮೇಳದಲ್ಲಿ ಲೇಖಕರಾಗಿ ಭಾರತವನ್ನು ಪ್ರತಿನಿಧಿಸಿದ್ದಾರೆ. ಅವರು ಒಂದು ತಿಂಗಳ ಅವಧಿಯಲ್ಲಿ ಸಾಹಿತ್ಯ, ಸಂಸ್ಕೃತಿ, ಚರಿತ್ರೆಗೆ ಸಂಬಂಧಿಸಿದ ಪ್ರಬಂಧಗಳನ್ನು ಮಂಡಿಸಿದ್ದಾರೆ. ಪ್ರೊ. ಕರೀಗೌಡ ಬೀಚನಹಳ್ಳಿ ಅವರನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರನ್ನಾಗಿ ಕರ್ನಾಟಕ ಸರ್ಕಾರವು ನಾಮನಿರ್ದೇಶನ ಮಾಡಿದೆ.

ದಕ್ಷಿಣ ಭಾರತದ ಭಾಷಾ ವಿಶ್ವವಿದ್ಯಾಲಯಗಳಾದ ಕನ್ನಡ ವಿಶ್ವವಿದ್ಯಾಲಯ, ತಮಿಳು ವಿಶ್ವವಿದ್ಯಾಲಯ, ತೆಲುಗು ವಿಶ್ವವಿದ್ಯಾಲಯ, ಕುಪ್ಪಂನ ದ್ರಾವಿಡ ವಿಶ್ವವಿದ್ಯಾಲಯ ಇವು ನಮ್ಮ ಸಹಯೋಗದ ಕಾರ್ಯಕ್ರಮಗಳನ್ನು ಮುಂದುವರಿಸಿದ್ದು, ಕಳೆದ ಸೆಪ್ಟೆಂಬರ್‌ನಲ್ಲಿ ಹೈದರಾಬಾದ್‌ನಲ್ಲಿ ಸಭೆ ಸೇರಿ ತಮ್ಮ ಮುಂದಿನ ಕಾರ್ಯಯೋಜನೆಯನ್ನು ರೂಪಿಸಲಾಗಿದೆ.

ಕನ್ನಡ ವಿಶ್ವವಿದ್ಯಾಲಯದ ಹತ್ತು ಮಂದಿ ಅಧ್ಯಾಪಕರಿಗೆ ಯು.ಜಿ.ಸಿಯ ಬೃಹತ್ ಸಂಶೋಧನ ಯೋಜನೆಗಳು ಮತ್ತು ಮೂವರು ಅಧ್ಯಾಪಕರಿಗೆ ಯು.ಜಿ.ಸಿ. ಕಿರು ಸಂಶೋಧನ ಯೋಜನೆಗಳು ಈ ವರ್ಷ ದೊರೆತಿರುವುದು ವಿಶ್ವವಿದ್ಯಾಲಯಕ್ಕೆ ಹೆಮ್ಮೆಯ ಸಂಗತಿಯಾಗಿದೆ. ಪ್ರೊ. ಹಿ.ಚಿ. ಬೋರಲಿಂಗಯ್ಯ ಪ್ರೊ. ರಹಮತ್ ತರೀಕೆರೆ, ಪ್ರೊ. ಎಚ್.ಎಸ್. ಶ್ರೀಮತಿ, ಪ್ರೊ. ಸ.ಚಿ.ರಮೇಶ್, ಪ್ರೊ. ಎಫ್.ಟಿ.ಹಳ್ಳಿಕೇರಿ, ಪ್ರೊ. ಟಿ. ವಿಠಲರಾವ್ ಗಾಯಕ್ವಾಡ್, ಡಾ. ಶಿವಾನಂದ ವಿರಕ್ತಮಠ, ಡಾ.ಕೆ. ರವೀಂದ್ರನಾಥ, ಡಾ. ಎಸ್.ಡಿ.ಹರಿಶ್ಚಂದ್ರ, ಡಾ. ಗಂಗಾಧರ ದೈವಜ್ಞ ಇವರಿಗೆ ಬೃಹತ್ ಸಂಶೋಧನ ಯೋಜನೆಗಳು ಮತ್ತು ಡಾ. ಎಚ್.ಡಿ. ಪ್ರಶಾಂತ್, ಡಾ. ವೆಂಕಟೇಶ ಇಂದ್ವಾಡಿ, ಡಾ. ಡಿ.ವಿ. ಪರಮಶಿವಮೂರ್ತಿ ಇವರಿಗೆ ಕಿರುಸಂಶೋಧನೆ ಯೋಜನೆಗಳು ಯು.ಜಿ.ಸಿ.ಯಿಂದ ದೊರೆತಿವೆ. ಕರ್ನಾಟಕ ರಾಜ್ಯದಲ್ಲಿ ಅಧ್ಯಾಪಕರಿಗೆ ಇಷ್ಟು ಹೆಚ್ಚಿನ ಪ್ರಮಾಣದಲ್ಲಿ ಸಂಶೋಧನ ಯೋಜನೆಗಳು ದೊರೆತಿರುವುದು ಒಂದು ದಾಖಲೆಯಾಗಿದೆ ಎಂದು ತಿಳಿಸಲು ಅಭಿಮಾನಪಡುತ್ತೇವೆ. ಯು.ಜಿ.ಸಿ.ಯು ನಮ್ಮ ವಿಶ್ವವಿದ್ಯಾಲಯದಲ್ಲಿ ಸಮಗ್ರ ಸೌಲಭ್ಯಗಳುಳ್ಳ ಸುಸಜ್ಜಿತ ಕಂಪ್ಯೂಟರ್ ಕೇಂದ್ರವೊಂದನ್ನು ಸ್ಥಾಪಿಸಲು ಅನುದಾನವನ್ನು ಕೊಡುವ ಪ್ರಸ್ತಾವ ಅನುಮೋದನೆ ಗೊಂಡಿದೆ.

ಕನ್ನಡ ವಿಶ್ವವಿದ್ಯಾಲಯದ ವಿದ್ಯಾರಣ್ಯ ಆವರಣದಲ್ಲಿ ಭೌತಿಕ ಸೌಕರ್ಯಗಳನ್ನು ಈ ವರ್ಷ ಇನ್ನಷ್ಟು ವಿಸ್ತರಿಸಲಾಗಿದೆ. ಯು.ಜಿ.ಸಿ. ಅನುದಾನದಿಂದ ನಿರ್ಮಿಸಲಾದ ವಿದ್ಯಾರ್ಥಿನಿಯರ ನಿಲಯದ ಹೊಸ ಕಟ್ಟಡ ಪೂರ್ಣಗೊಂಡಿದೆ. ಯು.ಜಿ.ಸಿ. ಅನುದಾನ ರೂ. ೪೯ ಲಕ್ಷ ವೆಚ್ಚದಲ್ಲಿ ನಿರ್ಮಿಸಲಾದ ವಿದ್ಯಾರ್ಥಿ ನಿಲಯದ ಹೊಸ ಕಟ್ಟಡವನ್ನು ಈ ದಿನ ಘನತೆವೆತ್ತ ರಾಜ್ಯಪಾಲರು ಉದ್ಘಾಟಿಸಿದ್ದಾರೆ. ಕಂಪ್ಯೂಟರ್ ಕೇಂದ್ರ, ಸಂಶೋಧಕರ ವಸತಿ ಗೃಹ, ಚರಿತ್ರೆ ವಿಭಾಗ, ಅಭಿವೃದ್ಧಿ ಅಧ್ಯಯನ ವಿಭಾಗ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿ ನಿಲಯ ಹಾಗೂ ಆಡಳಿತ ಸಿಬ್ಬಂದಿ ವಸತಿ ಗೃಹ ಕಟ್ಟಡಗಳ ನಿರ್ಮಾಣದ ಕೆಲಸಗಳು ಪ್ರಗತಿಯಲ್ಲಿವೆ. ರಸ್ತೆಗಳ ಡಾಂಬರೀಕರಣದ ಕೆಲಸ ನಡೆದಿದ್ದು ಮುಂದಿನ ವರ್ಷ ಇನ್ನಷ್ಟು ರಸ್ತೆಗಳನ್ನು ಸುಸಜ್ಜಿತಗೊಳಿಸಲಾಗುತ್ತದೆ. ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ನಿಧಿಯಿಂದ ೨೦ ಲಕ್ಷಗಳ ಅನುದಾನದಡಿಯಲ್ಲಿ ಹೊಸ ರಸ್ತೆಗಳಿಗೆ ಬೀದಿ ದೀಪಗಳನ್ನು ಅಳವಡಿಸುವ ಕಾರ್ಯ ಪೂರ್ಣಗೊಂಡಿದೆ. ವಿಶ್ವವಿದ್ಯಾಲಯದ ಆವರಣದಲ್ಲಿ ಸುಮಾರು ಎರಡು ಸಾವಿರ ಹಣ್ಣಿನ ಗಿಡಗಳನ್ನು ಮತ್ತು ತೇಗದ ಗಿಡಗಳನ್ನು ನೆಡಲಾಗಿದ್ದು, 'ಚಿನ್ನದ ಬೆಳಸು' ಎಂಬ ಹಣ್ಣಿನ ತೋಟವೊಂದು ತೆರೆದುಕೊಂಡಿದೆ.

ಕನ್ನಡನಾಡು ಒಂದಾಗಿ ಐವತ್ತು ತುಂಬಿದ ಈ ಉತ್ಸಾಹದ ಸಂದರ್ಭದಲ್ಲಿ ೧೫ ವಸಂತಗಳನ್ನು ಕಂಡ ಕನ್ನಡ ವಿಶ್ವವಿದ್ಯಾಲಯ ನಾಡಿನ ಸಾಂಸ್ಕೃತಿಕ. ಬೌದ್ಧಿಕ ಕೇಂದ್ರವಾಗಿ ರೂಪಿತವಾಗಿದ್ದು, ಜನಮುಖಿಯಾಗಿ ತನ್ನ ಶರೀರವಚನ್ನು ಕನ್ನಡ ನಾಡಿನಾದ್ಯಂತ ಚಾಚಿಕೊಂಡಿದೆ. ಒಂದು ಕಾಲಕ್ಕೆ ಇದ್ದ ನಾಡು ಇನ್ನೊಂದು ಕಾಲಕ್ಕೆ ಬೇರೆಯೇ ನಾಡಾಗುತ್ತದೆ. ಒಂದು ಕಾಲಕ್ಕೆ ಇದ್ದ ಸಂಸ್ಕೃತಿ ಇನ್ನೊಂದು ಕಾಲಕ್ಕೆ ಬೇರೆಯೇ ಆದ ಇನ್ನೊಂದು ಸಂಸ್ಕೃತಿಯಾಗುತ್ತದೆ. ಈ ರೂಪಾಂತರ ಪ್ರಕ್ರಿಯೆಯ ಹಿಂದೆ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಒತ್ತಾಸೆಗಳಿರುತ್ತವೆ. ಇಂದು ಕನ್ನಡ ನಾಡು, ನುಡಿ, ಬದುಕಿನ ಬಗ್ಗೆ ಆತಂಕ, ತಲ್ಲಣ, ಸಂಭ್ರಮ ಎಲ್ಲವೂ ಏಕಕಾಲಕ್ಕೆ ಕಾಣಿಸಿಕೊಳ್ಳುತ್ತವೆ. ಜಾಗತೀಕರಣದ ಮತ್ತು ಆಧುನೀಕರಣದ ಒತ್ತಾಸೆಯ ಪ್ರಕ್ರಿಯೆಯಲ್ಲಿ ಒಳಗಿನಿಂದ ಮತ್ತು ಹೊರಗಿನಿಂದ ಪ್ರಯೋಗವಾಗುವ ಒತ್ತಡಗಳು ಮತ್ತು ಶಕ್ತಿಗಳು ಹೇಗಿರಬೇಕು ಮತ್ತು ಹೇಗಿರಬಾರದು ಎನ್ನುವ ಚಿಂತನೆ ಮತ್ತು ಆಚರಣೆ ಸುವರ್ಣ ಕರ್ನಾಟಕದ ಸಂದರ್ಭದಲ್ಲಿ ನಮಗೆ ತೀರ ಅಗತ್ಯವಾದದ್ದು. ಕನ್ನಡ ವಿಶ್ವವಿದ್ಯಾಲಯವು ಅರಿವು ಮತ್ತು ಆಚರಣೆಗಳ, ತಲ್ಲಣ ಮತ್ತು ಸಂಭ್ರಮಗಳ ಪರಂಪರೆ ಮತ್ತು ಆಧುನಿಕತೆಗಳ ಮುಖಾಮುಖಿಯನ್ನು ನಡೆಸುವ ಮುಲಕವೇ ಕನ್ನಡವನ್ನು ಮತ್ತು ಕನ್ನಡಿಗರನ್ನು ಆತ್ಮವಿಶ್ವಾಸದ ಮೂಲಕ ಬೆಳೆಸಲು ಅವಕಾಶ ಕಲ್ಪಿಸಿಕೊಡುವ ಸವಾಲನ್ನು ಸ್ವೀಕರಿಸಿತು. ಕನ್ನಡ ಮಾತೆಯನ್ನು ಭಾರತ ಜನನಿಯ ತನುಜಾತೆ ಎನ್ನುವ ತತ್ತ್ವವನ್ನು ಒಪ್ಪಿಕೊಳ್ಳುವುದರ ಜೊತೆಗೆ, ಕನ್ನಡನಾಡೇ ನಮ್ಮ ದೇಶ ಮತ್ತು ನಮ್ಮ ಜಗತ್ತು ಎನ್ನುವ ಮಟ್ಟದಲ್ಲಿ ಅದನ್ನು ಕಟ್ಟಲು ತಮ್ಮೆಲ್ಲರ ಮಾರ್ಗದರ್ಶನ ಮತ್ತು ಸಹಕಾರವನ್ನು ಕೋರುತ್ತೇನೆ.

೪ ಡಿಸೆಂಬರ್ ೨೦೦೬

# ೧೩. ಕನ್ನಡವೆಂಬ ಸತ್ಯ

ಕರ್ನಾಟಕ ರಾಜ್ಯದ ಘನತೆವೆತ್ತ ರಾಜ್ಯಪಾಲರೂ ಕನ್ನಡ ವಿಶ್ವವಿದ್ಯಾಲಯ ಹಂಪಿಯ ಗೌರವಾನ್ವಿತ ಕುಲಾಧಿಪತಿಗಳೂ ಆಗಿರುವ ಸನ್ಮಾನ್ಯ ಶ್ರೀ ರಾಮೇಶ್ವರ ಠಾಕೂರ್ ಅವರೇ, ಕರ್ನಾಟಕದ ಮಾಜಿ ಮುಖ್ಯಮಂತ್ರಿಗಳೂ ಪ್ರಖ್ಯಾತ ಬರಹಗಾರರೂ ಹಾಗೂ ಭಾರತ ಸರ್ಕಾರದ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾಗಿರುವ ಸನ್ಮಾನ್ಯ ಶ್ರೀ ಎಂ.ವೀರಪ್ಪ ಮೊಯಿಲಿ ಅವರೇ, ನಮ್ಮ ಈ ಪ್ರತಿಷ್ಠಿತ ನುಡಿಹಬ್ಬದಲ್ಲಿ ನಾಡೋಜ ಗೌರವ ಪದವಿಗಳನ್ನು ಸ್ವೀಕರಿಸಲು ಒಪ್ಪಿಕೊಂಡು ದಯಮಾಡಿಸಿರುವ ಸನ್ಮಾನ್ಯ ಶ್ರೀ ಶಾಂತರಸ ಹೆಂಬೇರಾಳು ಅವರೇ, ಗೌರವಾನ್ವಿತ ನ್ಯಾಯಮೂರ್ತಿ ಎಸ್.ಆರ್.ನಾಯಕ ಅವರೇ, ಕನ್ನಡದ ಪ್ರಖ್ಯಾತ ದಲಿತ ಕವಿ ಡಾ. ಸಿದ್ಧಲಿಂಗಯ್ಯ ಅವರೇ ಹಾಗೂ ದೇಸಿ ಸಂಸ್ಕೃತಿಯ ಸಾಕ್ಷಿ ಪ್ರಜ್ಞೆಯಂತಿರುವ ಶ್ರೀಮತಿ ಸುಕ್ರಿ ಬೊಮ್ಮಗೌಡ ಅವರೇ, ಕನ್ನಡ ವಿಶ್ವವಿದ್ಯಾಲಯದ ವಿವಿಧ ಸಮಿತಿಯ ಎಲ್ಲ ಸದಸ್ಯರೇ,

ವಿವಿಧ ಮಾಧ್ಯಮದವರೇ, ಹೊರಗಿನಿಂದ ಬಂದಿರುವ ಎಲ್ಲ ಜನಪ್ರತಿನಿಧಿಗಳೇ, ಕನ್ನಡ ವಿಶ್ವವಿದ್ಯಾಲಯದ ಎಲ್ಲ ಸಹೋದ್ಯೋಗಿ ಬಂಧುಗಳೇ, ಆಹ್ವಾನಿತರೆ ಮತ್ತು ಸಭಿಕರೇ,

ಕನ್ನಡ ವಿಶ್ವವಿದ್ಯಾಲಯದ ೧೯ನೇ ನುಡಿಹಬ್ಬಕ್ಕೆ ತಮ್ಮೆಲ್ಲರನ್ನೂ ಪ್ರೀತಿ ವಿಶ್ವಾಸದಿಂದ, ತುಂಬು ಗೌರವದಿಂದ ಸ್ವಾಗತಿಸಲು ಇಷ್ಟಪಡುತ್ತೇನೆ. ಭಾರತದ ಪ್ರತಿಷ್ಠಿತ ವ್ಯಕ್ತಿಗಳಲ್ಲಿ ಒಬ್ಬರಾಗಿರುವ ಘನತೆವೆತ್ತ ರಾಜ್ಯಪಾಲರು ನುಡಿಹಬ್ಬದ ಅಧ್ಯಕ್ಷತೆಯನ್ನು ವಹಿಸಿಕೊಂಡು ನಾಲ್ಕು ಜನ ಹಿರಿಯರಿಗೆ ನಾಡೋಜ ಗೌರವ ಪದವಿ ಹಾಗೂ ಅರ್ಹ ಅಭ್ಯರ್ಥಿಗಳಿಗೆ ಡಿ.ಲಿಟ್ ಮತ್ತು ಪಿಎಚ್.ಡಿ. ಪದವಿಗಳನ್ನು ನೀಡಲು ಒಪ್ಪಿ ಆಗಮಿಸಿದ್ದಾರೆ. ಸಾಹಿತ್ಯ ಮತ್ತು ಸಂಸ್ಕೃತಿ ಪ್ರೇಮಿಗಳೂ ಸಮಾಜವಾದದ ಪ್ರತಿಪಾದಕರೂ ಆದ ಸನ್ಮಾನ್ಯ ಕುಲಾಧಿಪತಿಗಳ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯವು ಸುಗಮವಾಗಿ ಮುನ್ನಡೆಯುತ್ತಿದೆ. ದೇಸಿ ಭಾಷೆಗಳ ಬಗ್ಗೆ ಅಪಾರ ಪ್ರೀತಿಯಿಟ್ಟುಕೊಂಡಿರುವ ಘನತೆವೆತ್ತ ಕುಲಾಧಿಪತಿಗಳು ಕನ್ನಡ ವಿಶ್ವವಿದ್ಯಾಲಯವನ್ನು ಪ್ರೀತಿಯಿಂದ ಹರಸುತ್ತಾರೆಂಬ ನಂಬಿಕೆ ನನಗಿದೆ. ಅವರನ್ನು ಕನ್ನಡ ವಿಶ್ವವಿದ್ಯಾಲಯದ ಪರವಾಗಿ ಗೌರವಪೂರ್ವಕವಾಗಿ ಸ್ವಾಗತಿಸುತ್ತೇನೆ.

ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆಗೆ ಕಾರಣರಾದ ಸನ್ಮಾನ್ಯ ಶ್ರೀ ಎಂ.ವೀರಪ್ಪ ಮೊಯಿಲಿ ಅವರು ನಾಡಿನ ಬಹು ದೊಡ್ಡ ಚಿಂತಕರೂ ಹೌದು. ಕನ್ನಡ ಸಾಹಿತ್ಯದ ಹಲವು ಕಾರ್ಯಗಳನ್ನು ತಮ್ಮ ಸೃಜನಶೀಲತೆಯ ಮೂಲಕ ಸಮೃದ್ಧಗೊಳಿಸಿರುವ ವೀರಪ್ಪ ಮೊಯಿಲಿ ಅವರು ಭಾರತ ಸರ್ಕಾರದ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾಗಿ ಅತ್ಯಂತ ಕ್ರಾಂತಿಕಾರಕವಾದ ಅಭಿವೃದ್ಧಿಪರ ಸಲಹೆಗಳನ್ನು ದೇಶಕ್ಕೆ ನೀಡುತ್ತಿದ್ದಾರೆ. ಇಂಥ ಮೇಧಾವಿಗಳು ಕನ್ನಡ ವಿಶ್ವವಿದ್ಯಾಲಯದ ೧೯ನೆಯ ನುಡಿಹಬ್ಬದ ಮುಖ್ಯ ಅತಿಥಿಗಳಾಗಿ ಆಗಮಿಸಿ ನುಡಿಹಬ್ಬದ ಭಾಷಣವನ್ನು ನೀಡುತ್ತಿರುವುದು ನಮ್ಮೆಲ್ಲರ ಸುದೈವ ಎಂದು ಭಾವಿಸುತ್ತೇನೆ. ಅವರನ್ನು ಅತ್ಯಂತ ಹೃದಯಪೂರ್ವಕವಾಗಿ ತಮ್ಮೆಲ್ಲರ ಪರವಾಗಿ ಸ್ವಾಗತಿಸುತ್ತೇನೆ.

ನಾಡೋಜ ಪದವಿಯನ್ನು ಸ್ವೀಕರಿಸಲು ಬಂದಿರುವ ಈ ನಾಲ್ಕು ಜನ ಗಣ್ಯ ವ್ಯಕ್ತಿಗಳು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಅಪಾರವಾದ ಸಾಧನೆಯನ್ನು ಮಾಡಿದವರು. ಹಿರಿಯರಾದ ಶ್ರೀ ಶಾಂತರಸ ಹೆಂಬೇರಾಳು ಅವರು ಕಾವ್ಯ, ಕಥೆ, ಕಾದಂಬರಿ, ಸಂಶೋಧನೆ ಮತ್ತು ಅನುವಾದ ಕ್ಷೇತ್ರಗಳಲ್ಲಿ ಅಪಾರವಾದ ಕೃಷಿ ಮಾಡಿದವರು. ಮೌಖಿಕ ಜ್ಞಾನ ಪರಂಪರೆ ಮತ್ತು ಜನ ಸಾಮಾನ್ಯರ ಪರಿಸರಗಳನ್ನು ಮೈಗೂಡಿಸಿಕಿಂಡು ಬೆಳೆದವರು. ಇಂಥ ಒಬ್ಬ ಹಿರಿಯ ಲೇಖಕರು ಕನ್ನಡ ವಿಶ್ವವಿದ್ಯಾಲಯದ ಪ್ರತಿಷ್ಠಿತ ನಾಡೋಜ ಪದವಿಯನ್ನು ಸ್ವೀಕರಿಸಲು ಇಂದು ಆಗಮಿಸಿದ್ದಾರೆ. ಅವರಿಗೆ ಕನ್ನಡ ವಿಶ್ವವಿದ್ಯಾಲಯದ ಪರವಾಗಿ ತುಂಬು ಹೃದಯದ ಸ್ವಾಗತವನ್ನು ಕೋರುತ್ತೇನೆ.

ಗೌರವಾನ್ವಿತ ನ್ಯಾಯಮೂರ್ತಿ ಸುಬ್ರಾಯ ರಾಮನಾಯಕ ಅವರು ಅತ್ಯಂತ ಹಿಂದುಳಿದ ಮತ್ತು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರಾಗಿ ಬಡತನದ ಬೇಗೆಯಲ್ಲಿಯೇ ಓದು ಮುಂದುವರಿಸಿ ಇಂದು ಉನ್ನತ ಸ್ಥಾನವನ್ನು ಪಡೆದಿರುವವರು. ಕಾನೂನು ಕ್ಷೇತ್ರದ ವಿವಿಧ ಆಯಾಮಗಳಲ್ಲಿ ಸುದೀರ್ಘ ಸೇವೆ ಸಲ್ಲಿಸಿ ಮಾನವೀಯ ತೀರ್ಪುಗಳಿಗೆ ಹೆಸರಾದವರು. ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾಗಿರುವ ಶ್ರೀಯುತ ಎಸ್.ಆರ್.ನಾಯಕ ಅವರು ಕನ್ನಡ ವಿಶ್ವವಿದ್ಯಾಲಯದ ಪ್ರತಿಷ್ಠಿತ ನಾಡೋಜ ಪದವಿ ಸ್ವೀಕರಿಸಲು ಇಂದು ಆಗಮಿಸಿದ್ದಾರೆ. ಅವರಿಗೆ ಕನ್ನಡ ವಿಶ್ವವಿದ್ಯಾಲಯದ ಪರವಾಗಿ ತುಂಬು ಹೃದಯದ ಸ್ವಾಗತವನ್ನು ಕೋರುತ್ತೇನೆ.

ಒಂದು ಜನಾಂಗದ ಕಣ್ಣು ತೆರೆಸಿದ ಕವಿ ಎಂದು ಹೆಸರಾಗಿರುವ ಪ್ರೊ. ಸಿದ್ಧಲಿಂಗಯ್ಯ ಅವರು ದಲಿತ ಕವಿ ಎಂದೇ ಪ್ರೀತಿಯಿಂದ ಕರೆಸಿಕೊಂಡವರು. ದಲಿತರ ಮತ್ತು ಶೋಷಿತರ ಅಂತಸ್ಥ ಜಗತ್ತಿನ ಭಾಗವೇ ಆಗಿ ಅವರ ಆಂತರ್ಯದ ಸ್ಫೋಟವನ್ನು ಕಾವ್ಯವನ್ನಾಗಿಸಿದ ಸೃಜನಶೀಲ ಬರಹಗಾರರಾದ ಡಾ. ಸಿದ್ಧಲಿಂಗಯ್ಯ ಅವರು. ಕನ್ನಡ ವಿಶ್ವವಿದ್ಯಾಲಯದ ಪ್ರತಿಷ್ಠಿತ ನಾಡೋಜ ಪದವಿ ಸ್ವೀಕರಿಸಲು ಇಂದು ಆಗಮಿಸಿದ್ದಾರೆ. ಅವರನ್ನು ಕನ್ನಡ ವಿಶ್ವವಿದ್ಯಾಲಯದ ಪರವಾಗಿ ತುಂಬು ಹೃದಯದಿಂದ ಸ್ವಾಗತಿಸುತ್ತೇನೆ.

ಉತ್ತರ ಕನ್ನಡ ಜಿಲ್ಲೆಯ ಹಾಲಕ್ಕಿ ಒಕ್ಕಲಿಗ ಬುಡಕಟ್ಟು ಸಮುದಾಯದ ಸಾಕ್ಷಿ ಪ್ರಜ್ಞೆಯಂತಿರುವ ಶ್ರೀಮತಿ ಸುಕ್ರಿ ಬೊಮ್ಮಗೌಡ ಅವರು ಕರ್ನಾಟಕ ಜನಪದ ಕಲಾವಿದರಲ್ಲಿ ಪ್ರತಿಭಾ ಸಂಪನ್ನೆಯಾದವರು. ಕಲಾವಿದೆಯಾಗಿ ಹತ್ತಾರು ಬಗೆಯ ಸೃಜನಶೀಲ ಮೌಖಿಕ ಪ್ರಕಾರಗಳನ್ನು ತನ್ನ ಎದೆಯಲ್ಲಿಟ್ಟುಕೊಂಡಿರುವ ಶ್ರೀಮತಿ ಸುಕ್ತಿ ಬೊಮ್ಮಗೌಡ ಅವರು ಪರಿಸರ ಚಳುವಳಿ, ಮಧ್ಯಪಾನ ವಿರೋಧಿ ಚಳುವಳಿ ಮುಂತಾದಂತೆ ಸಾಮಾಜಿಕ ಹೋರಾಟವನ್ನು ನಡೆಸಿದವರು. ಆದಿವಾಸಿ ಜಗತ್ತಿನ ಉಜ್ವಲ ಪ್ರತಿನಿಧಿಯಾದ ಶ್ರೀಮತಿ ಸುಕ್ರಿ ಬೊಮ್ಮಗೌಡ ಅವರು ಕನ್ನಡ ವಿಶ್ವವಿದ್ಯಾಲಯದ ಪ್ರತಿಷ್ಠಿತ ನಾಡೋಜ ಪದವಿಯನ್ನು ಸ್ವೀಕರಿಸಲು ಆಗಮಿಸಿದ್ದಾರೆ. ಅವರಿಗೆ ನನ್ನ ತುಂಬು ಹೃದಯದ ಸ್ವಾಗತವನ್ನು ಕೋರುತ್ತೇನೆ.

ಕನ್ನಡ ವಿಶ್ವವಿದ್ಯಾಲಯದ ವಿವಿಧ ಸಮಿತಿಯ ಸದಸ್ಯರನ್ನು, ನುಡಿಹಬ್ಬಕ್ಕೆ ಆಗಮಿಸಿರುವ ಗೌರವಾನ್ವಿತ ಜನಪ್ರತಿನಿಧಿಗಳನ್ನು, ವಿವಿಧ ಮಾಧ್ಯಮಗಳ ಸ್ನೇಹಿತರನ್ನು, ವಿವಿಧ ಇಲಾಖೆಗಳಿಂದ ಆಗಮಿಸಿರುವ ಅಧಿಕಾರಿಗಳನ್ನು, ವಿಶ್ವವಿದ್ಯಾಲಯದ ನನ್ನ ಎಲ್ಲ ಸಹೋದ್ಯೋಗಿಗಳನ್ನು, ವಿದ್ಯಾರ್ಥಿಗಳನ್ನು ಮತ್ತು ಸಭಿಕರನ್ನು ಪ್ರೀತಿಯಿಂದ ಸ್ವಾಗತಿಸುತ್ತಾ ಮತ್ತೊಮ್ಮೆ ಬರಮಾಡಿಕೊಳ್ಳಬಯಸುತ್ತೇನೆ.

ನಮ್ಮ ಕನ್ನಡ ವಿಶ್ವವಿದ್ಯಾಲಯವು ಕನ್ನಡಿಗರೆಲ್ಲರ ಮನದಾಳದ ಆಶಯದಂತೆ, ದೂರದೃಷ್ಟಿಯ ಕೆಲವು ಮುಖಂಡರುಗಳ ಕನಸಿನ ಪ್ರತೀಕವಾಗಿ ಹದಿನಾರು ವರ್ಷಗಳ ಹಿಂದೆ ಸ್ಥಾಪಿತವಾಯಿತು. ಜನಪರ ಕನಸುಗಳನ್ನು ನನಸು ಮಾಡುವುದು ಅಷ್ಟು ಸುಲಭದ ಕೆಲಸವಲ್ಲ. ಕನಸು ಸಾಕಾರಗೊಳ್ಳುವುದು ಕನಸನ್ನು ಕಾಣಬಲ್ಲ ಸೃಜನಶೀಲ ವ್ಯಕ್ತಿಯಿಂದಲೇ ಹೊರತು ನಿರಾಸೆಯನ್ನು ಆಶಯ ಮಾಡಿಕೊಂಡು ವ್ಯಕ್ತಿಗಳಿಂದಲ್ಲ. ಕನ್ನಡ ವಿಶ್ವವಿದ್ಯಾಲಯದ ಪ್ರಥಮ ಕುಲಪತಿಯಾಗಿ ನೇಮಕಗೊಂಡ ಡಾ. ಚಂದ್ರಶೇಖರ ಕಂಬಾರ ಅವರು ಕನ್ನಡದ ಒಬ್ಬ ಕವಿ. ಸೃಜನಶೀಲ ಗುಣದ ಒಬ್ಬ ಮಹಾನ್ ಕನಸುಗಾರ. ಕನಸನ್ನು ಸಾಕಾರಗೊಳಿಸುವ ಛಲ ಹೊತ್ತಿದ ಕಂಬಾರ ಅವರಿಗೆ ವಿಶ್ವವಿದ್ಯಾಲಯದ ಮೇಲೆ ಕಡು ನಿಷ್ಠೆಯೂ ಇದ್ದ ಕಾರಣದಿಂದಾಗಿ ಕನ್ನಡ ವಿಶ್ವವಿದ್ಯಾಲಯವು ವೈಚಾರಿಕ ಧೋರಣೆಯ ಹಲವು ಪ್ರತಿಭಾವಂತರ ಅನುಭವ ಮಂಟಪವಾಯಿತು.

ವಿದ್ಯೆಯ ಸೃಷ್ಟಿ ಕನ್ನಡ ವಿಶ್ವವಿದ್ಯಾಲಯದ ಒಂದು ಪ್ರಮುಖ ಧೋರಣೆ. ವಿಶ್ವದ ಜ್ಞಾನವನ್ನು ಕನ್ನಡಿಗರಿಗೆ ಮುಟ್ಟಿಸುವ, ಕನ್ನಡ ಸಂಸ್ಕೃತಿಯನ್ನು ವಿಶ್ವಕ್ಕೆ ಪರಿಚಯಿಸುವ ಮಹತ್ವದ ಹೊಣೆಗಾರಿಕೆ ಕನ್ನಡ ವಿಶ್ವವಿದ್ಯಾಲಯಕ್ಕಿದೆ. ವಿದ್ಯೆಯ ಸೃಷ್ಟಿ ಮತ್ತು ಪ್ರಸರಣ ಎಂದರೆ ಅದು ಕೇವಲ ವಿಶ್ವವಿದ್ಯಾಲಯದಲ್ಲಿರುವ ಅಧ್ಯಾಪಕರಿಂದ ಮಾತ್ರ ಎಂಬ ಹಮ್ಮು ನಮ್ಮದಲ್ಲ. ಇಲ್ಲಿನ ವಿವಿಧ ವಿಭಾಗಗಳ ಒಳಗಿನ ಪ್ರತಿಭಾವಂತರ ಜೊತೆಗೆ ಕರ್ನಾಟಕದ ಎಲ್ಲ ಸಾಂಸ್ಕೃತಿಕ ಕ್ಷೇತ್ರದ ಪ್ರತಿಭಾ ಸಂಪನ್ನತೆಯನ್ನು ಬೆಸೆಯುವ ಕೊಂಡಿಯಂತೆ ಪ್ರಿತಯೊಂದು ವಿಭಾಗವೂ ಕೆಲಸ ಮಾಡುತ್ತದೆ. ಈ ಸುಂದರ ಬೆಸುಗೆ ಹೊಸ ಜ್ಞಾನದ ಸೃಷ್ಟಿಗೆ ಹಾಗೆಯೇ ಅರ್ಥಪೂರ್ಣ ಮೌಲ್ಯಗಳ ಪುನರ್ ಸ್ಥಾಪನೆಗೆ ಕಾರಣವಾಗಿದೆ. ವಿದ್ಯೆಯ ಸೃಷ್ಟಿಗೆ ಪೂರಕವಾದ ಹಲವು ಬಗೆಯ ಜ್ಞಾನವಾಹಿನಿಗಳ ತಿಳುವಳಿಕೆ ವಿಶ್ವವಿದ್ಯಾಲಯದ ಒಳಗೆ ರೂಪುಗೊಳ್ಳುತ್ತಿದೆ. ಕನ್ನಡ ಸಂಶೋಧನೆಯ ವಿಧಿ ವಿದಾನಗಳನ್ನು ಸೃಷ್ಟಿಸುವ ಪ್ರಯತ್ನ ಇಲ್ಲಿ ನಡೆಯುತ್ತಿದೆ. ಇವುಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಅನೇಕ ಕಮ್ಮಟ, ತರಬೇತಿ ಮುಂತಾದಂತೆ ಹತ್ತಾರು ಶಿಬಿರಗಳು ಇಲ್ಲಿ ನಡೆಯುತ್ತಿವೆ. ಈ ಎಲ್ಲ ಕುಲುಮೆಗಳಲ್ಲಿ ಪಕ್ವಗೊಂಡ ಜ್ಞಾನ ಪುಸ್ತಕದ ರೂಪದಲ್ಲಿ ಪ್ರಸಾರಾಂಗದ ಮೂಲಕ ಆಕಾರ ಪಡೆಯುತ್ತಿದೆ. ಕನ್ನಡ ವಿಶ್ವವಿದ್ಯಾಲಯವು ಜನಸಾಮಾನ್ಯರು, ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಸಂಶೋಧಕರನ್ನು ತನ್ನ ಗುರಿಯನ್ನಾಗಿಟ್ಟುಕೊಂಡು ಹಲವು ಬಗೆಯ ಕಾರ್ಯಯೋಜನೆಗಳನ್ನು ಜಾರಿಗೆ ತಂದಿದೆ. ಜನಸಾಮಾನ್ಯರ ತಿಳುವಳಿಕೆಗಾಗಿ ನವಸಾಕ್ಷರ ಮಾಲೆ ಮತ್ತು ಮಂಟಪ ಮಾಲೆ ಎಂಬ ಪುಸ್ತಕಗಳು, ವಿದ್ಯಾರ್ಥಿಗಳಿಗಾಗಿ ಪಠ್ಯಪುಸ್ತಕಗಳು, ಸಂಶೋಧಕರಿಗೆ ಹಲವು ಬಗೆಯ ವಿಶ್ವಕೋಶಗಳು ಮುಂತಾದಂತೆ ವೈವಿಧ್ಯಮಯ ಜಾನಸೃಷ್ಟಿ ಇಲ್ಲಿ ನಡೆಯುತ್ತಿದೆ. ಇವೆಲ್ಲವನ್ನೂ ಮೀರಿ ಮತ್ತೊಂದು ಗುರಿ ಕನ್ನಡ ವಿಶ್ವವಿದ್ಯಾಲಯಕ್ಕೆ ಇದೆ. ಅದೇನೆಂದರೆ ಕನ್ನಡ ಸಂಸ್ಕೃತಿಯ ಆಮೂಲಾಗ್ರಶೋಧ ನಡೆಸುವ ಮೂಲಕ ದೇಸಿ ಚಿಂತನಾಕ್ರಮವೊಂದನ್ನು ರೂಪಿಸುವುದು. ಭಾರತೀಯ ಸಂಸ್ಕೃತಿ ಎಂದು ಏಕಮುಖವಾಗಿ ಸಾರ್ವತ್ರೀಕರಿಸುವ ಭ್ರಮೆಯಿಂದ ಹೊರ ಬಂದು ಪ್ರತಿಯೊಂದು ನೆಲಕ್ಕೂ ತನ್ನದೇ ಆದ ವೈಶಿಷ್ಟ್ಯತೆ ಇದೆಯೆಂಬ

ವಾಸ್ತವವಾದ ನೆಲೆಯಲ್ಲಿ ಕನ್ನಡ ನೆಲದ ಗುಣ ಹುಡುಕುವ ಕಾರ್ಯದಲ್ಲಿ ನಾವು ಈಗ ಮಗ್ನರಾಗಿದ್ದೇವೆ. ಆ ಮೂಲಕ ನಿರ್ಲಕ್ಷಿಸಲ್ಪಟ್ಟ ಕ್ಷೇತ್ರಗಳನ್ನು ಪ್ರಧಾನ ನೆಲೆಗೆ ತರುವ ಪ್ರಯತ್ನವನ್ನು ಮಾಡುತ್ತಿದ್ದೇವೆ. ಈ ದೇಶದ ಅಥವಾ ನಾಡಿನ ಅಂಚಿನ ಜನಕ್ಕೆ ಕೂಡ ಒಂದು ಶ್ರೀಮಂತ ಸಂಸ್ಕೃತಿ ಇದೆಯೆಂದು, ಆ ಸಂಸ್ಕೃತಿಗೆ ತನ್ನದೇ ವಿಶಿಷ್ಟ ಪರಂಪರೆಯಿದೆ ಎಂದು, ಆ ಪರಂಪರೆಯೇ ನಾಡಿನ ವಿವೇಕ ಮತ್ತು ಜ್ಞಾನವನ್ನು ಕಾಪಾಡಿಕೊಂಡು ಬಂದಿದೆಯೆಂದು ಸ್ಪಷ್ಟ ಮಾತುಗಳಿಂದ ನಿರ್ವಚಿಸಬೇಕಾದ ಕಾಲವೊಂದು ಈಗ ಬಂದಿದೆ. ಆ ಮೂಲಕ ಕನ್ನಡ ನಾಡಿನ ಸರ್ವತೋಮುಖ ಬೆಳವಣಿಗೆಯನ್ನು ಯಾವ ಯಾವ ದಿಸೆಯಲ್ಲಿ ಸಾಧಿಸಬೇಕೆಂಬ ದೂರದೃಷ್ಟಿ ಮತ್ತು ಆಶಾವಾದ ಕೂಡ ನಮ್ಮ ಅಧ್ಯಯನಗಳ ಹಿಂದೆ ಇದೆ.

ಇತಿಹಾಸದ ಹಲವು ಕಾಲಘಟ್ಟಗಳಲ್ಲಿ ನಡೆದಿರಬಹುದಾದ ಸಾಂಸ್ಕೃತಿಕ ಸಂಘರ್ಷಗಳ ಕಡೆಗೆ ಗಮನಹರಿಸಿ ಪರಂಪರಾಗತ ಆರೋಗ್ಯಕರ ಮೌಲ್ಯಗಳನ್ನು ಪುನರ್‌ಸ್ಥಾಪಿಸುವ ಕಾರ್ಯವು ಇಂದು ನಡೆಯಬೇಕಾಗಿದೆ. ಇವತ್ತು ನಾವು ಬದುಕುತ್ತಿರುವುದೇ ನಿಜವೆಂಬ ಭ್ರಮೆಗೆ ದೂಡಿರುವ ಈ ವರ್ತಮಾನವನ್ನು ಭೂತಕಾಲದ ಬದುಕಿನ ವಿಶ್ಲೇಷಣೆಯ ಮೂಲಕ ವಿಮರ್ಶೆಗೆ ಒಳಪಡಿಸುವುದು ನಮ್ಮ ಅಧ್ಯಯನದ ಗುರಿಯಾಗಿದೆ. ಒಂದು ಕಡೆಯಿಂದ ವಸಾಹತುಶಾಹಿ ಧೋರಣೆಯ ಪಾಶ್ಚತ್ಯ ಪ್ರಭಾವ, ಮತ್ತೊಂದು ಕಡೆ ವೈದಿಕಶಾಹಿಗಳ ವೈಭವೀಕರಣ ಇವುಗಳಿಂದ ಆವರಿಸಿದ ವಿಸ್ಮೃತಿಯಿಂದ ಬಿಡುಗಡೆಗೊಳ್ಳುವ ಮೂಲಕ ಕನ್ನಡ ಸಂಸ್ಕೃತಿಯೊಂದನ್ನು ಪ್ರತಿಷ್ಠಾಪಿಸುವ ಕೆಲಸ ಆಗಬೇಕಾಗಿದೆ. ಇಂದಿನ ಜಾಗತೀಕರಣ ಕೋಮುವಾದ ಹಾಗೂ ಹಿಂಸೆಯ ವಾತಾವರಣದಲ್ಲಿ ನಲುಗುತ್ತಿರುವ ಮಾನವೀಯ ಮೌಲ್ಯಗಳನ್ನು ಹುಡುಕುವ ಮತ್ತು ಹುಟ್ಟು ಹಾಕುವ ಬರಹಗಳನ್ನು ಪ್ರೋತ್ಸಾಹಿಸುವ ಕೆಲಸವೂ ಆಗಬೇಕಾಗಿದೆ. ಒಟ್ಟಾರೆಯಾಗಿ ಆಲೋಚನೆಗಳ ಮತ್ತು ಸಿದ್ಧಾಂತಗಳ ಮೌಲ್ಯೀಕರಣದ ಅಗತ್ಯವನ್ನು ಮನಗಂಡಿರುವ ಕನ್ನಡ ವಿಶ್ವವಿದ್ಯಾಲಯ ದೇಸಿ ಮತ್ತು ಸಾಂಪ್ರದಾಯಿಕ ಮೌಲ್ಯಗಳ ನಡುವೆ ಮುಖಾಮುಖಿಯೊಂದನ್ನು ಹುಟ್ಟು ಹಾಕುವ ಮೂಲಕ ಸತ್ಯದ ಬೆಳಕಿನೆಡೆಗೆ ಕೊಂಡೊಯ್ಯುವ ಕೆಲಸವನ್ನು ಮಾಡುತ್ತದೆಯೆಂಬ ಆಶಯ ನನ್ನದಾಗಿದೆ.

ಈ ಹಿನ್ನೆಲೆಯಲ್ಲಿ ಕನ್ನಡ ವಿಶ್ವವಿದ್ಯಾಲಯವು ಉಪಯುಕ್ತ ಮತ್ತು ಮೌಲಿಕವಾದ ಅನೇಕ ಯೋಜನೆಗಳನ್ನು ಹಮ್ಮಿಕೊಂಡಿದೆ. ತಮಗೆಲ್ಲ ಗೊತ್ತಿರುವ ಹಾಗೆ ಕನ್ನಡ ವಿಶ್ವವಿದ್ಯಾಲಯವು ಇತರೆ ವಿಶ್ವವಿದ್ಯಾಲಯಗಳಿಗಿಂತ ಭಿನ್ನ ಸ್ವರೂಪದ್ದಾಗಿದೆ. ಈಗಾಗಲೇ ಹೇಳಿದಂತೆ ವಿದ್ಯೆಯ ಸೃಷ್ಟಿ ನಮ್ಮ ಪ್ರಮುಖ ಆಶಯವಾಗಿರುವುದರಿಂದ ಪದವೀಧರರನ್ನು ಸೃಷ್ಟಿಸುವ ಕಾರ್ಯಕ್ಕೆ ನಾವು ಹೆಚ್ಚು ಒತ್ತು ನೀಡಿಲ್ಲ. ಉನ್ನತ ಶಿಕ್ಷಣದ ಪ್ರತಿರೂಪವಾದ ಪಿಎಚ್.ಡಿ., ಎಂ.ಫಿಲ್ ಮತ್ತು ಎಂ.ಎ. ಪಿಎಚ್.ಡಿ. ಸಂಯೋಜಿತ ಕೋರ್ಸುಗಳು ಮಾತ್ರ ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿವೆ. ಎಲ್ಲಕ್ಕಿಂತ ಸಂಶೋಧನೆಯನ್ನೇ ಮುಖ್ಯ ಗುರಿಯಾಗಿಸಿಕೊಂಡ ನಮ್ಮ ಹಲವು ವಿಭಾಗಗಳು ಹತ್ತಾರು ಬಗೆಯ ಕಾರ್ಯ ಯೋಜನೆಗಳ ಮೂಲಕ ಸಾಹಿತ್ಯ ಮತ್ತು ಸಂಸ್ಕೃತಿ ಕ್ಷೇತ್ರದಲ್ಲಿ ಹಾಗೂ ಅಭಿವೃದ್ಧಿ ಮತ್ತು ಅನುಷ್ಠಾನ ಕ್ಷೇತ್ರದಲ್ಲಿ ಹೆಚ್ಚಿನ ಸಾಧನೆಯನ್ನು ಮಾಡಿವೆ. ಈ ಹಿನ್ನೆಲೆಯಲ್ಲಿ ನಮ್ಮ ವಿವಿಧ ವಿಭಾಗಗಳು ಕೈಗೊಂಡಿರುವ ಮತ್ತು ಸಾಧಿಸಿರುವ ಕಾರ್ಯಯೋಜನೆಗಳ ಸ್ಥೂಲ ಪರಿಚಯವನ್ನು ಇಲ್ಲಿ ಮಾಡಿಕೊಡಬಯಸುತ್ತೇನೆ.

ನಮ್ಮ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗವು ಪ್ರಾಚೀನ ಕಾವ್ಯಗಳು ಮತ್ತು ಕಾವ್ಯ ಮಾರ್ಗಗಳನ್ನು ಆಧಾರವಾಗಿಟ್ಟುಕೊಂಡು ನಡೆಸಿರುವ ಸಾಂಸ್ಕೃತಿಕ ಮುಖಾಮುಖಿ ಕಾರ್ಯಕ್ರಮವು ಅತ್ಯಂತ ವಿಭಿನ್ನ ಯೋಜನೆಯಾಗಿದ್ದು, ಸಾಹಿತ್ಯ ವಿಮರ್ಶೆಯ ಹೊಸ ಮಾನದಂಡಗಳಿಗೆ ದಾರಿ ಮಾಡಿಕೊಟ್ಟಿದೆಯೆಂದರೆ ಅತಿಶಯೋಕ್ತಿಯಲ್ಲ. ಕಳೆದ ಕೆಲವು ವರ್ಷಗಳಲ್ಲಿ ಕನ್ನಡದ ಪ್ರಖ್ಯಾತ ಕೃತಿಗಳ ಮೇಲೆ ನಡೆದ ಈ ಮುಖಾಮುಖಿ ಕಾರ್ಯಕ್ರಮ ಹೊಸ ಬಗೆಯ ಚಿಂತನಾಕ್ರಮಗಳನ್ನು ಮೂಡಿಸಿದೆ. ಹಾಗೆಯೇ ಸಾಹಿತ್ಯ ಅಧ್ಯಯನ ವಿಭಾಗವು ನಡೆಸಿದ ಯುವ ಬರಹಗಾರರ ಕಮ್ಮಟ ಈ ವರ್ಷದ ಸಾಧನೆಗಳಲ್ಲಿ ಒಂದು. ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗವು ತುಳು ಸಾಹಿತ್ಯ ಚರಿತ್ರೆಯನ್ನು ಸಮಗ್ರವಾಗಿ ಕಟ್ಟಿಕೊಡುವ ಮೂಲಕ ತುಳು ಭಾಷಾ ಚರಿತ್ರೆಯಲ್ಲಿ ಹೊಸ ವಿಕ್ರಮವೊಂದನ್ನು ಸಾಧಿಸಿದೆ. ಇಷ್ಟರಲ್ಲೇ ಈ ಬೃಹತ್ ಸಂಪುಟವು ಬಿಡುಗಡೆಯಾಗಲಿದ್ದು, ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗದ ಶ್ರಮದ ಪ್ರತೀಕವಾಗಿ ಈ ಸಂಪುಟ ಹೊರಬಂದಿದೆ. ದಕ್ಷಿಣ ಭಾರತದ

ಜನಪದ ರಂಗಭೂಮಿ ಎಂಬ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಇತರೆ ಭಾಷಾ ವಿಶ್ವವಿದ್ಯಾಲಯಗಳ ಸಹಕಾರದಿಂದ ಸಂಘಟಿಸಿ ಅದರ ಕಲಾಪಗಳನ್ನು ಕೂಡ ಮುದ್ರಣ ರೂಪದಲ್ಲಿ ಹೊರತರುವ ಕಾರ್ಯ ನಡೆದಿದೆ. ಕನ್ನಡ ಭಾಷಾಧ್ಯಯನ ವಿಭಾಗವು ಮೈಸೂರಿನ ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆಯ ಸಹಯೋಗದೊಂದಿಗೆ Sala ಎಂಬ ಅಂತಾರಾಷ್ಟ್ರೀಯ ಭಾಷಾ ಸಮ್ಮೇಳನವನ್ನು ನಡೆಸುವ ಮೂಲಕ ಕನ್ನಡ ವಿಶ್ವವಿದ್ಯಾಲಯವನ್ನು ಜಾಗತಿಕ ಮಟ್ಟದಲ್ಲಿ ಗುರುತಿಸುವ ಪ್ರಯತ್ನ ಮಾಡಿತು. ಕಾಲೇಜು ವಿದ್ಯಾಪಕರಿಗೂ ಸಹ ಬಹಳ ಉಪಯುಕ್ತವಾಗಿತ್ತು. ಭಾಷಾಂತರ ಅಧ್ಯಯನ ವಿಭಾಗವು ಕೇರಳ ಕಣ್ಣೂರು ವಿಶ್ವವಿದ್ಯಾಲಯದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಭಾರತೀಯ ಭಾಷೆಗಳ ಸಮಾಜ ವಿಜ್ಞಾನಗಳ ಭಾಷಾಂತರ ರಾಷ್ಟ್ರೀಯ ವಿಚಾರ ಸಂಕಿರಣ ಹಾಗೂ ಅನುವಾದ ಸಾಹಿತ್ಯ ಅಕಾಡೆಮಿ ಸಹಯೋಗದಲ್ಲಿ ನಡೆಸಿದ ಕನ್ನಡ ಮರಾಠಿ ಭಾಷಾಂತರ ರಾಷ್ಟ್ರೀಯ ವಿಚಾರ ಸಂಕಿರಣವು ನಮ್ಮ ನೆರೆಯ ಭಾಷೆಗಳನ್ನು ಪರಸ್ಪರ ಅರ್ಥಮಾಡಿಕೊಳ್ಳುವ ಪ್ರಕ್ರಿಯೆಗೆ ಸಹಕಾರಿಯಾಗಿದ್ದವು. ಇದೇ ವಿಭಾಗದ ಕಾವ್ಯಾನುವಾದ ಕಮ್ಮಟ ಮತ್ತು ಯುವ ಭಾಷಾಂತರಕಾರರ ಕಮ್ಮಟಗಳು ಯುವ ಜನರಿಗೆ ದಾರಿದೀಪವಾಗಿ ಪರಿಣಮಿಸಿವೆ. ಹಸ್ತಪ್ರತಿಶಾಸ್ತ್ರ ಅಧ್ಯಯನ ವಿಭಾಗವು ಅಖಿಲ ಕರ್ನಾಟಕ ಹಸ್ತಪ್ರತಿ ಸಮ್ಮೇಳನ ನಡೆಸುವುದರ ಮೂಲಕ ಜನತೆಯಲ್ಲಿ ಹಸ್ತಪ್ರತಿಗಳ ಸಂರಕ್ಷಣೆಯ ಬಗೆಗೆ ಕಾಳಜಿಯನ್ನು ಉಂಟುಮಾಡುತ್ತಿದೆ. ಇದೇ ವಿಭಾಗವು ನಡೆಸುವ ಹಸ್ತಪ್ರತಿ ತರಬೇತಿ ಶಿಬಿರಗಳು, ಹಳಗನ್ನಡ ಸಾಹಿತ್ಯ ಶಿಬಿರಗಳು ಮತ್ತು ಹಸ್ತಪ್ರತಿಗಳ ದಾನಿಗಳ ಸಮಾವೇಶ ಈ ಕ್ಷೇತ್ರದಲ್ಲಿ ಹೊಸ ಎಚ್ಚರವನ್ನು ಉಂಟುಮಾಡಿದೆ. ಅಲ್ಲದೆ ದೆಹಲಿಯ ಸಮಾವೇಶ ಈ ಕ್ಷೇತ್ರದಲ್ಲಿ ಹೊಸ ಎಚ್ಚರವನ್ನು ಉಂಟುಮಾಡಿದೆ. ಅಲ್ಲದೆ ದೆಹಲಿಯ ನ್ಯಾಷನಲ್ ಮ್ಯಾನ್‌ಸ್ಕ್ರಿಪ್ಟ್‌ಮಿಷನ್ ಸಂಸ್ಥೆಯ ನೆರವಿನಿಂದ ಹಸ್ತಪ್ರತಿಗಳ ಸಂಗ್ರಹ ಮತ್ತು ಗಣಕೀಕರಣ ಕಾರ್ಯವೂ ನಡೆಯುತ್ತಿದೆ. ಈ ಯೋಜನೆಯಡಿಯಲ್ಲಿ ಉತ್ತರ ಕರ್ನಾಟಕದ ಹನ್ನೊಂದು ಜಿಲ್ಲೆಗಳಲ್ಲಿ ಕ್ಷೇತ್ರಕಾರ್ಯ ಮಾಡಿ ಅರವತ್ತು ಸಾವಿರ ಕಟ್ಟುಗಳ ಒಂದು ಲಕ್ಷದ ಇಪ್ಪತ್ತು ಸಾವಿರ ಕೃತಿಗಳ ದತ್ತಾಂಶಗಳನ್ನು ತಯಾರಿಸಿ ಅಂತರ್ಜಾಲದಲ್ಲಿ ಹರಿಬಿಡಲಾಗಿದೆ. ಇಷ್ಟಲ್ಲದೆ ನಮ್ಮ ಹಸ್ತಪ್ರತಿ ಭಂಡಾರ ಮೂರು ಕೃತಿಗಳಾದ ಬಸವ ಪುರಾಣ, ಶೂನ್ಯಸಂಪಾದನೆ, ಕುರುಬರ ರಟ್ಟಮತಗಳು ಅಂತಾರಾಷ್ಟ್ರೀಯ ಡಿಜಿಟಲ್ ಗ್ರಂಥಾಲಯಕ್ಕೆ ಆಯ್ಕೆಯಾಗಿರುವುದು ಹೆಮ್ಮೆಯ ವಿಷಯ.

ಪ್ರಾಚೀನ ಮತ್ತು ಪುರಾತತ್ವ ಅಧ್ಯಯನ ವಿಭಾಗವು ತಂಜಾವೂರಿನಲ್ಲಿ ತಮಿಳು ವಿಶ್ವವಿದ್ಯಾಲಯದ ಸಹಯೋಗದಲ್ಲಿ ನಡೆಸಿದ Recent Discoveries and its impact on South Indian History ಎಂ ರಾಷ್ಟ್ರೀಯ ವಿಚಾರ ಸಂಕಿರಣವು ವಿಭಾಗವು ವಿಸ್ತರಿಸಿಕೊಂಡಿರುವುದಕ್ಕೆ ಸಾಕ್ಷಿಯಾಗಿತ್ತು. ಇದೇ ವಿಭಾಗವು ಕೈಗೊಳ್ಳುತ್ತಿರುವ ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಮಾಲೆ ವಿಚಾರ ಸಂಕಿರಣಗಳು ಅತ್ಯಂತ ಉಪಯುಕ್ತವಾಗಿವೆ. ಅಲ್ಲದೆ ವಿಭಾಗದಿಂದ ಪ್ರಕಟಗೊಳ್ಳುತ್ತಿರುವ ಕರ್ನಾಟಕ ದೇವಾಲಯ ಕೋಶ ಎಂಬ ಮಾಲೆ ವಿಭಾಗದ ಸತತ ಪರಿಶ್ರಮಕ್ಕೆ ಸಾಕ್ಷಿ. ಶಾಸನಶಾಸ್ತ್ರ ವಿಭಾಗವು ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆ, ಮೈಸೂರು ಇವರ ಸಹಯೋಗದಲ್ಲಿ ಶಾಸ್ತ್ರೀಯ ಭಾಷೆ ಮತ್ತು ಶಾಸನಶಾಸ್ತ್ರ ಎಂಬ ವಿಚಾರ ಸಂಕಿರಣವನ್ನು ಯಶಸ್ವಿಯಾಗಿ ನಡೆಸಿದೆ. ಅಲ್ಲದೆ ಜನಸಾಮಾನ್ಯರಿಗೂ ಈ ಕ್ಷೇತ್ರದಲ್ಲಿ ಅರಿವನ್ನುಂಟು ಮಾಡಲು ಸೇಡಂನಲ್ಲಿ ಮೂರು ದಿನಗಳ ಶಾಸನ ಕಮ್ಮಟವನ್ನು ಆಯೋಜಿಸಿತ್ತು. ಇದೇ ವಿಭಾಗವು ಜಿಲ್ಲಾ ಶಾಸನಗಳ ಪ್ರಕಟಣೆಯ ಯೋಜನೆಯ ಅಡಿಯಲ್ಲಿ ಈಗಾಗಲೇ ಹಲವು ಜಿಲ್ಲೆಗಳ ಸಂಪುಟಗಳು ಪ್ರಕಟಗೊಂಡಿದ್ದು, ಈ ವರ್ಷ ಗದಗ, ಧಾರವಾಡ, ಹಾವೇರಿ ಮತ್ತು ಉಡುಪಿ ಜಿಲ್ಲೆಗಳ ಶಾಸನ ಸಂಪುಟಗಳು ಸಿದ್ಧಗೊಳ್ಳುತ್ತಿವೆ. ಜಾನಪದ ಅಧ್ಯಯನ ವಿಭಾಗವು ಹಂಪಿ ಅಭಿವೃದ್ಧಿ ಪ್ರಾಧಿಕಾರದ ಸಹಯೋಗದಲ್ಲಿ ಹಂಪಿ ಪರಿಸರದ ಸಕಲ ಮಾಹಿತಿಗಳನ್ನು ಸಂಗ್ರಹಿಸುವ ವಿನೂತನ ಯೋಜನೆಯೊಂದನ್ನು ಕೈಗೊಂಡಿದ್ದು, ಹಂಪಿ ಪರಿಸರದ ಪ್ರಾಣಿ ಪಕ್ಷಿ ಪರಂಪರೆ, ಸಾಮಾಜಿಕ, ಸಾಂಸ್ಕೃತಿಕ ರೂಪಾಂತರಗಳು ಹಾಗೂ ಪ್ರದರ್ಶನಾತ್ಮಕ ಕಲೆಗಳ ಬಗ್ಗೆ ವಿವರ ಸಂಗ್ರಹಿಸುತ್ತಿದೆ. ಇದೇ ವಿಭಾಗವು ಮುಂದಿನ ತಿಂಗಳಲ್ಲಿ ಜಾನಪದ ಮತ್ತು ಸಂಕಥನ ಎಂಬ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಹಮ್ಮಿಕೊಂಡಿದೆ. ವಿಭಾಗವು ಪ್ರತಿವರ್ಷ ನಡೆಸುತ್ತಿರುವ ದೇಸೀ ಸಮ್ಮೇಳನ ಆಯಾ ಪ್ರದೇಶದ ದೇಸೀಯ ಅನನ್ಯತೆಗಳನ್ನು ಗುರುತಿಸುವಲ್ಲಿ ಸಫಲವಾಗಿದೆ. ಚರಿತ್ರೆ ಅಧ್ಯಯನ ವಿಭಾಗವು ರಾಜ್ಯ ಪತ್ರಾಗಾರ ಇಲಾಖೆ ಸಹಯೋಗದಲ್ಲಿ ಸ್ಥಳೀಯ ಚರಿತ್ರೆ ಎಂಬ ರಾಷ್ಟ್ರೀಯ ವಿಚಾರ ಸಂಕಿರಣವನ್ನು ನಡೆಸುವುದರ ಮೂಲಕ ಹೊಸ ಚರ್ಚೆಗಳಿಗೆ ದಾರಿಮಾಡಿಕೊಟ್ಟಿದೆ. ಈ ವಿಭಾಗವು ಚರಿತ್ರೆ ವಿಶ್ವಕೋಶದ ಬಿಡಿ ಆವೃತ್ತಿಗಳನ್ನು ಪ್ರಕಟಿಸುತ್ತಿದ್ದು, ಈ ಆವೃತ್ತಿಗಳು ವಿದ್ಯಾರ್ಥಿ ಸಮುದಾಯಕ್ಕೆ ಹೆಚ್ಚು ಉಪಯುಕ್ತವಾಗಲಿದೆಯೆಂಬ ಆಶಯವಿದೆ. ಅಭಿವೃದ್ಧಿ

ಅಧ್ಯಯನ ವಿಭಾಗವು ಶಿಕ್ಷಕರಿಗಾಗಿ, ಜನಪ್ರತಿನಿಧಿಗಳಿಗಾಗಿ, ಸಂಶೋಧಕರಿಗಾಗಿ ಮತ್ತು ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಅನೇಕ ಕಾರ್ಯಗಾರಗಳನ್ನು ಹಮ್ಮಿಕೊಂಡು ನಡೆಸುತ್ತಾ ಬರುತ್ತಿದೆ. ಆ ಮೂಲಕ ಕನ್ನಡ ವಿಶ್ವವಿದ್ಯಾಲಯವು ಕೇವಲ ಚಿಂತನೆಯ ದಂತಗೋಪುರದಲ್ಲಿರದೆ ಫಲಾಪೇಕ್ಷಿಗಳ ಅಂಗಳಕ್ಕೆ ಕಾಲಿಡುವ ಪ್ರಯತ್ನವನ್ನೂ ಮಾಡಿದೆ. ಈ ವರ್ಷ ಈ ವಿಭಾಗದ ಮೂಲಕ ನಡೆದ ಸುವರ್ಣ ಕರ್ನಾಟಕದ ರಾಷ್ಟ್ರೀಯ ವಿಚಾರ ಸಂಕಿರಣವು ಅಭಿವೃದ್ಧಿಯನ್ನು ಕುರಿತ ಹೊಸ ಚಿಂತನೆಗಳನ್ನು ಹುಟ್ಟು ಹಾಕುವಲ್ಲಿ ಯಶಸ್ವಿಯಾಗಿದೆ. ಬುಡಕಟ್ಟು ಅಧ್ಯಯನ ವಿಭಾಗವು ಯುಜಿಸಿ ಪ್ರಾಯೋಜಿತ ಸಮಗ್ರ ಬುಡಕಟ್ಟು ಸಮೀಕ್ಷೆ ಮತ್ತು ಅಧ್ಯಯನವನ್ನು ಕೈಗೊಂಡಿದ್ದು, ಆ ಮೂಲಕ ಕರ್ನಾಟಕದ ಸಮಸ್ತ ಬುಡಕಟ್ಟುಗಳ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಆಯಾಮಗಳನ್ನು ಸ್ಪಷ್ಟವಾಗಿ ಅಧ್ಯಯನಿಸುವ ಕಾರ್ಯವನ್ನು ಕೈಗೊಂಡಿದೆ. ಇದೇ ವಿಭಾಗದಿಂದ ಕೈಗೊಂಡ ಅಲೆಮಾರಿ ಸಮುದಾಯ ಅಧ್ಯಯನವು ಆ ಸಮುದಾಯಗಳಿಗೆ ಒಂದು ಆರ್ಥಿಕ ಸ್ಥಿರತೆ ನೀಡುವ ಪ್ರಯತ್ನಕ್ಕೆ ಸಹಕಾರಿಯಾಗಿದೆ. ಬುಡಕಟ್ಟು ಮಹಿಳೆಯರಿಗೆ, ಯುವಕರಿಗೆ ಮತ್ತು ಜನ ಪ್ರತಿನಿಧಿಗಳಿಗಾಗಿ ಈ ವಿಭಾಗವು ನಡೆಸಿದ ಕಾರ್ಯಾಗಾರಗಳು ಪ್ರಯೋಜನಜಮುಖಿಯಾಗಿ ಹೊರಹೊಮ್ಮಿವೆ. ಈ ವರ್ಷ ಪ್ರಪ್ರಥಮ ಬುಡಕಟ್ಟು ಸಮ್ಮೇಳನವನ್ನು ನಡೆಸಲಾಗುತ್ತಿದ್ದು, ಮುಂದಿನ ವರ್ಷದಿಂದ ಅದು ಸತತವಾಗಿ ಮುಂದುವರಿಯಲಿದೆ.

ದೃಶ್ಯಕಲಾ ವಿಭಾಗವು ವಿದ್ಯಾರಣ್ಯದ ಜೊತೆಗೆ ಬಾದಾಮಿಯಲ್ಲಿಯೂ ತನ್ನ ಶಾಖೆಯನ್ನು ತೆರೆದಿದ್ದು, ಶಿಲ್ಪ ಮತ್ತು ದೃಶ್ಯಕಲೆಯ ಬಗ್ಗೆ ಅತ್ಯುತ್ತಮವಾದ ಕಾರ್ಯ ಮಾಡುತ್ತಿದೆ. ಈ ವಿಭಾಗವು ದೆಹಲಿಯ ಕರ್ನಾಟಕ ಸಂಘದ ಸಹಯೋಗದೊಂದಿಗೆ ನಡೆಸಿದ ಕಲಾಕೃತಿಗಳ ಪ್ರದರ್ಶನ ಅಪಾರ ಮೆಚ್ಚುಗೆ ಪಡೆದಿದೆ. ಈ ವಿಭಾಗವು ನಡೆಸುವ ಶಿಬಿರಗಳು, ಕಮ್ಮಟಗಳು ಯುವ ಕಲಾವಿದರುಗಳಿಗೆ ಅಪಾರ ಸ್ಫೂರ್ತಿಯನ್ನು ತುಂಬುತ್ತಿದೆ. ಸಂಗೀತ ಮತ್ತು ನೃತ್ಯ ವಿಭಾಗವು ರಾಜ್ಯದ ವಿವಿಧೆಡೆಗಳಲ್ಲಿ ಸಂಗೀತಯಾತ್ರೆ ಎಂಬ ಕಾರ್ಯಕ್ರಮ ನಡೆಸುತ್ತ ಬರುತ್ತಿದೆ. ಈ ವಿಭಾಗದ ಮುಖ್ಯಸ್ಥರು ಸಿದ್ಧಪಡಿಸುತ್ತಿರುವ ಹಿಂದೂಸ್ಥಾನಿ ರಾಗಗಳು ಎಂಬ ವಿಶೇಷ ಗ್ರಂಥವು ಕನ್ನಡಕ್ಕೆ ಒಂದು ಅಪರೂಪದ ಕೊಡುಗೆಯಾಗಲಿದೆ. ನಮ್ಮ ಬಹುತೇಕ ಅಧ್ಯಯನ ವಿಭಾಗಗಳು ಆಯಾ ಕ್ಷೇತ್ರದ ಸಮಕಾಲೀನ ಚರ್ಚೆಗಳನ್ನು ಪರಾಮರ್ಶೆಗೆ ಒಳಪಡಿಸುವ ರೀತಿಯಲ್ಲಿ ವಿವಿಧ ನಿಯತಕಾಲಿಕೆಗಳು ಕರ್ನಾಟಕದಲ್ಲಿ ಅಪಾರ ಚರ್ಚೆಯನ್ನು ಹುಟ್ಟುಹಾಕುವ ಮೂಲಕ ಗಂಭೀರ ಸ್ವರೂಪದ ಅಧ್ಯಯನಕ್ಕೆ ತಳಪಾಯವನ್ನು ಒದಗಿಸುತ್ತಿವೆ. ಇದಿಷ್ಟು ಅಧ್ಯಯನ ವಿಭಾಗಗಳ ಕಾರ್ಯ ಸಾಧನೆಗಳು.

ನಮ್ಮ ಪ್ರಸಾರಾಂಗವು ಈ ಅಧ್ಯಯನ ವಿಭಾಗಗಳ ಸೃಜನಾತ್ಮಕ ಉತ್ಪಾದನೆಯನ್ನು ಜ್ಞಾನ ವಾಹಕಗಳ ಪ್ರತಿರೂಪವಾದ ಗ್ರಂಥಗಳನ್ನಾಗಿ ಪರಿವರ್ತಿಸಿ ನಾಡಿನ ಜನತೆಗೆ ತಲುಪಿಸುವ ಕೈಂಕರ್ಯವನ್ನು ಕೈಗೊಂಡಿದೆ. ನಮ್ಮ ಹೆಮ್ಮೆಯ ಪ್ರಸಾರಾಂಗ ಪ್ರಕಟಿಸಿದ ಒಟ್ಟು ಗ್ರಂಥಗಳ ಸಂಖ್ಯೆ ೭೮೫. ಕಳೆದ ವರ್ಷ ನಾವು ಪ್ರಕಟಿಸಿದ ಗ್ರಂಥಗಳ ಸಂಖ್ಯೆ ೫೦. ಸುವರ್ಣ ಕರ್ನಾಟಕ ವರ್ಷಾಚರಣೆಯ ಅಂಗವಾಗಿ ನಾಡಿನ ಹಿರಿಯ ಉದ್ದಾಮ ಸಾಹಿತಿಗಳಿಂದ ಬರೆಯಿಸಿದ ೨೦ ಹೊನ್ನಾರು ಮಾಲೆ ಪುಸ್ತಕಗಳು, ಸುವರ್ಣ ಕರ್ನಾಟಕದ ನೆನಪಿಗಾಗಿ ಹೊರತಂದ ೨ ಬೃಹತ್ ಸಂಪುಟಗಳಾದ ಅಭಿವೃದ್ಧಪಥ ಮತ್ತು ಸಾಹಿತ್ಯ ಸಂಸ್ಕೃತಿ ಪಥ, ಬಾಹುಬಲಿಯ ಮಹಾಮಸ್ತಕಾಭಿಷೇಕದ ಸವಿನೆನಪಿನಲ್ಲಿ ಹೊರತಂದ ಸಮಗ್ರ ಜೈನ ಸಾಹಿತ್ಯ ಮಾಲೆ ಇವುಗಳಲ್ಲಿ ಮುಖ್ಯವಾದವು. ಹಂಪಿ ಉತ್ಸವದಲ್ಲಿ ಪ್ರೌಢದೇವರಾಯ ಶಾಸನಗಳು ಎಂಬ ಗ್ರಂಥವನ್ನು ವಿಶ್ರಾಂತ ಕುಲಪತಿಗಳಾದ ಡಾ. ಎಂ.ಎಂ. ಕಲಬುರ್ಗಿ ಅವರು ಲೋಕಾರ್ಪಣೆ ಮಾಡಿದರು. ಕನ್ನಡ ವಿಶ್ವವಿದ್ಯಾಲಯದ ಗ್ರಂಥಗಳನ್ನು ಕನ್ನಡ ಜನತೆ ಅತ್ಯಂತ ಆಪ್ತವಾಗಿ ಸ್ವೀಕರಿಸಿದ್ದಾರೆ. ಕಳೆದ ಒಂದು ವರ್ಷದಲ್ಲಿ ೪೦ ಲಕ್ಷ ರೂಪಾಯಿಗಳಷ್ಟು ಗ್ರಂಥಗಳು ಮಾರಾಟವಾಗಿರುವುದೇ ಇದಕ್ಕೆ ಸಾಕ್ಷಿ. ಪ್ರತಿವರ್ಷ ವಿವಿಧ ಹಂತಗಳಲ್ಲಿ ನಾವು ಕೈಗೊಳ್ಳುವ ಪುಸ್ತಕ ಸಂಸ್ಕೃತಿ ಯಾತ್ರೆ ಕನ್ನಡದ ಜನತೆಯನ್ನು ನಾವು ತಲುಪುತ್ತಿರುವ ದ್ಯೋತಕವಷ್ಟೇ ಅಲ್ಲ, ಅಧ್ಯಾಪಕರು, ವಿದ್ಯಾರ್ಥಿಗಳು ಮತ್ತು ಆಸಕ್ತರಿಂದ ಬರುತ್ತಿರುವ ಬೇಡಿಕೆ ನಮ್ಮ ಸಾಧನೆಗೆ ಸಿಕ್ಕ ಗೌರವದ ಪ್ರತೀಕ. ದೂರಶಿಕ್ಷಣ ಕೇಂದ್ರದಲ್ಲಿ ಕಳೆದ ವರ್ಷದ ವಿದ್ಯಾರ್ಥಿಗಳ ಸಂಖ್ಯೆ ೨೯೫೦. ಪ್ರಸ್ತುತ ವರ್ಷದಲ್ಲಿ ೧೩೩೪ಕ್ಕೆ ಏರಿದೆ. ಹಾಗೆಯೇ ಈ ವರ್ಷ ಸುಮಾರು ೨೦ ಹೊಸ ಅಧ್ಯಯನ ಕೇಂದ್ರಗಳು ಸೇರ್ಪಡೆಯಾಗಲಿವೆ.

ದೂರಶಿಕ್ಷಣ ಕೇಂದ್ರದ ವ್ಯಾಪ್ತಿಯನ್ನು ವಿಸ್ತರಿಸಲು ದೆಹಲಿಯ ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯವು ೪೦ ಲಕ್ಷ ರೂಪಾಯಿಗಳ ಅನುದಾನಕ್ಕೆ ಅನುಮೋದನೆ ನೀಡಿದೆ. ಕಳೆದ ನಾಲ್ಕು ವರ್ಷಗಳಿಂದ ನಡೆಸುತ್ತಿರುವ ಆಡಳಿತ ಕನ್ನಡ ಕೋರ್ಸನ್ನು ರಾಜ್ಯದಾದ್ಯಂತ ಆರು ಲಕ್ಷಕ್ಕೂ ಅಧಿಕ ಸಂಖ್ಯೆಯಲ್ಲಿರುವ ಸರ್ಕಾರಿ ಹಾಗೂ ಅರೆ ಸರ್ಕಾರಿ ನೌಕರರಿಗೆ ಅನ್ವಯವಾಗುವಂತೆ ಕಾರ್ಯಕ್ರಮ ನಿರೂಪಿಸಲು ಕರ್ನಾಟಕ ರಾಜ್ಯ ಸರ್ಕಾರವು ೫೦ ಲಕ್ಷ ರೂಪಾಯಿಗಳ ಅನುದಾನ ವನ್ನು ಬಿಡುಗಡೆ ಮಾಡಿದೆ. ಈ ಹಿನ್ನೆಲೆಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಜೊತೆಗೆ ಈ ವರ್ಷದಿಂದಲೇ ಆಡಳಿತ ಕನ್ನಡ ಕೋರ್ಸ್‌ನ್ನು ಅನುಷ್ಠಾನಗೊಳಿಸಲು ಒಡಂಬಡಿಕೆಯೊಂದನ್ನು ಮಾಡಿಕೊಳ್ಳಲಾಗಿದೆ.

ಸಿರಿಗನ್ನಡ ಗ್ರಂಥಾಲಯವು ನಮ್ಮ ಸಂಶೋಧನೆಗೆ ಪೂರಕವಾದ ಪ್ರಮುಖ ಭಾಗವಾಗಿದೆ. ಸಿರಿಗನ್ನಡ ಗ್ರಂಥಾಲಯ ಪರಾಮರ್ಶನ ಕೇಂದ್ರದಡಿಯಲ್ಲಿ ಇಂದು ನಮ್ಮ ದೇಶದ ಉನ್ನತ ಶಿಕ್ಷಣ ವ್ಯವಸ್ಥೆಗೆ ಸವಾಲಾಗಿ, ಗಂಭೀರ ಸಮಸ್ಯೆಯಾಗಿ ನಿಂತಿರುವ ಸಂಶೋಧನ ಪುನರಾವರ್ತನೆಯಂತಹ ಸಮಸ್ಯೆಯನ್ನು ಕನ್ನಡ ಮತ್ತು ಕರ್ನಾಟಕತ್ವದ ಬಗೆಗಿನ ಜ್ಞಾನಕ್ಷೇತ್ರದಲ್ಲಿ ಸಮರ್ಥವಾಗಿ ನಿಭಾಯಿಸುವ ಹೊಣೆಗಾರಿಕೆಯು ಕನ್ನಡ ವಿಶ್ವವಿದ್ಯಾಲಯಕ್ಕಿದೆ. ಈ ನಿಟ್ಟಿನಲ್ಲಿ ಕನ್ನಡ ವಿಶ್ವವಿದ್ಯಾಲಯವು ೨೦೦೪ರ ಸೆಪ್ಟೆಂಬರ್‌ನಲ್ಲಿ ಸಂಶೋಧನ ಕರ್ನಾಟಕ ಎಂಬ ಮಹತ್ವದ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಕರ್ನಾಟಕ ಕರ್ನಾಟಕತ್ವಕ್ಕೆ ಸಂಬಂಧಿಸಿದಂತೆ ಇದುವರೆಗೆ ವಿವಿಧ ಜ್ಞಾನಶಿಸ್ತುಗಳಲ್ಲಿ ನಡೆದಿರುವ ಸಂಶೋಧನೆಗಳನ್ನು, ಬಿಬ್ಲಿಯೋಗ್ರಫಿಕ್ ವಿವರಗಳ ಜೊತೆಗೆ ಸಾರಾಂಶ ಸಹಿತವಾಗಿ ಒಂದೆಡೆ ವ್ಯವಸ್ಥಿತವಾಗಿ ವಿಂಗಡಿಸಿ, ಅವುಗಳನ್ನು ಮುದ್ರಿತ ಅಥವಾ ವಿದ್ಯುನ್ಮಾನ ಮಾಧ್ಯಮಗಳಿಗೆ ಅಳವಡಿಸಿ ಜಗತ್ತಿನೆಲ್ಲೆಡೆ ಇರುವ ಸಂಶೋಧನಾಸಕ್ತರಿಗೆ ಒದಗಿಸುವುದು. ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಮಾಹಿತಿ ಕೇಂದ್ರವು ಕರ್ನಾಟಕದ ಕಲಾವಿದರು, ಕರ್ನಾಟಕದ ಬರಹಗಾರರು, ಕರ್ನಾಟಕ ಪ್ರಾಣಿ ಪಕ್ಷಿಗಳು ಹಾಗೂ ಕರ್ನಾಟಕದ ಜಲಸಂಪತ್ತು ಎಂಬ ನಾಲ್ಕು ವಿಶೇಷ ಯೋಜನೆಗಳನ್ನು ಹಮ್ಮಿಕೊಂಡಿದ್ದು, ಮಾಹಿತಿಯನ್ನು ಸಂಗ್ರಹಿಸುತ್ತಿದೆ.

ಕನ್ನಡ ವಿಶ್ವವಿದ್ಯಾಲಯವು ತನ್ನ ಅಧ್ಯಯನ ಕ್ಷೇತ್ರವನ್ನು ವಿಸ್ತರಿಸಿಕೊಳ್ಳುವ ಆಶಯವನ್ನು ಇಟ್ಟುಕೊಂಡಿದ್ದು, ಈಗಾಗಲೇ ಕುವೆಂಪು ಜನ್ಮಸ್ಥಳವಾದ ಕುಪ್ಪಳಿಯಲ್ಲಿ ಕುವೆಂಪು ಅಧ್ಯಯನ ಕೇಂದ್ರ ಸ್ಥಾಪಿಸಿದೆ. ಬಸವಣ್ಣನವರು ಐಕ್ಯವಾದ ಕೂಡಲ ಸಂಗಮದಲ್ಲಿ ವಚನ ಅಧ್ಯಯನ ಕೇಂದ್ರವನ್ನು ಸ್ಥಾಪಿಸಲಾಗಿದೆ. ಈ ಎರಡು ಕೇಂದ್ರಗಳ ಮೂಲಕ ಅನೇಕ ಸಂಶೋಧನಾ ಕಾರ್ಯ ನಡೆಯುತ್ತಿದ್ದು, ಮುಂದಿನ ದಿನಗಳಲ್ಲಿ ಸೂಕ್ತ ಸ್ಥಳಗಳಲ್ಲಿ ಇಂತಹ ಕೇಂದ್ರಗಳನ್ನು ವಿಸ್ತರಿಸುವ ಆಶಯವನ್ನು ಇಟ್ಟುಕೊಳ್ಳಲಾಗಿದೆ. ಇಷ್ಟೆಲ್ಲ ಬೌದ್ಧಿಕ ಚಟುವಟಿಕೆಗಳ ಜೊತೆಗೆ ವಿದ್ಯಾರಣ್ಯ ಆವರಣದಲ್ಲಿ ಭೌತಿಕ ಚಟುವಟಿಕೆಯೂ ವಿಸ್ತರಿಸುತ್ತಲಿದೆ. ಯುಜಿಸಿ ನೆರವಿನಿಂದ ಒಂದು ಕೋಟಿ ವೆಚ್ಚದಲ್ಲಿ ಗಣಕ ಕೇಂದ್ರ ಪೂರ್ಣ ಸ್ವರೂಪದಲ್ಲಿ ಸಜ್ಜುಗೊಂಡಿದ್ದು, ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಿಗೆ, ವಿದ್ಯಾರ್ಥಿಗಳಿಗೆ ಪರಿಪೂರ್ಣವಾದ ಅಂತರ್ಜಾಲದ ವ್ಯವಸ್ಥೆ ಮಾಡಲಾಗಿದೆ. ಸಂಶೋಧಕರಿಗಾಗಿ ನಿರ್ಮಿಸಿರುವ ಸಂಶೋಧಕರ ನಿವಾಸಗಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಸತಿ ನಿಲಯ, ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಸತಿ ನಿಲಯ, ಚರಿತ್ರೆ ಅಧ್ಯಯನ ವಿಭಾಗ ಹಾಗೂ ಅಭಿವೃದ್ಧಿ ಅಧ್ಯಯನ ವಿಭಾಗಕ್ಕೆ ಹೊಸ ಕಟ್ಟಡಗಳು ಮತ್ತು ಆಡಳಿತ ಸಿಬ್ಬಂದಿಗಳ ವಾಸಕ್ಕಾಗಿ ೧೬ ವಸತಿ ಗೃಹಗಳು ಮುಂತಾಗಿ ಈ ವರ್ಷ ನಮ್ಮ ಭೌತಿಕ ಶ್ರೀಮಂತಿಕೆಯನ್ನು ಹೆಚ್ಚಿಸಿವೆ. ಹಾಗೆಯೇ ಹಾಲುಮತ ಅಧ್ಯಯನ ಪೀಠದ ವತಿಯಿಂದ ಹಾಲುಮತ ಭವನ, ಅಧ್ಯಯನಾಂಗದ ಕಟ್ಟಡ, ಹಸ್ತಪ್ರತಿ ಅಧ್ಯಯನ ವಿಭಾಗದ ಹಸ್ತಪ್ರತಿಗಳ ಸಂರಕ್ಷಣೆ ಮತ್ತು ದಾಖಲಾತಿಗಾಗಿ ಹೊಸ ಕಟ್ಟಡಗಳು ಪ್ರಗತಿಯ ಹಂತದಲ್ಲಿವೆ.

ಹದಿನೈದು ವರ್ಷಗಳ ಹಿಂದೆ ಕೇವಲ ಬರಡು ನೆಲವಾಗಿ ನಿಂತಿದ್ದ ವಿದ್ಯಾರಣ್ಯ ಭೂಮಿ ಈಗ ಹಚ್ಚ ಹಸಿರಿನ ಕ್ಷೇತ್ರವಾಗಿ ಪರಿವರ್ತಿತವಾಗಿದೆ. ಬಯಲಿನಿಂದ ಆಲಯಕ್ಕೆ ನಾವು ಬಂದಿದ್ದೇವೆಂಬುದು ನಿಜವಾದರೂ ವಿಶಾಲ ಕರ್ನಾಟಕದ ಬಯಲು ನಮ್ಮ ನಿರಂತರ ಅಧ್ಯಯನದ ತಾಣವೆಂಬುದು ನಮಗೆ ಗೊತ್ತಿದೆ. ವಿದ್ಯಾರಣ್ಯದಲ್ಲಿರುವುದು ಒಂದು ನೆಪ. ವಿದ್ಯಾರಣ್ಯದ ಆಚೆಗಿರುವ ಬುಡಕಟ್ಟುಗಳ ನಿರ್ಲಕ್ಷಿತ ಜನ ಸಮುದಾಯಗಳು, ಭೂಮಿ ಉಳುವ ರೈತರು, ದುಡಿಯುವ ಎಲ್ಲ ಬಗೆಯ ಶ್ರಮಿಕರು, ಕೋಟೆ ಕೊತ್ತಲಗಳು, ಶಾಸನಗಳು, ಕವಿ,

ವಿಮರ್ಶಕರು, ಇವರೆಲ್ಲ ನಮ್ಮ ಪ್ರೀತಿಯ ಸಂಗಾತಿಗಳು. ಆದುದರಿಂದ ನಾವು ಬಯಲಿನಿಂದ ಆಲಯಕ್ಕೆ ಬಂದಿದ್ದೇವೆಯೋ? ಇಲ್ಲವೇ ಆಲಯದಿಂದ ಬಯಲಿಗೋ? ಈ ನಿರಂತರ ಜಿಜ್ಞಾಸೆಯೇ ನಮ್ಮ ಶಕ್ತಿ.

ಕರ್ನಾಕಟದ ಘನತೆವೆತ್ತ ರಾಜ್ಯಪಾಲರಾದ ಸನ್ಮಾನ್ಯ ಶ್ರೀ ರಾಮೇಶ್ವರ ಠಾಕೂರ್. ಅವರು ಮತ್ತು ಭಾರತ ಸರ್ಕಾರದ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಎಂ. ವೀರಪ್ಪ ಮೊಯಿಲಿ ಅವರ ಸಮ್ಮುಖದಲ್ಲಿ ವಿಶ್ವವಿದ್ಯಾಲಯದ ಕುಲಪತಿಯಾದ ನನ್ನದೊಂದು ಮನವಿ ಇದೆ. ಕನ್ನಡ ವಿಶ್ವವಿದ್ಯಾಲಯ ಸಂಪೂರ್ಣವಾಗಿ ಸಂಶೋಧನೆಗೆ ಮೀಸಲಾದ ವಿಭಿನ್ನ ವಿಶ್ವವಿದ್ಯಾಲಯ-ವಾಗಿರುವುದರಿಂದ ನಮಗೆ ಬೇರೆ ಮೂಲಗಳಿಂದ ಯಾವ ಆದಾಯವೂ ಇಲ್ಲ. ಕರ್ನಾಟಕ ಸರ್ಕಾರ ಮತ್ತು ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಉದಾರ ನೆರವಿನಿಂದ ವಿಶ್ವವಿದ್ಯಾಲಯವನ್ನು ನಿರಂತರವಾಗಿ ನಡೆಸಿಕೊಂಡು ಹೋಗಲಾಗುತ್ತಿದೆ. ಕನ್ನಡವನ್ನು ಕಟ್ಟುವ ಮತ್ತು ಕನ್ನಡ ಸಂಸ್ಕೃತಿಯನ್ನು ಅಭ್ಯಸಿಸುವ ನಿರಂತರ ಕಾಯಕದ ಈ ವಿಶ್ವವಿದ್ಯಾಲಯಕ್ಕೆ ಆರ್ಥಿಕ ಕೊರತೆ ಇದೆ ಎಂಬುದಂತೂ ಸ್ಪಷ್ಟ.

ಕಳೆದ ವರ್ಷ ನಮಗೆ ಬಂದ ಬಜೆಟ್‌ನಲ್ಲಿ ಸಂಬಳಕ್ಕಾಗಿ ವಿನಿಯೋಗಿಸಿರುವುದು ರೂ. ೪,೩,೭೮,೦೦೦.೦೦ಗಳು. ರೂ ೧ ಕೋಟಿ ಹಣದಲ್ಲಿ ನಾವು ಅಭಿವೃದ್ಧಿ ಚಟುವಟಿಕೆಗಳನ್ನು ನಡೆಸಿಕೊಂಡು ಹೋಗಬೇಕಾಗಿದೆ. ಇನ್ನೂ ಅನೇಕ ಬಗೆಯ ಮೂಲಭೂತ ಸೌಲಭ್ಯಗಳು ನಮ್ಮಲ್ಲಿ ಏರ್ಪಡಬೇಕಾಗಿದೆ. ಅಧ್ಯಾಪಕರು ಮತ್ತು ಸಂಶೋಧಕರ ಯೋಜನೆಗಳಿಗಾಗಿ ತೀರ ಕಡಿಮೆ ಹಣವನ್ನು ಮೀಸಲಿಡುತ್ತಿದ್ದೇವೆ. ಸರ್ಕಾರ ಉದಾರವಾಗಿ ಕನ್ನಡದ ಕೆಲಸಕ್ಕಾಗಿ ಹಣವನ್ನು ನೀಡಬೇಕೆಂದು ವಿನಯ ಪೂರ್ವಕವಾಗಿ ಕೋರಿಕೊಳ್ಳುತ್ತಾ ಈ ಸಲದ ಆಯವ್ಯಯದಲ್ಲಿ ನಮ್ಮ ಈ ಕೊರತೆಯನ್ನು ತುಂಬಿಕೊಡಬೇಕೆಂದು ಮತ್ತೊಮ್ಮೆ ವಿನಂತಿಸಿಕೊಳ್ಳುತ್ತೇನೆ.

ಇಷ್ಟು ಹೇಳಿ ಸನ್ಮಾನ್ಯ ಘನತೆವೆತ್ತ ರಾಜ್ಯಪಾಲರಿಗೆ, ನುಡಿಹಬ್ಬದ ಭಾಷಣವನ್ನು ಮಾಡಲಿರುವ ಭಾರತ ಸರ್ಕಾರದ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಿಗೆ ಮತ್ತು ಈ ವರ್ಷದ ನಾಡೋಜರಿಗೆ ಗೌರವವನ್ನು ಸಮರ್ಪಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಜೈ ಕರ್ನಾಟಕ ಮಾತೆ
೫ ಡಿಸೆಂಬರ್ ೨೦೦೮

# ೧೪. ಕನ್ನಡವೇ ನಿರಂತರ

ಕನ್ನಡ ವಿಶ್ವವಿದ್ಯಾಲಯ ೧೭ನೇ ನುಡಿಹಬ್ಬದಲ್ಲಿ ಪ್ರತಿಷ್ಠಿತ ನಾಡೋಜ ಪದವಿ, ಡಿ.ಲಿಟ್. ಪಿಎಚ್.ಡಿ., ಎಂ.ಫಿಲ್. ಪದವಿಗಳನ್ನು ನೀಡಿ ನುಡಿಹಬ್ಬವನ್ನು ಅರ್ಥಪೂರ್ಣವಾಗಿಸಲು ಬಂದಿರುವ ಕರ್ನಾಟಕ ರಾಜ್ಯದ ರಾಜ್ಯಪಾಲರೂ ಕನ್ನಡ ವಿಶ್ವವಿದ್ಯಾಲಯದ ಕುಲಾಧಿಪತಿಗಳೂ ಆದ ಘನತೆವೆತ್ತ ಸನ್ಮಾನ್ಯ ರಾಮೇಶ್ವರ ಠಾಕೂರ್ ಅವರೇ.

ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಸಚಿವರೂ, ಕನ್ನಡ ವಿಶ್ವವಿದ್ಯಾಲಯದ ಸಮಕುಲಾಧಿಪತಿಗಳೂ ಆದ ಸನ್ಮಾನ್ಯ ಶ್ರೀ ಅರವಿಂದ ಲಿಂಬಾವಳಿ ಅವರೇ, ಘಟಿಕೋತ್ಸವ ಭಾಷಣವನ್ನು ಮಾಡಲು ಆಗಮಿಸಿರುವ ಶ್ರೀ ಬರಗೂರು ರಾಮಚಂದ್ರಪ್ಪನವರೇ, ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ ಭಾಜನರಾದ ಪ್ರೊ. ಎಲ್. ಬಸವರಾಜು ಅವರೆ, ಪ್ರೊ. ಯು.ಆರ್. ಅನಂತಮೂರ್ತಿ ಅವರೇ, ಶ್ರೀ ಯಡ್ರಾಮನಹಳ್ಳಿ ದೊಡ್ಡಭರಮಪ್ಪ ಅವರೇ, ಪ್ರೊ. ಕಮಲಾ ಹಂಪನಾ ಅವರೇ, ಪ್ರೊ. ಶ್ರೀನಿವಾಸ ಹಾವನೂರ ಅವರೇ, ನೆರೆದಿರುವ ಜನಪ್ರತಿನಿಧಿಗಳೇ, ವಿವಿಧ ಪದವಿಗಳನ್ನು ಪಡೆಯಲಿರುವ ಮಹನೀಯರೇ, ಕನ್ನಡ ವಿಶ್ವವಿದ್ಯಾಲಯದ ಅಧ್ಯಾಪಕ ವೃಂದದವರೇ, ಆಡಳಿತ ಸಿಬ್ಬಂದಿಗಳೇ, ಮಾಧ್ಯಮದ ಮಿತ್ರರೇ, ಆಹ್ವಾನಿತರೇ, ಮಹಿಳೆಯರೇ ಹಾಗೂ ಮಹನೀಯರೇ, ತಮ್ಮೆಲ್ಲರನ್ನು ಕನ್ನಡ ವಿಶ್ವವಿದ್ಯಾಲಯದ ಪರವಾಗಿ ಅತ್ಯಂತ ಗೌರವ ಹಾಗೂ ಆದರದಿಂದ ಸ್ವಾಗತಿಸುತ್ತೇನೆ.

೧೭ನೇ ನುಡಿಹಬ್ಬದಲ್ಲಿ ಪಾಲ್ಗೊಂಡಿರುವ ಘನತೆವೆತ್ತ ಕುಲಾಧಿಪತಿಗಳಾದ ಸನ್ಮಾನ್ಯ ಶ್ರೀ ರಾಮೇಶ್ವರ ಠಾಕೂರ್ ಅವರು ಉತ್ತಮ ಸಮಾಜ ಚಿಂತಕರು, ರಾಜಕೀಯ ಮುತ್ಸದ್ಧಿಗಳು. ಶ್ರೀಯುತರು ಈ ನುಡಿಹಬ್ಬದ ಸಂದರ್ಭದಲ್ಲಿ ಡಿ.ಲಿಟ್., ಪಿಎಚ್.ಡಿ. ಹಾಗೂ ಎಂ.ಫಿಲ್ ಪದವಿಯನ್ನು ಪ್ರದಾನ ಮಾಡಲಿದ್ದಾರೆ.

ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಸಚಿವರೂ ಕನ್ನಡ ವಿಶ್ವವಿದ್ಯಾಲಯದ ಸಮಕುಲಾಧಿಪತಿಗಳೂ ಆದ ಸನ್ಮಾನ್ಯ ಶ್ರೀ ಅರವಿಂದ ಲಿಂಬಾವಳಿ ಅವರು ಉತ್ತಮ ಶಿಕ್ಷಣ ಚಿಂತಕರು, ಶೈಕ್ಷಣಿಕ ರಂಗದಲ್ಲಿ ಹೊಸ ಹೊಳಹುಗಳನ್ನು ಅರಸುತ್ತಿರುವ ಯುವ ರಾಜಕಾರಣಿಗಳು. ಅವರು ನುಡಿಹಬ್ಬದ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದು ನುಡಿಹಬ್ಬಕ್ಕೆ ಗೌರವವನ್ನು ತಂದುಕೊಟ್ಟಿದ್ದಾರೆ.

ಶ್ರೀಯುತ ಬರಗೂರು ರಾಮಚಂದ್ರಪ್ಪ ಅವರು ಇಂದಿನ ನುಡಿಹಬ್ಬದ ಘಟಿಕೊತ್ಸವದ ಭಾಷಣವನ್ನು ಮಾಡಲು ಬಂದಿದ್ದಾರೆ. ಬರಗೂರು ರಾಮಚಂದ್ರಪ್ಪ ನವರು ಕನ್ನಡ ಸಾಹಿತ್ಯ ವಲಯದಲ್ಲಿ ಹಾಗೂ ಬಂಡಾಯ ಸಾಹಿತ್ಯ ಸಂಘಟಕರಲ್ಲಿ ತೀರ ಪರಿಚಿತವಾದ ಹೆಸರು. ಬೆಂಗಳುರು ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ ಬರಗೂರು ಅವರು ಸಾಹಿತಿಯಾಗಿ, ಬಂಡಾಯ ಸಾಹಿತ್ಯದ ಮುಂಚೂಣಿಯ ನಾಯಕರಾಗಿ, ಸಮಾಜಪರ ಚಿಂತಕರಾಗಿ ಗುರುತಿಸಿ ಕೊಂಡವರು. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ ಅವರು ಸಾಹಿತ್ಯ ಮತ್ತು ಸಂಸ್ಕೃತಿ ಕ್ಷೇತ್ರಕ್ಕೆ ನೀಡಿದ ಕೊಡುಗೆ ಹಾಗೂ ಹೊಳಹುಗಳು ದೀರ್ಘಕಾಲಿಕವಾದವು. ವಿವಿಧ ಸಂಸ್ಕೃತಿಗಳನ್ನು ಪರಿಚಯಿಸುವ ನಿಟ್ಟಿನಲ್ಲಿ ಅವರ ಯೋಜನೆ ಆ ಸಮುದಾಯಗಳ ಅಧಿಕೃತ ದಾಖಲೀಕರಣಕ್ಕೆ ಕಾರಣವಾಯಿತು. ಬರಗೂರು ರಾಮಚಂದ್ರಪ್ಪ ಅವರು ಸದಾ ಚಿಂತನಾಶೀಲರು. ಅವರ ಬರವಣಿಗೆಗಳು ಸದಾ ವೈಚಾರಿಕೆಯಿಂದ ತುಂಬಿರುತ್ತವೆ. ಅವರು ಒಂದಲ್ಲ ಒಂದು ವಿಚಾರಧಾರೆಯನ್ನು ಹಿಡಿದು ಎಳೆ ಎಳೆಯಾಗಿ ವಿಶ್ಲೇಷಿಸುವ ಅವರ ಉಪನ್ಯಾಸದ ಪರಿ ಅನುಕರಣೀಯ. ಕನ್ನಡ ವಿಶ್ವವಿದ್ಯಾಲಯದ ಮೇಲಿನ ಅಭಿಮಾನದಿಂದ ಅವರು ಇಂದು ಆಗಮಿಸಿ ಘಟಿಕೋತ್ಸವ ಭಾಷಣ ಮಾಡಲಿದ್ದಾರೆ. ಅವರಿಗೆ ಮತ್ತೊಮ್ಮೆ ವಿಶ್ವವಿದ್ಯಾಲಯದ ಪರವಾಗಿ ಸ್ವಾಗತವನ್ನು ಬಯಸುತ್ತೇನೆ.

ಇಂದಿನ ನುಡಿಹಬ್ಬದ ಸಂದರ್ಭದಲ್ಲಿ ಕನ್ನಡ ವಿಶ್ವವಿದ್ಯಾಲಯದ ಪ್ರತಿಷ್ಠಿತ ನಾಡೋಜ ಪ್ರಶಸ್ತಿಗೆ ಭಾಜನರಾದವರಲ್ಲಿ ಪ್ರೊ. ಎಲ್. ಬಸವರಾಜು ಅವರೂ ಒಬರು. ಹಿರಿಯರೂ, ಜ್ಞಾನವೃದ್ಧರೂ ಆಗಿರುವ ಪ್ರೊ. ಎಲ್. ಬಸವರಾಜು ಅವರು ದೀರ್ಘಕಾಲ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದವರು. ಪ್ರಮುಖವಾಗಿ ಅವರು ಶ್ರೇಷ್ಠ ಗ್ರಂಥ ಸಂಪಾದಕರು ಮತ್ತು ಸಾಹಿತ್ಯ ಸಂಶೋಧಕರು. ಮುಖ್ಯವಾಗಿ ಅವರು ತಮ್ಮ ಸೃಜನೇತರ ಸಾಹಿತ್ಯ ಕೃಷಿಯಲ್ಲಿ ತೊಡಗಿಸಿಕೊಂಡರೂ ಸೃಜನ ಸಾಹಿತ್ಯದಲ್ಲಿಯೂ ಸೇವೆ ಸಲ್ಲಿಸಿದ್ದಾರೆ. ತಮ್ಮ ಆಳವಾದ ಅಧ್ಯಯನದ ಮೂಲಕ ಹಸ್ತಪ್ರತಿಗಳಲ್ಲಿನ ಕೃತಿಗಳನ್ನು ಕವಿಗೆ ಸಮೀಪವಾದ ರೀತಿಯಲ್ಲಿ ಸಂಪಾದಿಸಿಕೊಟ್ಟಿರುವದು ಅವರ ಹೆಗ್ಗಳಿಕೆ. ಶಿವದಾಸ ಗೀತಾಂಜಲಿ, ಶಿವಗಣ ಪ್ರಸಾದಿ ಮಹಾದೇವಯ್ಯನ ಶೂನ್ಯ ಸಂಪಾದನೆಯನ್ನು ಪ್ರಥಮ ಬಾರಿಗೆ ಸಂಪಾದಿಸಿದ್ದಾರೆ. ಅಲ್ಲದೆ ಆದಿಪುರಾಣ, ಕನ್ನಡ ಛಂದಸ್ಸು, ಶಬ್ದಮಣಿದರ್ಪಣ, ಪರಮಾರ್ಥ ಮುಂತಾದವು ಪ್ರೊ. ಎಲ್. ಬಸವರಾಜು ಅವರು ಸಂಪಾದಿಸಿದ ಇತರ ಕೃತಿಗಳು. ಹಳಗನ್ನಡ ಕಾವ್ಯಗಳಾದ ಪಂಪಭಾರತ, ಆದಿಪುರಾಣದಂತಹ ಕೃತಿಗಳನ್ನು ಓದುಗರ ಅನುಕೂಲಕ್ಕಾಗಿ ಸರಳ ಪಠ್ಯವಾಗಿ ರೂಪಿಸಿಕೊಟ್ಟವರು. ಅಲ್ಲಮ, ಬಸವ, ಅಕ್ಕಮಹಾದೇವಿ, ದಾಸಿಮಯ್ಯ ಅವರ ವಚನಗಳ ಶಾಸ್ತ್ರೀಯ ಸಂಪಾದನೆ ಬಸವರಾಜು ಅವರ ಹಿರಿಮೆ.

ಕೇಂದ್ರ ಸಾಹಿತ್ಯ ಅಕಾಡೆಮಿ, ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯೂ ಅವರಿಗೆ ಲಭಿಸಿವೆ. ಮೈಸೂರು ವಿಶ್ವವಿದ್ಯಾನಿಲಯ ಅವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿದೆ. ಕರ್ನಾಟಕ ಸರ್ಕಾರ ಅವರಿಗೆ ಪಂಪ ಪ್ರಶಸ್ತಿ ನೀಡಿ ಗೌರವಿಸಿದೆ. ಕನ್ನಡ ವಿಶ್ವವಿದ್ಯಾಲಯ ನಾಡೋಜ ಪದವಿ ನೀಡಿ ಇದೀಗ ಪುರಸ್ಕರಿಸುತ್ತಿದೆ.

ಪ್ರೊ. ಅನಂತಮೂರ್ತಿ ಅವರು ಭಾರತೀಯ ಹಾಗೂ ಜಾಗತಿಕ ಸಾಹಿತ್ಯ ಕ್ಷೇತ್ರದಲ್ಲಿ ಒಬ್ಬ ಅಪರೂಪದ ಲೇಖಕರು. ಸಾಹಿತ್ಯ ಚಳುವಳಿ ಹಾಗೂ ಸಾಮಾಜಿಕ ಚಳುವಳಿಗಳೆರಡರಲ್ಲಿಯೂ ತಮ್ಮನ್ನು ಗುರುತಿಸಿಕೊಂಡಿರುವ ಅನಂತಮೂರ್ತಿ ಅವರು ತಮ್ಮ ಸಣ್ಣಕತೆ ಹಾಗೂ ಕಾದಂಬರಿಗಳು ಹಾಗೂ ಅವುಗಳ ಅನುವಾದದ ಮೂಲಕ ಕನ್ನಡ ಹಾಗೂ ಯುರೋಪಿಯನ್ ಭಾಷೆಗಳಲ್ಲಿ ಚಿರಪರಿಚಿತರು.

ಇಂಗ್ಲಿಷ್ ಪ್ರಾಧ್ಯಾಪಕರಾಗಿ, ಕೇರಳದ ಮಹಾತ್ಮಗಾಂಧಿ ವಿಶ್ವವಿದ್ಯಾಲಯದ ಕುಲಪತಿಯಾಗಿ, ನ್ಯಾಶನಲ್ ಬುಕ್ ಟ್ರಸ್ಟ್ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿ ಅವರು ಸಲ್ಲಿಸಿದ ಸೇವೆ ಅನುಪಮವಾದುದು.

ಸಂಸ್ಕಾರ, ಘಟಶ್ರಾದ್ಧ ಮೊದಲಾದ ಕಾದಂಬರಿ ಹಾಗೂ ಅವುಗಳ ಚಲನಚಿತ್ರ ರೂಪಗಳು ಅವರಿಗೆ ಪ್ರಸಿದ್ಧಿಯನ್ನು ತಂದುಕೊಟ್ಟವು. ತುಮಕೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಅವರಿಗೆ ೧೯೯೪ ರಲ್ಲಿ ಭಾರತದ ಪ್ರತಿಷ್ಠಿತ ಜ್ಞಾನಪೀಠ ಪ್ರಶಸ್ತಿ ಸಂದಿರುವುದು ಕನ್ನಡಿಗರಿಗೆ ಹೆಮ್ಮೆಯ ವಿಷಯ. ಪ್ರೊ. ಅನಂತಮೂರ್ತಿ ಅವರಿಗೆ ಕನ್ನಡ ವಿಶ್ವವಿದ್ಯಾಲಯವು ನಾಡೋಜ ಪದವಿಯನ್ನು ನೀಡಿ ಗೌರವಿಸುತ್ತಿದೆ.

ಶ್ರೀ ಯಡ್ರಾಮನಹಳ್ಳಿ ದೊಡ್ಡಭರಮಪ್ಪ ಅವರು ಜಾನಪದ ನೆಲೆಯಿಂದ ಮೂಡಿ ಬಂದವರು. ತಮ್ಮ ಒಂಬತ್ತನೆಯ ವಯಸ್ಸಿನಿಂದಲೆ ತಾಯಿಯ ತವರುಮನೆಯಿಂದ ತೊಗಲು ಗೊಂಬೆಯಾಟವನ್ನು ಬಳುವಳಿಯಾಗಿ ಪಡೆದು ಅದನ್ನು ನಿರಂತರವಾಗಿ ತಮ್ಮ ಕಾಯಕವಾಗಿ ರೂಪಿಸಿಕೊಂಡವರು. ಕಿಳ್ಳೇಕ್ಯಾತರ ದೊಡ್ಡಭರಮಪ್ಪ ಎಂದೇ ಪರಿಚಿತರಾದ ಇವರು ರಾಮಾಯಣ, ಮಹಾಭಾರತ ಮತ್ತು ಪುರಾಣ ಕಥೆಗಳ ಪ್ರದರ್ಶನಗಳನ್ನು ದೇಶ ವಿದೇಶಗಳಲ್ಲಿ ನೀಡಿದ್ದಾರೆ. ದೊಡ್ಡಭರಮಪ್ಪನವರು. ಮೂರು ನಾಲ್ಕು ದಿನಗಳ ಕಾಲ ಸತತವಾಗಿ ರಾಮಾಯಣದ ಕಥೆಯನ್ನು ತಮ್ಮ ತೊಗಲು ಗೊಂಬೆಗಳ ಮೂಲಕ ಪ್ರದರ್ಶಿಸುವ ಸಾಮರ್ಥ್ಯವನ್ನು ಅವರು ಹೊಂದಿದ್ದಾರೆ. ಪ್ರಧಾನ ಕಥೆಯ ಸಮಯಕ್ಕೆ ತಕ್ಕಂತೆ ಉಪಕಥೆಗಳನ್ನು ಹೆಣೆದು ಪ್ರದರ್ಶಿಸುವ ಚಾಕಚಕ್ಯತೆ ದೊಡ್ಡಭರಮಪ್ಪನವರಲ್ಲಿ ಇದೆ. ವಿಶ್ವವಿದ್ಯಾಲಯಗಳಲ್ಲಿ ನಡೆಸುವ ಜಾನಪದ ಸಮ್ಮೇಳನಗಳಲ್ಲಿ ದೊಡ್ಡಭರಮಪ್ಪನವರು ತಮ್ಮ ಪ್ರದರ್ಶನವನ್ನು ನೀಡಿದ್ದಾರೆ. ಅನೇಕ ಸಂಘ ಸಂಸ್ಥೆಗಳು ಇವರನ್ನು ಸನ್ಮಾನಿಸಿ ಪುರಸ್ಕರಿಸಿವೆ.

ಕಮಲಾದೇವಿ ಚಟ್ಟೋಪಾಧ್ಯಾಯ ಪ್ರಶಸ್ತಿ, ೧೯೮೫-೮೬ ರಲ್ಲಿ ಜರ್ಮನಿಯಲ್ಲಿ ಪ್ರದರ್ಶನ ಹಾಗೂ ಪ್ರಶಸ್ತಿ, ೧೯೯೨ ರಲ್ಲಿ ಕರ್ನಾಟಕ ಸರ್ಕಾರದ ಜಾನಪದಶ್ರೀ ಪ್ರಶಸ್ತಿ ಮುಂತಾದವು ಅವರಿಗೆ ಲಭಿಸಿವೆ. ಪ್ರಸ್ತುತ ಕನ್ನಡ ವಿಶ್ವವಿದ್ಯಾಲಯವು ಶ್ರೀ ಯಡ್ರಾಮನಹಳ್ಳಿ ದೊಡ್ಡಭರಮಪ್ಪ ಅವರಿಗೆ ನಾಡೋಜ ಪದವಿಯನ್ನು ನೀಡಿ ಗೌರವಿಸುತ್ತದೆ.

ಪ್ರೊ. ಕಮಲಾ ಹಂಪನಾ ಅವರದು ಸಾಹಿತ್ಯ ಮತ್ತು ಮಹಿಳಾ ಚಿಂತನೆಗಳಲ್ಲಿ ಗಣನೀಯವಾದ ಹೆಸರು. ಕಥೆ, ಕವನ, ಶಿಶುಸಾಹಿತ್ಯ, ಸಂಶೋಧನೆ, ಸಂಪಾದನೆ, ಜೀವನಚರಿತ್ರೆಗೆ ಸಂಬಂಧಿಸಿದಂತೆ ಅವರು ಕೃಷಿಗೈದಿದ್ದಾರೆ. ಪೂರ್ವದ ಹಳಗನ್ನಡದಿಂದ ಆಧುನಿಕ ಸಾಹಿತ್ಯದವರೆಗಿನ ಗಂಭೀರವಾದ ಚಿಂತನೆ ಮತ್ತು ಸೃಜನಾತ್ಮಕ ಕೃತಿ ರಚನೆಯ ಜೊತೆಜೊತೆಗೆ ಅನುವಾದಿತ ಕೃತಿಗಳನ್ನು ಹೊರತಂದಿದ್ದಾರೆ. ವಿವಿಧ ವಿಷಯಗಳನ್ನು ಕುರಿತಂತೆ ೩೦ಕ್ಕೂ ಹೆಚ್ಚಿನ ಕೃತಿ ರಚಿಸಿದ ಕಮಲಾ ಹಂಪನಾ ಅವರು ಸಾಹಿತ್ಯ ಅಕಾಡೆಮಿ ಸದಸ್ಯರಾಗಿ, ಕಾಲೇಜು ಹರಿಜನ ಗಿರಿಜನ ಅಧ್ಯಾಪಕ ಸಂಘದ ಸಂಘಟಕರಾಗಿ ಸಾಹಿತ್ಯ ಮತ್ತು ಸಮುದಾಯಗಳಲ್ಲಿ ಅಪಾರವಾದ ಸೇವೆ ಸಲ್ಲಿಸಿದ್ದಾರೆ. ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನಾಧ್ಯಕ್ಷ ಪದವಿ ಅವರಿಗೆ ಲಭಿಸಿರುವುದು ಅವರ ಸಾಹಿತ್ಯ ಸಾಧನೆಗೆ ಪ್ರತೀಕ. ದಲಿತವರ್ಗದಿಂದ ಬಂದ ಇವರು ದಲಿತ ಸಂವೇದನೆಯನ್ನು ಸೂಕ್ಷ್ಮವಾಗಿ ಗುರುತಿಸಬಲ್ಲರು. ಅಂಬೇಡ್ಕರ್ ವಿಚಾರಧಾರೆಯಿಂದ ಪ್ರಭಾವಿತರಾದ ಇವರು ರೂಢಿಗತ ಮಾಧ್ಯಮವನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಬಲ್ಲವರು. ಅಂದಿನ ಕಾಲಸಂದರ್ಭದಲ್ಲಿ ಡಾ. ಹಂಪನಾ ಅವರ ಕೈಹಿಡಿಯುವ ಮೂಲಕ ಅಂತರ್ಜಾತಿ ವಿವಾಹಕ್ಕೆ ಮೌಲ್ಯವನ್ನು ತಂದುಕೊಟ್ಟವರು ಕಮಲಾ ಹಂಪನಾ ಅವರು. ಪ್ರೊ. ಕಮಲಾ ಹಂಪನಾ ಅವರಿಗೆ ಕನ್ನಡ ವಿಶ್ವವಿದ್ಯಾಲಯ ನಾಡೋಜ ಪದವಿ ನೀಡಿ ಸನ್ಮಾನಿಸುತ್ತದೆ.

ಡಾ. ಶ್ರೀನಿವಾಸ ಹಾವನೂರ ಅವರು ಹಾವೇರಿ ಜಿಲ್ಲೆಯ ಹಾವನೂರು ಗ್ರಾಮದವರು. ಅವರ ಬಾಳ ಪಯಣ ವೈವಿಧ್ಯಮಯವಾದದ್ದು. ಸಾಂಗ್ಲಿಯ ವೆಲ್ಲಿಂಗ್ಡನ್ ಕಾಲೇಜಿನಲ್ಲಿ ಇಂಗ್ಲಿಷ್ ಭಾಷಾ ಟ್ಯೂಟರ್ ಆಗಿ ಸೇವೆಯನ್ನು ಆರಂಭಿಸಿದ ಹಾವನೂರ ಅವರು ಟಾಟಾ ಇನ್ಸ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರೀಸರ್ಚ್‌ನಲ್ಲಿ ಗ್ರಂಥಪಾಲಕರಾಗಿ, ಮಂಗಳೂರು-ಮುಂಬೈ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರಾಗಿ, ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದಾರೆ. 'ಹೊಸಗನ್ನಡ ಅರುಣೋದಯ', ಗೋವಿಂದ ಪೈ ವಾಙ್ಮಯ ದರ್ಶನ, ಕನ್ನಡದಲ್ಲಿ ಕ್ರೈಸ್ತ ಸಾಹತಿಯ, ಗೋವಿಂದ ಪೈಗಳ ಕೃತಿ ಸಮೀಕ್ಷೆ, ಮುಂತಾದವು ಅವರ ಪ್ರಮುಖ ಕೃತಿಗಳು. ಸಾಹಿತ್ಯ, ಇತಿಹಾಸ, ಕನ್ನಡ ಭಾಷೆ, ಸಾಹಿತ್ಯ ಹಾಗೂ ಸಂಸ್ಕೃತಿಗೆ ವಿದೇಶಿಯರ ಕೊಡುಗೆಯನ್ನು ಕುರಿತಂತೆ ಅಧಿಕೃತ ಬರವಣಿಗೆ ಪ್ರೊ. ಶ್ರೀನಿವಾಸ ಹಾವನೂರ ಅವರದು. ಮರಾಠಿ ನೆಲೆಯಲ್ಲಿ ನಿಂತು ಕನ್ನಡ -ಮರಾಠಿ ಸ್ನೇಹ ಕೇಂದ್ರವಾಗಿ ಅವರು ಸಲ್ಲಿಸಿದ ಸೇವೆ ಗಮನಾರ್ಹ ವಾದದ್ದು. ಮಿಥಿಕ್ ಸೊಸೈಟಿ ಪ್ರಶಸ್ತಿ, ಕಿಟೆಲ್ ಸ್ಮಾರಕ ಪ್ರಶಸ್ತಿ, ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ. ಇತಿಹಾಸ ಸಮ್ಮೇಳನದ ಅಧ್ಯಕ್ಷತೆ ಮೊದಲಾದವು ಪ್ರೊ. ಹಾವನೂರ ಅವರಿಗೆ ಸಂದ ಗೌರವಗಳು. ಪ್ರೊ. ಶ್ರೀನಿವಾಸ ಹಾವನೂರ ಅವರಿಗೆ ಕನ್ನಡ ವಿಶ್ವವಿದ್ಯಾಲಯ ನಾಡೋಜ ಪದವಿಯನ್ನು ನೀಡಿ ಗೌರವಿಸುತ್ತದೆ.

ಕನ್ನಡ ವಿಶ್ವವಿದ್ಯಾಲಯ ಕನ್ನಡ ಭಾಷೆ, ಸಂಸ್ಕೃತಿ ಹಾಗೂ ಪರಂಪರೆಯನ್ನು ಗಮನದಲ್ಲಿರಿಸಿ ಅಧ್ಯಯನಶೀಲವಾಗುವ ನೆಲೆಯಲ್ಲಿ ಅಸ್ತಿತ್ವಕ್ಕೆ ಬಂದಿದೆ. ಸಂಶೋಧನೆಯನ್ನು ತನ್ನ ಉಸಿರನ್ನಾಗಿಸಿಕೊಂಡಿರುವ ವಿಶ್ವವಿದ್ಯಾಲಯ ನಿರಂತರವಾಗಿ ಕನ್ನಡ ಭಾಷೆ, ಸಾಹಿತ್ಯ ಹಾಗೂ ಸಂಸ್ಕೃತಿ ಪರವಾದ ಚಿಂತನೆಗಳನ್ನು ನಡೆಸಿಕೊಂಡು ಬಂದಿದೆ. ಕನ್ನಡಕ್ಕೆ ಶಾಸ್ತ್ರೀಯ ಸ್ಥಾನ ಸಲ್ಲುತ್ತಿರುವ ಈ ಸಂದರ್ಭದಲ್ಲಿ ಕನ್ನಡವನ್ನು ನಿರಂತರವಾಗಿಸುವ ದಿಸೆಯಲ್ಲಿ ಅದು ಇನ್ನಷ್ಟು ತೀವ್ರವಾಗಿ ಕಾರ್ಯಪ್ರವೃತ್ತವಾಗುವ ಆವಶ್ಯಕತೆ ಇದೆ. ಕನ್ನಡವನ್ನು ಉಳಿಸುವುದು ಎಂದರೆ ಕನ್ನಡ ಸಂಸ್ಕೃತಿಯನ್ನು ಉಳಿಸುವುದು. ಸಂಸ್ಕೃತಿಯನ್ನು ಹೊರತುಪಡಿಸಿ ಯಾವುದೇ ಭಾಷೆ ಇರಲಾರದ ಕಾರಣ, ಕನ್ನಡ ದೇಶಿ ಸಂಸ್ಕೃತಿಯನ್ನು ಉಳಿಸುವ ಮೂಲಕ ಕನ್ನಡ ಭಾಷೆಯನ್ನು ನಿರಂತರವಾಗಿಸುವ ನಿಟ್ಟಿನಲ್ಲಿ ಯೋಚಿಸಬೇಕಾಗಿದೆ. ಪ್ರಸ್ತುತ ಜೀವಂತವಿರುವ ಹಾಗೂ ಬದಲಾವಣೆಗೆ ಒಳಗಾಗುತ್ತಿರುವ ಸಂಸ್ಕೃತಿಗಳನ್ನು ಹಿಡಿದಿಡುವ, ದಾಖಲಿಸುವ ನಿಟ್ಟಿನಲ್ಲಿ ತೀವ್ರಗತಿಯಿಂದ ಧಾವಿಸಬೇಕಾಗಿದೆ. ಈ ನಿಟ್ಟಿನಲ್ಲಿ ಕನ್ನಡ ವಿಶ್ವವಿದ್ಯಾಲಯ ಕಾರ್ಯ ಯೋಜನೆಗಳನ್ನು ರೂಪಿಸಿಕೊಳ್ಳುತ್ತಿದೆ. ದೇಶಿ ಸಂಸ್ಕೃತಿ ಹಾಗೂ ಉನ್ನತ ತಾಂತ್ರಿಕತೆಯಂತಹ ಆಧುನಿಕ ಕಲ್ಪನೆಗಳ ಬಳಕೆಗಳ ನಡುವೆ ಕೊಂಡಿಯನ್ನು ಬೆಸೆಯುವುದು ಕೂಡ ಅಷ್ಟೇ ಮುಖ್ಯವಾಗಿದೆ. ಕನ್ನಡ ಎಂಬುದು ಒಂದೇ ಅಲ್ಲ. ಕವಿರಾಜಮಾರ್ಗಕಾರ ೧೦ ನೇ ಶತಮಾನದ ಹೊತ್ತಿಗೆ 'ಕನ್ನಡಂಗಳ್' ಎಂಬ ಪದ ಪ್ರಯೋಗ ಮಾಡಿದ್ದಾನೆ. ಈ ಮೂಲಕ ಕನ್ನಡ ಪ್ರಭೇದಗಳ ಬಗ್ಗೆ, ಉಪಭಾಷೆಗಳ ಬಗ್ಗೆ ಪ್ರಸ್ತಾಪಿಸಿದ್ದಾನೆ. ಇಂದಿಗೂ ಕನ್ನಡದಲ್ಲಿನ ಭೌತಿಕ ಪರಿಸರ, ಅದರಿಂದ ನಿರೂಪಿತವಾಗಬಹುದಾದ ಆಚಾರ-ವಿಚಾರಗಳು, ಪ್ರಾದೇಶಿಕ ರೂಪಗಳು, ಸಾಮಾಜಿಕ ರೂಪಗಳು. ಅಲ್ಲದೆ, ಕಾಲಕಾಲಕ್ಕೆ ಬದಲಾದ ಸಂಸ್ಕೃತಿಯ ಅಂಶಗಳನ್ನು ಗರ್ಭೀಕರಿಸಿಕೊಂಡಿರುವ ಭಿನ್ನರೂಪಗಳನ್ನು ಹಿಡಿದಿಡುವ ಅವಶ್ಯಕತೆ ಇದೆ. ಯಾವುದೇ ಒಂದು ಸಮುದಾಯದ ಭಾಷಾ ರಚನೆ, ಶಬ್ದಕೋಶ, ಅವರವರ ವೃತ್ತಿ, ಪರಿಸರಕ್ಕೆ ಅನುಗುಣವಾಗಿ ಬದಲಾಗುವ ಕಾರಣ ಈ ಎಲ್ಲ ಅಂಶಗಳಿಗೆ ಸಂಬಂಧಿಸಿದಂತೆ ಉಪಭಾಷಾ ಕೋಶಗಳು, ಪಾರಿಭಾಷಿಕ ಕೋಶಗಳು, ನಿಘಂಟುಗಳು ರಚಿತವಾಗಬೇಕಿದೆ. ಕನ್ನಡ ವಿಶ್ವವಿದ್ಯಾಲಯ ಈ ದಿಸೆಯಲ್ಲಿ ಈಗಾಗಲೇ ಕಾರ್ಯ ಯೋಜನೆಯನ್ನು ಸಿದ್ಧಪಡಿಸಿದೆ.

ಕನ್ನಡ ಭಾಷೆಯನ್ನು ಕನ್ನಡಿಗರು ಬಳಕೆಯಲ್ಲಿ ಹಿಡಿದಿಡುವ ರೀತಿ ಹಾಗೂ ಕನ್ನಡೇತರರು ಕನ್ನಡ ಭಾಷೆಯ ಬಗ್ಗೆ ಆಸ್ಥೆಯನ್ನು ತಾಳುವ ರೀತಿಯ ಕುರಿತು ಯೋಜನೆಗಳನ್ನು ಹಮ್ಮಿಕೊಳ್ಳಬೇಕಿದೆ. ಹೊರ ರಾಜ್ಯದವರು. ಹೊರ ರಾಷ್ಟ್ರದವರು ಕನ್ನಡವನ್ನು ಕಲಿಯಲು ಅನುವಾಗುವ ರೀತಿಯಲ್ಲಿ ಪಠ್ಯಗಳ ನಿರ್ಮಾಣ ಆಗಬೇಕಿದೆ. ಕನ್ನಡ ಭಾಷೆಯ ಸಾಹಿತ್ಯ ಕೃತಿಗಳ ಅನುವಾದ ಆಗಬೇಕಿದೆ. ಅಂತೆಯೇ ವೃತ್ತಿಪರ ಕೋರ್ಸ್‌ಗಳಲ್ಲಿ ಕನ್ನಡ ಭಾಷೆಯಲ್ಲಿ ಪಠ್ಯವನ್ನಾಗಿ ರೂಪಿಸುವ ಆವಶ್ಯಕತೆಯೂ ಇದೆ. ಆ ಮೂಲಕ ವಿದ್ಯಾರ್ಥಿಗಳಲ್ಲಿ ಮಾತೃಭಾಷೆಯ ಮುಖಾಂತರ ಅರ್ಥೈಸಿಕೊಳ್ಳಬಹುದಾದ ಸೌಲಭ್ಯವನ್ನು ಒದಗಿಸಬೇಕಿದೆ.

ಕನ್ನಡ ಭಾಷೆಯ ಬಳಕೆ ಹಾಗೂ ತಾಂತ್ರಿಕತೆ ಜೊತೆಜೊತೆಯಾಗಿ ನಡೆಯಬೇಕಿದೆ. ಕನ್ನಡ ಭಾಷೆಯನ್ನು ಕಂಪ್ಯೂಟರ್ ಮೂಲಕ ಸಮರ್ಪಕವಾಗಿ ಬಳಸುವ ದಿಸೆಯಲ್ಲಿ ಮುನ್ನಡೆಯಬೇಕಾಗಿದೆ. ಇಂಗ್ಲಿಷಿಗಿರುವಂತೆ ಕಾಗುಣಿತ ಸರಿಪಡಿಸುವಿಕೆ, ಭಾಷಾ ತರ್ಜುಮೆ, ಒಸಿಆರ್‌ನಂತಹ ತಂತ್ರಾಂಶವನ್ನು ರೂಪಿಸುವ ಅವಶ್ಯಕತೆ ಇದೆ. ಮಾತು ಮತ್ತು ತಾಂತ್ರಿಕತೆ, ತಾಂತ್ರಿಕತೆ ಮತ್ತು ಮಾತಿಗೆ ಸಂಬಂಧಿಸಿದಂತೆ ಯೋಜನೆಯನ್ನು ತಯಾರಿಸುತ್ತಿದೆ.

ಕನ್ನಡ ಕಲಿಕೆ ಸಂಬಂಧಿಸಿದಂತೆ, ದೋಷರಹಿತಕಲಿಕೆ ಯೋಜನೆಯನ್ನು ಕನ್ನಡ ವಿಶ್ವವಿದ್ಯಾಲಯವು ಕರ್ನಾಟಕ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ. ಕರ್ನಾಟಕದ ಕುಶಲ ಕಲೆಗಳನ್ನು ಮುಂದುವರಿಸುವ ದಿಶೆಯಲ್ಲಿ ನಿರಂತರವಾಗಿ ಕಮ್ಮಟಗಳನ್ನು ಏರ್ಪಡಿಸಿ ಮುಂದಿನ ಪೀಳಿಗೆಗೆ ರವಾನಿಸುವ ಯೋಜನೆ ವಿಶ್ವವಿದ್ಯಾಲಯಕ್ಕೆ ಇದೆ.

ಈ ಎಲ್ಲ ಕಾರ್ಯಗಳು ಕಾರ್ಯರೂಪಕ್ಕೆ ಬರುವಲ್ಲಿ ವಿಶ್ವವಿದ್ಯಾಲಯದ ಎಲ್ಲ ಅಧ್ಯಾಪಕವರ್ಗ, ವಿದ್ಯಾರ್ಥಿ ಸಮುದಾಯ ಹಾಗೂ ಆಡಳಿತ ಸಿಬ್ಬಂದಿವರ್ಗ ಎಂದಿನಂತೆ ಒಂದಾಗಿ ದುಡಿಯಬೇಕಾಗಿದೆ. ವಿಶ್ವವಿದ್ಯಾಲಯದ ಎಲ್ಲ ವಿಭಾಗಗಳು ಈ ದಿಸೆಯಲ್ಲಿ ಚಟುವಟಿಕೆಗಳನ್ನು ಹಮ್ಮಿಕೊಂಡಿವೆ. ವೈಯಕ್ತಿಕ ಯೋಜನೆಗಳು ಅಂತೆಯೇ ಸಾಮೂಹಿಕ ಯೋಜನೆಗಳನ್ನು ಹಮ್ಮಿಕೊಂಡಿವೆ. ಅಭಿವೃದ್ಧಿ ಅಧ್ಯಯನ ವಿಭಾಗವು ನಿರಂತರವಾಗಿ ಸಮುದಾಯಮುಖಿಯಾದ ಕಾರ್ಯಕ್ರಮಗಳನ್ನು ನಿಯೋಜಿಸುತ್ತಿದೆ. ವಿಭಾಗವು ಸಲ್ಲಿಸಿದ ಕೆಲವು ಶಿಫಾರಸ್ಸುಗಳನ್ನು ಸರಕಾರ ಅನುಷ್ಠಾನಕ್ಕೆ ತಂದಿದೆ. ವಿಭಾಗವು ಆರೋಗ್ಯ ಇಲಾಖೆಯ ನೌಕರರಿಗೆ ಸಂಬಂಧಿಸಿದಂತೆ, ವಿದ್ಯಾರ್ಥಿನಿಯರಿಗೆ ಸಂಬಂಧಿಸಿದಂತೆ ವಿಚಾರ ಸಂಕಿರಣಗಳನ್ನು ಹಮ್ಮಿಕೊಂಡಿತ್ತು.

ಚರಿತ್ರೆ ವಿಭಾಗದ ಮುಖ್ಯಸ್ಥರಾದ ಡಾ. ವಿರೂಪಾಕ್ಷಿ ಪೂಜಾರಹಳ್ಳಿ ಅವರು 'ವಿಜಯನಗರ ಕಾಲದ ಸಂಸ್ಕೃತಿ' ಎಂಬ ಗ್ರಂಥ ರಚಿಸಿದ್ದಾರೆ. 'ಕೃಷ್ಣದೇವರಾಯ' ಗ್ರಂಥದ ಸಂಪಾದಕರಲ್ಲಿ ಒಬ್ಬರಾಗಿ ಕಾರ್ಯನಿರ್ವಹಿಸಿದ್ದಾರೆ. ಡಾ. ಟಿ.ಪಿ. ವಿಜಯ್ ಅವರು ಚರಿತ್ರೆಯ ಏಳು ಸಂಪುಟಗಳ ಪ್ರಧಾನ ಸಂಪಾದಕರಾಗಿ ಕೆಲಸ ಮಾಡುತ್ತಿದ್ದಾರೆ. ಡಾ. ಮೋಹನಕೃಷ್ಣ ರೈ ಅವರು 'ಏಷ್ಯಾ-ಯುರೋಪ್' ಸಂಪುಟದ ಸಂಪಾದಕರಾಗಿದ್ದಾರೆ. ಡಾ. ಚೆನ್ನಸ್ವಾಮಿ ಸೋಸಲೆ ಅವರು 'ಭಾರತೀಯ ಸಮಾಜ ಮತ್ತು ದಲಿತರು' ಎಂಬ ಕೃತಿ ರಚಿಸಿದ್ದಾರೆ. 'ಸಮಕಾಲೀನ ಕರ್ನಾಟಕ' ಮತ್ತು 'ಸಮಕಾಲೀನ ಆಫ್ರಿಕಾ' ಸಂಪುಟಗಳ ಸಿದ್ಧತೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಡಾ. ಸಿ.ಆರ್. ಗೋವಿಂದರಾಜು ಅವರು ವಿಭಾಗದಿಂದ ಈ ವರ್ಷ 'ವಿಜಯನಗರೋತ್ತರ ಕರ್ನಾಟಕದ ಪಾಳೆಯಗಾರರನ್ನು ಕುರಿತು ವಿಚಾರ ಸಂಕಿರಣ'ವನ್ನು ಹಮ್ಮಿಕೊಂಡಿದ್ದಾರೆ.

ಜಾನಪದ ವಿಭಾಗದ ಡಾ. ಮೊಗಳ್ಳಿ ಗಣೇಶ ಅವರು 'ನಡುಗಾಲದ ಕನ್ನಡನಾಡು' ಕೃತಿ ರಚಿಸಿದ್ದಾರೆ. ಡಾ. ರಹಮತ್ ತರೀಕೆರೆ ಅವರು 'ಕರ್ನಾಟಕದ ಸೂಫಿಗಳು' ಕೃತಿ ರಚಿಸಿದ್ದಾರೆ. 'ಕವಿರಾಜಮಾರ್ಗ: ಸಾಂಸ್ಕೃತಿಕ ಮುಖಾಮುಖಿ' ಹಾಗೂ 'ಹೊಸ ತಲೆಮಾರಿನ ತಲ್ಲಣ' ಗ್ರಂಥಗಳನ್ನು ಸಂಪಾದಿಸಿದ್ದಾರೆ. ಡಾ. ಎಂ. ಚಂದ್ರಪೂಜಾರಿ ಅವರು 'ದೇಸೀಯತೆಯ ನೆರಳಲ್ಲಿ ವಿಕೇಂದ್ರೀಕರಣ', 'ಕರಾವಳಿ ಕರ್ನಾಟಕದ ಕೋಮುವಾದ' ಕೃತಿಗಳನ್ನು ರಚಿಸಿದ್ದಾರೆ. ಡಾ. ಮಂಜುನಾಥ ಬೇವಿನಕಟ್ಟಿ ಅವರು 'ರಾಮಾಯಣ: ಮರುದರ್ಶನ' ಕೃತಿ ಸಂಪಾದಿಸಿದ್ದಾರೆ. ಡಾ. ಎಫ್.ಟಿ. ಹಳ್ಳಿಕೇರಿ ಅವರು 'ಹಸ್ತಪ್ರತಿ ವ್ಯಾಸಂಗ-೮'ನ್ನು ಸಂಪಾದಿಸಿದ್ದಾರೆ. ಡಾ. ವಿರೂಪಾಕ್ಷಿ ಪೂಜಾರಹಳ್ಳಿ ಅವರು 'ಬೇಡ ಬುಡಕಟ್ಟು ಚರಿತ್ರೆ ಮತ್ತು ಸಂಸ್ಕೃತಿ' ಕೃತಿ ರಚಿಸಿದ್ದಾರೆ. ಡಾ. ಟಿ.ಆರ್. ಚಂದ್ರಶೇಖರ ಅವರು 'ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಸ್ಥಿತಿಗತಿ', 'ಲಿಂಗಸಂಬಂಧಿ ಅಭಿವೃದ್ಧಿ ಅಧ್ಯಯನ ಪ್ರಬಂಧಗಳು' ಕೃತಿಗಳನ್ನು ರಚಿಸಿದ್ದಾರೆ. ಡಾ. ಬಿ.ಎಂ. ಪುಟ್ಟಯ್ಯ ಅವರು 'ದಲಿತರು ಮತ್ತು ಭೂಮಿಯ ಪ್ರಶ್ನೆ' ಎಂಬ ಕೃತಿ ರಚಿಸಿದ್ದಾರೆ. ಡಾ. ಎಸ್.ಎಸ್. ಅಂಗಡಿ ಅವರು 'ಹೊಸಗನ್ನಡ ಛಂದಸ್ಸು' ಎಂಬ ಕೃತಿಯನ್ನು ರಚಿಸಿದ್ದಾರೆ. ಇವುಗಳನ್ನು ಒಳಗೊಂಡಂತೆ ೨೫ ಪುಸ್ತಕಗಳನ್ನು ಕರ್ನಾಟಕದ ಘನತೆವೆತ್ತ ರಾಜ್ಯಪಾಲರೂ ಕನ್ನಡ ವಿಶ್ವವಿದ್ಯಾಲಯದ ಕುಲಾಧಿಪತಿಗಳೂ ಆದ ಸನ್ಮಾನ್ಯ ರಾಮೇಶ್ವರ ಠಾಕೂರ್ ಅವರು ಇಂದು ಬಿಡುಗಡೆ ಮಾಡಿದ್ದಾರೆ.

ಪ್ರಾಚೀನ ಇತಿಹಾಸ ವಿಭಾಗವು ಸ್ಥಳೀಯ ಚರಿತ್ರೆ ಮತ್ತು ಪುರಾತತ್ವಮಾಲೆ ಅಡಿಯಲ್ಲಿ ಬಸವನಬಾಗೇವಾಡಿಯಲ್ಲಿ ರಾಷ್ಟ್ರೀಯ ವಿಚಾರ ಸಂಕಿರಣ, ನಾಗಮಂಗಲ, ಜಗಳೂರಿನಲ್ಲಿ ಸ್ಥಳೀಯ ಚರಿತ್ರೆಯನ್ನು ಕುರಿತಂತೆ ವಿಚಾರ ಸಂಕಿರಣವನ್ನು ಹಮ್ಮಿಕೊಂಡಿತ್ತು. ಈ ಮೂಲಕ ಪುಸ್ತಕವನ್ನು ಪ್ರಕಟಿಸಿದೆ. ದೇವಾಲಯ ಕೋಶಗಳು ಪ್ರಕಟವಾಗುತ್ತಿವೆ.

ಭಾಷಾಂತರ ವಿಭಾಗದಿಂದ ಮಧ್ಯಕಾಲೀನ ಮಹಾಕಾವ್ಯ ಮತ್ತು ಕರ್ನಾಟಕದಲ್ಲಿ ವಿಠ್ಠಲಪಂಥ ಕುರಿತ ಯೋಜನೆ. 'ಲಿಂಗಭೇದ ಮತ್ತು ಭಾಷಾಂತರ' ಕುರಿತಂತೆ ವಿಚಾರ ಸಂಕಿರಣ, 'ಭಾಷಾಂತರ ದತ್ತ ಕಣಜ' ನಿರ್ಮಾಣ ಯೋಜನೆ ಮೊದಲಾದ ಯೋಜನೆಗಳು ಕಾರ್ಯರೂಪಕ್ಕೆ ಬರುತ್ತಿವೆ. ಭಾಷಾಂತರ ಅಧ್ಯಯನ ವಿಭಾಗದಿಂದ ಡಾ. ಮೋಹನ ಕುಂಟಾರ್ ಅವರು 'ಕನ್ನಡದಲ್ಲಿ ಧಾರ್ಮಿಕ ಪಠ್ಯಗಳ ಭಾಷಾಂತರ' ಎಂಬ ವಿಚಾರಸಂಕಿರಣವನ್ನು ಜನವರಿ ತಿಂಗಳಲ್ಲಿ ಹಮ್ಮಿಕೊಂಡಿದ್ದಾರೆ.

ಲೋಕಸಭಾ ಸದಸ್ಯರಾದ ಶ್ರೀ ಕೆ.ವಿರೂಪಾಕ್ಷಪ್ಪ ಅವರು ಸ್ಥಳೀಯ ಪ್ರದೇಶ ಅಭಿವೃದ್ಧಿ ಯೋಜನೆಯಡಿ ಸಂಸದರ ಅನುದಾನದಿಂದ 'ಹಾಲುಮತ ಭವನ' ನಿರ್ಮಾಣವಾಗಿದೆ. ಹಾಲುಮತ ಅಧ್ಯಯನ ಪೀಠದಿಂದ ಗದಗ, ಅಥಣಿಯಲ್ಲಿ ವಿಚಾರ ಸಂಕಿರಣ, ಶಿಬಿರಗಳು ನಡೆದಿವೆ. ಹಾಲುಮತ ಅಧ್ಯಯನ ಪೀಠವು ದಾನಿಗಳ ನೆರವಿನಿಂದ ಪುಸ್ತಕ ಪ್ರಕಟಣೆಗೆ ಮುಂದಾಗಿದೆ.

ನಾಡೋಜ ಡಾ. ರಾಜಕುಮಾರ್ ಅಧ್ಯಯನ ಪೀಠದ ಮೂಲಕ ಶ್ರವ್ಯ ಮತ್ತು ದೃಶ್ಯ ಗ್ರಂಥಾಲಯ ತೆರೆಯಲಾಗಿದೆ. ರಾಜಕುಮಾರ್ ಅವರ ಚಲನಚಿತ್ರಗಳ ಸಿ.ಡಿ.ಗಳನ್ನು ಸಂಗ್ರಹಿಸಲಾಗಿದೆ. ರಂಗಭೂಮಿ ಹಾಗೂ ಚಲನಚಿತ್ರಗಳಿಗೆ ಸಂಬಂಧಿಸಿದಂತೆ ಕೃತಿಗಳನ್ನು ಸಂಗ್ರಹಿಸಲಾಗಿದೆ.

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗವು ಮ್ಯಾಕ್ಸಿಂಗಾರ್ಕಿ, ಹಾಲುಮತ ಪುರಾಣವನ್ನು ಕುರಿತಂತೆ ವಿಚಾರ ಸಂಕಿರಣವನ್ನು ಹಮ್ಮಿಕೊಂಡಿತ್ತು. ಮಹಿಳಾ ಅಧ್ಯಯನ ವಿಭಾಗವು 'ಮಹಿಳಾ ವಿಷಯ ವಿಶ್ವಕೋಶ', 'ಪೂರಕ ಸಾಹಿತ್ಯ' ನಿರ್ಮಾಣ ಯೋಜನೆಗಳನ್ನು ಹಮ್ಮಿಕೊಂಡಿದೆ. ಗುಲಬರ್ಗಾ, ಬಳ್ಳಾರಿ, ಬೆಂಗಳೂರು, ತಿಕೋಟ, ದೇವರಗೋನಾಳದಲ್ಲಿ ಮಹಿಳಾ ಜಾಗೃತಿ ಶಿಬಿರಗಳನ್ನು ನಡೆಸಿದೆ.

ಬುಡಕಟ್ಟು ಅಧ್ಯಯನ ವಿಭಾಗವು ಗೋಕರ್ಣದಲ್ಲಿ ಬುಡಕಟ್ಟು ಸಮ್ಮೇಳನವನ್ನು ಹಮ್ಮಿಕೊಂಡಿತ್ತು. ಬುಡಕಟ್ಟು ಅಧ್ಯಯನ ವಿಭಾಗದಿಂದ 'ಚುನಾಯಿತ ಪಂಚಾಯತ್ ಸದಸ್ಯರಿಗಾಗಿ ತರಬೇತಿ ಶಿಬಿರವನ್ನು ನಡೆಸಲಾಯಿತು. ವಿಭಾಗದ ಅಧ್ಯಾಪಕರು ವಿಶೇಷ ಅನುದಾನದಡಿಯಲ್ಲಿ ಐವತ್ತು ಬುಡಕಟ್ಟುಗಳನ್ನು ಕುರಿತ ವರದಿ ತಯಾರಿಸುತ್ತಿದ್ದಾರೆ.

ಹಸ್ತಪ್ರತಿ ವಿಭಾಗ ಹಾಗೂ ಶಾಸನಶಾಸ್ತ್ರ ವಿಭಾಗಗಳು ಹಸ್ತಪ್ರತಿ, ಶಾಸನಶಾಸ್ತ್ರ ಕುರಿತಂತೆ ವಿಶೇಷ ತರಬೇತಿ ಶಿಬಿರಗಳನ್ನು ನಡೆಸಿ ನೂರಾರು ವಿದ್ಯಾರ್ಥಿಗಳಲ್ಲಿ ಆಸಕ್ತಿಯನ್ನು ಮೂಡಿಸಿದೆ.

ಕನ್ನಡ ಭಾಷಾಧ್ಯಯನ ವಿಭಾಗ, ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗಗಳು ನಿರಂತರವಾಗಿ ಸಂಶೋಧನೆ, ವಿಚಾರ ಸಂಕಿರಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬರುತ್ತಿದೆ.

ಸಂಗೀತ ಮತ್ತು ನೃತ್ಯ ವಿಭಾಗ ಹಾಗೂ ದೃಶ್ಯಕಲಾ ವಿಭಾಗಗಳು ಬೋಧನೆ, ಸಂಶೋಧನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿವೆ.

ದೃಶ್ಯಕಲಾ ವಿಭಾಗವು ದೆಹಲಿ, ಕುಪ್ಪಂ, ಹೈದ್ರಾಬಾದ್, ಕೇರಳ, ಅನಂತಪುರ, ಬೆಂಗಳೂರಿನ ವೆಂಕಟಪ್ಪ ಆರ್ಟ್ ಗ್ಯಾಲರಿ, ತುಮಕೂರು ವಿಶ್ವವಿದ್ಯಾಲಯಗಳಲ್ಲಿ ಸಮೂಹ ಚಿತ್ರಕಲಾ ಪ್ರದರ್ಶನಗಳನ್ನು ನಡೆಸಿದೆ. ವಿಭಾಗದಲ್ಲಿ ಚಿತ್ರಕಲಾ ವಿಚಾರ ಸಂಕಿರಣ, ಹಸೆ ಚಿತ್ರಕಲೆಯ ಕಮ್ಮಟ, ಕಲಾಶಿಬಿರ, ಹಿರಿಯ ಕಲಾವಿದರ ವಿಶೇಷ ಉಪನ್ಯಾಸ, ಕಲಾ ಪ್ರಾತ್ಯಕ್ಷಿಕೆಗಳು ನಡೆದಿವೆ. ಡಾ. ಎಸ್.ಸಿ. ಪಾಟೀಲ್ ಅವರಿಗೆ

ಮುಂಬೈಯಲ್ಲಿ ರಾಷ್ಟ್ರೀಯ ಶಿಕ್ಷಾರತ್ನ ಪ್ರಶಸ್ತಿ, ಉಡುಪಿಯ ಉಪಾಧ್ಯಾಯ ಪ್ರಶಸ್ತಿಗಳು ಲಭಿಸಿವೆ. ಚಿತ್ರಕಲಾ ಶಾಲೆಗಳ ನಿರ್ವಹಣಾ ಕೇಂದ್ರದಲ್ಲಿ ಬಿ.ವಿ.ಎ, ಎ.ಟಿ.ಸಿ, ಡಿಪ್ಲೊಮ, ಬಿ.ವಿ.ಇಡಿ ಕೋರ್ಸ್‌ಗಳಲ್ಲಿ ಒಟ್ಟು ನಾಲ್ಕು ಸಾವಿರದ ಮುನ್ನೂರು ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ.

ನಮ್ಮ ವಿಶ್ವವಿದ್ಯಾಲಯದಲ್ಲಿ ಸರ್ಕಾರ ಮತ್ತು ಸಾರ್ವಜನಿಕರ ನೆರವಿನಿಂದ ಅನೇಕ ಅಧ್ಯಯನ ಪೀಠಗಳು ಕಾರ್ಯ ನಿರ್ವಹಿಸುತ್ತಿವೆ. ಈ ಪೀಠಗಳು ವಿಚಾರಸಂಕಿರಣಗಳನ್ನು ಏರ್ಪಡಿಸುತ್ತಿವೆ. ಕಮ್ಮಟಗಳನ್ನು ಸಂಘಟಿಸುತ್ತಿವೆ.

ಪ್ರಸ್ತುತ ವರ್ಷದಲ್ಲಿ ಪ್ರಸಾರಾಂಗವು ೫೩ ಗ್ರಂಥಗಳನ್ನು ಹೊರ ತಂದಿದೆ. ಪುಸ್ತಕ ಮಾರಾಟಕ್ಕೆ ಸಂಬಂಧಿಸಿದಂತೆ 'ಪುಸ್ತಕ ಸಂಸ್ಕೃತಿ ಯಾತ್ರೆ'ಯನ್ನು ಯೋಜಿಸಲಾಗಿದೆ. ದೂರಶಿಕ್ಷಣದ ಮೂಲಕ ಅನೇಕ ಕೋರ್ಸ್‌ಗಳಲ್ಲಿ ಅಧ್ಯಯನ ಮಾಡಿ ವಿದ್ಯಾರ್ಥಿಗಳು ಪ್ರಯೋಜನ ಪಡೆಯುತ್ತಿದ್ದಾರೆ.

ಕುಪ್ಪಳಿ, ಬಾದಾಮಿ, ಕೂಡಲಸಂಗಮ ಅಧ್ಯಯನ ಕೇಂದ್ರಗಳ ಜೊತೆ ಕುರುಬನ ಕಟ್ಟೆಯಲ್ಲಿಯೂ ಉಪೇಕ್ಷಿತ ಸಮುದಾಯಗಳ ಅಧ್ಯಯನಕ್ಕಾಗಿ ಪ್ರತ್ಯೇಕ ಕೇಂದ್ರವನ್ನು ತೆರೆಯಲಾಗಿದೆ. ಈ ಎಲ್ಲ ಕೇಂದ್ರಗಳಲ್ಲಿ ಸಂಶೋಧನೆ, ಪ್ರಕಟಣೆಯ ಕಾರ್ಯ ಮುಂದುವರಿದಿದೆ.

ಈ ವರ್ಷ ಹಿಂದುಳಿದ ವರ್ಗಗಳ ಆಯೋಗದ ಜೊತೆಗೂಡಿ 'ಹಿಂದುಳಿದ ವರ್ಗಗಳ ಸಮೀಕ್ಷೆ'ಗೆ ಸಂಬಂಧಿಸಿದಂತೆ ಮೂರು ದಿನಗಳ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ನಾಡಿನ ಸುಮಾರು ನೂರಕ್ಕೂ ಹೆಚ್ಚು ಹೆಸರಾಂತ ಸಮುದಾಯ ಅಧ್ಯಯನ ತಜ್ಞರು ಶಿಬಿರದಲ್ಲಿ ಭಾಗವಹಿಸಿ ಪ್ರಶ್ನಾವಳಿ ತಯಾರಿಯಲ್ಲಿ ಅಮೂಲ್ಯವಾದ ಸಲಹೆ, ಸೂಚನೆ ನೀಡಿದ್ದಾರೆ.

ಕನ್ನಡ ವಿಶ್ವವಿದ್ಯಾಲಯವು ಇಂದಿರಾಗಾಂಧಿ ರಾಷ್ಟ್ರೀಯ ಕಲಾಕೇಂದ್ರ, ಬೆಂಗಳೂರು, ಹಿಂದುಳಿದ ವರ್ಗಗಳ ಆಯೋಗ, ಕರ್ನಾಟಕ ಸರ್ಕಾರ, ವಿವಿಧ ಅಕಾಡೆಮಿಗಳು, ಬುಡಕಟ್ಟು ಕಲ್ಯಾಣ ಇಲಾಖೆ, ಹಂಪಿ ಅಭಿವೃದ್ಧಿ ಪ್ರಾಧಿಕಾರ, ರಾಜ್ಯ ಪ್ರಾಚ್ಯ ಮತ್ತು ಪುರಾತತ್ವ ಇಲಾಖೆ, ಮೈಸೂರಿನ ಭಾರತೀಯ ಭಾಷಾ ಸಂಸ್ಥೆಗಳ ಜೊತೆಗೆ ನಿರಂತರವಾಗಿ ಅನೇಕ ಕ್ರಿಯಾ ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸುತ್ತಾ ಬಂದಿದೆ.

ಕನ್ನಡ ಸಾಹಿತ್ಯ ವಿಭಾಗದ ಡಾ. ಅಮರೇಶ ನುಗಡೋಣಿ ಅವರಿಗೆ 'ಚದುರಂಗ ಪ್ರಶಸ್ತಿ' ಮತ್ತು 'ಕುಂವೀ ಕಥಾ ಪ್ರಶಸ್ತಿ', ಬುಡಕಟ್ಟು ವಿಭಾಗದ ಡಾ. ಕೆ.ಎಂ. ಮೇತ್ರಿ ಅವರಿಗೆ 'ದೇವರಾಜ ಅರಸು ಪ್ರಶಸ್ತಿ', ಶಾಸನಶಾಸ್ತ್ರ ವಿಭಾಗದ ಡಾ.ಕೊಟ್ರೇಶ್ ಅವರಿಗೆ 'ಆದಿಗುರು ಶಂಕರ ಪ್ರಶಸ್ತಿ', ಡಾ. ವೀರೇಶ ಬಡಿಗೇರ ಅವರಿಗೆ ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗವು 'ರಾಜ್ಯೋತ್ಸವ ಕೃತಿ ಪ್ರಶಸ್ತಿ'ಯನ್ನು ಪುಸ್ತಕಕ್ಕೆ ನೀಡಿದೆ.

ನಮ್ಮ ವಿದ್ಯಾರ್ಥಿಗಳು ಸದಾ ಅಧ್ಯಯನಶೀಲರು. ನಮ್ಮ ವಿಶ್ವವಿದ್ಯಾಲಯದ ೧೭ ಜನ ವಿದ್ಯಾರ್ಥಿಗಳು ಯುಜಿಸಿಯ ರಾಜೀವ್‌ಗಾಂಧಿ ಶಿಷ್ಯವೇತನ ಪಡೆಯುವಲ್ಲಿ ಸಫಲರಾಗಿದ್ದಾರೆ. ಬುಡಕಟ್ಟು ಅಧ್ಯಯನ ವಿಭಾಗದ ವಿದ್ಯಾರ್ಥಿಗಳು ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಅಧ್ಯಾಪಕ ವೃತ್ತಿಗೆ ಆಯ್ಕೆಯಾಗಿದ್ದಾರೆ. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಿಶ್ವವಿದ್ಯಾಲಯವು ರಾಷ್ಟ್ರೀಯ ಅರ್ಹತಾ ಪರೀಕ್ಷೆಗೆ ಅನುಕೂಲವಾಗುವಂತೆ ಕಮ್ಮಟ ಮತ್ತು ತರಬೇತಿ ಶಿಬಿರಗಳನ್ನು ಆಗಿಂದಾಗ್ಗೆ ಏರ್ಪಡಿಸುತ್ತಿದೆ.
ಕನ್ನಡದ ನಿರಂತರತೆಯ ಕ್ರಿಯೆಯಲ್ಲಿ ತಾವೆಲ್ಲ ಸಹಕರಿಸಬೇಕೆಂದು ಕೇಳಿಕೊಳ್ಳುತ್ತ ನನ್ನ ಮಾತುಗಳಿಗೆ ವಿರಾಮ ಹೇಳುತ್ತೇನೆ.

ನಮಸ್ಕಾರ
೧೯ ಡಿಸೆಂಬರ್ ೨೦೦೮

# ೧೫. ಕಾಯಕದಲ್ಲಿ ನಿರತನಾದಡೆ

ಕನ್ನಡ ವಿಶ್ವವಿದ್ಯಾಲಯ ೧೮ನೇ ನುಡಿಹಬ್ಬದಲ್ಲಿ ಪ್ರತಿಷ್ಠಿತ ನಾಡೋಜ ಪದವಿ, ಡಿ.ಲಿಟ್. ಪಿಎಚ್.ಡಿ., ಎಂ.ಫಿಲ್. ಪದವಿಗಳನ್ನು ನೀಡಿ ನುಡಿಹಬ್ಬವನ್ನು ಅರ್ಥಪೂರ್ಣವಾಗಿಸಲು ಬಂದಿರುವ ಕರ್ನಾಟಕ ರಾಜ್ಯದ ರಾಜ್ಯಪಾಲರೂ ಕನ್ನಡ ವಿಶ್ವವಿದ್ಯಾಲಯದ ಕುಲಾಧಿಪತಿಗಳೂ ಆದ ಘನತೆವೆತ್ತ ಸನ್ಮಾನ್ಯ ಶ್ರೀ ಹಂಸರಾಜ್ ಭಾರದ್ವಾಜ್ ಅವರೇ.

ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಸಚಿವರೂ, ಕನ್ನಡ ವಿಶ್ವವಿದ್ಯಾಲಯದ ಸಮಕುಲಾಧಿಪತಿಗಳೂ ಆದ ಸನ್ಮಾನ್ಯ ಶ್ರೀ ಅರವಿಂದ ಲಿಂಬಾವಳಿ ಅವರೇ, ಘಟಿಕೋತ್ಸವ ಭಾಷಣವನ್ನು ಮಾಡಲು ಆಗಮಿಸಿರುವ ಹಿರಿಯರೂ ನನ್ನ ಗುರುಗಳೂ ಹಾಗೂ ಸಂಸ್ಥಾಪಕ ಕುಲಪತಿಗಳೂ ಆದ ಡಾ. ಚಂದ್ರಶೇಖರ ಕಂಬಾರ ಅವರೇ, ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ ಭಾಜನರಾದ ಡಾ. ಶಿಕಾರಿಪುರ ರಂಗನಾಥರಾವ್ ಅವರೇ, ಡಾ. ಡಿ.ಎನ್. ಶಂಕರಭಟ್ ಅವರೇ, ಶ್ರೀಮತಿ ಸಾಲುಮಗರದ ತಿಮ್ಮಕ್ಕ ಅವರೇ, ಶ್ರೀ ವೆಂಕಟೇಶ ತುಳಾಜರಾಮ್‌ಕಾಳೆ ಅವರೇ, ಶ್ರೀಮುನಿವೆಂಕಟಪ್ಪ ಅವರೇ, ನೆರೆದಿರುವ ಜನಪ್ರತಿನಿಧಿಗಳೇ, ವಿವಿಧ ಪದವಿಗಳನ್ನು ಪಡೆಯಲಿರುವ ಮಹನೀಯರೇ, ಕನ್ನಡ ವಿಶ್ವವಿದ್ಯಾಲಯದ ಅಧ್ಯಾಪಕ ವೃಂದದವರೇ, ಆಡಳಿತ ಸಿಬ್ಬಂದಿಗಳೇ, ಮಾಧ್ಯಮದ ಮಿತ್ರರೇ, ಆಹ್ವಾನಿತರೇ, ಮಹಿಳೆಯರೇ ಹಾಗೂ ಮಹನೀಯರೇ, ತಮ್ಮೆಲ್ಲರನ್ನು ಕನ್ನಡ ವಿಶ್ವವಿದ್ಯಾಲಯದ ಪರವಾಗಿ ಅತ್ಯಂತ ಗೌರವ ಹಾಗೂ ಆದರದಿಂದ ಸ್ವಾಗತಿಸುತ್ತೇನೆ.

೧೮ನೇ ನುಡಿಹಬ್ಬದಲ್ಲಿ ಪಾಲ್ಗೊಂಡಿರುವ ಘನತೆವೆತ್ತ ಕುಲಾಧಿಪತಿಗಳಾದ ಸನ್ಮಾನ್ಯ ಶ್ರೀ ಹಂಸರಾಜ್‌ಭಾರದ್ವಾಜ್ ಅವರು ಉತ್ತಮ ಸಮಾಜ ಚಿಂತಕರು, ರಾಜಕೀಯ ಮುತ್ಸದ್ದಿಗಳು. ಶ್ರೀಯುತರು ಈ ನುಡಿಹಬ್ಬದ ಸಂದರ್ಭದಲ್ಲಿ ಡಿ.ಲಿಟ್., ಹಾಗೂ ಪಿಎಚ್.ಡಿ. ಪದವಿಯನ್ನು ಪ್ರದಾನ ಮಾಡಲಿದ್ದಾರೆ.

ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಸಚಿವರೂ ಕನ್ನಡ ವಿಶ್ವವಿದ್ಯಾಲಯದ ಸಮಕುಲಾಧಿಪತಿಗಳೂ ಆದ ಸನ್ಮಾನ್ಯ ಶ್ರೀ ಅರವಿಂದ ಲಿಂಬಾವಳಿ ಅವರು ಉತ್ತಮ ಶಿಕ್ಷಣ ಚಿಂತಕರು, ಶೈಕ್ಷಣಿಕ ರಂಗದಲ್ಲಿ ಹೊಸ ಹೊಳಹುಗಳನ್ನು ಅರಸುತ್ತಿರುವ ಯುವ ರಾಜಕಾರಣಿಗಳು. ಅವರು ನುಡಿಹಬ್ಬದ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದು ನುಡಿಹಬ್ಬಕ್ಕೆ ಗೌರವವನ್ನು ತಂದುಕೊಟ್ಟಿದ್ದಾರೆ.

ಡಾ. ಚಂದ್ರಶೇಖರ ಕಂಬಾರ ಅವರು ಇಂದಿನ ನುಡಿಹಬ್ಬದ ಘಟಿಕೋತ್ಸವದ ಭಾಷಣವನ್ನು ಮಾಡಲು ಬಂದಿದ್ದಾರೆ. ಡಾ. ಚಂದ್ರಶೇಖರ ಕಂಬಾರ ಅವರು ನಾಟಕಕಾರರು, ಕಾದಂಬರಿಕಾರರು ಮತ್ತು ಕನ್ನಡ ವಿಶ್ವವಿದ್ಯಾಲಯವನ್ನು ಕಟ್ಟಿ ಬೆಳೆಸಿದವರು ಮತ್ತು ಬೆಳೆಸುತ್ತಿರುವವರು. ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ ಡಾ. ಚಂದ್ರಶೇಖರ ಕಂಬಾರರು ಸಾಹಿತಿಯಾಗಿ, ಸಮಾಜಪರ ಚಿಂತಕರಾಗಿ ಗುರುತಿಸಿಕೊಂಡವರು. ಕೇಂದ್ರ ನಾಟಕ ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ ಅವರು ಸಾಹಿತ್ಯ ಮತ್ತು ಸಂಸ್ಕೃತಿ ಕ್ಷೇತ್ರಕ್ಕೆ ನೀಡಿ ಕೊಡುಗೆ ಹಾಗೂ ಹೊಳಹುಗಳು ದೀರ್ಘಕಾಲಿಕವಾದವು. ವಿವಿಧ ಸಂಸ್ಕೃತಿಗಳನ್ನು ಪರಿಚಯಿಸುವ ನಿಟ್ಟಿನಲ್ಲಿ ಅವರ ಯೋಜನೆ ಆ ಸಮುದಾಯಗಳ ಅಧಿಕೃತ ದಾಖಲೀಕರಣಕ್ಕೆ ಕಾರಣವಾಯಿತು. ಡಾ. ಚಂದ್ರಶೇಖರ ಕಂಬಾರರು ಸದಾ ಚಿಂತನಾಶೀಲರು. ಅವರ ಬರವಣಿಗೆಗಳು ಸದಾ ವೈಚಾರಿಕೆಯಿಂದ ತುಂಬಿರುತ್ತವೆ. ಅವರು ಒಂದಲ್ಲ ಒಂದು ವಿಚಾರಧಾರೆಯನ್ನು ಹಿಡಿದು ಎಳೆ ಎಳೆಯಾಗಿ ವಿಶ್ಲೇಷಿಸುವ ಅವರ ಉಪನ್ಯಾಸದ ಪರಿ ಅನುಕರಣೀಯ. ಅವರೇ ಕಟ್ಟಿ ಬೆಳೆಸಿದ ಕನಸಿನ ಕೂಸಾದ ಕನ್ನಡ ವಿಶ್ವವಿದ್ಯಾಲಯಕ್ಕೆ ಆಗಮಿಸಿ ಘಟಿಕೋತ್ಸವ ಭಾಷಣ ಮಾಡಲಿದ್ದಾರೆ. ಅವರಿಗೆ ಮತ್ತೊಮ್ಮೆ ವಿಶ್ವವಿದ್ಯಾಲಯದ ಪರವಾಗಿ ಸ್ವಾಗತವನ್ನು ಬಯಸುತ್ತೇನೆ.

ಇಂದಿನ ನುಡಿಹಬ್ಬದ ಸಂದರ್ಭದಲ್ಲಿ ಕನ್ನಡ ವಿಶ್ವವಿದ್ಯಾಲಯದ ಪ್ರತಿಷ್ಠಿತ ನಾಡೋಜ ಪ್ರಶಸ್ತಿಗೆ ಭಾಜನರಾದವರಲ್ಲಿ **ಡಾ. ಶಿಕಾರಿಪುರ ರಂಗನಾಥ ರಾವ್ ಅವರು** ಹೆಸರಾಂತ ಪುರಾತತ್ವ ತಜ್ಞರು. ಜಗತ್ತಿನಲ್ಲೇ ಪ್ರಥಮವಾಗಿ ಸಾಗರ ಪುರಾತತ್ವ ಅಧ್ಯಯನವನ್ನು ಹುಟ್ಟು ಹಾಕಿದವರು. ಸಿಂಧೂನಗರ ಸಂಸ್ಕೃತಿಯನ್ನು ವಿಶೇಷವಾಗಿ ಅಧ್ಯಯನ ಮಾಡಿದವರು. ಸಿಂಧೂಲಿಪಿಯನ್ನು ಮರು ಓದಿಗೆ ಒಳಪಡಿಸುವುದರ ಮೂಲಕ ಸಿಂಧೂ ಪಠ್ಯಕ್ಕೆ ಹೊಸ ಅರ್ಥವನ್ನು ನೀಡಿದವರು. ದ್ವಾರಕೆಯಲ್ಲಿ ಸಾಗರ ಪುರಾತತ್ವ ಅಧ್ಯಯನ ಕೈಗೊಳ್ಳುವುದರ ಮೂಲಕ ಸಾಗರ ಯಾನದ ಬಗ್ಗೆ ಹೊಸ ಸಂಗತಿಗಳನ್ನು ಹೊರಹಾಕಿದ ಕನ್ನಡಿಗರು. ಅಂತೆಯೇ ತಮಿಳುನಾಡಿನ ಪೂಂಬುಹಾರಿನ ಸಮುದ್ರ ಅಧ್ಯಯನ ನಡೆಸಿ ಸಾಗರ ಸಂಸ್ಕೃತಿಯ ಬಗ್ಗೆ ಹೊಸ ಹೊಳಹನ್ನು ನೀಡಿದವರು. ಅಂತಾರಾಷ್ಟ್ರೀಯ ಮಟ್ಟದಲ್ಲಿ ಕನ್ನಡದ ಪರಿಣತಿಯನ್ನು ಮೆರೆದ ಇವರಿಗೆ ಕನ್ನಡ ವಿಶ್ವವಿದ್ಯಾಲಯ ನಾಡೋಜ ಪ್ರಶಸ್ತಿ ನೀಡಿ ಗೌರವಿಸುತ್ತಿದೆ.

ಶಂಕರಭಟ್ಟರು ಮದರಾಸು ವಿವಿಯಿಂದ ಸಂಸ್ಕೃತ ಎಂ.ಎ. (೧೦೬೦) ಪದವಿಯನ್ನು ಪಡೆದವರು. ಬಳಿಕ ಪುಣೆ ವಿವಿಯಿಂದ ಭಾಷಾವಿಜ್ಞಾನದಲ್ಲಿ ಪಿ.ಎಚ್‌ಡಿಯನ್ನೂ ಪಡೆದರು; ನಂತರ ಬ್ರಿಟಿಶ್ ಕೌನ್ಸಿಲ್‌ನ ಫೆಲೊ ಆಗಿ ಇಂಗ್ಲೆಂಡಿನಲ್ಲಿ ಉಪಭಾಷಾ ಸಮೀಕ್ಷೆಯ ವಿಧಾನಗಳ ಮೇಲೆ ಅಧ್ಯಯನ ಮಾಡಿದರು; ಮರಾಠಿಯ ಉಪಭಾಷೆಗಳ ಸಮೀಕ್ಷೆಯ ಯೋಜನೆಯಲ್ಲಿ ಸಂಶೋಧನ ಸಹಾಯಕರಾಗಿ ಪುಣೆಯಲ್ಲಿ ತಮ್ಮ ವೃತ್ತಿಜಿವನ ಆರಂಭಿಸಿದ ಭಟ್ಟರು, ಮುಂದೆ ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ದ್ರಾವಿಡ ಭಾಷೆಗಳ ಅಧ್ಯಾಪಕರಾದರು; ನಂತರ ಅಮೆರಿಕೆಯ ಸ್ಟ್ಯಾನ್‌ಫೋರ್ಡ್ ವಿವಿಯಲ್ಲಿ ಸಂಶೋಧನ ಸಹಾಯಕರಾಗಿ ಕೆಲಸ ಮಾಡಲು ಹೋದರು. ನಂತರ ತಿರುವನಂತಪುರದ ಭಾರತೀಯ ದ್ರಾವಿಡ ಭಾಷೆಯ ಸಂಸ್ಥೆಯಲ್ಲಿ ಭಾಷಾವಿಜ್ಞಾನದ ಪ್ರಾಧ್ಯಾಪಕರಾದರು. ಈ ನಡುವೆ ಈಶಾನ್ಯ ಭಾರತದ ಟಿಬೆಟೊ-ಬರ್ಮನ್ ಭಾಷೆಗಳ ವಿಷಯದಲ್ಲಿ ಪಾಂಡಿತ್ಯ ಪಡೆದ ಶ್ರೀಯುತರು, ಇಂಫಾಲಿನ ಮಣಿಪುರ ವಿವಿಯಲ್ಲಿ ಪ್ರಾಧ್ಯಾಪಕರಾದರು. ನಂತರ ಮೈಸೂರಿನ ಭಾರತೀಯ ಭಾಷಾಸಂಸ್ಥಾನದಲ್ಲಿ ಸಂಶೋಧನ ವಿಜ್ಞಾನಿಯಾಗಿ, ಬೆಲ್ಜಿಯಂ ವಿವಿಯಲ್ಲಿ ಸಂದರ್ಶಕ ಸಂಶೋಧಕರಾಗಿ, ಆಸ್ಟ್ರೇಲಿಯಾದ ಲಾಟ್ರೊಬ್ ವಿವಿಯಲ್ಲಿ ಸಂದರ್ಶಕ ಫೆಲೊ ಆಗಿ, ಜರ್ಮನಿಯ ಮ್ಯಾಕ್ಸ್ ಪ್ಲಾಂಕ್ ಇನ್‌ಸ್ಟಿಟ್ಯೂಟ್‌ನಲ್ಲಿ ಅತಿಥಿ ವಿಜ್ಞಾನಿಯಾಗಿ ಸೇವೆ ಸಲ್ಲಿಸಿದರು. ರಾಷ್ಟ್ರೀಯ-ಅಂತಾರಾಷ್ಟ್ರೀಯ ಪತ್ರಿಕೆಗಳಲ್ಲಿ ಲೇಖನಗಳನ್ನು ಪ್ರಕಟಿಸಿದ್ದಾರೆ. ಅವರು ಈತನಕ ೧೭ ಕ್ಕಿಂತ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ. ಕನ್ನಡದ ಪಾಲಿಗೆ ಅಮೆರಿಕೆಯ ಶ್ರೇಷ್ಠ ಭಾಷಾವಿಜ್ಞಾನಿ ಜೋಮ್‌ಸ್ಕಿವರಷ್ಟೇ ಮುಖ್ಯರಾಗಿರುವ ಈ ಅಪರೂಪದ ವಿದ್ವಾಂಸರಿಗೆ ಕನ್ನಡ ವಿಶ್ವವಿದ್ಯಾಲಯವು ೨೦೦೯ನೇ ಸಾಲಿನ ನಾಡೋಜ ಪದವಿಯನ್ನು ನೀಡಿ ಗೌರವಿಸುತ್ತಿದೆ.

ಶ್ರೀಮತಿ ಸಾಲುಮರದ ತಿಮ್ಮಕ್ಕನವರು ಬೆಂಗಳೂರು ಗ್ರಾಮಾಂತರ ಜಿಲ್ಲೆ ಮಾಗಡಿ ತಾಲೂಕು ಹುಲಿಕಲ್ಲಿನವರು. ಬೋವಿ ಸಮುದಾಯದ ಚಿಕ್ಕರಂಗಯ್ಯ-ವಿಜಯಮ್ಮ ದಂಪತಿಗಳ ಎರಡನೇ ಮಗಳು. ತಿಮ್ಮಕ್ಕನವರ ತಂದೆ ಚಿಕ್ಕರಂಗಯ್ಯ ಭೂಮಾಲೀಕರ ಮನೆಯಲ್ಲಿ ಜೀತಕ್ಕಿದ್ದರು. ಎಂದೂ ಶಾಲೆಯ ಮುಖವನ್ನು ನೋಡದ ತಿಮ್ಮಕ್ಕ ಸಮೀಪದ ಕಲ್ಲುಕ್ವಾರಿಯಲ್ಲಿ ಜಲ್ಲಿಕಲ್ಲು ಒಡೆಯುವ ಕೆಲಸ ಮಾಡುತ್ತಿದ್ದರು. ಅವರಿಗೆ ದನ ಕಾಯುವ ಬಿಕ್ಕಲು ಚಿಕ್ಕಯ್ಯನ ಜತೆ ಲಗ್ನವಾಯಿತು. ದುರದೃಷ್ಟವಶಾತ್ ತಿಮ್ಮಕ್ಕನಿಗೆ ಮಕ್ಕಳಾಗಲಿಲ್ಲ. ಮಕ್ಕಳಿಲ್ಲದ ನೋವನ್ನು ಕಳೆದುಕೊಳ್ಳಲು ದಂಪತಿಗಳು ನೂತನ ಹಾದಿಯೊಂದನ್ನು ಕಂಡುಕೊಂಡರು. ಅದೆಂದರೆ ಮರಗಳನ್ನು ನೆಟ್ಟು ಅವನ್ನೇ ತಮ್ಮ ಮಕ್ಕಳೆಂದು ಸಾಕುವುದು. ಇದಕ್ಕಾಗಿ ಅವರು ತಮ್ಮೂರಿನ ಸರ್ಕಾರಿ ರಸ್ತೆಯನ್ನು ಆರಿಸಿಕೊಂಡರು. ರಸ್ತೆಯ ಬದಿಯಲ್ಲಿ ಆಲದ ಮರದ ಕೊಂಬೆಗಳನ್ನು ನೆಡತೊಡಗಿದರು. ಹುಲಿಕಲ್ಲಿನಿಂದ ಕುದೂರಿನವರೆಗಿನ ೪ ಕಿ.ಮಿ. ರಸ್ತೆಯಲ್ಲಿ ೩೮೪ ಮರಗಳನ್ನು ಹಾಕಿದರು. ಮಳೆ ಕಡಿಮೆ ಬೀಳುವ ಈ ಪ್ರದೇಶದಲ್ಲಿ ಬೇಸಿಗೆಯಲ್ಲಿ ಗಿಡಗಳನ್ನು ಉಳಿಸಲು ದೂರದ ಕೆರೆ ಹಳ್ಳಗಳಿಂದ ನೀರನ್ನು ತಂದು ಹಾಕಿದರು. ಮೇಯುವ ದನಗಳಿಂದ ರಕ್ಷಿಸಲು ಅವಕ್ಕೆ ಮುಳ್ಳು ಕಟ್ಟಿದರು. ಇಷ್ಟು ಕೆಲಸವನ್ನು ಅವರು ಕೂಲಿಗೆ ಹೋಗುವ ಮುನ್ನವೇ ಮಾಡುತ್ತಿದ್ದರು. ಕೆಲವೇ ವರ್ಷಗಳಲ್ಲಿ ಅವರು ನೆಟ್ಟ ಕೊಂಬೆಗಳು ಹೆಮ್ಮರವಾಗಿ ಬೆಳೆದವು. ಅವೇ ತಿಮ್ಮಕ್ಕನ ಮಕ್ಕಳಾದವು. ಬಿಸಿಲು ಧೂಳಿನಿಂದ ಕೂಡಿದ ಪ್ರದೇಶವನ್ನು ತಮ್ಮ ಹಸಿರಿನಿಂದ ಅವು ತುಂಬಿದವು. ಕೆಲವು ಸಸ್ಯವಿಜ್ಞಾನಿಗಳು ಈ ಮರಗಳ ಜೈವಿಕ ಮೌಲ್ಯವನ್ನು ೪.೫ ಕೋಟಿ ಎಂದು ಬೆಲೆಗಟ್ಟಿದ್ದಾರೆ. ಕರ್ನಾಟಕ ಸರ್ಕಾರವು ಈ ಮರಗಳ ಉಸ್ತುವಾರಿಯನ್ನು ಈಗ ವಹಿಸಿಕೊಂಡಿದೆ.

ತನ್ನ ಬಾಳಿಗೆ ಹೊಸದೊಂದು ವ್ಯಾಖ್ಯಾನವನ್ನು ಬರೆದು ಲೋಕವನ್ನು ಸೋಜಿಗಗೊಳಿಸಿದ ತಿಮ್ಮಕ್ಕ, ಪರಿಸರ ಕುರಿತ ನೂರಾರು ಕಾರ್ಯಕ್ರಮಗಳನ್ನು ಉದ್ಘಾಟಿಸಿದ್ದಾರೆ. ಸದ್ಯ ಅವರು ಮಾಗಡಿ ಭಾಗದ ಕೆರೆಗಳನ್ನು ಸಂರಕ್ಷಿಸುವ ಕೆಲಸದಲ್ಲಿ ತೊಡಗಿದ್ದಾರೆ. ತಮ್ಮ ಪ್ರಶಸ್ತಿ ಹಣದಲ್ಲಿ ತಮ್ಮ ಊರಿನಲ್ಲಿ ಒಂದು ಆಸ್ಪತ್ರೆಯನ್ನು ಕಟ್ಟಿಸಿದ್ದಾರೆ. ಲಾಭವೇ ದೊಡ್ಡ ಮಂತ್ರವಾಗಿರುವ ಮಾರುಕಟ್ಟೆ ಅರ್ಥಶಾಸ್ತ್ರದ ಈ ದಿನಗಳಲ್ಲಿ ಲೋಕದ ಹಿತಕ್ಕಾಗಿ ತಮ್ಮ ಬಾಳನ್ನು ಮುಡಿಪಾಗಿಸಿದ ಬಡವಿ ತಿಮ್ಮಕ್ಕ ದೊಡ್ಡ ಆದರ್ಶವಾಗಿದ್ದಾರೆ. ಕರ್ನಾಟಕ ಸಮಾಜ ಹುಟ್ಟಿಸಿದ ಅತ್ಯುತ್ತಮ ಮನಸ್ಸಾಗಿರುವ ತಿಮ್ಮಕ್ಕ ಅವರಿಗೆ ಕನ್ನಡ ವಿಶ್ವವಿದ್ಯಾಲಯವು ೨೦೦೯ನೇ ಸಾಲಿನ ನಾಡೋಜ ಪದವಿಯನ್ನು ನೀಡಿ ಗೌರವಿಸುತ್ತಿದೆ.

ಶ್ರೀ ವಿ.ಟಿ. ಕಾಳೆಯವರು ರಾಜ್ಯ, ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟದ ಕಲಾ ಶಿಬಿರ, ಕಲಾ ಕಾರ್ಯಗಾರ, ಕಮ್ಮಟಗಳಲ್ಲಿ, ಚಿತ್ರಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿ ಕಲಾಕೃತಿ ರಚನೆ ಮಾಡಿದ್ದಾರೆ ಮತ್ತು ಕಲಾಕೃತಿಗಳನ್ನು ಪ್ರದರ್ಶನ ಮಾಡಿದ್ದಾರೆ. ಇವರು ರಚಿಸಿದ ಭಾವಚಿತ್ರ, ನಿಸರ್ಗ ಚಿತ್ರ, ಪೌರಾಣಿಕ, ದೇವತಾ ಚಿತ್ರಗಳು, ಭಿತ್ತಿ ಚಿತ್ರಗಳು, ಶಿಲ್ಪಕಲಾಕೃತಿಗಳು, ರೇಖಾಚಿತ್ರಗಳು, ನವ್ಯಶೈಲಿಯ ಅಮೂರ್ತ ಕಲಾಕೃತಿಗಳು ದೇಶ ವಿದೇಶಗಳಲ್ಲಿ, ಕಲಾಗ್ಯಾಲರಿಗಳಲ್ಲಿ, ವೈಯಕ್ತಿಕ ಸಂಗ್ರಹಗಳಲ್ಲಿ ಉದಾಹರಣೆಗೆ ಮುಂಬಯಿ, ಪಾಕಿಸ್ತಾನ, ಸಕ್ಸ್, ಅಮೆರಿಕಾಗಳಲ್ಲಿ ಮತ್ತು ಸಂಡೂರಿನ ಶಿವಪುರ ಅರಮನೆಯಲ್ಲಿ ಹೀಗೆ ಅನೇಕ ಕಡೆಗಳಲ್ಲಿ ಅನೇಕ ಕಲಾಕೃತಿಗಳು ಸಂಗ್ರಹಗೊಂಡಿವೆ.

ಚಿತ್ರಕಲಾ ಪರಿಚಯ, ಚಿತ್ರಕಲಾ ದರ್ಪಣ, ಕಲಾವಿದ ಎಸ್. ಎಂ. ಪಂಡಿತ್ ಮತ್ತು ಎಸ್.ಪಿ. ಅಕ್ಕಿ, ಟಿ.ಪಿ.ಅಕ್ಕಿಯವರ ಕುರಿತು ಗ್ರಂಥಗಳನ್ನು ಬರೆದಿದ್ದಾರೆ. ಕಲಾಕೋಶ ಗ್ರಂಥದ ಸಂಪಾದಕರಲ್ಲೊಬ್ಬರಾಗಿ ಕೆಲಸ ಮಾಡಿದ್ದಾರೆ. ಕೇಂದ್ರ, ರಾಜ್ಯ ಸರ್ಕಾರದ ಅನೇಕ ಪಠ್ಯಪುಸ್ತಕಗಳಿಗೆ ಕಲಾವಿದನಾಗಿ, ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಸಾವಿರಾರು ರೇಖಾಚಿತ್ರ, ವರ್ಣಚಿತ್ರಗಳನ್ನು ನಾಡಿಗೆ ನೀಡಿದ್ದಾರೆ.

ಎಪ್ಪತ್ತಾರನೇ ತಮ್ಮ ಇಳಿವಯಸ್ಸಿನಲ್ಲೂ ಫಲಾಕೃತಿ ರಚನೆಗೈಯುತ್ತಿದ್ದಾರೆ. ಇವರಿಗೆ ಅನೇಕ ಪ್ರಶಸ್ತಿ ಪುರಸ್ಕಾರಗಳು ಬಂದಿವೆ. ೧೯೬೨ ರಲ್ಲಿ ರಾಜ್ಯ ಲಲಿತಕಲಾ ಅಕಾಡೆಮಿಯ ವಾರ್ಷಿಕ ಕಲಾಪ್ರದರ್ಶನದಲ್ಲಿ ಶ್ರೇಷ್ಠ ಕೃತಿ ಪ್ರಶಸ್ತಿ, ಮೈಸೂರು ದಸರಾ ಉತ್ಸವದಲ್ಲಿ ೧೯೫೯-೬೦ ರಲ್ಲಿ ವಾರ್ಷಿಕ ಪ್ರಶಸ್ತಿ ೧೯೮೫-೮೬ ರಲ್ಲಿ ಮತ್ತು ರಾಜ್ಯ ಸರ್ಕಾರದ ೪೯ನೆಯ ರಾಜ್ಯೋತ್ಸವ ಪ್ರಶಸ್ತಿ ೨೦೦೪, ಅಲ್ಲದೆ ನೃಪತುಂಗ ಪ್ರಶಸ್ತಿ, ಭಾರತೀಯ ಸಂಸ್ಕಾರ ಭಾರತಿ ಪ್ರಶಸ್ತಿ ಹೀಗೆ ಹಲವಾರು ಸಂಘ ಸಂಸ್ಥೆ, ಮಠ-ಮಾನ್ಯಗಳಿಂದ ಅನೇಕ ಪ್ರಶಸ್ತಿ ಸನ್ಮಾನಗಳಿಗೆ ಶ್ರೀ ವ್ಹಿ.ಟಿ. ಕಾಳೆಯವರು ಭಾಜನರಾಗಿದ್ದಾರೆ. ಇವರಿಗೆ ಕನ್ನಡ ವಿಶ್ವವಿದ್ಯಾಲಯ ೨೦೦೯ನೇ ಸಾಲಿನ ನಾಡೋಜ ಪದವಿ ನೀಡಿ ಗೌರವಿಸುತ್ತಿದೆ.

ದಿವಂಗತ ಶ್ರೀ ಪಾಪಣ್ಣ ಮತ್ತು ಶ್ರೀಮತಿ ಮುನಿಗಂಗಮ್ಮ ಬಡ ದಂಪತಿಯ ಮಗನಾಗಿ ಶ್ರೀ ಮುನಿವೆಂಕಟಪ್ಪ ಶಿಡ್ಲಘಟ್ಟ ತಾಲೂಕು, ಚಿಕ್ಕಬಳ್ಳಾಪುರ ಜಿಲ್ಲೆಗೆ ಸೇರಿದ ಪಿಂಡಿಪಾಪನಹಳ್ಳಿಯಲ್ಲಿ ದಿನಾಂಕ ೦೨-೦೬-೧೯೪೭ ರಂದು ಜನಿಸಿದರು. ಅವರೊಬ್ಬ ಜಾನಪದ ಕಲಾವಿದರು. ಅವರು ಜಾನಪದ ವಾದ್ಯವಾದ 'ತಮಟೆ'ಯನ್ನು ವಿವಿಧ ಬಗೆಯಲ್ಲಿ ನುಡಿಸಬಲ್ಲವರಾಗಿದ್ದಾರೆ. ಈ ಚರ್ಮದ ವಾದ್ಯಕ್ಕೆ ಲಲಿತ ಕಲೆಗಳಲ್ಲಿ ಒಂದು ಗೌರವದ ಸ್ಥಾನವನ್ನು ಅವರು ತಂದುಕೊಟ್ಟಿದ್ದಾರೆ. ಇದೊಂದು ಗ್ರಾಮೀಣ ಕಲೆ.

ಈ ವಾದ್ಯದ ರಕ್ಷಣೆಗಾಗಿ ಮತ್ತು ಅದನ್ನು ಜನಪ್ರಿಯಗೊಳಿಸುವುದಕ್ಕಾಗಿ ಶ್ರೀ ಮುನಿವೆಂಕಟಪ್ಪ ೧೫ ಕಲಾವಿದರ ತಂಡವೊಂದನ್ನು ಕಟ್ಟಿದ್ದಾರೆ. ಅವರು ತಮಟೆ ಬಾರಿಸುವುದನ್ನು, ಅದರ ವಿವಿಧ ಮಟ್ಟಗಳನ್ನು, ಅದರಲ್ಲಿನ ಕುಸುರಿ ಸೂಕ್ಷ್ಮಗಳನ್ನು ಯುವಕರಿಗೆ ಕಲಿಸುತ್ತಿದ್ದಾರೆ. ತಮ್ಮ ತಂಡವನ್ನು ಕಟ್ಟಿಕೊಂಡು ಅವರು ಊರೂರು ಸುತ್ತುತ್ತಾರೆ. ಜಾತ್ರೆ, ಉತ್ಸವ, ಸಮಾವೇಶ, ಸಮ್ಮೇಳನ, ಜಾನಪದ ಪ್ರದರ್ಶನ ಮುಂತಾದ ಸಂದರ್ಭದಲ್ಲಿ ಅವರು ತಮ್ಮ ಕಲೆಯನ್ನು ಪ್ರದರ್ಶಿಸುತ್ತಾರೆ. ಶ್ರೀ ಮುನಿವೆಂಕಟಪ್ಪ ಅವರಿಗೆ ಕನ್ನಡ ವಿಶ್ವವಿದ್ಯಾಲಯವು ತನ್ನ ನುಡಿಹಬ್ಬದ ಸಂದರ್ಭದಲ್ಲಿ ಇಂತಹ ಮಹಾನ್ ಜಾನಪದ ಕಲಾವಿದರಿಗೆ ಕನ್ನಡ ವಿಶ್ವವಿದ್ಯಾಲಯ ೨೦೦೯ನೇ ಸಾಲಿನ ನಾಡೋಜ ಪದವಿಯನ್ನು ನೀಡಿ ಗೌರವಿಸುತ್ತಿದೆ.

ಕನ್ನಡ ವಿಶ್ವವಿದ್ಯಾಲಯ ಕನ್ನಡ ಭಾಷೆ, ಸಂಸ್ಕೃತಿ ಹಾಗೂ ಪರಂಪರೆಯನ್ನು ಗಮನದಲ್ಲಿರಿಸಿ ಅಧ್ಯಯನಶೀಲವಾಗುವ ನೆಲೆಯಲ್ಲಿ ಅಸ್ತಿತ್ವಕ್ಕೆ ಬಂದಿದೆ. ಸಂಶೋಧನೆಯನ್ನು ತನ್ನ ಉಸಿರನ್ನಾಗಿಸಿಕೊಂಡಿರುವ ವಿಶ್ವವಿದ್ಯಾಲಯ ನಿರಂತರವಾಗಿ ಕನ್ನಡ ಭಾಷೆ, ಸಾಹಿತ್ಯ ಹಾಗೂ ಸಂಸ್ಕೃತಿ ಪರವಾದ ಚಿಂತನೆಗಳನ್ನು ನಡೆಸಿಕೊಂಡು ಬಂದಿದೆ. ಕನ್ನಡಕ್ಕೆ ಶಾಸ್ತ್ರೀಯ ಸ್ಥಾನ ಸಲ್ಲುತ್ತಿರುವ ಈ ಸಂದರ್ಭದಲ್ಲಿ ಕನ್ನಡವನ್ನು ನಿರಂತರವಾಗಿಸುವ ದಿಸೆಯಲ್ಲಿ ಅದು ಇನ್ನಷ್ಟು ತೀವ್ರವಾಗಿ ಕಾರ್ಯಪ್ರವೃತ್ತವಾಗುವ ಆವಶ್ಯಕತೆ ಇದೆ. ಕನ್ನಡವನ್ನು ಉಳಿಸುವುದು ಎಂದರೆ ಕನ್ನಡ ಸಂಸ್ಕೃತಿಯನ್ನು ಉಳಿಸುವುದು. ಸಂಸ್ಕೃತಿಯನ್ನು ಹೊರತುಪಡಿಸಿ ಯಾವುದೇ ಭಾಷೆ ಇರಲಾರದ ಕಾರಣ, ಕನ್ನಡ ದೇಶಿ ಸಂಸ್ಕೃತಿಯನ್ನು ಉಳಿಸುವ ಮೂಲಕ ಕನ್ನಡ ಭಾಷೆಯನ್ನು ನಿರಂತರವಾಗಿಸುವ ನಿಟ್ಟಿನಲ್ಲಿ ಯೋಚಿಸಬೇಕಾಗಿದೆ. ಪ್ರಸ್ತುತ ಜೀವಂತವಿರುವ ಹಾಗೂ ಬದಲಾವಣೆಗೆ ಒಳಗಾಗುತ್ತಿರುವ ಸಂಸ್ಕೃತಿಗಳನ್ನು ಹಿಡಿದಿಡುವ, ದಾಖಲಿಸುವ ನಿಟ್ಟಿನಲ್ಲಿ ತೀವ್ರಗತಿಯಿಂದ ಧಾವಿಸಬೇಕಾಗಿದೆ. ಈ ನಿಟ್ಟಿನಲ್ಲಿ ಕನ್ನಡ ವಿಶ್ವವಿದ್ಯಾಲಯ ಕಾರ್ಯ ಯೋಜನೆಗಳನ್ನು ರೂಪಿಸಿಕೊಳ್ಳುತ್ತಿದೆ. ದೇಶಿ ಸಂಸ್ಕೃತಿ ಹಾಗೂ ಉನ್ನತ ತಾಂತ್ರಿಕತೆಯಂತಹ ಆಧುನಿಕ ಕಲ್ಪನೆಗಳ ಬಳಕೆಗಳ ನಡುವೆ ಕೊಂಡಿಯನ್ನು ಬೆಸೆಯುವುದು ಕೂಡ ಅಷ್ಟೇ ಮುಖ್ಯವಾಗಿದೆ.

ಕನ್ನಡ ಭಾಷೆಯ ಬಳಕೆ ಹಾಗೂ ತಾಂತ್ರಿಕತೆ ಜೊತೆಜೊತೆಯಾಗಿ ನಡೆಯಬೇಕಿದೆ. ಕನ್ನಡ ಭಾಷೆಯನ್ನು ಕಂಪ್ಯೂಟರ್ ಮೂಲಕ ಸಮರ್ಪಕವಾಗಿ ಬಳಸುವ ದಿಸೆಯಲ್ಲಿ ಮುನ್ನಡೆಯಬೇಕಾಗಿದೆ. ಇಂಗ್ಲಿಷಿಗಿರುವಂತೆ ಕಾಗುಣಿತ ಸರಿಪಡಿಸುವಿಕೆ, ಭಾಷಾ ತರ್ಜುಮೆ, ಒಸಿಆರ್‌ನಂತಹ ತಂತ್ರಾಂಶವನ್ನು ರೂಪಿಸುವ ಅವಶ್ಯಕತೆ ಇದೆ. ಮಾತು ಮತ್ತು ತಾಂತ್ರಿಕತೆ, ತಾಂತ್ರಿಕತೆ ಮತ್ತು ಮಾತಿಗೆ ಸಂಬಂಧಿಸಿದಂತೆ ಯೋಜನೆಯನ್ನು ತಯಾರಿಸುತ್ತಿದೆ.

ಕನ್ನಡ ಕಲಿಕೆ ಸಂಬಂಧಿಸಿದಂತೆ, ದೋಷರಹಿತಕಲಿಕೆ ಯೋಜನೆಯನ್ನು ಕನ್ನಡ ವಿಶ್ವವಿದ್ಯಾಲಯವು ಕರ್ನಾಟಕ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ. ಕರ್ನಾಟಕದ ಕುಶಲ ಕಲೆಗಳನ್ನು ಮುಂದುವರಿಸುವ ದಿಶೆಯಲ್ಲಿ ನಿರಂತರವಾಗಿ ಕಮ್ಮಟಗಳನ್ನು ಏರ್ಪಡಿಸಿ ಮುಂದಿನ ಪೀಳಿಗೆಗೆ ರವಾನಿಸುವ ಯೋಜನೆ ವಿಶ್ವವಿದ್ಯಾಲಯಕ್ಕೆ ಇದೆ.

ಈ ಎಲ್ಲ ಕಾರ್ಯಗಳು ಕಾರ್ಯರೂಪಕ್ಕೆ ಬರುವಲ್ಲಿ ವಿಶ್ವವಿದ್ಯಾಲಯದ ಎಲ್ಲ ಅಧ್ಯಾಪಕವರ್ಗ, ವಿದ್ಯಾರ್ಥಿ ಸಮುದಾಯ ಹಾಗೂ ಆಡಳಿತ ಸಿಬ್ಬಂದಿವರ್ಗ ಎಂದಿನಂತೆ ಒಂದಾಗಿ ದುಡಿಯಬೇಕಾಗಿದೆ. ವಿಶ್ವವಿದ್ಯಾಲಯದ ಎಲ್ಲ ವಿಭಾಗಗಳು ಈ ದಿಸೆಯಲ್ಲಿ ಚಟುವಟಿಕೆಗಳನ್ನು ಹಮ್ಮಿಕೊಂಡಿವೆ. ವೈಯಕ್ತಿಕ ಯೋಜನೆಗಳು ಅಂತೆಯೇ ಸಾಮೂಹಿಕ ಯೋಜನೆಗಳನ್ನು ಹಮ್ಮಿಕೊಂಡಿವೆ. ಅಭಿವೃದ್ಧಿ ಅಧ್ಯಯನ ವಿಭಾಗವು ಸಮಾಜವಿಜ್ಞಾನ ನಿಕಾಯದಲ್ಲಿ ಸಂಶೋಧನಾ ಚಟುವಟಿಕೆಗಳಲ್ಲಿ ನಿರತವಾಗಿರುವ ಒಂದು ಅಧ್ಯಯನ ವಿಭಾಗವಾಗಿದೆ. ಇದು ೧೯೯೭ ರಲ್ಲಿ ಅಸ್ತಿತ್ವಕ್ಕೆ ಬಂದು ನಿರಂತರವಾಗಿ ಸಾಮಾಜಿಕ, ಆರ್ಥಿಕ, ಮತ್ತು ಸಾಂಸ್ಕೃತಿಕ ಬದುಕಿಗೆ ಪೂರಕವಾಗುವಂತೆ ನೀತಿ-ನಿರೂಪಣ ಕಾರ್ಯದಲ್ಲಿ ತೊಡಗಿದೆ. ೧೯೯೯ ರಿಂದ ತಳಮಟ್ಟದಲ್ಲಿ ಕೆಲಸ ನಿರ್ವಹಿಸುತ್ತಿರುವ ಅಭಿವೃದ್ಧಿ ಅಧಿಕಾರಿಗಳಿಗೆ, ಜನಪ್ರತಿನಿಧಿಗಳಿಗೆ ಮತ್ತು ಜನಸಾಮಾನ್ಯರಿಗೆ ಅಭಿವೃದ್ಧಿಯ ಬಗ್ಗೆ ತರಬೇತಿ, ಕಮ್ಮಟ, ಅಂಗನವಾಡಿ ಕಾರ್ಯಕರ್ತೆಯರಿಗೆ, ಅಧ್ಯಕ್ಷ, ಉಪಾಧ್ಯಕ್ಷರುಗಳಿಗೆ, ಆರಕ್ಷಕ ಸಿಬ್ಬಂದಿಗಳಿಗೆ ಕಾರ್ಯಾಗಾರಗಳನ್ನು ಹಮ್ಮಿಕೊಂಡು ಬಂದಿದೆ. ಇದುವರೆಗೆ ಸುಮಾರು ೩೦ ಯೋಜನೆಗಳನ್ನು ಕೈಗೊಂಡು ಪೂರೈಸಿದೆ. ೪೫ ಸಂಶೋಧನಾ ಗ್ರಂಥಗಳು ಪ್ರಕಟಗೊಂಡಿವೆ.

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಡಾ. ಅಮರೇಶ ನುಗಡೋಣಿ ಅವರಿಗೆ 'ಸವಾರಿ' ಕಥಾಸಂಕಲನಕ್ಕೆ ಮಾಸ್ತಿ ಕಥಾ ಪುರಸ್ಕಾರ ಲಭಿಸಿದೆ.

ಕನ್ನಡ ಭಾಷಾಧ್ಯಯನ ವಿಭಾಗವು ಫೆಬ್ರವರಿ ೧೨, ೨೦೦೯ರಂದು ಅಮೆರಿಕದ ಇಲಿನಾಯ್ ವಿಶ್ವವಿದ್ಯಾಲಯದ ಪ್ರೊ.ಹನ್ಸ್ ಹೆನ್ರಿಕ್ ಹಾಕ್ 'ಐತಿಹಾಸಿಕ ಭಾಷಾಶಾಸ್ತ್ರ'ದ ಮೇಲೆ ವಿಶೇಷ ಉಪನ್ಯಾಸ ಏರ್ಪಡಿಸಿತ್ತು. ಮಾರ್ಚ್ ೨೦, ೨೧, ೨೦೦೯ ರಂದು ಕರ್ನಾಟಕ

ವಿಶ್ವವಿದ್ಯಾಲಯದ ಡಾ. ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠದ ಸಹಯೋಗದಲ್ಲಿ 'ಕನ್ನಡ ಭಾಷೆ ಮತ್ತು ಜಾಗತೀಕರಣ' ಎಂಬ ವಿಷಯದ ಮೇಲೆ ರಾಷ್ಟ್ರೀಯ ವಿಚಾರ ಸಂಕಿರಣ ಹಮ್ಮಿಕೊಂಡಿತ್ತು.

ಭಾಷಾಂತರ ವಿಭಾಗದಿಂದ 'ಮಧ್ಯಕಾಲೀನ ಮಹಾಕಾವ್ಯ ಮತ್ತು ಕರ್ನಾಟಕದಲ್ಲಿ ವಿಠ್ಠಲಪಂಥ ಎಂಬ ಯುಜಿಸಿ ಎಂ.ಆರ್.ಪಿ. ಅನುದಾನದಲ್ಲಿ ನಡೆಯುತ್ತಿದೆ. ಎಂ.ಪಿ.ಐ.ಕೆ. ಯೋಜನೆಯಡಿಯಲ್ಲಿ ಸರ್ ರತನ್ ಟಾಟಾ ಟ್ರಸ್ಟ್ ಅವರ ಅನುದಾನದಲ್ಲಿ 'ಕನ್ನಡದಲ್ಲಿ ಶೈಕ್ಷಣಿಕ ಸಾಮಗ್ರಿ ನಿರ್ಮಾಣದ ಉಪಕ್ರಮಗಳು' ಎಂಬ ಯೋಜನೆ ಸಿದ್ಧವಾಗುತ್ತಿದೆ. ಭಾಷಾಂತರ ದತ್ತ ಕಣಜ' ನಿರ್ಮಾಣ ಮತ್ತು ಅದರ ಆನ್‌ಲೈನ್ ಬಳಕೆ ಮತ್ತು ಭಾಷಾಂತರ : ಕರ್ನಾಟಕ ಸಾಂಸ್ಕೃತಿಕ ರಾಜಕಾರಣ ಎಂಬ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ.

ಮಹಿಳಾ ಅಧ್ಯಯನ ವಿಭಾಗವು ಅಕ್ಟೋಬರ್ ತಿಂಗಳಲ್ಲಿ 'ಮಹಿಳಾ ಮೀಸಲಾತಿ: ಒಂದು ಅವಲೋಕನ' ಎಂಬ ರಾಜ್ಯಮಟ್ಟದ ವಿಚಾರಸಂಕಿರಣ ನಡೆಸಿತು. ಮಹಿಳಾ ಅಧ್ಯಯನ ಎಂಬ ನಿಯತಕಾಲಿಕೆಯನ್ನು ಹೊರತರುತ್ತಿದೆ.

ಮಹಿಳಾ ಅಧ್ಯಯನ ಕೇಂದ್ರವು ಇತ್ತೀಚೆಗೆ ನಡೆದ ನೆರೆಹಾವಳಿಯ ಸ್ಥಳಗಳಿಗೆ ಭೇಟಿ ನೀಡಿ ವರದಿ ತಯಾರಿಸಿ ನವೆಂಬರ್ ೧೪, ೨೦೦೯ರಂದು ಸಂವಾದ ಕಾರ್ಯಕ್ರಮ ಮತ್ತು ವರದಿ ಬಿಡುಗಡೆ ಕಾರ್ಯಕ್ರಮವನ್ನು ಹಮ್ಮಿಕೊಂಡಿತು. ದಿನಾಂಕ ಡಿಸೆಂಬರ್ ೨೨, ೨೦೦೯ರಂದು ಹೊಸಪೇಟೆ ತಾಲ್ಲೂಕು ಆರೋಗ್ಯ ಇಲಾಖೆ, ಕಮಲಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದ ಸಹಯೋಗದಲ್ಲಿ ಸುಗ್ಗೇನಹಳ್ಳಿಯಲ್ಲಿ ಆರೋಗ್ಯ ತಪಾಸಣೆ ಮತ್ತು ಔಷಧಿ ವಿತರಣೆಯ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಹಸ್ತಪ್ರತಿ ವಿಭಾಗವು ಹಸ್ತಪ್ರತಿಗಳ ಸಂಗ್ರಹಣೆ, ರಕ್ಷಣೆ ಸಂಬಂಧಿಸಿದಂತೆ ಮಾರ್ಗದರ್ಶನ ಶಿಬಿರ ನಡೆಸುವುದರ ಮೂಲಕ ಹಸ್ತಪ್ರತಿಗಳ ಅಧ್ಯಯನಕ್ಕೆ ತೊಡಗಿಸಿ ಕೊಂಡಿದ್ದಾರೆ. ಒಬಲೇಶ್ವರದಲ್ಲಿ ಹಸ್ತಪ್ರತಿ ತರಬೇತಿ ಶಿಬಿರವನ್ನು ವಿದ್ಯಾರ್ಥಿ ಮತ್ತು ಆಸಕ್ತರ ಸಲುವಾಗಿ ಶಿಬಿರವನ್ನು ನಡೆಸಲಾಯಿತು. ತುಮಕೂರು ಜಿಲ್ಲೆ ಪರಿಸರದಲ್ಲಿ ಪ್ರಾಚೀನ ಹಸ್ತಪ್ರತಿ ಶಾಸನ ಸ್ಮಾರಕಗಳ ರಕ್ಷಣೆಗಾಗಿ ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ ಕಾರ್ಯಕ್ರಮ ತರಬೇತಿ ಹಮ್ಮಿಕೊಂಡಿತು. ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ ಮತ್ತು ಎಲ್. ಬಸವರಾಜು ಅವರಿಗೆ ಪಂಪಪ್ರಶಸ್ತಿ ಲಭಿಸಿದ್ದಕ್ಕೆ ವಿಭಾಗದಲ್ಲಕಿ ವಿಶೇಷ ಉಪನ್ಯಾಸ ನೀಡಿದರು. ಡಾ. ಎಫ್.ಟಿ. ಹಳ್ಳಿಕೇರಿ ಅವರನ್ನು ಕನ್ನಡ ಶಾಸ್ತ್ರೀಯ ಭಾಷೆಯ ಕಾರ್ಯಕಾರಿ ಸಮಿತಿ ಸದಸ್ಯರನ್ನಾಗಿ ಕರ್ನಾಟಕ ಸರ್ಕಾರ ನೇಮಿಸಿದೆ.

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗವು ತೆಲುಗು ಸಾಹಿತ್ಯ ಚರಿತ್ರೆ ಎಂಬ ವಿಷಯದ ಮೇಲೆ ಪೂರ್ವಸಿದ್ಧತೆಯನ್ನು ಮಾಡಿಕೊಳ್ಳುತ್ತಿದೆ. ಶ್ರೀ ವೈ.ಎಸ್. ನಾಗೇಶ ಶಾಸ್ತ್ರಿ ದತ್ತಿನಿಧಿ ಉಪನ್ಯಾಸವನ್ನು ಏಪ್ರಿಲ್ ೧೯, ೨೦೦೯ರಂದು ಸಂಡೂರಿನಲ್ಲಿ ನಡೆಸಲಾಯಿತು. ಮಾರ್ಚ್ ೨೦ ಮತ್ತು ೨೨ ರಂದು ಮಂಗಳೂರಿನಲ್ಲಿ ದ್ರಾವಿಡ ಸಾಹಿತ್ಯ ಮತ್ತು ದೇಸೀ ಸಂಸ್ಕೃತಿ ವಿಚಾರ ಸಂಕಿರಣವನ್ನು ಹಮ್ಮಿಕೊಂಡಿತ್ತು.

ಚರಿತ್ರೆ ವಿಭಾಗದ ಮುಖ್ಯಸ್ಥರಾದ ಡಾ. ವಿರೂಪಾಕ್ಷಿ ಪೂಜಾರಹಳ್ಳಿ ಅವರು 'ಶ್ರೀ ಕೃಷ್ಣದೇವರಾಯನ ತೀರ್ಥಯಾತ್ರೆಗಳು', ಡಾ. ಟಿ.ಪಿ. ವಿಜಯ್ ಅವರು 'ರಾಜೇಂದ್ರನಾಮೆ: ಮರು ಓದು', ಡಾ. ಸಿ.ಆರ್. ಗೋವಿಂದರಾಜು ಅವರು 'ಕರ್ನಾಟಕ ಸಾಂಸ್ಕೃತಿಕ ಪ್ರತೀಕಗಳು', ಡಾ. ಮೋಹನ್‌ಕೃಷ್ಣ ರೈ ಅವರು 'ಕೆಳದಿನಾಯಕರು ಹಾಗೂ ತುಳುನಾಡು', ಡಾ. ಎನ್. ಚಿನ್ನಸ್ವಾಮಿ ಸೋಸಲೆ ಅವರು 'ಆಧುನಿಕ ಮೈಸೂರಿಗೆ ದಿವಾನ್ ಮಿರ್ಜಾ ಇಸ್ಮಾಯಿಲರ ಕೊಡುಗೆ-ಸಮಗ್ರ ಅಧ್ಯಯನ' ಎಂಬ ಯೋಜನೆಗಳನ್ನು ಹಮ್ಮಿಕೊಂಡಿದ್ದಾರೆ. ಇಷ್ಟಲ್ಲದೆ ಚರಿತ್ರೆ ವಿಶ್ವಕೋಶದ ಬಿಡಿ ಬಿಡಿ ಏಳು ಸಂಪುಟಗಳು ಡಾ. ಟಿ.ಪಿ. ವಿಜಯ್ ಅವರ ಪ್ರಧಾನ ಸಂಪಾದಕತ್ವದಲ್ಲಿ ಮಾರ್ಚ್ ತಿಂಗಳಲ್ಲಿ ಲೋಕಾರ್ಪಣೆಯಾಗಲಿದೆ. ಪ್ರೊ. ಲಕ್ಷ್ಮಣ್ ತೆಲಗಾವಿ ಅವರು ಯುಜಿಸಿ ಎಮಿರಿಟಸ್ ಫೆಲೋ ಆಗಿ ವಿಭಾಗದಲ್ಲಿ ನೇಮಕಗೊಂಡಿದ್ದಾರೆ. ಡಾ. ವಿರೂಪಾಕ್ಷಿ ಪೂಜಾರಹಳ್ಳಿ ಅವರು ಶಿಲ್ಪಕಲಾ ಅಕಾಡೆಮಿ ಸದಸ್ಯರಾಗಿದ್ದಾರೆ. ಡಾ. ಎನ್. ಚಿನ್ನಸ್ವಾಮಿ ಸೋಸಲೆ ಅವರು ರಚಿಸಿದ 'ಭಾರತೀಯ ಸಮಾಜ ಮತ್ತು ದಲಿತರು' ಎಂಬ ಪುಸ್ತಕಕ್ಕೆ ಕರ್ನಾಟಕ ದಲಿತ ಸಾಹಿತ್ಯ ಪರಿಷತ್ತಿನ ಪುಸ್ತಕ ಬಹುಮಾನ ಲಭಿಸಿದೆ.

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗವು ಕನ್ನಡ ನಾಡಿನ ಕಲೆ, ವಾಸ್ತುಶಿಲ್ಪ, ಧರ್ಮ ಮತ್ತು ಸಂಸ್ಕೃತಿ ಕುರಿತಂತೆ ಅನೇಕ ಮಹತ್ವದ ಯೋಜನೆಗಳನ್ನು ಹಮ್ಮಿಕೊಂಡಿದೆ. ಈ ಯೋಜನೆಯನ್ವಯ ಬಾಗಲಕೋಟೆ ಮತ್ತು ಗುಲಬರ್ಗಾ ಜಿಲ್ಲೆಯ ದೇವಾಲಯ ಕೋಶಗಳು ಪ್ರಕಟಣೆಗೆ ಸಿದ್ಧವಾಗಿವೆ. ರಾಯಚೂರು, ಚಿತ್ರದುರ್ಗ, ಬೀದರ್, ಬೆಳಗಾವಿ ಜಿಲ್ಲೆಗಳಲ್ಲಿ ಕ್ಷೇತ್ರಕಾರ್ಯಗಳು ನಡೆಯುತ್ತಿವೆ. ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಮಾಲೆ ಎಂಬ ಯೋಜನೆ ಅಡಿಯಲ್ಲಿ ಕುರುಗೋಡು, ಹಾನಗಲ್, ತೊಣ್ಣೂರು ಕುರಿತ ಪುಸ್ತಕಗಳು ಪ್ರಕಟವಾಗಿದ್ದು, ಮೈಲಾರ, ಬಸವನ ಬಾಗೇವಾಡಿ, ಬ್ರಹ್ಮಗಿರಿ, ಕಿತ್ತೂರು, ಜಗಳೂರು, ನಾಗಮಂಗಲ ಸ್ಥಳಗಳಲ್ಲಿ ನಡೆದ ವಿಚಾರ ಸಂಕಿರಣಗಳ ಪುಸ್ತಕಗಳು ಪ್ರಕಟಗೊಳ್ಳಲಿವೆ. ಕರ್ನಾಟಕದ ಇತಿಹಾಸ, ಪುರಾತತ್ವ ಮತ್ತು ಸಂಸ್ಕೃತಿಯನ್ನು ಕುರಿತು ಅಧ್ಯಾಪಕರು ಮತ್ತು ಸಂಶೋಧಕರಿಗೆ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳುತ್ತಾ ಬಂದಿದೆ. ಇದಕ್ಕೆ ಉತ್ತಮ ಪ್ರತಿಕ್ರಿಯೆ ಲಭ್ಯವಾಗಿದೆ. ಪ್ರಸ್ತುತ ಸಾಲಿನಲ್ಲಿ ಶ್ರವಣಬೆಳಗೊಳದಲ್ಲಿ ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳಲಾಗಿದೆ.

ಬುಡಕಟ್ಟು ಅಧ್ಯಯನ ವಿಭಾಗವು ಕರ್ನಾಟಕದ ಅರಣ್ಯವಾಸಿ ಬುಡಕಟ್ಟುಗಳ ಜಾನಪದೀಯ ಅಧ್ಯಯನ ಎಂಬ ಯೋಜನೆಯನ್ನು ವಿಶ್ವವಿದ್ಯಾಲಯದ ಧನಸಹಾಯದ ಅಡಿಯಲ್ಲಿ ಪೂರೈಸಿ ಹದಿನೈದು ಬುಡಕಟ್ಟು ಸಮುದಾಯಗಳ ಕುರಿತು ವರದಿ ಸಲ್ಲಿಸಿದೆ. ಮುಂದುವರಿಕೆಯಾಗಿ ವಿಶೇಷ ನೆರವಿನಡಿಯಲ್ಲಿ ಯೋಜನೆಯ ಎರಡನೆಯ ಹಂತದ ಸಂಶೋಧನೆಗೆ ರೂ. ೪೦ ಲಕ್ಷಗಳ ಅನುದಾನ ದೊರಕಿದೆ. ಬುಡಕಟ್ಟು ಕಲ್ಯಾಣ ಇಲಾಖೆಯ ಯೋಜನೆಯಡಿಯಲ್ಲಿ ಹಾಗೂ ಹಂಪಿ ಅಭಿವೃದ್ಧಿ ಪ್ರಾಧಿಕಾರದ ಅಡಿಯಲ್ಲಿ ಅಧ್ಯಯನ ನಡೆಸಿ ವರದಿ ಸಲ್ಲಿಸಿದೆ. ಡಾ. ಕೆ.ಎಂ. ಮೇತ್ರಿ ಅವರಿಗೆ ಶ್ರೇಷ್ಠ ಶಿಕ್ಷಣತಜ್ಞ ಡಾ. ಎಚ್. ನರಸಿಂಹಯ್ಯ ಪ್ರಶಸ್ತಿ ೨೦೦೯, ಅಲೆಮಾರಿ ಸಿರಿ ೨೦೦೯. ಪ್ರತಿಭಾ ಪುರಸ್ಕಾರ ೨೦೦೯ಗಳು ಲಭಿಸಿವೆ.

ಮಾನವಶಾಸ್ತ್ರ ವಿಭಾಗದ ಡಾ. ತಾರಿಹಳ್ಳಿ ಹನುಮಂತಪ್ಪ ಅವರು 'ಹಂಪೆಯ ಜಾತ್ರೆ ಮತ್ತು ಆಚರಣೆಗಳು', 'ಕರ್ನಾಟಕದ ಉಗ್ರ ಆಚರಣೆಗಳು' ಮತ್ತು ಡಾ. ಎಲ್. ಶ್ರೀನಿವಾಸ ಅವರು 'ಹಂಪಿ ಪರಿಸರದ ಆದಿಮಾನವರ ನೆಲೆಗಳು', ಕರ್ನಾಟಕ ಆದಿವಾಸಿಗಳು (ತೋಡ ಜನಾಂಗಗಳನ್ನು ಅನುಲಕ್ಷಿಸಿ) ಎಂಬ ಯೋಜನೆಗಳನ್ನು ಹಮ್ಮಿಕೊಂಡಿದ್ದಾರೆ. ಇದಲ್ಲದೆ 'ಸಾಹಿತ್ಯ ಪ್ರಾಚೀನ ಇತಿಹಾಸ ಮಾನವಶಾಸ್ತ್ರ ಕುರಿತು ಅಂತರಶಿಸ್ತೀಯ ಹಾಗೂ 'ಪರಿವರ್ತನೆಯ ಹಾದಿಯಲ್ಲಿ ಬುಡಕಟ್ಟು ಸಮಾಜ', ಕರ್ನಾಟಕದ ಬುಡಕಟ್ಟು ಸಮುದಾಯಗಳು', 'ಸುಸ್ಥಿರ ಜಲ ನಿರ್ವಹಣೆ ಸಂಪ್ರದಾಯ ಮತ್ತು ಆಧುನಿಕತೆ', ಅಭಿವೃದ್ಧಿ ಪಥದತ್ತ ಮಹಿಳೆ ಎಂಬ ವಿಚಾರ ಸಂಕಿರಣವನ್ನು ಹಮ್ಮಿಕೊಂಡಿತ್ತು.

ಶಾಸನಶಾಸ್ತ್ರ ವಿಭಾಗದ 'ಹಾವೇರಿ ಜಿಲ್ಲಾ ಶಾಸನ ಸಂಪುಟ' ಮತ್ತು 'ಧಾರವಾಡ ಜಿಲ್ಲಾ ಶಾಸನ ಸಂಪುಟಗಳು' ಸಂಪಾದನಾ ಕಾರ್ಯ ಪ್ರಗತಿಯಲ್ಲಿದೆ. ಇದಲ್ಲದೆ 'ಗದಗ ಜಿಲ್ಲೆಯ ಶಾಸನ ಸಂಪುಟ'ವು ಈಗಾಗಲೇ ಮುದ್ರಣ ಹಂತದಲ್ಲಿದೆ. ಮೇ ತಿಂಗಳಲ್ಲಿ ರಾಮಚಂದ್ರಪುರ ಮಠದ ಸಹಯೋಗದಲ್ಲಿ ತುರುಗೋಳ್ ವಿಷಯದ ಮೇಲೆ ರಾಷ್ಟ್ರೀಯ ವಿಚಾರ ಸಂಕಿರಣವನ್ನು ನಡೆಸಲಾಯಿತು. ಅಕ್ಟೋಬರ್ ೧೬, ೧೭ ರಂದು ಆಸಕ್ತ ಶಿಕ್ಷಕರು, ವಿದ್ಯಾರ್ಥಿಗಳಿಗೆ 'ಶಾಸನ ಅಧ್ಯಯನ ತರಬೇತಿ' ಶಿಬಿರವನ್ನು ಬೆಂಗಳೂರಿನ ಮಿಥಿಕ್ ಸೊಸೈಟಿಯ ಸಹಯೋಗದಲ್ಲಿ ನಡೆಸಲಾಯಿತು.

ಜಾನಪದ ಅಧ್ಯಯನ ವಿಭಾಗವು ಕುಪ್ಪಂ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ 'ದಕ್ಷಿಣ ದ್ರಾವಿಡ ಭಾಷೆಗಳ ಜಾನಪದ ಪಾರಿಭಾಷಿಕ ಪದಕೋಶ' ಯೋಜನೆ ಕೈಗೆತ್ತಿಕೊಂಡಿದೆ. ವಿಭಾಗದ ಅಧ್ಯಾಪಕರುಗಳು ಹಂಪಿ ಅಭಿವೃದ್ಧಿ ಪ್ರಾಧಿಕಾರದವರ ಸಹಯೋಗದಲ್ಲಿ ಯೋಜನೆಗಳನ್ನು ಹಮ್ಮಿಕೊಂಡು ಪೂರ್ಣಗೊಳಿಸಿಕೊಟ್ಟಿದ್ದಾರೆ. ಪ್ರತಿವರ್ಷವೂ ದೇಸೀ ಸಮ್ಮೇಳನವನ್ನು ವಿವಿಧ ಊರುಗಳಲ್ಲಿ ಹಮ್ಮಿಕೊಳ್ಳಲಾಗುತ್ತಿದೆ.

ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರವು 'ವಚನ ಸಾಹಿತ್ಯ ಮತ್ತು ಜನಪದ ಸಾಹಿತ್ಯ' ಕುರಿತ ವಿಚಾರ ಸಂಕಿರಣವನ್ನು ಹಮ್ಮಿಕೊಂಡಿತ್ತು. ಡಾ. ಫ.ಗು.ಹಳಕಟ್ಟಿ ಅವರ ಜನ್ಮದಿನದ ಅಂಗವಾಗಿ 'ಫ.ಗು.ಹಳಕಟ್ಟಿ ಅವರ ಸಾಹಿತ್ಯ ಸಾಧನೆ' ಕುರಿತ ವಿಚಾರ

ಸಂಕಿರಣವನ್ನು ನಡೆಸಲಾಯಿತು. ವಿದ್ಯಾರ್ಥಿಗಳಿಗೆ, ಆಸಕ್ತ ವಿದ್ವಾಂಸರಿಗೆ ಉಪಯುಕ್ತವಾಗುವಂತೆ 'ಅಖಿಲ ಕರ್ನಾಟಕ ವಚನ ಸಾಹಿತ್ಯ ಅಧ್ಯಯನ' ಶಿಬಿರ ಹಮ್ಮಿಕೊಳ್ಳಲಾಯಿತು. ಡಾ. ಎಸ್.ಎಸ್. ಅಂಗಡಿ ಅವರ 'ವಚನ ಸಾಹಿತ್ಯ ಛಂದೋಲನ' ಕೃತಿಗೆ ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ ಲಭಿಸಿದೆ.

ಲೋಕಸಭಾ ಸದಸ್ಯರಾದ ಶ್ರೀ ಕೆ. ವಿರೂಪಾಕ್ಷಪ್ಪ ಅವರು ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಸಂಸದರ ಅನುದಾನದಿಂದ ನಿರ್ಮಿಸಿದ 'ಹಾಲುಮತ ಭವನ', 'ಹಾಲುಮತ ಮೇಲುದೀಪ', 'ಗ್ರಂಥಾಲಯ ಹಾಗೂ ಹಾಲುಮತ ಭಂಡಾರ', 'ವಸ್ತುಸಂಗ್ರಹಾಲಯಗಳನ್ನು ಉದ್ಘಾಟನೆ ಮಾಡಲಾಯಿತು. 'ಹಾಲುಮತ ಸಂಸ್ಕೃತಿ-೨ ಚಳ್ಳಕೆರೆಯಲ್ಲಿ ನಡೆಸಲಾಯಿತು. 'ರಸ್ತಾಪುರ ಭೀಮಕವಿಯ ಹಾಲುಮತೋತ್ತೇಜಕ ಪುರಾಣವನ್ನು ಸಂಪಾದಿಸಿ ಡಾ. ಎಫ್.ಟಿ.ಹಳ್ಳಿಕೇರಿ ಅವರಿಗೆ ಕನ್ನಡ ಸಾಹಿತ್ಯ ಪರಿಷತ್ತು ಅವರಿಂದ ಶ್ರೀಮತಿ ಜಯಲಕ್ಷ್ಮಮ್ಮ ಬಿ.ಎಸ್. ಸಣ್ಣಯ್ಯ ದತ್ತಿ ಪ್ರಶಸ್ತಿ ಲಭಿಸಿದೆ.

ಜೈನ ಅಧ್ಯಯನ ಪೀಠವು ಕನ್ನಡ ಸಾಹಿತ್ಯ ಪರಂಪರೆ ಮತ್ತು ಜೈನಧರ್ಮ ವಿಚಾರ ಸಂಕಿರಣವನ್ನು ಯಶಸ್ವಿಯಾಗಿ ನಡೆಸಿತು. ಕರ್ನಾಟಕದಲ್ಲಿ ಜೈನಧರ್ಮ : ಚಾರಿತ್ರಿಕ ಅವಲೋಕನ ವಿಶೇಷ ಉಪನ್ಯಾಸ ನಡೆದಿದೆ. ಕಳೆದ ವರ್ಷ ಸರ್ಕಾರದ ಅನುದಾನದಿಂದ ೨೦ ಜೈನ ಸಮಗ್ರ ಸಾಹಿತ್ಯ ಸಂಪುಟಗಳನ್ನು ಹೊರತರಲಾಗಿದೆ. ಈ ವರ್ಷ ಶಾಸ್ತ್ರ ಸಾಹಿತ್ಯ ಕುರಿತಂತೆ ೩೦ ಗ್ರಂಥಗಳನ್ನು ಹೊರತರುವ ಯೋಜನೆ ಇದೆ. ಕರ್ನಾಟಕ ಇತಿಹಾಸಕ್ಕೆ ಸಂಬಂಧಿಸಿದ ಜೈನ ಲೇಖನಗಳ ಸಂಪುಟ ಹೊರತರುವ ಯೋಜನೆ ಈ ಪೀಠಕ್ಕಿದೆ. ಕರ್ನಾಟಕ ಜೈನಕೇಂದ್ರಗಳ ಕುರಿತು ಚಾರಿತ್ರಿಕ ವಿಚಾರ ಸಂಕಿರಣ ಯೋಜಿಸಲಾಗಿದೆ.

ಪುರಂದರದಾಸ ಅಧ್ಯಯನ ಪೀಠವು 'ಪುರಂದರ ದಾಸರ ಸಾಹಿತ್ಯ ಅಧ್ಯಯನ ವಿಚಾರ ಸಂಕಿರಣವನ್ನು ಧಾರವಾಡದಲ್ಲಿ ಹಮ್ಮಿಕೊಂಡಿತು. ರಾಯಚೂರು ಮತ್ತು ತುಮಕೂರಿನಲ್ಲಿ 'ಪುರಂದರದಾಸರ ಸಾಹಿತ್ಯ ಕುರಿತ ವಿಶೇಷ ಉಪನ್ಯಾಸಗಳು ೧ ಮತ್ತು ೨'ಗಳನ್ನು ನಡೆಸಲಾಯಿತು.

ನಾಡೋಜ ಡಾ. ರಾಜಕುಮಾರ್ ಅಧ್ಯಯನ ಪೀಠದ ಮೂಲಕ ಶ್ರವ್ಯ ಮತ್ತು ದೃಶ್ಯ ಗ್ರಂಥಾಲಯ ತೆರೆಯಲಾಗಿದೆ. ರಾಜಕುಮಾರ್ ಅವರ ಚಲನಚಿತ್ರಗಳ ಸಿ.ಡಿ.ಗಳನ್ನು ಸಂಗ್ರಹಿಸಲಾಗಿದೆ. ರಂಗಭೂಮಿ ಹಾಗೂ ಚಲನಚಿತ್ರಗಳಿಗೆ ಸಂಬಂಧಿಸಿದಂತೆ ಕೃತಿಗಳನ್ನು ಸಂಗ್ರಹಿಸಲಾಗಿದೆ.

ದೃಶ್ಯಕಲಾ ವಿಭಾಗವು ಬೋಧನೆ, ಸಂಶೋಧನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿವೆ. ಚಿತ್ರಕಲಾ ಶಾಲೆಗಳ ನಿರ್ವಹಣಾ ಕೇಂದ್ರದಲ್ಲಿ ಬಿ.ವಿ.ಎ, ಎ.ಟಿ.ಸಿ, ಡಿಪ್ಲೊಮಾ, ಬಿ.ವಿ.ಇಡಿ ಕೋರ್ಸ್‌ಗಳಲ್ಲಿ ಒಟ್ಟು ನಾಲ್ಕು ಸಾವಿರದ ಮುನ್ನೂರು ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. ಕರ್ನಾಟಕ ರಾಜ್ಯಾದ್ಯಂತ ಕಾರ್ಯ ನಿರ್ವಹಿಸುತ್ತಿರುವ ಸುಮಾರು ಎಂಬತ್ತು ಚಿತ್ರಕಲಾ ಮಹಾವಿದ್ಯಾಲಯದ ಅಧ್ಯಾಪಕರಿಗಾಗಿ ವೃತ್ತಿಪರ ಸ್ನಾತಕೋತ್ತರ ತರಗತಿಗಳನ್ನು ನಡೆಸಲಾಗುತ್ತಿದೆ. ಇದರಿಂದ ಮಹಾವಿದ್ಯಾಲಯಗಳ ಶೈಕ್ಷಣಿಕ ಗುಣಮಟ್ಟ ಸುಧಾರಿಸಲಿದೆ.

ನಮ್ಮ ವಿಶ್ವವಿದ್ಯಾಲಯದಲ್ಲಿ ಸರ್ಕಾರ ಮತ್ತು ಸಾರ್ವಜನಿಕರ ನೆರವಿನಿಂದ ಅನೇಕ ಅಧ್ಯಯನ ಪೀಠಗಳು ಕಾರ್ಯ ನಿರ್ವಹಿಸುತ್ತಿವೆ. ಈ ಪೀಠಗಳು ವಿಚಾರಸಂಕಿರಣಗಳನ್ನು ಏರ್ಪಡಿಸುತ್ತಿವೆ. ಕಮ್ಮಟಗಳನ್ನು ಸಂಘಟಿಸುತ್ತಿವೆ.

ಪ್ರಸಾರಾಂಗದ ಪ್ರಕಟಣೆಗಳಿಗೆ ISBN ಸಂಖ್ಯೆ ಲಭಿಸಿರುವುದು ಸಂತೋಷದ ವಿಚಾರ. ಈ ಸಂಖ್ಯೆ ದೊರೆತಿರುವುದರಿಂದ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರ ದೊರೆಯಲಿದೆ. ISBN ಸಂಖ್ಯೆಯನ್ನು ದಾಖಲಿಸುವುದರ ಮೂಲಕ ಅಂತಾರಾಷ್ಟ್ರೀಯ ಪ್ರಕಾಶಕರ ಡೈರೆಕ್ಟರಿಯಲ್ಲಿ

ಹಾಗೂ ಬರ್ಲಿನ್‌ನ ಇಂಟರ್ ನ್ಯಾಷನಲ್ ISBN ಏಜೆನ್ಸಿಯಲ್ಲಿಯೂ ನಮ್ಮ ಪ್ರಕಟಣೆಗಳ ಮಾಹಿತಿಯು ಸೇರಿಕೊಳ್ಳುತ್ತದೆ. ಪ್ರಸಾರಾಂಗವು ಈ ಸಾಲಿನಲ್ಲಿ ೧೧ ಪುಸ್ತಕಗಳ ಮರುಮುದ್ರಣವೂ ಒಳಗೊಂಡಂತೆ ೫೨ ಪುಸ್ತಕಗಳನ್ನು ಪ್ರಕಟಿಸಿದೆ. ಪುಸ್ತಕ ಸಂಸ್ಕೃತಿ ಯಾತ್ರೆಯ ಮುಲಕ ಕರ್ನಾಟಕದ ನಾನಾ ಭಾಗಗಳಲ್ಲಿ ಪುಸ್ತಕ ಪ್ರದರ್ಶನ ಮತ್ತು ಮಾರಾಟ, ಪುಸ್ತಕ ಬಿಡುಗಡೆ ಕಾರ್ಯಕ್ರಮವನ್ನು ಆಯೋಜಿಸಿದೆ. ಈಗಾಗಲೇ ಈ ಆರ್ಥಿಕ ವರ್ಷದಲ್ಲಿ ೩೦ ಲಕ್ಷ ರೂಪಾಯಿಗಳ ಪುಸ್ತಕಗಳು ಮಾರಾಟವಾಗಿವೆ. ೧೮ ನುಡಿಹಬ್ಬದ ಭಾಷಣಗಳನ್ನು ಒಳಗೊಂಡ ಸಂಪುಟವೊಂದನ್ನು ಹೊರತರಲಾಗುವುದು. ಕುವೆಂಪು ಸಮಗ್ರ ಗದ್ಯ ಸಾಹಿತ್ಯ ಸಂಪುಟ ೩, ೪ ಹಾಗೂ ಸಂಕೀರ್ಣ ಸಂಪುಟಗಳ ಪ್ರಕಟಣೆ, ಚರಿತ್ರೆಯ ೭ ಸಂಪುಟಗಳ ಪ್ರಕಟಣೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಶ್ರೀ ಕೃಷ್ಣದೇವರಾಯನ ೫೦೦ನೇ ಪಟ್ಟಾಭಿಷೇಕೋತ್ಸವದ ಅಂಗವಾಗಿ ಐದು ಪುಸ್ತಕಗಳನ್ನು ಪ್ರಕಟಿಸಲಾಗುತ್ತಿದೆ. ಇದೇ ತಿಂಗಳು ೧೫ರಂದು ಸನ್ಮಾನ್ಯ ಗೃಹಸಚಿವರಾದ ಡಾ. ವಿ.ಎಸ್. ಆಚಾರ್ಯ ಅವರು ಮೈಸೂರಿನಲ್ಲಿ ೧೨ ಪುಸ್ತಕಗಳನ್ನು ಲೋಕಾರ್ಪಣೆ ಮಾಡಲಿದ್ದಾರೆ.

ವಿಶ್ವವಿದ್ಯಾಲಯದ ಗ್ರಂಥಾಲಯಕ್ಕೆ ಧನಸಹಾಯ ಆಯೋಗದಿಂದ ೭೬ ಲಕ್ಷ ರೂಪಾಯಿಗಳ ಅನುದಾನ ದೊರೆತಿದ್ದು ಗ್ರಂಥಗಳನ್ನು ಹಾಗೂ ಬುಕ್ ರ್‍ಯಾಕನ್ನು ಖರೀದಿಸಲಾಗಿದೆ. ಇದಲ್ಲದೆ ಗ್ರಂಥಾಲಯದಿಂದ ಸಿದ್ಧಗೊಂಡಿರುವ 'ಸಾರ-ವಿಸ್ತಾರ'ವೆಂಬ ಪ್ರಸಾರಾಂಗ ಪ್ರಕಟಿಸಿರುವ ಪುಸ್ತಕಗಳ ಪರಿಚಯ ಕೃತಿಯನ್ನು ಡಾ. ಎಚ್.ನಾಗವೇಣಿ ರೂಪಿಸಿಕೊಟ್ಟಿದ್ದಾರೆ.

ನಮ್ಮ ವಿಶ್ವವಿದ್ಯಾಲಯದ ಆಡಳಿತ ಸಿಬ್ಬಂದಿಯಾದ ಶ್ರೀ ಗ್ಯಾನಪ್ಪ ಬಡಿಗೇರ ಅವರಿಗೆ ಭಾರತೀಯ ದಲಿತ ಸಾಹಿತ್ಯ ಅಕಾಡೆಮಿ, ದೆಹಲಿ ಅವರು ೨೦೦೯ ನೇ ಸಾಲಿನ ಬಾಬ್ ಸಾಹೇಬ್ ಅಂಬೇಡ್ಕರ್ ರಾಷ್ಟ್ರೀಯ ಶಿಷ್ಯವೇತನ ಪ್ರಶಸ್ತಿಯನ್ನು ಕೊಡಮಾಡಿರುವುದು ತುಂಬ ಸಂತೋಷ ತಂದಿದೆ.

ನಮ್ಮ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಸುಮಾರು ಒಂದು ಕೋಟಿ ರೂಪಾಯಿಯಷ್ಟು ರಾಜೀವಗಾಂಧಿ ಶಿಷ್ಯವೇತನ ದೊರೆತಿದೆ. ಈ ವರ್ಷ ೧೮೨ ವಿದ್ಯಾರ್ಥಿಗಳು ಎಂ.ಫಿಲ್. ಪದವಿಯನ್ನೂ ೭೧ ವಿದ್ಯಾರ್ಥಿಗಳು ಪಿಎಚ್.ಡಿ. ಪದವಿಯನ್ನೂ ೧೦ ವಿದ್ಯಾರ್ಥಿಗಳು ಡಿ.ಲಿಟ್. ಪದವಿಯನ್ನು ಪಡೆಯಲಿದ್ದಾರೆ. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ನೆಟ್ ಪರೀಕ್ಷೆಗೆ ಸಂಬಂಧಿಸಿದಂತೆ ಇಂಗ್ಲಿಷ್ ಸ್ಪೀಕಿಂಗ್ ಕೋರ್ಸ್ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಿದ್ಯಾರ್ಥಿನಿಲಯ ವಿಸ್ತರಣೆಗಾಗಿ ಸರಕಾರದ ವತಿಯಿಂದ ೧೬ ಲಕ್ಷ ರೂಪಾಯಿಗಳು ಬಿಡುಗಡೆ ಆಗಿದೆ. ಡಾ. ಪುರುಷೋತ್ತಮ ಬಿಳಿಮಲೆ ಅವರಿಂದ ಮೂರು ದಿನಗಳ ವಿಶೇಷ ಉಪನ್ಯಾಸವನ್ನು ವಿಶ್ವವಿದ್ಯಾಯಲ ಏರ್ಪಡಿಸಿತ್ತು.

ಸಮಾಜವಿಜ್ಞಾನ ನಿಕಾಯಕ್ಕೆ ನಾಲ್ಕು ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಮೇಜರ್ ಯೋಜನೆಗಳು ನೀಡಲ್ಪಟ್ಟಿವೆ. ಕುಪ್ಪಳಿಯಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ, ಕರ್ನಾಟಕ ಸರ್ಕಾರದ ಪುಸ್ತಕ ಪ್ರಾಧಿಕಾರ, ರಾಜ್ಯ ಸಾಹಿತ್ಯ ಅಕಾಡೆಮಿ ಸಹಯೋಗದಲ್ಲಿ ಕುವೆಂಪು ಸಾಹಿತ್ಯ ಕುರಿತ ವಿಶೇಷ ವಿಚಾರ ಸಂಕಿರಣ ನಡೆದಿವೆ. ಛಾಯಾಚಿತ್ರಕ್ಕೆ ಸಂಬಂಧಿಸಿದಂತೆ ರಾಜ್ಯಮಟ್ಟದ ಛಾಯಾಚಿತ್ರಗಾರರ ಶಿಬಿರವನ್ನು ಇಲ್ಲಿ ನಡೆಸಲಾಗಿತ್ತು. ಇಷ್ಟಲ್ಲದೆ ಕುಪ್ಪಳಿಯಲ್ಲಿ ಜಾನಪದ ವಸ್ತುಸಂಗ್ರಹಾಲಯಕ್ಕೆ ಸಂಬಂಧಿಸಿದ ಚಟುವಟಿಕೆಗಳು ನಡೆದಿದ್ದು, ವಸ್ತುಸಂಗ್ರಹಾಲಯಕ್ಕಾಗಿ ಕಟ್ಟಡದ ನಿರ್ಮಾಣವನ್ನು ಪ್ರವಾಸೋದ್ಯಮ ಇಲಾಖೆ, ಕುವೆಂಪು ಟ್ರಸ್ಟ್ ನೆರವಿನಿಂದ ನಡೆಯುತ್ತಿದೆ.

ಸರಕಾರವು ನಿರಂತರ ಕುಡಿಯುವ ನೀರಿಗಾಗಿ ೫೦ ಲಕ್ಷ ನೀಡಿದ್ದು, ೮೫ ಲಕ್ಷ ರೂಪಾಯಿಗಳ ಯೋಜನೆ ಈ ತಿಂಗಳ ಅಂತ್ಯದಲ್ಲಿ ಪೂರ್ಣವಾಗಲಿದೆ. ವಿಶ್ವವಿದ್ಯಾಲಯದ ಧನಸಹಾಯ ಆಯೋಗವು ಹನ್ನೊಂದನೇ ಪಂಚವಾರ್ಷಿಕ ಯೋಜನೆಯಲ್ಲಿ ಒಂಬತ್ತೂವರೆ ಕೋಟಿ ರೂಪಾಯಿ ಅನುದಾನ ನೀಡಲಿದ್ದು, ದೃಶ್ಯಕಲೆ, ಪ್ರಸಾರಾಂಗ, ಉಪಾಹಾರ ಕಟ್ಟಡಗಳು ನಿರ್ಮಾಣವಾಗಲಿವೆ. ಅಲ್ಲದೆ ಒಂದೂಮುಕ್ಕಾಲು ಕೋಟಿ ರೂಪಾಯಿ ಅಂದಾಜಿನಲ್ಲಿ ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನ ಅಳವಡಿಕೆ ಆಗಲಿದೆ. ವಿದ್ಯಾರ್ಥಿನಿಲಯಗಳಲ್ಲಿ ಸೋಲಾರ್ ದೀಪಗಳು ಮತ್ತು ಕುಡಿಯುವ ನೀರಿಗಾಗಿ ವಾಟರ್ ಕೂಲರ್‌ಗಳನ್ನು ಅಳವಡಿಸಲಾಗಿದೆ. ಕನ್ನಡವನ್ನು ಶಾಸ್ತ್ರೀಯ ಭಾಷೆಯಾಗಿ ಪರಿಗಣಿಸಿದ

ಸಂದರ್ಭದಲ್ಲಿ ಕರ್ನಾಟಕ ಸರಕಾರವು ಒಂದು ಕೋಟಿ ರೂಪಾಯಿ ಧನಸಹಾಯ ನೀಡಿದ್ದು, ಸುಮಾರು ೪೫ ಯೋಜನೆಗಳು ಕಾರ್ಯನಿರತವಾಗಿವೆ.

ನಾಡಿನ ಹೆಸರಾಂತ ಶಿಲ್ಪಿಗಳು ಹಾಗೂ ಕಲಾವಿದರ ಮಾರ್ಗದರ್ಶನದಲ್ಲಿ ಶಿಲ್ಪವನವನ್ನು ಇನ್ನಷ್ಟು ಆಕರ್ಷಣೀಯವಾಗಿ ರೂಪಿಸುವ ಕ್ರಿಯಾಯೋಜನೆ ಜಾರಿಯಲ್ಲಿದೆ. ಕರ್ನಾಟಕ ಪ್ರವಾಸೋದ್ಯಮ ಇಲಾಖೆಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಪ್ರವಾಸಿ ಮಾರ್ಗದರ್ಶಿ ತರಬೇತಿ ನೀಡಲು ಅನುದಾನ ನೀಡಿದ್ದು, ಈಗಾಗಲೇ ೭೦ ಜನ ಮಾರ್ಗದರ್ಶಿಗಳಿಗೆ ತರಬೇತಿ ನೀಡಲಾಗಿದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನೆರವಿನಿಂದ ಆಡಳಿತದಲ್ಲಿ ಕನ್ನಡ ಬಳಕೆ ಕುರಿತು ತರಬೇತಿಗಾಗಿ ಪಠ್ಯವನ್ನು ವಿಶ್ವವಿದ್ಯಾಲಯ ಸಿದ್ಧಪಡಿಸಿದೆ. ಅಲ್ಲದೆ ರಾಜ್ಯಾದಾಂತ ಜಿಲ್ಲಾ ತರಬೇತಿ ಕೇಂದ್ರಗಳಿಗಾಗಿ ತರಬೇತುದಾರರನ್ನು ತರಬೇತುಗೊಳಿಸಲು ೫ ಕಾರ್ಯಾಗಾರಗಳನ್ನು ಯಶಸ್ವಿಯಾಗಿ ನಡೆಸಿದೆ. ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯದ ದೂರಶಿಕ್ಷಣ ಪರಿಷತ್ತು ನಮ್ಮ ದೂರಶಿಕ್ಷಣಕ್ಕೆ ಪ್ರಸ್ತುತ ವರ್ಷದಲ್ಲಿ ೨೦ ಲಕ್ಷ ರೂಪಾಯಿಗಳ ಅನುದಾನವನ್ನು ಮಂಜುರು ಮಾಡಿದೆ.

ಕುರುಬನಕಟ್ಟೆಯ ಸಾಂಸ್ಕೃತಿಕ ಅಧ್ಯಯನ ಕೇಂದ್ರದಿಂದ ಚಾಮರಾಜ ತಾಲ್ಲೂಕಿನ ಗ್ರಾಮಗಳ ಮಾಹಿತಿ ಕೋಶ ಪೂರ್ಣಗೊಳ್ಳುತ್ತಿದೆ. ಅಂತರ್ಜಾಲಕ್ಕೆ ಬಿಡುವ ಯೋಜನೆಯೂ ಇದೆ. ಬಾದಾಮಿ ಕೇಂದ್ರದಲ್ಲಿ ದೃಶ್ಯ, ಶಿಲ್ಪಕ್ಕೆ ಸಂಬಂಧಿಸಿದ ಬೋಧನೆ, ಶಿಬಿರ, ಉಪನ್ಯಾಸ, ವಿಚಾರ ಸಂಕಿರಣ ನಡೆದಿವೆ.

ಈ ಎಲ್ಲ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡ ಅಧ್ಯಾಪಕವರ್ಗ ಹಾಗೂ ವಿದ್ಯಾರ್ಥಿ ವರ್ಗ, ಆಡಳಿತ ಸಿಬ್ಬಂದಿ ವರ್ಗವಿದೆ. ಕಾರ್ಯಕಾರಿ ಸಮಿತಿಯ ಎಲ್ಲ ಸದಸ್ಯರು ಅತ್ಯಂತ ಕಾಳಜಿಯಿಂದ ಮಾರ್ಗದರ್ಶನ ನೀಡುತ್ತಿದ್ದಾರೆ. ಈ ಎಲ್ಲ ಸೌಕರ್ಯಗಳ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯ ಮುಂಬರುವ ದಿನಗಳಲ್ಲಿ ಭೌತಿಕವಾಗಿ ಹಾಗೂ ಬೌದ್ಧಿಕವಾಗಿ ಉನ್ನತ ಸ್ಥಾನವನ್ನು ಗಳಿಸಲಿದೆ.

ನಮಸ್ಕಾರ
೧೩ ಜನವರಿ ೨೦೧೦

## ೧೭. ನಿಚ್ಚಂಪೊಸತು

ಕನ್ನಡ ವಿಶ್ವವಿದ್ಯಾಲಯ ೧೯ನೇ ನುಡಿಹಬ್ಬದಲ್ಲಿ ಪ್ರತಿಷ್ಠಿತ ನಾಡೋಜ ಪದವಿ, ಡಿ.ಲಿಟ್. ಪಿಎಚ್.ಡಿ., ಎಂ.ಫಿಲ್. ಪದವಿಗಳನ್ನು ನೀಡಿ ನುಡಿಹಬ್ಬವನ್ನು ಅರ್ಥಪೂರ್ಣವಾಗಿಸಲು ಬಂದಿರುವ ಕರ್ನಾಟಕ ರಾಜ್ಯದ ರಾಜ್ಯಪಾಲರೂ ಕನ್ನಡ ವಿಶ್ವವಿದ್ಯಾಲಯದ ಕುಲಾಧಿಪತಿಗಳೂ ಆದ ಘನತೆವೆತ್ತ ಸನ್ಮಾನ್ಯ ಶ್ರೀ ಎಚ್.ಆರ್. ಭಾರದ್ವಾಜ್ ಅವರೇ.

ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಸಚಿವರು, ಕನ್ನಡ ವಿಶ್ವವಿದ್ಯಾಲಯದ ಸಮಕುಲಾಧಿಪತಿಗಳೂ ಆದ ಸನ್ಮಾನ್ಯ ಡಾ. ವಿ.ಎಸ್. ಆಚಾರ್ಯ ಅವರೇ, ಘಟಿಕೋತ್ಸವ ಭಾಷಣವನ್ನು ಮಾಡಲು ಆಗಮಿಸಿರುವ ನ್ಯಾಕ್ ಪ್ರಾದೇಶಿಕ ಕೇಂದ್ರದ ನಿರ್ದೇಶಕರಾದ ಡಾ. ಎಚ್.ಎ. ರಂಗನಾಥ್ ಅವರೆ, ಕನ್ನಡ ವಿಶ್ವವಿದ್ಯಾಲಯದ ನಾಡೋಜ ಗೌರವ ಪದವಿಗೆ ಭಾಜನರಾದ ಡಾ. ಎಂ.ಎಂ. ಕಲಬುರ್ಗಿ ಅವರೆ, ಡಾ. ಡಿ.ಬಿ.ಶ್ರೀನಿವಾಸ್ ಅವರೇ, ಶ್ರೀಮತಿ ಹರಿಜನ ಪದ್ಮಮ್ಮ ಅವರೇ, ಪ್ರೊ. ಬರಗೂರು ರಾಮಚಂದ್ರಪ್ಪ ಅವರೇ, ನೆರೆದಿರುವ ವಿವಿಧ ಪದವಿಗಳನ್ನು ಪಡೆಯಲಿರುವ ಮಹನೀಯರೇ, ಕನ್ನಡ ವಿಶ್ವವಿದ್ಯಾಲಯದ ಅಧ್ಯಾಪಕ ವೃಂದದವರೇ, ಆಡಳಿತ ಸಿಬ್ಬಂದಿಗಳೇ, ಮಾಧ್ಯಮದ ಮಿತ್ರರೇ, ಆಹ್ವಾನಿತರೇ, ಮಹಿಳೆಯರೇ ಹಾಗೂ ಮಹನೀಯರೇ, ತಮ್ಮೆಲ್ಲರನ್ನು ಕನ್ನಡ ವಿಶ್ವವಿದ್ಯಾಲಯದ ಪರವಾಗಿ ಅತ್ಯಂತ ಗೌರವ ಹಾಗೂ ಆದರದಿಂದ ಸ್ವಾಗತಿಸುತ್ತೇನೆ.

೧೯ನೇ ನುಡಿಹಬ್ಬದಲ್ಲಿ ಪಾಲ್ಗೊಂಡಿರುವ ಘನತೆವೆತ್ತ ಕುಲಾಧಿಪತಿಗಳಾದ ಸನ್ಮಾನ್ಯ ಶ್ರೀ ಹಂಸರಾಜ್ ಭಾರದ್ವಾಜ್ ಅವರು ಉತ್ತಮ ಸಮಾಜ ಚಿಂತಕರು, ರಾಜಕೀಯ ಮುತ್ಸದ್ಧಿಗಳು. ಶ್ರೀಯುತರು ಈ ನುಡಿಹಬ್ಬದ ಸಂದರ್ಭದಲ್ಲಿ ಡಿ.ಲಿಟ್., ಪಿಎಚ್.ಡಿ. ಹಾಗೂ ಎಂ.ಫಿಲ್ ಪದವಿಗಳನ್ನು ಪ್ರದಾನ ಮಾಡಲಿದ್ದಾರೆ.

ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಸಚಿವರೂ ಕನ್ನಡ ವಿಶ್ವವಿದ್ಯಾಲಯದ ಸಮಕುಲಾಧಿಪತಿಗಳೂ ಆದ ಸನ್ಮಾನ್ಯ ಡಾ. ವಿ.ಎಸ್.ಆಚಾರ್ಯ ಅವರು ಉತ್ತಮ ಶಿಕ್ಷಣ ಚಿಂತಕರು, ಶೈಕ್ಷಣಿಕ ರಂಗದಲ್ಲಿ ಹೊಸ ಹೊಳಹುಗಳನ್ನು ಅರಸುತ್ತಿರುವ ಸುಸಂಸ್ಕೃತ ರಾಜಕಾರಣಿಗಳು. ಅವರು ನುಡಿಹಬ್ಬದ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದು ನುಡಿಹಬ್ಬಕ್ಕೆ ಗೌರವವನ್ನು ತಂದುಕೊಟ್ಟಿದ್ದಾರೆ.

ಡಾ. ಎಚ್.ಎ.ರಂಗನಾಥ್ ಅವರು ಇಂದಿನ ನುಡಿಹಬ್ಬದ ಘಟಿಕೋತ್ಸವದ ಭಾಷಣವನ್ನು ಮಾಡಲು ನಮ್ಮ ಆಹ್ವಾನವನ್ನು ಮನ್ನಿಸಿ ಆಗಮಿಸಿದ್ದಾರೆ. ಡಾ. ಎಚ್.ಎ. ರಂಗನಾಥ್ ಅವರು ಹೆಸರಾಂತ ವಿಜ್ಞಾನಿಗಳು ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳು. ಈಗ ಬೆಂಗಳೂರಿನ ನ್ಯಾಕ್ ಕೇಂದ್ರದ ನಿರ್ದೇಶಕರೂ ಆಗಿರುವ ಶ್ರೀಯುತರು ಕನ್ನಡ ವಿಶ್ವವಿದ್ಯಾಲಯದ ಮೇಲಿನ ಅಭಿಮಾನದಿಂದ ಇಂದು ಆಗಮಿಸಿ ಘಟಿಕೋತ್ಸವ ಭಾಷಣ ಮಾಡಲಿದ್ದಾರೆ. ಎಂದಿನಂತೆ ಈ ಸಲವೂ ಕನ್ನಡ ವಿಶ್ವವಿದ್ಯಾಲಯವು ವಿವಿಧ ಕ್ಷೇತ್ರಗಳಲ್ಲಿ ಅಸಾಧಾರಣ ಸಾಧನೆ ಮಾಡಿರುವ ಐವರು ಸಾಧಕರಿಗೆ ನಾಡೋಜ ಗೌರವ ಪದವಿಯನ್ನು ನೀಡುತ್ತಿದೆ. ಕನ್ನಡದ ಪ್ರಸಿದ್ಧ ಚಿಂತಕರೂ, ಜನಪ್ರಿಯ ಪ್ರಾಧ್ಯಾಪಕರೂ, ಖ್ಯಾತ ವಾಗ್ಮಿಗಳೂ, ಚಲನಚಿತ್ರ ಕ್ಷೇತ್ರದಲ್ಲಿ ಸಲ್ಲಿಸಿದ ವಿಶಿಷ್ಟ ಕೊಡುಗೆಗಾಗಿ ರಾಜ್ಯ ಮತ್ತು ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ಪಡೆದವರೂ ಕನ್ನಡ ವಿಶ್ವವಿದ್ಯಾಲಯದ ಹಿತಚಿಂತಕರೂ ಆದ ಪ್ರೊ. ಬರಗೂರು ರಾಮಚಂದ್ರಪ್ಪನವರು ಆಗಮಿಸಿದ್ದಾರೆ.

ನಾಡಿನ ಪ್ರಸಿದ್ಧ ಸಂಶೋಧಕರೂ, ಶ್ರೇಷ್ಠ ಪ್ರಾಧ್ಯಾಪಕರೂ, ಪಂಪಪ್ರಶಸ್ತಿ ವಿಜೇತರೂ, ಕನ್ನಡ ವಿಶ್ವವಿದ್ಯಾಲಯವನ್ನು ತಮ್ಮ ಶ್ರಮ ಮತ್ತು ಪ್ರತಿಭೆಗಳಿಂದ ಕಟ್ಟಿದವರೂ ಆದ ಪ್ರೊ. ಎಂ.ಎಂ. ಕಲಬುರ್ಗಿ ಅವರು ಆಗಮಿಸಿದ್ದಾರೆ.

ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪದವಿಯ ವಿಶಿಷ್ಟತೆ ಎಂದರೆ, ಅಜ್ಞಾತವಾಗಿರುವ ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡುವವರನ್ನು ಗುರುತಿಸುವುದು. ಈ ನಿಟ್ಟಿನಲ್ಲಿ ಈ ಬಾರಿ ಜನಪದ ರಂಗಭೂಮಿಯಲ್ಲಿ ಎಲೆಮರೆಯ ಕಾಯಿಯಂತೆ ದುಡಿದಿರುವ ಬಳ್ಳಾರಿಯ ಹರಿಜನ ಪದ್ಮಮ್ಮನವರು ಈ ಪದವಿಗೆ ಭಾಜನರಾಗಿದ್ದಾರೆ. ಅವರು ಕೂಡ ಇಲ್ಲಿ ಆಗಮಿಸಿದ್ದಾರೆ.

ಧರ್ಮಸ್ಥಳದ ಮಂಜುನಾಥೇಶ್ವರ ಕ್ಷೇತ್ರದ ಧರ್ಮಾಧಿಕಾರಿಗಳೂ, ಗ್ರಾಮೀಣ ಅಭಿವೃದ್ಧಿಯಲ್ಲಿ ತಮ್ಮದೇ ಆದ ವಿಶಿಷ್ಟ ಕಾರ್ಯಕ್ರಮಗಳ ಮೂಲಕ ಸಂಚಲನೆಯನ್ನು ಉಂಟು ಮಾಡಿರುವವರೂ, ಧರ್ಮಸ್ಥಳವನ್ನು ತಮ್ಮ ಸಾಹಿತ್ಯಿಕ ಹಾಗೂ ಧಾರ್ಮಿಕ ಕಾರ್ಯಕ್ರಮಗಳಿಂದ ಒಂದು ಸಾಂಸ್ಕೃತಿಕ ಕೇಂದ್ರವನ್ನಾಗಿ ರೂಪಿಸಿದವರೂ, 'ಕರ್ನಾಟಕ ರತ್ನ' ಪ್ರಶಸ್ತಿಯನ್ನು ಪಡೆದಿರುವವರೂ ಡಾ. ವೀರೇಂದ್ರ ಹೆಗ್ಗಡೆಯವರನ್ನು ಅವರ ಅನುಪಸ್ಥಿತಿಯಲ್ಲಿ ಸ್ವಾಗತಿಸುತ್ತೇನೆ.

ತಮ್ಮ ಸಾವಿರಾರು ಮಧುರವಾದ ಹಾಡುಗಳಿಂದ ಸಮಸ್ತ ಕನ್ನಡಿಗರ ಮನಸ್ಸಿನಲ್ಲಿ ನೆಲೆಸಿರುವ, ಕನ್ನಡ ಚಲನಚಿತ್ರರಂಗದಲ್ಲಿ ಅಪಾರವಾದ ಸಾಧನೆ ಮಾಡಿರುವ ಪಿ.ಬಿ. ಶ್ರೀನಿವಾಸ್ ಅವರು ಆಗಮಿಸಿದ್ದಾರೆ.

ಈ ಎಲ್ಲ ನಾಡೋಜರನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

ಕರ್ನಾಟಕದ ಆಧುನಿಕ ಚರಿತ್ರೆಯಲ್ಲಿ ಕರ್ನಾಟಕ ಏಕೀಕರಣ ಒಂದು ಮಹತ್ವಪೂರ್ಣ ಐತಿಹಾಸಿಕ ಘಟನೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆಯೂ ಮತ್ತೊಂದು ಮಹತ್ವದ ಘಟನೆ. ಕನ್ನಡ-ಕನ್ನಡಿಗ-ಕರ್ನಾಟಕ ಸಂಸ್ಕೃತಿಯ ಕಲ್ಪನೆಯಡಿಯಲ್ಲಿ ಅಸ್ತಿತ್ವಕ್ಕೆ

ಬಂದ ಕನ್ನಡ ವಿಶ್ವವಿದ್ಯಾಲಯದ ಹರವು ವಿಸ್ತಾರವಾದದ್ದು. ಈ ಕಾರಣದಿಂದ ಕನ್ನಡ ವಿಶ್ವವಿದ್ಯಾಲಯದ ಆಶಯ ಮತ್ತು ಗುರಿ ಇತರ ವಿಶ್ವವಿದ್ಯಾಲಯಗಳಿಗಿಂತ ಭಿನ್ನ ಹಾಗೂ ಪ್ರಗತಿಪರ. ಕನ್ನಡದ ಸಾಮರ್ಥ್ಯವನ್ನು ಎಚ್ಚರಿಸುವ ಕಾಯಕವನ್ನು ಉದ್ದಕ್ಕೂ ಅದು ನೋಂಪಿಯಿಂದ ಮಾಡಿಕೊಂಡು ಬಂದಿದೆ. ಕರ್ನಾಟಕತ್ವದ 'ವಿಕಾಸ' ಈ ವಿಶ್ವವಿದ್ಯಾಲಯದ ಮಹತ್ತರ ಆಶಯವಾಗಿದೆ.

ಕನ್ನಡ ಅಧ್ಯಯನ ಮೂಲತಃ ಶುದ್ಧ ಜ್ಞಾನದ, ಕಾಲ, ದೇಶ, ಜೀವನ ತತ್ವದ ಪರವಾಗಿರುವುದರ ಜೊತೆಗೆ ಅಧ್ಯಯನವನ್ನು ಒಂದು ವಾಗ್ವಾದದ ಭೂಮಿಕೆ ಎಂದು ನಾವು ಭಾವಿಸಬೇಕಾಗಿದೆ. ಕನ್ನಡ ಬದುಕಿನ ಚಿಂತನೆಯ ಭಾಗವೆಂದೇ ಅದನ್ನು ರೂಪಿಸಿ ವಿವರಿಸಬೇಕಾಗಿದೆ. ಅಂದರೆ: ದೇಸಿ ಬೇರುಗಳ ಗುರುತಿಸುವಿಕೆ ಕನ್ನಡ ಅಧ್ಯಯನದ ಮುಖ್ಯ ಭಿತ್ತಿಯಾಗಬೇಕಾಗಿದೆ. ಕನ್ನಡ ಸಂಸ್ಕೃತಿಯು ಬಹುತ್ವದ ನೆಲೆಗಳನ್ನು ಆಧರಿಸಿ ರೂಪುಗೊಂಡಿದೆ. ಸಮಾಜಮುಖಿ ಚಿಂತನೆಗಳ ವ್ಯಾಪಕ ಅಧ್ಯಯನ ಬದುಕಿನ ಸಂಕೀರ್ಣ ಲಕ್ಷಣಗಳ ಸ್ವರೂಪವನ್ನು ಇದು ಪರಿಚಯಿಸುತ್ತದೆ. ನಾವು ಇದನ್ನು ಎಲ್ಲ ವಲಯಗಳಲ್ಲಿ ಕನ್ನಡದ ಅನುಷ್ಠಾನದ ಮೂಲಕ ಉಳಿಸಿ, ಬೆಳೆಸಬೇಕಾಗಿದೆ. ಆಗ ಕನ್ನಡ ಸಂಸ್ಕೃತಿಯು ವಿಶ್ವಪ್ರಜ್ಞೆಯಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ. 'ಕನ್ನಡದ್ದೇ ಮಾದರಿ'ಯ ಶೋಧ ಇಂದಿನ ಮತ್ತು ಬರುವ ದಿನಗಳ ತೀವ್ರ ಅಗತ್ಯವಾಗಿದೆ.

ಕನ್ನಡ ಸಂಸ್ಕೃತಿಯ ಭಾಗವಾಗಿರುವ ಕನ್ನಡ ಅಧ್ಯಯನವು ಕಾಲದಿಂದ ಕಾಲಕ್ಕೆ ಹೊಸ ತಿಳುವಳಿಕೆಯನ್ನು ತನ್ನ ತೆಕ್ಕೆಗೆ ಜೋಡಿಸಿಕೊಳ್ಳುತ್ತ ಬಂದಿದೆ. ಹೀಗಾಗಿ ವಿದೇಶಿ ಮತ್ತು ದೇಶಿ ವಿದ್ವಾಂಸರು ತೊಡಗಿಸಿಕೊಂಡ ಈ ವಿದ್ವತ್‌ಕ್ಷೇತ್ರದಲ್ಲಿ ಮುಂದಿನ ವಿದ್ವಾಂಸರು ಕಾಲದಿಂದ ಕಾಲಕ್ಕೆ ಹೊಸಬೆಳೆಯನ್ನು ತೆಗೆಯುತ್ತ ಬಂದಿದ್ದಾರೆ. ಕನ್ನಡ ಅಧ್ಯಯನ ಪಳೆಯುಳಿಕೆಯ ಶಾಸ್ತ್ರವಾಗದೆ, ಬದಲಾಗುತ್ತಿರುವ ಕಾಲಮಾನದಲ್ಲಿ ಎದುರಾಗುತ್ತಿರುವ ಸವಾಲು'ಗಳಿಗೆ ತಕ್ಕಂತೆ ತನ್ನ ಗತಿಯನ್ನು ಬದಲಾಯಿಸಿಕೊಳ್ಳುತ್ತ ಬಂದಿರುವುದು ಗಮನಿಸತಕ್ಕ ಅಂಶ. ಸಾಂಪ್ರದಾಯಿಕ ಚಿಂತನೆಗಳು ಆಧುನೀಕರಣದ ಈ ಕಾಲಘಟ್ಟದಲ್ಲಿ ಸಕಾಲಿಕಗೊಳ್ಳುವುದು ಅನಿವಾರ್ಯವಾಗಿದೆ. ಮಾಹಿತಿ ತಂತ್ರಜ್ಞಾನದ ಮೂಲಕ ಜಗತ್ತಿನ ಜ್ಞಾನಪ್ರವಾಹವೇ ನಮ್ಮ ಅಂಗೈಯೊಳಗೆ ಚುಳುಕಾಗುವ ಈ ಸಂದರ್ಭದಲ್ಲಿ ಕನ್ನಡದ ಚಹರೆ ಮತ್ತು ಕನ್ನಡ ಭಾಷೆಯ ಚಲನಶೀಲತೆಯನ್ನು ಶೋಧಿಸಲಿಕ್ಕೆ ಭಾಷಾ ಆಧುನೀಕರಣ ಮತ್ತು ಪ್ರಮಾಣೀಕರಣದ ಪ್ರಕ್ರಿಯೆಗಳ ನೆಲೆಯಲ್ಲಿ ಅಧ್ಯಯನದ ಹೊಸ ಸಾಧ್ಯತೆಗಳನ್ನು ಅನುಲಕ್ಷಿಸಿ, ಭಾಷಾನೀತಿ, ಭಾಷಾಯೋಜನೆ ರೂಪಿಸುವುದು ಅನಿವಾರ್ಯ ಹಾಗೂ ಅವಶ್ಯವಾಗಿದೆ. ಆಗ ಅಧ್ಯಯನದ ಸ್ವರೂಪ ಹಾಗೂ ಬಳಕೆಯ ವಿಧಾನದಲ್ಲಿ ಪರಿವರ್ತನೆ ಸಾಧ್ಯವಾಗುತ್ತದೆ.

ನಮ್ಮೆದುರು ನುಗ್ಗಿ ಬರುತ್ತಿರುವ ಜಾಗತೀಕರಣಕ್ಕೆ ಪ್ರತಿರೋಧವಾಗಿ ನಮ್ಮ ದೇಶೀಯ ಜ್ಞಾನಪರಂಪರೆಯನ್ನು ಮರುಶೋಧಿಸಿ ಆ ಮೂಲಕ ನಮ್ಮ ಬೇರುಗಳನ್ನು ಬಲಗೊಳಿಸಿಕೊಳ್ಳಬೇಕಾಗಿದೆ. ಭಾಷೆ, ಸಾಹಿತ್ಯ, ವ್ಯಾಕರಣ, ಛಂದಸ್ಸು, ಚರಿತ್ರೆ, ಕೃಷಿ, ವೈದ್ಯ, ಪರಿಸರ ಮುಂತಾದ ಅಧ್ಯಯನ ವಿಷಯಗಳನ್ನು ಹೊಸ ಆಲೋಚನೆಯ ನೆಲೆಯಲ್ಲಿ ವಿಶ್ಲೇಷಿಸಬೇಕಾಗಿದೆ. ಆಧುನಿಕ ವಿಜ್ಞಾನ, ತಂತ್ರಜ್ಞಾನವೇ 'ಜ್ಞಾನ' ಎಂದು ರೂಪಿಸಿರುವ ಇಂದಿನ ಆಲೋಚನೆಗೆ ಪ್ರತಿಯಾಗಿ ಈ ಜ್ಞಾನಶಾಖೆಗಳಲ್ಲಿ ಹುದುಗಿರುವ ದೇಶಿ ಪರಂಪರೆಯ ಜ್ಞಾನದ ಹುಡುಕಾಟ ನಡೆಯಬೇಕಾಗಿದೆ. ಅಂತಹ ಪ್ರಯತ್ನಗಳಿಗೆ ಬೇಕಾದ ಮಾರ್ಗದರ್ಶಕ ಸೂತ್ರಗಳ ಹಾಗೂ ಆಕರ ಪರಿಕರಗಳ ನಿರ್ಮಾಣದ ನೆಲೆ ತುಂಬ ಮುಖ್ಯವಾಗಿದೆ. ಕನ್ನಡ ವಿಶ್ವವಿದ್ಯಾಲಯವ ಕಳೆದ ಹದಿನೇಳು ವರ್ಷಗಳಿಂದ ಈ ಕೆಲಸಗಳನ್ನು ಹಲವು ಯೋಜನೆಗಳ ಮೂಲಕ ರೂಪಿಸಿಕೊಂಡಿದೆ, ರೂಪಿಸಿಕೊಳ್ಳುತ್ತಿದೆ. ಇದೊಂದು ಚಲನಶೀಲ ಪ್ರಕ್ರಿಯೆಯಾಗಿದೆ. ಸಮಕಾಲೀನ, ಭಾಷಿಕ, ಸಾಂಸ್ಕೃತಿಕ ಸಮಸ್ಯೆಗಳಿಗೆ ಮುಖಾಮುಖಿಯಾಗುತ್ತ ಕನ್ನಡ ನಾಡುನುಡಿಯನ್ನು ಹೊಸದಾಗಿ ಶೋಧಿಸುತ್ತಾ, ವಿವರಿಸುತ್ತಾ ಬಂದಿದೆ. ಅಂದರೆ: ಕನ್ನಡದ ಅರಿವಿನ ವಿಕೇಂದ್ರೀಕರಣವೇ ವರ್ತಮಾನದ ಹೊಸ ಬೆಳವಣಿಗೆ. ಇದು ಕನ್ನಡ ವಿಶ್ವವಿದ್ಯಾಲಯದ ಜೀವಧಾತುವಾಗಿದೆ.

'ನಾಡೋಜ' ಎನ್ನುವುದು ಕನ್ನಡದ ಆದಿಕವಿ ಪಂಪನ ಬಿರುದು. ನಾಡೋಜ ಎಂದರೆ ನಾಡಿನ ಹಿರಿಯ, ನಾಡಿನ ಉಪಾಧ್ಯಾಯ, ನಾಡಿನ ಶಿಲ್ಪಿ, ನಾಡಿನ ರೂವಾರಿ. ಆಚಾರ್ಯ ಪುರುಷ ಎನ್ನುವ ವಿಶಿಷ್ಟ ಅರ್ಥಗಳಿವೆ. ಜೀವಮಾನದುದ್ದಕ್ಕೂ ಕನ್ನಡ ನೆಲ, ಜಲ, ಭಾಷೆ, ಸಾಹಿತ್ಯ, ಸಂಸ್ಕೃತಿ, ಸಮಾಜ, ಕಲೆ, ಇತಿಹಾಸ ತಂತ್ರಜ್ಞಾನ ಹೀಗೆ ಹಲವು ನೆಲೆಗಳಲ್ಲಿ ಕನ್ನಡ ಹಾಗೂ ಕರ್ನಾಟಕವನ್ನು ಕ್ರಿಯಾಶೀಲವಾಗಿಸುತ್ತ

ಬಂದ ಧೀಮಂತ ಚೇತನಗಳನ್ನು ನಾಡೋಜ ಗೌರವ ಪದವಿ ನೀಡುವ ಮೂಲಕ ಕನ್ನಡ ವಿಶ್ವವಿದ್ಯಾಲಯ ತನ್ನ ಬಳಗಕ್ಕೆ ಸೇರಿಸಿಕೊಳ್ಳುತ್ತ ಬಂದಿದೆ. ಸಮಾಜದ ಅನೇಕ ಕರಾರುಗಳಿಂದಾಗಿ ಮೂಲೆ ಗುಂಪಾದ ಕರ್ನಾಟಕದ ಜನಸಮುದಾಯಗಳ ಬದುಕಿನ ರೀತಿ ನೀತಿ ವೃತ್ತಿಗಳ ಅಧ್ಯಯನ ವಿರ್ಶವವಿದ್ಯಾಲಯದ ಮೊದಲ ಆದ್ಯತೆಯಾದಂತೆ ಅಂಥ ಸ್ಥರದಿಂದ ಬಂದ ಧೀಮಂತ ಚೇತನಗಳಿಗೂ ನಾಡೋಜ ಗೌರವ ಪದವಿ ನೀಡುವ ಮೂಲಕ ಕನ್ನಡದ ಸ್ವಾಭಿಮಾನ ಹಾಗೂ ಸ್ವಾವಲಂಬನೆಯನ್ನು ಪೋಷಿಸುತ್ತ ಬಂದಿದೆ.

ಕನ್ನಡ ವಿಶ್ವವಿದ್ಯಾಲಯ ಕನ್ನಡ ಭಾಷೆ, ಸಂಸ್ಕೃತಿ ಹಾಗೂ ಪರಂಪರೆಯನ್ನು ಗಮನದಲ್ಲಿರಿಸಿ ಅಧ್ಯಯನಶೀಲವಾಗುವ ನೆಲೆಯಲ್ಲಿ ಅಸ್ತಿತ್ವಕ್ಕೆ ಬಂದಿದೆ. ಸಂಶೋಧನೆಯನ್ನು ತನ್ನ ಉಸಿರನ್ನಾಗಿಸಿಕೊಂಡಿರುವ ವಿಶ್ವವಿದ್ಯಾಲಯ ನಿರಂತರವಾಗಿ ಕನ್ನಡ ಭಾಷೆ, ಸಾಹಿತ್ಯ ಹಾಗೂ ಸಂಸ್ಕೃತಿ ಪರವಾದ ಚಿಂತನೆಗಳನ್ನು ನಡೆಸಿಕೊಂಡು ಬಂದಿದೆ. ಕನ್ನಡ ವಿಶ್ವವಿದ್ಯಾಲಯವು ತನ್ನ ವಿವಿಧ ವಿಭಾಗಗಳು, ಅಧ್ಯಯನ ಪೀಠಗಳ ಮುಖಾಂತರ ಶೈಕ್ಷಣಿಕ ಚಟುವಟಿಕೆಯಲ್ಲಿ ನಿರತವಾಗಿದೆ.

ಕನ್ನಡ ಭಾಷಾಧ್ಯಯನ ವಿಭಾಗವು 'ಭಾಷೆ ವಿಶ್ವಕೋಶ', 'ಕನ್ನಡ ಉಪಭಾಷಾ ಪದಕೋಶ', 'ಆಡಳಿತ ಕನ್ನಡ', 'ಆಡಳಿತ ಕನ್ನಡ ಕಾರ್ಯಶಿಬಿರ ಕೈಪಿಡಿ', 'ಕನ್ನಡ ಓದಿಬರೆ, ಕ್ರಿಯಾಪದದ ಬಗೆಗಳು', 'ಪದವಿನ್ಯಾಸ' ಮುಂತಾದ ಯೋಜನೆಗಳನ್ನು ಯಶಸ್ವಿಯಾಗಿ ಮುಗಿಸಿದೆ. ಇದಲ್ಲದೆ 'ಕನ್ನಡ ಲಿಂಗಸಂಬಂಧಿ ಆಯಾಮಗಳು' ಎಂಬ ವಿಚಾರ ಸಂಕಿರಣವನ್ನು ಮತ್ತು 'ಕನ್ನಡ ನುಡಿ ರಚನೆ ಬಳಕೆ ಎಂಬ ಕಮ್ಮಟವನ್ನು ನಡೆಸಿದ್ದಾರೆ.

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗವು 'ಕನ್ನಡ ಸಾಹಿತ್ಯ ಸಂಶೋಧನೆ: ತಾತ್ವಿಕ ಆಯಾಮಗಳು', 'ಗ್ರಾಮಾಯಣ: ಸಾಂಸ್ಕೃತಿಕ ಮುಖಾಮುಖಿ', 'ಅಲ್ಲಮಪ್ರಭು ವಚನಗಳು: ಸಾಂಸ್ಕೃತಿಕ ಮುಖಾಮುಖಿ', 'ಪುರಂದರ ಸಾಹಿತ್ಯ ಅಧ್ಯಯನ', 'ಈ ಪರಿಯ ಸೊಬಗು', 'ತುಕಾರಾಮ', 'ದಿನಕರ ದೇಸಾಯಿ ಶತಮಾನ ಸ್ಮರಣೆ', 'ತತ್ವಪದ ಸಾಹಿತ್ಯ ಚಳವಳಿ', 'ಕನ್ನಡ -ತೆಲುಗು ಬಸವ ಪುರಾಣಗಳ ತೌಲನಿಕ ಅಧ್ಯಯನ', 'ತೇಜಸ್ವಿ ಬರಹ ಸಾಮಾಜಿಕ ಆಯಾಮ', 'ಕನ್ನಡ ವಾಗ್ವಾದಗಳು, 'ಮಲೆಗಳಲ್ಲಿ ಮದಮಗಳು: ಸಾಂಸ್ಕೃತಿಕ ಮುಖಾಮುಖಿ', 'ಕನ್ನಡ ಬಹುಭಾಷಿಕ ಸಾಹಿತ್ಯ' ಎಂಬ ಯೋಜನೆಗಳನ್ನು ಮುಗಿಸಿದೆ. ಈ ವಿಭಾಗದ ಸಹ ಪ್ರಾಧ್ಯಾಪಕ ಡಾ. ಅಮರೇಶ ನುಗಡೋಣಿ ಅವರ ಸವಾರಿ ಕಥೆಯು ಡಾ. ಗಿರೀಶ್ ಕಾಸರವಳ್ಳಿ ಅವರ ನಿರ್ದೇಶನದಲ್ಲಿ ಚಲನಚಿತ್ರವಾಗಿದೆ.

ಭಾಷಾಂತರ ಅಧ್ಯಯನ ವಿಭಾಗವು ವೈಯಕ್ತಿಕ ಯೋಜನೆಯಾಗಿ 'ಯಶೋಧರ ಚರಿತೆ', 'ಕಾಸರಗೋಡಿನ ಕನ್ನಡ ಪರಂಪರೆ', 'ಕನ್ನಡ ಮರಾಠಿ ಸಾಂಸ್ಕೃತಿಕ ಬಾಂಧವ್ಯ', 'ಕನ್ನಡ ಕಾರ್ಪಸ್ ನಿರ್ಮಾಣ ಮುಂತಾದ ಯೋಜನೆಗಳನ್ನು ಕೈಗೆತ್ತಿಕೊಂಡಿದೆ. ಈ ಯೋಜನೆಗಳು ಪ್ರಗತಿಯಲ್ಲಿವೆ. 'ಭಾಷಾಂತರ ದತ್ತ ಕಣಜ', 'ಕನ್ನಡದಲ್ಲಿ ಶೈಕ್ಷಣಿಕ ಸಾಮಗ್ರಿ ನಿರ್ಮಾಣದ ಉಪಕ್ರಮ', 'ಕುವೆಂಪು ಸಮಗ್ರ ಸಂಪುಟಗಳು' ಯೋಜನೆಗಳು ಪ್ರಗತಿಯಲ್ಲಿವೆ. 'ಕನ್ನಡದಲ್ಲಿ ಜ್ಞಾನೇಶ್ವರಿ ಅನುವಾದಗಳು', 'ಭಾಷಾಂತರ ಕರ್ನಾಟಕದ ಸಾಂಸ್ಕೃತಿಕ ರಾಜಕಾರಣ' ಎಂಬ ವಿಚಾರ ಸಂಕಿರಣಗಳನ್ನು ಯಶಸ್ವಿಯಾಗಿ ಮುಗಿಸಲಾಗಿದೆ. ಡಾ. ಮೋಹನ್ ಕುಂಟಾರ್ ಅವರ 'ಯಕ್ಷಗಾನ ಆಹಾರ್ಯ' ಎಂಬ ಕೃತಿಗೆ ಕೆರೆಮನೆ ಶಂಭು ಹೆಗಡೆ ಗ್ರಂಥ ಪ್ರಶಸ್ತಿ ಲಭಿಸಿದೆ. ಭಾಷಾಂತರ ಅಧ್ಯಯನ ಕೇಂದ್ರವು ಸರ್ವಜ್ಞನ ವಚನಗಳನ್ನು ಮತ್ತು ಕುವೆಂಪು ಅವರ ಆಯ್ದ ಕವಿತೆಗಳನ್ನು ಇಂಗ್ಲಿಷಿಗೆ ವಿವಿಧ ವಿದ್ವಾಂಸರಿಂದ ಭಾಷಾಂತರ ಮಾಡಿಸಿ ಪ್ರಕಟಣೆಗೆ ಸಿದ್ಧಪಡಿಸಿದೆ. ಡಾ. ಕರೀಗೌಡ ಬೀಚನಹಳ್ಳಿ ಅವರಿಗೆ ರಾ.ಗೌ. ಕಥಾ ಸಾಹಿತ್ಯ ಪ್ರಶಸ್ತಿ ಲಭಿಸಿದೆ.

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗವು 'ತೆಲುಗು ಸಾಹಿತ್ಯ ಚರಿತ್ರೆ', ಆಧುನಿಕ ಕನ್ನಡ ನಿಘಂಟು' ಯೋಜನೆಯನ್ನು ಪೂರೈಸಿದೆ. ಈ ವಿಭಾಗವು ಕೋಲಾರದ ಆದಿಮದಲ್ಲಿ ಕುಪ್ಪಂ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಮೂರು ದಿನಗಳ ವಿಚಾರ ಸಂಕಿರಣವನ್ನು ನಡೆಸಿದೆ. ಡಾ. ಮಾಧವ ಪೆರಾಜೆ ಅವರ 'ಪರಿಭಾಷೆ' ಕೃತಿಗೆ ೨೦೦೯-೧೦ನೇ ಸಾಲಿನ ಕರ್ನಾಟಕ ಸಾಹಿತ್ಯ ಅಕಾಡೆಮಿ ಪುಸ್ತಕ ಬಹುಮಾನ ದೊರೆತಿದೆ.

ಹಸ್ತಪ್ರತಿಶಾಸ್ತ್ರ ವಿಭಾಗವು 'ಬಳ್ಳಾರಿ ಜಿಲ್ಲಾ ಶಾಸನೋಕ್ತ ಸ್ಥಳನಾಮಗಳ ಅಧ್ಯಯನ', 'ಹಾಲುಮತ ಸಂಸ್ಕೃತಿ ದಾಖಲೀಕರಣ', 'ಹಸ್ತಪ್ರತಿ ಮುಖೇನ ಕನ್ನಡಿಗರ ಬದುಕು', ಕನ್ನಡ ಶಾಸ್ತ್ರ ಹಸ್ತಪ್ರತಿಗಳ ಸರ್ವೇಕ್ಷಣೆ ಮತ್ತು ದಾಖಲೀಕರಣ' ಎಂಬ ಯೋಜನೆಗಳನ್ನು ನಿರ್ವಹಿಸುತ್ತಿದೆ. ಶಾಸ್ತ್ರೀಯ ಭಾಷಾ ಅನುದಾನದ ಯೋಜನೆಯಾದ 'ಮೋಡಿಲಿಪಿಯ ಕುರಿತು ಎರಡು ದಿನಗಳ ಕಾರ್ಯಾಗಾರವನ್ನು ಏರ್ಪಡಿಸಿ ಯಶಸ್ವಿಯಾಗಿ ಮುಗಿಸಿದೆ. ಹಸ್ತಪ್ರತಿ ಸಮ್ಮೇಳನ, ಹಸ್ತಪ್ರತಿ ತರಬೇತಿ ಶಿಬಿರ, ಹಳಗನ್ನಡ ಅಧ್ಯಯನ ಶಿಬಿರಗಳನ್ನು ಯಶಸ್ವಿಯಾಗಿ ನಿರ್ವಹಿಸಲಾಗಿದೆ. ಉತ್ತರ ಕರ್ನಾಟಕದ ಹಸ್ತಪ್ರತಿಗಳ ಸಂರಕ್ಷಣೆಗಾಗಿ ಕೇಂದ್ರ ಸರಕಾರದ ಅಡಿಯಲ್ಲಿ ಬರುವ ನ್ಯಾಷನಲ್ ಮಿಷನ್ ಫಾರ್ ಮ್ಯಾನ್ಯುಸ್ಕ್ರೀಪ್ಟ್ಸ್ ನವದೆಹಲಿ ಇವರು ನ್ಯಾಷನಲ್ ಕಂಜರ್‌ವೇಷನ್ ಸೆಂಟರ್ (NMM)ನ್ನು ಮಂಜೂರು ಮಾಡಿದ್ದಾರೆ. ವಿಶ್ವವಿದ್ಯಾಲಯದ ಹಸ್ತಪ್ರತಿ ಸಂರಕ್ಷಣಾ ಕೇಂದ್ರಕ್ಕಾಗಿ ಪ್ರಾಧ್ಯಾಪಕರಾದ ಡಾ. ವಿ.ಎಸ್.ಬಡಿಗೇರ ಅವರು ಪ್ರಸ್ತಾವನೆ ಸಲ್ಲಿಸಿದ್ದರು. ಈ ಯೋಜನೆಗೆ ಹತ್ತು ಲಕ್ಷ ಅನುದಾನ ಈಗಾಗಲೇ ಬಿಡುಗಡೆಯಾಗಿದೆ. ಇದರ ಮುಖಾಂತರ ಹೊಸದಾಗಿ ಹಸ್ತಪ್ರತಿಗಳನ್ನು ಸಂಗ್ರಹಿಸುವ, ಈಗಾಗಲೇ ಬೇರೆ ಬೇರೆ ವಿಶ್ವವಿದ್ಯಾಲಯ, ಸಂಸ್ಥೆಗಳಿಂದ ಸಂಗ್ರಹಿಸಿದ ಹಸ್ತಪ್ರತಿಗಳನ್ನು ಸಂರಕ್ಷಿಸಿ ಇಡುವ ಅವಕಾಶ ಕನ್ನಡ ವಿಶ್ವವಿದ್ಯಾಲಯಕ್ಕೆ ದೊರಕಿದೆ. ಇದೇ ವಿಭಗದ ಡಾ. ಕೆ.ರವೀಂದ್ರನಾಥ ಅವರು ರಾಜ್ಯ ಪತ್ರಗಾರ ಇಲಾಖೆಯ ಯೋಜನೆಯ ಸಲಹಾ ಸಮಿತಿ ಸದಸ್ಯರಾಗಿ ನಿಯೋಜನೆಗೊಂಡಿದ್ದಾರೆ. ಡಾ. ಎಫ್.ಟಿ.ಹಳ್ಳಿಕೇರಿ ಅವರು ಕನ್ನಡ ಶಾಸ್ತ್ರೀಯ ಭಾಷಾ ಉನ್ನತ ಸಲಹಾ ಸಮಿತಿ ಸದಸ್ಯರಾಗಿದ್ದಾರೆ. ಡಾ. ಎಸ್.ಎಸ್. ಅಂಗಡಿ ಅವರಿಗೆ 'ವಚನ ಛಂದೋಲಯ' ಕೃತಿಗೆ ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ ಲಭಿಸಿದೆ. ಡಾ. ವಿ.ಎಸ್. ಬಡಿಗೇರ ಅವರ 'ಸಂಸ್ಕೃತಿ ಸಂಕಥನ' ಪುಸ್ತಕಕ್ಕೆ 'ಅಮ್ಮ' ಪ್ರಶಸ್ತಿ ದೊರಕಿದೆ.

ಮಹಿಳಾ ಅಧ್ಯಯನ ವಿಭಾಗದಲ್ಲಿ 'ವಿವರಣಾತ್ಮಕ ಮಹಿಳಾ ಪದಕೋಶ', 'ಮಹಿಳೆ ಮತ್ತು ಧರ್ಮ', 'ಹರಿದೇಶಿ-ನಾಗೇಶಿ' ಎಂಬ ಯೋಜನೆಗಳು ಪ್ರಗತಿಯಲ್ಲಿವೆ. 'ಮಹಿಳಾ ಮೀಸಲಾತಿ : ಒಂದು ಅವಲೋಕನ' ಎಂಬ ಎರಡು ದಿನಗಳ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ವಿಭಾಗದಿಂದ ಏರ್ಪಡಿಸಿ ಯಶಸ್ವಿಯಾಗಿ ನಿರ್ವಹಿಸಲಾಗಿದೆ. ಅಲ್ಲಮ್ ಸುಮಂಗಳಮ್ಮ ದತ್ತಿನಿಧಿಯಿಂದ 'ದೇವದಾಸಿ ಪದ್ಧತಿಯ ನಿರ್ಮೂಲನ: ಸವಾಲು ಸಾಧ್ಯತೆಗಳು' ಎಂಬ ಎರಡು ದಿನಗಳ ವಿಚಾರ ಸಂಕಿರಣವನ್ನು ವಿಭಾಗದ ಸದಸ್ಯರು ಯಶಸ್ವಿಯಾಗಿ ನಿರ್ವಹಿಸಿದ್ದಾರೆ.

ಚರಿತ್ರೆ ವಿಭಾಗದ ವತಿಯಿಂದ ಎಂಟು ಚರಿತ್ರೆ ಸಂಪುಟಗಳ ಮುದ್ರಣಕಾರ್ಯ ನಡೆಯುತ್ತಿದೆ. ಅದಲ್ಲದೆ 'ತುಳುನಾಡ ಸಿರಿ : ಬದುಕು ಹೋರಾಟದ ಕಥನ', 'ಕೆನರಾದ ವಿಭಜನೆ', 'ಕರ್ನಾಟಕ ಸಂಸ್ಕೃತಿ ಚರಿತ್ರೆ', 'ವಾಲ್ಮೀಕಿ ಮತ್ತು ತಿರುವಳ್ಳವರ್: ಒಂದು ಅಧ್ಯಯನ', 'ಸಿನಿಮಾ ಸಂಕಥನ', 'ವಸಾಹತು ಕಾಲಘಟ್ಟದ ಮೈಸೂರು ಸಂಸ್ಥಾನ', ಡಾ. ಬಿ.ಆರ್. ಅಂಬೇಡ್ಕರ್ ಮತ್ತು ಸಮಕಾಲೀನ ದಲಿತರು', 'ಗಡಿ ಚಳುವಳಿ: ಇತ್ತೀಚಿನ ಆಯಾಮಗಳು', 'ಏಕೀಕರಣ ಚಳುವಳಿಯಲ್ಲಿ ಬಳ್ಳಾರಿ ಜಿಲ್ಲೆಯ ಚಳವಳಿಗಾರರು' ಯೋಜನೆಗಳು ಮುಕ್ತಾಯದ ಹಂತದಲ್ಲಿವೆ. 'ಸಾಮ್ರಾಜ್ಯಶಾಹಿ ವಿರುದ್ಧದ ಹೋರಾಟಗಳು', ಬಾಗಲ ಕೋಟೆ ಬಸವೇಶ್ವರ ದತ್ತಿನಿಧಿಯಿಂದ 'ವಸಹಾತು ಪೂರ್ವ ಕರ್ನಾಟಕದ ರಾಜ್ಯ ವ್ಯವಸ್ಥೆ', 'ಇತಿಹಾಸ ರಚನೆ ಹಾಗೂ ಆಸ್ಮಿತೆಗಳು', 'ಕರ್ನಾಟಕದಲ್ಲಿ ಸಾಮಾಜಿಕ ಸುಧಾರಣೆಗಳ ಪ್ರಶ್ನೆಗಳು ಹಾಗೂ ಮಹಿಳೆ', ಮೈಸೂರಿನಲ್ಲಿ 'ದಿವಾನ್ ಸರ್ ಮಿರ್ಜಾ ಇಸ್ಮಾಯಿಲ್ ಅವರ ಕಾರ್ಯ ಸಾಧನೆಗಳು' ಎಂಬ ವಿಷಯ ಕುರಿತು ವಿಚಾರ ಸಂಕಿರಣ ಮತ್ತು ಕಮ್ಮಟಗಳು ಹಾಗೂ ದತ್ತಿ ನಿಧಿ ಉಪನ್ಯಾಸಗಳನ್ನು ಏರ್ಪಡಿಸಲಾಗಿದೆ. ಡಾ. ತಂಬಂಡ್ ವಿಜಯ್ ಪೂಣಚ್ಚ ಅವರು ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯಲ್ಲಿ ಪಠ್ಯಪುಸ್ತಕ ಪಠ್ಯವಸ್ತು ತಯಾರಿ ಸಮಿತಿಯ ಅಧ್ಯಕ್ಷರಾಗಿ ನಿಯೋಜನೆಗೊಂಡಿದ್ದಾರೆ. ಇದಲ್ಲದೆ ಪ್ರೌಢಶಾಲಾ ವಿದ್ಯಾರ್ಥಿಗಳ ಸಮಾಜ ವಿಜ್ಞಾನ ಪಠ್ಯಪುಸ್ತಕ ರಚನಾ ಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಡಾ. ವಿರೂಪಾಕ್ಷಿ ಪೂಜಾರಹಳ್ಳಿ ಅವರು ಶಿಲ್ಪಕಲಾ ಅಕಾಡೆಮಿ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗವು ಕಲೆ, ವಾಸ್ತುಶಿಲ್ಪ, ದೇವಾಲಯ, ಸ್ಮಾರಕಗಳ ಕುರಿತ ವಿಷಯಗಳನ್ನೊಳಗೊಂಡ ಮಹತ್ವದ ಆಶೋತ್ತರಗಳನ್ನು ಇಟ್ಟುಕೊಂಡು ಸಾಂಸ್ಥಿಕ ಹಾಗೂ ವೈಯಕ್ತಿ ಯೋಜನೆಗಳನ್ನು ಹಮ್ಮಿಕೊಂಡಿದೆ. ವಿಭಾಗವು ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಬಳ್ಳಾರಿ, ಹಾವೇರಿ, ಕೊಪ್ಪಳ, ವಿಜಾಪುರ, ಧಾರವಾಡ ಮತ್ತು ಗದಗ ಜಿಲ್ಲೆಯ ದೇವಾಲಯ ಕೋಶಗಳನ್ನು ಪೂರ್ಣಗೊಳಿಸಿದೆ. ಗುಲ್ಬರ್ಗಾ, ರಾಯಚೂರು, ಬೀದರ, ಚಿತ್ರದುರ್ಗ ಜಿಲ್ಲೆಯ ದೇವಾಲಯ ಕೋಸಗಳು ಪ್ರಕಟಣೆಗೆ ಸಿದ್ಧವಾಗಿವೆ. ಶ್ರವಣಬೆಳಗೊಳದ ಜೈನ ದಿಗಂಬರ ಸಂಸ್ಥೆಗಳ ಸಹಯೋಗದಲ್ಲಿ 'ಕಲೆ ಮತ್ತು ವಾಸ್ತುಶಿಲ್ಪ' ಎಂಬ ಎರಡು ದಿನಗಳ ಕಾರ್ಯಾಗಾರವನ್ನು ಯಶಸ್ವಿಯಾಗಿ ಪೂರೈಸಿದೆ. ಶ್ರೀಕೃಷ್ಣದೇವರಾಯನ ಪಟ್ಟಾಭಿಷೇಕದ ನಿಮಿತ್ತ 'ಶ್ರೀಕೃಷ್ಣದೇವರಾಯನ ಜೀವನ ಮತ್ತು ಸಾಧನೆಗಳು' ಎಂಬ ವಿಷಯದ ಮೇಲೆ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು. ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಮಾಲೆಯಡಿ ನಡೆಸಲಾಗಿದೆ. ತೊಣ್ಣೂರು, ಬ್ರಹ್ಮಗಿರಿ, ಬಸವನ ಬಾಗೇವಾಡಿ, ಜಗಳೂರು, ನಾಗಮಂಗಲಗಳಲ್ಲಿ ನಡೆದ ವಿಚಾರ ಸಂಕಿರಣಗಳಲ್ಲಿ ಮುದ್ರಣ ಹಂತದಲ್ಲಿದೆ.

ಜಾನಪದ ಅಧ್ಯಯನ ವಿಭಾಗವು 'ದಟ್ಟಿ ಕುಣಿತ', 'ಕಿನ್ನರ ಜೋಗಿ ಮೇಳ', 'ಸುಡುಗಾಡು ಸಿದ್ಧರ ಮೋಡಿ', 'ಕಾಡುಗೊಲ್ಲರ ಗಣೆ' ಪ್ರದರ್ಶನಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. 'ಭಾರತೀಯ ಸಂಸ್ಕೃತಿ ಕುರಿತ' ಸಂವಾದದಲ್ಲಿ ಅಮೇರಿಕಾದ ಎರಡು ವಿಶ್ವವಿದ್ಯಾಲಯದ ತಜ್ಞರು ಭಾಗವಹಿಸಿದ್ದರು. ದೇಸಿ ಸಮ್ಮೇಳನವನ್ನು ಜನವರಿಯಲ್ಲಿ ಹಮ್ಮಿಕೊಂಡಿದ್ದಾರೆ. ಡಾ. ಮಂಜುನಾಥ ಬೇವಿನಕಟ್ಟಿ ಅವರ 'ಕರ್ನಾಟಕದ ಸ್ತ್ರೀ ದೈವಗಳು ಸಾಂಸ್ಕೃತಿಕ ಪದಕೋಶ'ಕ್ಕೆ 'ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ' ಪ್ರಶಸ್ತಿ ದೊರಕಿದೆ.

ಅಭಿವೃದ್ಧಿ ಅಧ್ಯಯನ ವಿಭಾಗವು ಮೈಸೂರು ವಿಶ್ವವಿದ್ಯಾಲಯದ ಐಡಿಎಸ್ ವಿಭಾಗದ ಸಂಶೋಧನ ವಿದ್ಯಾರ್ಥಿಗಳಿಗೆ ಎರಡು ದಿನಗಳ ಸಂಶೋಧನ ಕಮ್ಮಟ, ಡಾ. ಮುಜಾಫರ್ ಅಸಾದಿ ಅವರಿಂದ 'ಅಭಿವೃದ್ಧಿ ರಾಜಕಾರಣ' ಎಂಬ ವಿಶೇಷ ಉಪನ್ಯಾಸ, ಗುಲಬರ್ಗಾ ಜಿಲ್ಲಾ ಪಂಚಾಯತ್ ಸದಸ್ಯರಿಗೆ 'ಮಾನವ ಅಭಿವೃದ್ಧಿ ವರದಿ' ತರಬೇತಿ ಕಮ್ಮಟ ಮತ್ತು ಹೆಚ್‌ಕೆಡಿಬಿ ಅಧ್ಯಯನ ಪೀಠದಿಂದ 'ಡಾ. ನಂಜುಂಡಪ್ಪ ವರದಿ ನಂತರ' ಕುರಿತು ಕಾಲೇಜು ಉಪನ್ಯಾಸಕರಿಗೆ ಮೂರು ದಿನಗಳ ಕಮ್ಮಟವನ್ನು ಆಯೋಜಿಸಲಾಗಿತ್ತು. ಡಾ. ಎಚ್.ಡಿ. ಪ್ರಶಾಂತ್ ಅವರು ಅಬ್ದುಲ್ ನಜೀರ್ ಸಾಬ್ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಸಹಯೋಗದಲ್ಲಿ 'ಹಿಂದುಳಿದ ಜಿಲ್ಲೆಗಳ ಎಸ್.ಡಿ.ಎಂ.ಸಿ.ಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಹಾಗೂ ಕಾರ್ಯದರ್ಶಿಗಳಿಗೆ ಸಾಮರ್ಥ್ಯ ವಿಸ್ತರಣ' ಕಾರ್ಯಾಗಾರಗಳನ್ನು ಬೀದರ್, ಗುಲಬರ್ಗಾ, ರಾಯಚೂರು, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ನಡೆಸಿದ್ದಾರೆ. ಈ ಕಾರ್ಯಾಗಾರವನ್ನು ಬಿ.ಆರ್.ಜಿ.ಎಫ್. ಯೋಜನೆಯಲ್ಲಿ ಮಂಜೂರಾದ ೭೦ ಲಕ್ಷ ರೂಪಾಯಿಗಳ ಅನುದಾನದ ನೆರವಿನಿಂದ ಕೈಗೊಳ್ಳಲಾಗಿದೆ. ಮುಂದಿನ ಶೈಕ್ಷಣಿಕ ಸಾಲಿನಲ್ಲಿ 'ಸ್ಥಳೀಯ ಸಂಸ್ಥೆಗಳಲ್ಲಿ ಜನರ ಭಾಗವಹಿಸುವಿಕೆ, ಪ್ರಜಾಪ್ರಭುತ್ವ, ವಿಕೇಂದ್ರಿಕರಣ ಮತ್ತು ಅಭಿವೃದ್ಧಿ ಕೋರ್ಸುಗಳನ್ನು ನಡೆಸಲು ಉದ್ದೇಶಿಸಲಾಗಿದೆ. ಶ್ರೀ ಅಬ್ದುಲ್ ನಜೀರ್ ಸಾಬ್ ಅವರ ಹೆಸರಿನಲ್ಲಿ ಒಂದು ಅಧ್ಯಯನ ಕೇಂದ್ರವನ್ನು ಸ್ಥಾಪಿಸಲು ಮೂರು ಕೋಟಿ ರೂ.ಗಳ ಅನುದಾನ ಕೋರಿ ಈಗಾಗಲೇ ಸರಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

ಕರ್ನಾಟಕ ಸರ್ಕಾರದ ಯೋಜನಾ ಇಲಾಖೆಯು ಪ್ರಾಯೋಜಿಸಿದ 'ಜಿಲ್ಲಾ ಮಾನವ ಅಭಿವೃದ್ಧಿ ವರದಿ' ಎಂಬ ಯೋಜನೆಯಡಿಯಲ್ಲಿ ಡಾ.ಟಿ.ಆರ್. ಚಂದ್ರಶೇಖರ ಅವರು 'ವಿಜಾಪುರ ಜಿಲ್ಲಾ ಮಾನವ ಅಭಿವೃದ್ಧಿ ವರದಿ-೨೦೦೬' ಅನ್ನು ಸರ್ಕಾರಕ್ಕೆ ಸಿದ್ಧಪಡಿಸಿ ಕೊಟ್ಟಿದ್ದಾರೆ. ಈ ವರದಿಯನ್ನು ಇಂಗ್ಲಿಷ್ ಮತ್ತು ಕನ್ನಡ ಎರಡೂ ಭಾಷೆಗಳಲ್ಲಿ ಸರ್ಕಾರವು ಪ್ರಕಟಿಸಿದೆ. ಅದರ ಮುಂದುವರಿದ ಭಾಗವಾಗಿ ಅವರು ಈಗ (೨೦೧೦-೧೧) ರಾಯಚೂರು ಜಿಲ್ಲಾ ಮಾನವ ಅಭಿವೃದ್ಧಿ ವರದಿಯನ್ನು ಸಿದ್ಧಪಡಿಸುವ ಯೋಜನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಈ ವಿಭಾಗವು ೨೦೧೦ರಲ್ಲಿ ಗದಗ ಜಿಲ್ಲಾ ಪಂಚಾಯಿತಿಯ ಜೊತೆಯಲ್ಲಿ ಒಪ್ಪಂದ ಮಾಡಿಕೊಂಡು 'ಗ್ರಾಮ ಪಂಚಾಯಿತಿಗಳ ಅಭಿವೃದ್ಧಿ ಅಧ್ಯಯನ' ವೆಂಬ ಯೋಜನೆಯನ್ನು ಕೈಗೊಂಡಿದೆ. ಡಾ. ಟಿ.ಆರ್. ಚಂದ್ರಶೇಖರ ಅವರು ರಾಜ್ಯ ಸರ್ಕಾರದ ಯೋಜನಾ ಇಲಾಖೆಯು

ಕೈಗೊಂಡಿರುವ 'ಆರ್ಥಿಕ ಸಮೀಕ್ಷೆ' ಎಂಬ ವರದಿಯ ಪರಿಷ್ಕರಣ ಯೋಜನೆಯಲ್ಲಿ ಕನ್ನಡ ವಿಭಾಗದ ಸದಸ್ಯರಾಗಿ ಕೆಲಸ ಮಾಡುತ್ತಿದ್ದಾರೆ. ಡಾ. ಟಿ.ಆರ್. ಚಂದ್ರಶೇಖರ ಮತ್ತು ಅವರ ವಿದ್ಯಾರ್ಥಿಗಳು ಸೇರಿಕೊಂಡು ೨೦೦೯-೨೦೧೦ ರಲ್ಲಿ ಸುಮಾರು ೨೦೦೦ ಪುಟಗಳಿಗೂ ಮೀರಿದ ವಿವಿಧ ಯೋಜನೆಗಳಿಗೆ ಸಂಬಂಧಿಸಿದ ಅಭಿವೃದ್ಧಿ ವರದಿಗಳನ್ನು ವಿವಿಧ ಸಂಸ್ಥೆಗಳಿಗೆ ಕನ್ನಡಕ್ಕೆ ಅನುವಾದ ಮಾಡಿಕೊಟ್ಟಿದ್ದಾರೆ. ಈ ವಿಭಾಗವು ೨೦೧೦ ರಲ್ಲಿ ಸಿದ್ಧಪಡಿಸಿಕೊಟ್ಟ ಇಂಗ್ಲಿಷ್ ಮತ್ತು ಕನ್ನಡ ಭಾಷೆಯ ಹತ್ತಕ್ಕಿಂತ ಅಧಿಕ ಸಂಶೋಧನ ಕೃತಿಗಳನ್ನು ಕನ್ನಡ ವಿಶ್ವವಿದ್ಯಾಲಯವು ಪ್ರಕಟಿಸಿದೆ. ಕರ್ನಾಟಕದ ಪ್ರಸಿದ್ಧ ಸಮಾಜ ವಿಜ್ಞಾನಿಗಳಾದ ಡಾ. ಕೆ.ರಾಘವೇಂದ್ರರಾವ್ ಮತ್ತು. ಡಾ.ಬಿ.ಶೇಷಾದ್ರಿ ಅವರು ಕರ್ನಾಟಕದ ಬಗ್ಗೆ ಸಿದ್ಧ ಮಾಡಿಕೊಟ್ಟಿರುವ ಇಂಗ್ಲೀಷ್ ಕೃತಿಗಳನ್ನು ವಿಶ್ವವಿದ್ಯಾಲಯವು ೨೦೧೦ ರಲ್ಲಿ ಅತ್ಯಂತ ಹೆಮ್ಮೆಯಿಂದ ಪ್ರಕಟಿಸುತ್ತಿದೆ.

ಶಾಸನಶಾಸ್ತ್ರ ವಿಭಾಗದಿಂದ 'ಕಲ್ಯಾಣ ಕರ್ನಾಟಕದ ಸಾಮಂತ ಅರಸು ಮನೆತನಗಳು' ಮತ್ತು ಹರಪನಹಳ್ಳಿ ತಾಲೂಕಿನ ರಕ್ಷಣಾ ವಾಸ್ತು', 'ಪೆಣ್ಬುಯಲ್', 'ಗದಗ ಜಿಲ್ಲೆಯ ಮತ್ತು ಬಿಜಾಪುರ ಜಿಲ್ಲೆಯ ಶಾಸನ ಸಂಪುಟ' ಬಿಜಾಪುರ ಹಾಗೂ ಸದಾಶಿವರಾಯನ ಶಾಸನ ಸಂಪುಟಗಳ ಮುದ್ರಣಕಾರ್ಯ ನಡೆಯುತ್ತಿದೆ. ಹಾವೇರಿ, ಧಾರವಾಡ ಮತ್ತು ಬೆಳಗಾಂ ಜಿಲ್ಲೆಗಳ ಶಾಸನ ಸಂಪುಟಗಳ ಕೆಲಸ ಪ್ರಗತಿಯಲ್ಲಿದೆ. ಬೆಂಗಳೂರಿನ ಮಿಥಿಕ್ ಸೊಸೈಟಿಯ ಸಹಯೋಗದಲ್ಲಿ ಮೂರು ದಿನಗಳ 'ಶಾಸನ ಅಧ್ಯಯನ' ಕಮ್ಮಟವನ್ನು ಆಯೋಜಿಸಲಾಗಿದೆ. ಇದೇ ವಿಭಾಗದ ಸಹಾಯ ಪ್ರಾಧ್ಯಾಪಕರಾದ ಡಾ. ಎಂ. ಕೊಟ್ರೇಶ್ ಅವರಿಗೆ ಶಿಕ್ಷಣ ಹಾಗೂ ಸಮಾಜ ಸೇವೆಗಾಗಿ 'ಶಿವಸಿಂಪಿ' ಪ್ರಶಸ್ತಿ ಲಭಿಸಿದೆ.

ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಯುಜಿಸಿಯಿಂದ 'ಕರ್ನಾಟಕ ಅರಣ್ಯವಾಸಿ ಬುಡಕಟ್ಟು ಸಮುದಾಯಗಳ ಜಾನಪದ' ಎಂಬ ಯೋಜನೆಗೆ ಮೂವತ್ತೆಂಟು ಲಕ್ಷದ ಐವತ್ತು ಸಾವಿರ ರೂಪಾಯಿಗಳ ಅನುದಾನ ಬಂದಿದೆ. ವಿಭಾಗವು 'ಅಲಕ್ಷಿತ ಸಮುದಾಯಗಳ ಆಧುನಿಕ ಮುಖಾಮುಖಿ', 'ಸೋಲಿಗರ ಪಾರಂಪರಿಕ ಕೃಷಿ', 'ಹಾಲಕ್ಕಿ ಒಕ್ಕಲಿಗರ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳ ಸಮೀಕ್ಷೆ' ಹಾಗೂ ಶಾಸ್ತ್ರೀಯ ಭಾಷೆ ಯೋಜನೆಯಾಗಿ 'ದೇಶೀ ಕನ್ನಡ ಪರಂಪರೆ', 'ಅಲೆಮಾರಿಗಳ ಮರಗಭಾಷೆ', 'ಸೋಲಿಗರ ನುಡಿ ಸಾಂಸ್ಕೃತಿಕ ಪದಕೋಶ', ಅಲೆಮಾರಿಗಳ ಬುಡಕಟ್ಟುಗಳ ಮೌಖಿಕ ಕಥನ ಪರಂಪರೆ', 'ಅಲೆಮಾರಿ ಬುಡಕಟ್ಟು ಸಮುದಾಯಗಳ ಸೃಷ್ಟಿ ಪುರಾಣಗಳ ತೌಲನಿಕ ಅಧ್ಯಯನ' ಎಂಬ ಯೋಜನೆಗಳು ಪ್ರಗತಿಯಲ್ಲಿವೆ. ಬುಡಕಟ್ಟುಗಳಲ್ಲಿರುವ ಸೃಷ್ಟಿ ಪುರಾಣ, ಕಥನ ಕಾವ್ಯಗಳು, ಆಚರಣೆ, ನಂಬಿಕೆ, ಆರ್ಥಿಕ ಸಂಘಟನೆ, ಪಾರಂಪರಿಕ ಜ್ಞಾನ, ಮುಂತಾದ ವಿಷಯಗಳ ಬಗ್ಗೆ ಕಾರ್ಯಾಗಾರ ಹಾಗೂ ಉತ್ತರ ಕನ್ನಡ ಜಿಲ್ಲೆಯ ಕಾರ್ಕಳದಲ್ಲಿ ಬುಡಕಟ್ಟು ಸಮ್ಮೇಳನವನ್ನು ಹಮ್ಮಿಕೊಂಡು ಯಶಸ್ವಿಗೊಳಿಸಿದೆ.

ಮಾನವಶಾಸ್ತ್ರ ವಿಭಾಗವು 'ಹಂಪಿ ಪರಿಸರದ ಆದಿಮಾನವ' ಎಂಬ ಯೋಜನೆಯನ್ನು ಪೂರ್ಣಗೊಳಿಸಿದ್ದು ಮುದ್ರಣ ಹಂತದಲ್ಲಿದೆ. ಕರ್ನಾಟಕ ಸರ್ಕಾರದ ಪರಿಶಿಷ್ಟ ಕಲ್ಯಾಣ ಇಲಾಖೆಯ ಅನುದಾನದಡಿಯಲ್ಲಿ ಕರ್ನಾಟಕದ ಗಂಗಾಮತ ಹಾಗೂ ಅದರ ಉಪಜಾತಿಗಳ ಕುಲಶಾಸ್ತ್ರೀಯ ಅಧ್ಯಯನವನ್ನು ಕೈಗೆತ್ತಿಕೊಂಡಿದೆ. ಭಾರತದ ಆರೋಗ್ಯದ ಸಂರಕ್ಷಣೆ ಹಾಗೂ ಸವಾಲುಗಳು ಎಂಬ ವಿಷಯದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ನಡೆಸಲಾಗಿದೆ. ಸಾಂಸ್ಕೃತಿಕ ಚೌಕಟ್ಟಿನಲ್ಲಿ ಬುಡಕಟ್ಟು ಮಹಿಳೆಯರ ಅಭಿವೃದ್ಧಿ ಎಂಬ ವಿಚಾರ ಸಂಕಿರಣವನ್ನು ಬಿಳಿಗಿರಿ ರಂಗನಬೆಟ್ಟದಲ್ಲಿ ಆಯೋಜಿಸಿ ಯಶಸ್ವಿಗೊಳಿಸಿದೆ. ಇದೇ ವರ್ಷದ ಫೆಬ್ರವರಿಯಲ್ಲಿ ಮಾನವಶಾಸ್ತ್ರ ಸರ್ವೇಕ್ಷಣಾಲಯ ಕೊಲ್ಕತ ಹಾಗೂ ಅಂತಾರಾಷ್ಟ್ರೀಯ ಜಾನಪದ ಮತ್ತು ಸಂಸ್ಕೃತಿ ಅಧ್ಯಯನ ಕೇಂದ್ರ, ಕೇರಳ ಇವರ ಸಹಯೋಗದಲ್ಲಿ ಆದಿವಾಸಿ ಸಮಾಜಗಳ ಸಾಂಸ್ಕೃತಿಕ ಬದಲಾವಣೆಗಳು ಎಂಬ ವಿಷಯದ ಮೇಲೆ ವಿಚಾರ ಸಂಕಿರಣವನ್ನು ಹಮ್ಮಿಕೊಂಡಿದೆ.

ದೃಶ್ಯಕಲಾ ವಿಭಾಗವು ಯುನೆಸ್ಕೋ ಸಹಯೋಗದಲ್ಲಿ ಅಂತಾರಾಷ್ಟ್ರೀಯ ವಿಚಾರ ಸಂಕಿರಣವನ್ನು ನಡೆಸಿ ಯಶಸ್ವಿಗೊಳಿಸಿದೆ. ವಿಭಾಗದ ಅಧ್ಯಾಪಕರು ಇಂಡೋನೇಶಿಯಾದ ಜಕಾರ್ತನಲ್ಲಿ ಅಂತಾರಾಷ್ಟ್ರೀಯ ಕಲಾ ಪ್ರದರ್ಶನದಲ್ಲಿ ರಾಜ್ಯ ಹೊರರಾಜ್ಯಗಳಲ್ಲಿ ನಡೆದ ಅಂತಾರಾಷ್ಟ್ರೀಯ ಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಡಾ.ಎಸ್.ಸಿ.ಪಾಟೀಲ ಅವರು ಯು.ಜಿ.ಸಿ. ಯ ನೆಟ್ ಮೌಲ್ಯಮಾಪನ ಬೋರ್ಡಿನ ಸದಸ್ಯರಾಗಿ ನಿಯೋಜನೆಗೊಂಡಿದ್ದಾರೆ.

ಶಿಲ್ಪ ಮತ್ತು ವರ್ಣಚಿತ್ರಕಲಾ ವಿಭಾಗದ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ರಾಜ್ಯ ಮಟ್ಟದ ಮತ್ತು ರಾಷ್ಟ್ರಮಟ್ಟದ ಕಲಾ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಇದಲ್ಲದೆ ಬೇರೆ ಬೇರೆ ಕಡೆಗಳಲ್ಲಿ ಪ್ರದರ್ಶನಗಳನ್ನು ನೀಡಿ ಬಹುಮಾನಗಳನ್ನು ಪಡೆದಿದ್ದಾರೆ.

ಸಂಗೀತ ಮತ್ತು ನೃತ್ಯ ವಿಭಾಗವು ಪ್ರತಿ ಶುಕ್ರವಾರದಂದು 'ನಾದನಮನ' ಕಾರ್ಯಕ್ರಮವನ್ನು ನಡೆಸುತ್ತ ಬಂದಿದೆ. ವಿಭಾಗದ ವಿದ್ಯಾರ್ಥಿಗಳು ಜಿಲ್ಲೆ ಮತ್ತು ರಾಜ್ಯಮಟ್ಟದ ಸಂಗೀತ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನಗಳನ್ನು ಪಡೆದಿದ್ದಾರೆ.

ಪ್ರಸ್ತುತ ವರ್ಷ ವಿಶ್ವವಿದ್ಯಾಲಯವು ಕೆಲವು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತ್ತು. ಪಂಡಿತ ಡಾ. ಪುಟ್ಟರಾಜ ಗವಾಯಿಗಳ ಸ್ಮರಣಾರ್ಥ ನಾದ ನಮನ ಎನ್ನುವ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಶ್ರೀ ವೆಂಕಟೇಶಕುಮಾರ್, ಶ್ರೀಮತಿ ಲೀಲಾ ಮುರಿಗೆಪ್ಪ, ಶ್ರೀಮತಿ ಸವಿತಾ ನುಗಡೋಣಿ, ಶ್ರೀಮತಿ ನಾಗಪುಷ್ಪಲತಾ ಮುಂತಾದ ಕಲಾವಿದರು ಹಾಗೂ ಸಂಗೀತ ವಿಭಾಗದ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿ ಕಾರ್ಯಕ್ರಮವನ್ನು ಪ್ರಸ್ತುತಪಡಿಸಿದರು. ಚಿತ್ರದುರ್ಗದ ಜಮುರಾ ಹಾಗೂ ನೀನಾಸಂ ನಾಟಕ ತಂಡಗಳು ನಾಟಕ ಪ್ರದರ್ಶನಗಳನ್ನು ನೀಡಿವೆ. ಅಧ್ಯಯನಾಂಗವು ಯುಜಿಸಿ ಮಾರ್ಗದರ್ಶನದಂತೆ ಎಂ.ಫಿಲ್., ಪಿಎಚ್.ಡಿ. ನಿಯಮಗಳನ್ನು ರೂಪಿಸಿದೆ. ಯುಜಿಸಿ ಸೂಚಿಸಿದಂತೆ ಭಾರತದಲ್ಲಿಯೇ ಮೊದಲ ಬಾರಿಗೆ ಪಿಎಚ್.ಡಿ.ಗೆ ಸಂಬಂಧಿಸಿದಂತೆ ಕೋರ್ಸ್ ಅನುಷ್ಠಾನಕ್ಕೆ ತಂದಿರುವುದು ವಿಶೇಷ. ಇದರಿಂದ ಸಂಶೋಧನೆಯಲ್ಲಿ ಗುಣಮಟ್ಟವನ್ನು ನಿರಂತರವಾಗಿ ಕಾಯ್ದುಕೊಳ್ಳಲು ಸಾಧ್ಯವಾಗಿದೆ.

ಮಹಿಳಾ ಅಧ್ಯಯನ ಕೇಂದ್ರಕ್ಕೆ ಪ್ರಸ್ತತ ವರ್ಷದ ಕಾರ್ಯಚಟುವಟಿಕೆಗಳಿಗಾಗಿ ವಿಶ್ವವಿದ್ಯಾಲಯ ಧನಸಹಾಯ ಆಯೋಗವು ಆರುವರೆ ಲಕ್ಷ ರೂಪಾಯಿಗಳನ್ನು ನೀಡಿದೆ. ಹನ್ನೊಂದನೆ ಯೋಜನೆಯಲ್ಲಿ ವಿಶ್ವವಿದ್ಯಾಲಯಕ್ಕೆ ಹತ್ತು ಕೋಟಿಗಲ್ಲದೆ ಹೆಚ್ಚುವರಿ ಸಹಾಯಧನವಾಗಿ ಒಂದು ಕೋಟಿ ರೂಪಾಯಿಗಳ ಅನುದಾನ ಮಂಜೂರು ಮಾಡಿದೆ. ಈ ಪೈಕಿ ೬೦ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಈ ಹಣವನ್ನು ವಿಶ್ವವಿದ್ಯಾಲಯದ ವಿವಿಧ ವಿಭಾಗಗಳು ಹಾಗೂ ಅಧ್ಯಾಪಕರುಗಳಿಗೆ ಕಂಪ್ಯೂಟರ್‌ಗಳನ್ನು ಒದಗಿಸಲು ಹಾಗೂ ಲ್ಯಾಪ್‌ಟ್ಯಾಪ್‌ಗಳನ್ನು ಖರೀದಿಸಲು ಬಳಸಲಾಗುತ್ತಿದೆ. ವಿಶ್ವವಿದ್ಯಾಲಯದ ಧನ ಸಹಾಯ ಆಯೋಗವು ಹನ್ನೊಂದನೆ ಯೋಜನೆಯಡಿಯಲ್ಲಿ ಪ್ರಸ್ತುತ ಯೋಜನಾವಧಿಗೆ ಹನ್ನೊಂದುಕೋಟಿ ರೂಪಾಯಿಗಳಿಗೆ ಅನುದಾನ ಹಂಚಿಕೆ ಮಾಡಿದೆ. ಈವರೆಗೆ ಸುಮಾರು ಏಳುಕೋಟಿ ಬಿಡುಗಡೆ ಮಾಡಿದೆ. ಸುಮಾರು ಒಂದು ಕೋಟಿ ರೂಪಾಯಿಗಳ ವೆಚ್ಚದಲ್ಲಿ ಪ್ರಸಾರಾಂಗದ ಕಟ್ಟಡವನ್ನು, ಒಂದು ಕೋಟಿ ಎಂಬತ್ತು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ದೃಶ್ಯಕಲಾ ವಿಭಾಗದ ಕಟ್ಟಡವನ್ನು, ನಲವತ್ತು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕ್ಯಾಂಟೀನ್ ಕಟ್ಟಡವನ್ನು ನಿರ್ಮಿಸಲಾಗುತ್ತಿದೆ. ಈ ಮೂರು ಕಟ್ಟಡಗಳನ್ನು ಜನವರಿ ಮಾಸದಲ್ಲಿ ಉದ್ಘಾಟಿಸುವ ಯೋಜನೆ ಇದೆ. ಅಲ್ಲದೆ ವಿಶ್ವವಿದ್ಯಾಲಯದ ಅತಿಥಿ ಅಧ್ಯಾಪಕರ ನೇಮಕಾತಿ, ಅಧ್ಯಾಪಕರ ಪ್ರಯಾಣ ಭತ್ಯೆ, ವಿದ್ಯಾರ್ಥಿನಿಯರ ವಸತಿಗೃಹ, ವಿದ್ಯಾರ್ಥಿಗಳ ತರಬೇತಿ ಕಾರ್ಯಕ್ರಮಗಳು ಹಾಗೂ ಇನ್ನಿತರ ಚಟುವಟಿಕೆಗಳಿಗಾಗಿ ಐದುಕೋಟಿ ಹತ್ತೊಂಬತ್ತು ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದೆ. ಇದರ ಬಾಬ್ತು ಮೂರು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ.

ರಾಜ್ಯ ಸರಕಾರವು ಸಿಬ್ಬಂದಿಗಳ ವೇತನಕ್ಕಾಗಿ ನಾಲ್ಕು ಕೋಟಿ ಅರವತ್ತೇಳು ಲಕ್ಷ ಎಂಬತ್ತೈದು ಸಾವಿರ ರೂಪಾಯಿಗಳನ್ನು ನೀಡುತ್ತಲಿದೆ. ಕಳೆದ ಏಪ್ರಿಲ್ ತಿಂಗಳಿನಿಂದ ಹೊಸ ಯುಜಿಸಿ ವೇತನವನ್ನು ಜಾರಿಗೆ ತರಲಾಗಿದೆ. ರಾಜ್ಯ ಸರಕಾರವು ವಿಶ್ವವಿದ್ಯಾಲಯದ ಅಭಿವೃದ್ಧಿ ಅನುದಾನವಾಗಿ ಐದು ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದೆ. ವಿಶ್ವವಿದ್ಯಾಲಯದಿಂದ ಪ್ರಕಟವಾದ ಪುಸ್ತಕಗಳ ಮಾರಾಟದಿಂದ ಸುಮಾರು ಮೂವತ್ತು ಲಕ್ಷ ರೂಪಾಯಿಗಳನ್ನು ನಿರೀಕ್ಷಿಸಲಾಗಿದೆ. ವಿಶ್ವವಿದ್ಯಾಲಯದ ಸ್ವೀಕೃತಿಯಾಗಿ ಇತರೆ ಮೂಲದಿಂದ ಒಂದು ಕೋಟಿ ರೂಪಾಯಿಗಳನ್ನು ನಿರೀಕ್ಷಿಸಲಾಗಿದೆ. ದೂರಶಿಕ್ಷಣದ ಸ್ವೀಕೃತಿಯಾಗಿ ಸುಮಾರು ನಲವತ್ತು ಲಕ್ಷ ರೂಪಾಯಿಗಳನ್ನು ನಿರೀಕ್ಷಿಸಲಾಗಿದೆ. ಹಾಲುಮತ ಅಧ್ಯಯನ ಪೀಠಕ್ಕಾಗಿ ಸರಕಾರವು ೧೫ ಲಕ್ಷ ರೂಪಾಯಿಗಳನ್ನು ನೀಡಿದೆ. ಸರಕಾರವು ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿನಿಲಯಕ್ಕಾಗಿ ೨೫ ಲಕ್ಷ ರೂಪಾಯಿ ಅನುದಾನವನ್ನು ಮಂಜೂರು ಮಾಡಿದೆ.

ಕನ್ನಡ ವಿಶ್ವವಿದ್ಯಾಲಯವು ಕನ್ನಡದ ದತ್ತ ಸಂಗ್ರಹಕ್ಕೆ ದತ್ತ ನಿರ್ಮಾಣ ಯೋಜನೆಯೊಂದನ್ನು ಹಮ್ಮಿಕೊಂಡಿದ್ದು ಪ್ರಸಾರಾಂಗದ ಹೆಚ್ಚಿನ ಪುಸ್ತಕಗಳನ್ನು ಇದಕ್ಕಾಗಿ ಬಳಸಿಕೊಳ್ಳಲಾಗಿದೆ. ಜನವರಿ ತಿಂಗಳಲ್ಲಿ ಸಿ.ಡಿ. ರೂಪದಲ್ಲಿ ಹೊರತರಲಾಗುತ್ತದೆ. ಗಣಕ ಕೇಂದ್ರದ ಮುಖಾಂತರವಾಗಿ ವಿಶ್ವವಿದ್ಯಾಲಯದ ಎಂ.ಎ, ಪಿಎಚ್.ಡಿ., ಎಂ.ಫಿಲ್, ಹಾಗೂ ಚಿತ್ರಕಲಾ ವಿದ್ಯಾರ್ಥಿಗಳಿಗೆ ಗಣಕಯಂತ್ರ ಬಳಕೆ ಕುರಿತು ತರಬೇತಿ ನೀಡಲಾಗುತ್ತಿದೆ. ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಅಧ್ಯಾಪಕರ, ವಿಶ್ವವಿದ್ಯಾಲಯದ ಅಧ್ಯಯನಾಂಗ, ಪ್ರಸಾರಾಂಗ, ದೂರಶಿಕ್ಷಣ ಕೇಂದ್ರ ಹಾಗೂ ಇನ್ನಿತರ ವಿಭಾಗಗಳ ಮಾಹಿತಿಗಳನ್ನು ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಅಳವಡಿಸಪ ಪ್ರಕಟಪಡಿಸಲಾಗಿದೆ. ಅಧ್ಯಾಪಕರ ಹಾಗೂ ಆಡಳಿತಾಂಗದ ಅನುಕೂಲಕ್ಕಾಗಿ ಇ-ಮೇಲ್ ಸರ್ವರನ್ನು ಸ್ಥಾಪಿಸಲಾಗಿದೆ. ಇದರಿಂದಾಗಿ ಕನ್ನಡ ವಿಶ್ವವಿದ್ಯಾಲಯದ ಹೆಸರಿನಲ್ಲಿ ಅಧಿಕೃತವಾಗಿ ಇ-ಮೇಲ್‌ಗಳನ್ನು ಕಳುಹಿಸಲು ಅಥವಾ ಸ್ವೀಕರಿಸಲು ಅನುಕೂಲವಾಗಿದೆ. ವಿಶ್ವವಿದ್ಯಾಲಯ ಧನಸಹಾಯ ಆಯೋಗದ ೧೧ನೇ ಯೋಜನೆಯಡಿಯಲ್ಲಿ ಮಾಹಿತಿ ಮತ್ತು ಸಂವಹನ ಯೋಜನೆಯಡಿಯಲ್ಲಿ ೧೭೮ ಲಕ್ಷ ರೂ.ಗಳ ಅನುದಾನವನ್ನು ಹಂಚಿಕೆ ಮಾಡಿದ್ದು ಈ ಹಣವನ್ನು ಡಿಜಿಟಲ್ ಸ್ಟುಡಿಯೋ, ಡಿಜಿಟಲ್ ಲೈಬ್ರರಿ, ಡಿಜಿಟಲ್ ಲ್ಯಾಂಗ್ವೇಜ್ ಲ್ಯಾಬ್, ಆಡಿಯೋ ಮತ್ತು ವೀಡಿಯೋ ರೆಕಾರ್ಡ್ ಲ್ಯಾಬ್, ಸ್ಥಾಪನೆಗೆ ವಿನಿಯೋಗ ಮಾಡಿಕೊಳ್ಳಲಾಗುತ್ತದೆ.

ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗವು ಪ್ರತಿ ವರ್ಷ ವಿಶ್ವವಿದ್ಯಾಲಯದ ಅಧ್ಯಾಪಕರ ಹಾಗೂ ಆಹ್ವಾನಿತ ವಿದ್ವಾಂಸರ ಮುಖಾಂತರ ಯೋಜನೆಗಳನ್ನು ಕೈಗೊಂಡು ಪ್ರಕಟಣೆಗಳ ರೂಪದಲ್ಲಿ ಹೊರತರಲಾಗುತ್ತಿದೆ. ಪ್ರಸ್ತುತ ವರ್ಷ ಅಧ್ಯಾಪಕರ ಯೋಜನೆಗಳಿಂದ ಸಿದ್ಧಗೊಂಡ ಕೃತಿ ಸುಮಾರು ೨೫೦ ಫಲಿತಗಳನ್ನು ಪ್ರಕಟಿಸಲಾಗುತ್ತಿದೆ. ಕನ್ನಡ ಶಾಸ್ತ್ರೀಯ ಭಾಷೆ ಸಂದರ್ಭದಲ್ಲಿ ಸರ್ಕಾರವು ೧ ಕೋಟಿ ರೂ.ಗಳ ಅನುದಾನವನ್ನು ನೀಡಿದ್ದು, ಇದರಡಿ ೪೨ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಇವುಗಳ ಫಲಿತಗಳನ್ನು ಪ್ರಕಟಣೆಯ ರೂಪದಲ್ಲಿ ಹೊರತರಲಾಗುತ್ತದೆ. ಪ್ರಮುಖವಾಗಿ ದಕ್ಷಿಣದ ದ್ರಾವಿಡ ಭಾಷೆಗಳಾದ ಕನ್ನಡ ತೆಲುಗು, ತಮಿಳು ಹಾಗೂ ಮಲಯಾಳಂನ ಜಾನಪದ ಪಾರಿಭಾಷಿಕ ಪದಗಳನ್ನು ಆಯ್ದು ವಿವರಣಾತ್ಮಕ ಕೋಶಗಳನ್ನು ಸಹ ಪ್ರಕಟಿಸಲಾಗುತ್ತಿದೆ. ಜಾನಪದ ಸಂದರ್ಭಗಳಲ್ಲಿ ಅರ್ಥೈಸುವ, ಆಚರಿಸುವ ಮತ್ತು ಅನುಸರಿಸುವ ವಿಧಾನಗಳನ್ನು ಈ ನಾಲ್ಕು ಭಾಷೆಗಳಿಂದ ಸಂಗ್ರಹಿಸಿ ಹೆಚ್ಚಿನ ಅಧ್ಯಯನಕ್ಕೆ ಅನುವು ಮಾಡಿಕೊಡಲಾಗಿದೆ. ೨೫೦ ವಿಷಯಗಳ, ಸಾವಿರ ಪುಟಗಳ ಬೇರೆ ಬೇರೆ ಭಾಷೆಗಳಿಂದ ತಯಾರಿಸಿದ ಈ ಕೋಶ ದ್ರಾವಿಡ ಭಾಷೆಗಳ ಸಂದರ್ಭದಲ್ಲಿ ಪ್ರಥಮ ಪ್ರಯತ್ನವಾಗಿದ್ದು, ಮುಂದಿನ ಅಧ್ಯಯನಗಳಿಗೆ ಒಂದು ಮಾದರಿಯನ್ನು ನಿರ್ಮಿಸಲಿದೆ. ಕನ್ನಡ ಶಾಸ್ತ್ರೀಯ ಭಾಷೆಯ ಸಂದರ್ಭದಲ್ಲಿ ಕನ್ನಡ ಅಥವಾ ಪ್ರಸ್ತುತ ಬಳಕೆಯಲ್ಲಿರುವ ಎಲ್ಲ ಉಪ ಭಾಷೆಗಳ ಮಾಹಿತಿಯನ್ನು ಸಂಗ್ರಹಿಸಿ ಉಪ ಭಾಷಾಕೋಶವನ್ನು ಹೊರತರುವ ಯೋಜನೆ ಪ್ರಕ್ರಿಯೆಯಲ್ಲಿದೆ, ಈ ಯೋಜನೆ ಇನ್ನೊಂದು ತಿಂಗಳಲ್ಲಿ ಪೂರ್ಣಗೊಳ್ಳಲಿದೆ.

ಓಸಿಆರ್ ಕನ್ನಡ ತಂತ್ರಾಂಶ ಸಿದ್ಧತೆ ಕುರಿತಂತೆ ವಿಶ್ವವಿದ್ಯಾಲಯವು ಮೈಸೂರಿನ ಜಯಚಾಮ ರಾಜೇಂದ್ರ ತಾಂತ್ರಿಕ ಮಹಾವಿದ್ಯಾಲಯದೊಡನೆ ಒಡಂಬಡಿಕೆ ಮಾಡಿಕೊಂಡು ಸದರಿ ಓಸಿಆರ್ ತಂತ್ರಾಂಶವನ್ನು ರೂಪಿಸುವ ಯೋಜನೆಯನ್ನು ಮುಂದಿನ ವರ್ಷದಲ್ಲಿ ಆರಂಭಿಸಲಾಗುತ್ತದೆ. ವಿಶ್ವವಿದ್ಯಾಲಯದ ದೂರಶಿಕ್ಷಣ ಕೇಂದ್ರವು ಅನೌಪಚಾರಿಕವಾಗಿ ವಿದ್ಯಾರ್ಥಿಗಳಿಗೆ ವಿವಿಧ ವಿಷಯಗಳಲ್ಲಿ ಪ್ರವೇಶವನ್ನು ನೀಡುತ್ತಿದೆ. ಡಿಪ್ಲೊಮ ಹಾಗೂ ಎಂ.ಎ. ಪದವಿಗಳನ್ನು ನೀಡುತ್ತಲಿದೆ. ವಿಶ್ವವಿದ್ಯಾಲಯದ ಆವರಣದಲ್ಲಿ ಅಷ್ಟೆ ಅಲ್ಲದೆ ಬೇರೆ ಬೇರೆ ಶೈಕ್ಷಣಿಕ ಕೇಂದ್ರಗಳನ್ನು ಗುರುತಿಸಲಾಗಿದೆ. ೨೦೧೦-೧೧ನೇ ಸಾಲಿಗಾಗಿ ೧೫೧೫ ಜನ ವಿದ್ಯಾರ್ಥಿಗಳು ವಿವಿಧ ಕೋರ್ಸ್‌ಗಳಿಗೆ ನೋಂದಣಿ ಮಾಡಿಕೊಂಡಿದ್ದಾರೆ. ೨೦೦೯-೧೦ನೇ ಸಾಲಿನಲ್ಲಿ ೪೮೭ ಎಂ.ಎ. ವಿದ್ಯಾರ್ಥಿಗಳು ಅಂತಿಮ ವರ್ಷದಲ್ಲಿ ತೇರ್ಗಡೆಯಾಗಿರುತ್ತಾರೆ. ೨೦೦೧ ರಿಂದ ಇಲ್ಲಿಯವರೆಗೆ ೩೨೦೦ ವಿದ್ಯಾರ್ಥಿಗಳು ದೂರ ಶಿಕ್ಷಣ ಕೇಂದ್ರದ ಮುಲಕ ಪದವಿಗಳನ್ನು ಪಡೆದಿರುತ್ತಾರೆ. ಆದಾಗ್ಯೂ ಇಲ್ಲಿ ಶೈಕ್ಷಣಿಕ ಗುಣಮಟ್ಟವನ್ನು ಕಾಯ್ದುಕೊಳ್ಳುವಲ್ಲಿ ವಿಶೇಷ ಗಮನಹರಿಸಲಾಗುತ್ತಿದೆ. ವಿಶ್ವವಿದ್ಯಾಲಯದ ವಿವಿಧ ಕಲಾ ಶಾಲೆಗಳ ಮುಖಾಂತರ ಪ್ರಸ್ತತ ವರ್ಷ ಸುಮಾರು ೩೦೦೦ ವಿದ್ಯಾರ್ಥಿಗಳು ದೃಶ್ಯ, ಶಿಲ್ಪ ಕೋರ್ಸ್‌ಗಳಿಗೆ ಪ್ರವೇಶವನ್ನು ಪಡೆದಿರುತ್ತಾರೆ. ಈ ವಿದ್ಯಾರ್ಥಿಗಳು ರಾಜ್ಯದ ಎಲ್ಲ ಪ್ರದೇಶಗಳಿಂದ ಬಂದವರಾಗಿರುತ್ತಾರೆ. ಅಲ್ಲದೆ ಪ್ರಸ್ತುತ ವರ್ಷ ಎಂ.ಎ, ಪಿಎಚ್.ಡಿ. ಪದವಿಗೆ ೧೩ ಜನ, ಎಂ.ವಿ.ಎ. ಸ್ನಾತಕೋತ್ತರ ಪದವಿಗೆ ೨೩ ಜನ, ಎಂ.ಫಿಲ್.ಗೆ ೮೦ ಜನ, ಪಿಎಚ್.ಡಿ.ಗೆ ೧೧೨ ಜನ ಹಾಗೂ ಡಿಪ್ಲೊಮ

೧೫ ಜನ ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದಾರೆ. ಇಂದಿನ ಘಟಿಕೋತ್ಸವದಲ್ಲಿ ೪೧ ಜನ ವಿದ್ಯಾರ್ಥಿಗಳು ಪಿಎಚ್.ಡಿ, ೧೦೭ ಜನ ಎಂ.ಫಿಲ್, ೨೪ ಜನ ಡಿಪ್ಲೊಮ ಹಾಗೂ ಒಬ್ಬರು ಡಿ.ಲಿಟ್ ಪದವಿಗಳನ್ನು ಪಡೆಯಲಿದ್ದಾರೆ.

ಕನ್ನಡ ವಿಶ್ವವಿದ್ಯಾಲಯವು ನಾಲ್ಕು ಅಧ್ಯಯನ ಕೇಂದ್ರಗಳನ್ನು ಹೊಂದಿದ್ದು, ಬಾದಾಮಿ ಕೇಂದ್ರದಲ್ಲಿ ವಾಸ್ತುಶಿಲ್ಪ, ಶಿಲ್ಪಶಾಸ್ತ್ರ ಮತ್ತು ಪ್ರತಿಮಾಶಾಸ್ತ್ರ ಹಾಗೂ ಚಿತ್ರಕಲೆಗೆ ಸಂಬಂಧಿಸಿದಂತೆ ತರಗತಿಗಳು ನಡೆಯುತ್ತವೆ. ಇಲ್ಲಿ ಆಗಾಗ್ಗೆ ಶಿಬಿರಗಳು ಮತ್ತು ವಿಚಾರಸಂಕಿರಣಗಳು ಆಯೋಜಿಸಲಾಗಿದೆ. ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲೂಕಿನ ಕುರುಬನ ಕಟ್ಟೆಯಲ್ಲಿ ಉಪೇಕ್ಷಿತ ಸಮುದಾಯಗಳ ಅಧ್ಯಯನವನ್ನು ಕೇಂದ್ರವು ಆರಂಭಿಸಿದ್ದು ಈಗಾಗಲೇ ಚಾಮರಾಜನಗರ ತಾಲೂಕನ್ನು ಆಯ್ದುಕೊಂಡು ಅಧ್ಯಯನವನ್ನು ಪೂರೈಸಿದ್ದು, ವಿಶೇಷ ವೆಬ್‌ಸೈಟ್‌ನಲ್ಲಿ ಅಳವಡಿಸುವ ಹಂತದಲ್ಲಿದೆ. ಅಲ್ಲದೆ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ವಿಚಾರ ಸಂಕಿರಣ, ಮುಖಾಮುಖಿ ಕಾರ್ಯಕ್ರಮಗಳು ನಡೆಸಿಕೊಂಡು ಬರಲಾಗುತ್ತಿದೆ. ವಿವಿಧ ಆಯಾಮಗಳಲ್ಲಿ ಚಾಮರಾಜನಗರ ಪ್ರದೇಶದ ಅಧ್ಯಯನವನ್ನು ಕೈಗೊಳ್ಳುವ ಇಪ್ಪತ್ತು ಸಂಪುಟಗಳ ೧೦ ಕೋಟಿ ರೂಪಾಯಿಗಳ ಅಂದಾಜು ವೆಚ್ಚದ ಯೋಜನೆಯನ್ನು ಕೇಂದ್ರ ಸರಕಾರದ ಮಾನವ ಸಂಪನ್ಮೂಲ ಇಲಾಖೆಗೆ ಸಲ್ಲಿಸಲಾಗಿದೆ. ಕುಪ್ಪಳಿಯ ಕೇಂದ್ರದಲ್ಲಿ ಕುವೆಂಪು ಸಾಹಿತ್ಯವನ್ನು ವಿವಿಧ ದೃಷ್ಟಿಕೋನಗಳಲ್ಲಿ ಹಾಗೂ ಅಂತರ್‌ಶಿಸ್ತೀಯ ಅಧ್ಯಯನಗಳ ಮೂಲಕ ಕೈಗೊಳ್ಳಲು ಹಾಗೂ ಮಹಿಳಾ ದೃಷ್ಟಿಕೋನದಿಂದ ಕುವೆಂಪು ಸಾಹಿತ್ಯವನ್ನು ಗಮನಿಸುವಂತಹ ವಿಷಯವನ್ನು ಆಧರಿಸಿ ವಿಚಾರಸಂಕಿರಣಗಳು ನಡೆದಿವೆ. ಅಲ್ಲದೆ ಕುವೆಂಪು ಸಮಗ್ರ ಕಾವ್ಯ, ಗದ್ಯಗಳ ಸಂಪಾದನಾ ಕಾರ್ಯ ನಿರಂತರವಾಗಿ ನಡೆಯುತ್ತಿದೆ. ಕುಪ್ಪಳಿಯಲ್ಲಿ ಸುಮಾರು ೫೦ ಲಕ್ಷ ರೂ.ಗಳ ಕಟ್ಟಡವನ್ನು ಜಾನಪದ ವಸ್ತುಸಂಗ್ರಹಾಲಯಕ್ಕಾಗಿ ನಿರ್ಮಿಸಲಾಗಿದ್ದು ಮುಕ್ತಾಯದ ಹಂತದಲ್ಲಿದೆ. ಇನ್ನೆರಡು ತಿಂಗಳಲ್ಲಿ ವಸ್ತು ಸಂಗ್ರಹಾಲಯವನ್ನು ಆರಂಭಿಸುವ ಉದ್ದೇಶ ನಮ್ಮದಾಗಿದೆ. ಕೂಡಲ ಸಂಗಮದ ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರದಲ್ಲಿ ವಚನ ಸಾಹಿತ್ಯವನ್ನು ಕುರಿತಂತೆ ಉಪನ್ಯಾಸಗಳು, ಶಿಬಿರಗಳು, ರಾಷ್ಟ್ರಮಟ್ಟದ ವಿಚಾರಸಂಕಿರಣಗಳನ್ನು ನಡೆಸಲಾಗುತ್ತಿದೆ. ಇವುಗಳ ಫಲಿತಗಳನ್ನು ಪ್ರಕಟಣೆಗಳ ರೂಪದಲ್ಲಿ ಹೊರತರಲಾಗಿದೆ.

ಕನ್ನಡ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಸಮಾಜ ಕಲ್ಯಾಣ ಇಲಾಖೆಯ ಹಾಗೂ ಯುಜಿಸಿಯ ರಾಜೀವ್ ಗಾಂಧಿ ರಾಷ್ಟ್ರೀಯ ಶಿಷ್ಯವೇತನವನ್ನು ಪಡೆದುಕೊಂಡಿದ್ದಾರೆ. ವಿದ್ಯಾರ್ಥಿಗಳಿಗಾಗಿ ಎನ್.ಇ.ಟಿ. ಸ್ಪೋಕನ್ ಇಂಗ್ಲಿಷ್, ಸ್ಪರ್ಧಾ ಪರೀಕ್ಷೆಗಳ ಸಲುವಾಗಿ ಶಿಬಿರಗಳನ್ನು ನಡೆಸಿಕೊಂಡು ಬರಲಾಗುತ್ತಿದೆ. ಚಿತ್ರಕಲಾ ಶಾಲೆಯ ವಿದ್ಯಾರ್ಥಿಗಳು ಬೇರೆ ಬೇರೆ ಸ್ಥಳಗಳಲ್ಲಿ ಪ್ರದರ್ಶನ ನೀಡಿ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಶ್ವವಿದ್ಯಾಲಯಕ್ಕೆ ಹೆಸರನ್ನು ತಂದಿರುತ್ತಾರೆ. ಶಿಲ್ಪಕಲಾ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು ೫೦೦ ರೂ.ಗಳ ಸಹಾಯಧನವನ್ನು ನೀಡುವುದರ ಮೂಲಕ ಶಿಲ್ಪಕಲೆಗೆ ಪ್ರೋತ್ಸಾಹವನ್ನು ನೀಡಲಾಗುತ್ತಿದೆ.

ಕನ್ನಡ ವಿಶ್ವವಿದ್ಯಾಲಯವು ಹೊರಗಿನ ವಿದ್ವಾಂಸರನ್ನು ಅತಿಥಿ ಉಪನ್ಯಾಸಕರನ್ನಾಗಿ, ಸಂದರ್ಶಕ ಪ್ರಾಧ್ಯಾಪಕರನ್ನಾಗಿ, ಸಂಪನ್ಮೂಲ ವ್ಯಕ್ತಿಗಳಾಗಿ ಆಹ್ವಾನಿಸಿ ಅವರ ಪರಿಣಿತಿಯನ್ನು ಪಡೆದುಕೊಳ್ಳುತ್ತಿದೆ. ಪ್ರೊ. ಬಿ. ಶೇಷಾದ್ರಿ, ಪ್ರೊ. ಎಚ್.ಎಸ್. ರಾಘವೇಂದ್ರರಾವ್, ಶ್ರೀ ನಾರಾಯಣಮೂರ್ತಿ, ಪ್ರೊ. ಸುಧೀಂದ್ರ ಮುಂತಾದವರು ಈ ಯೋಜನೆಗಳಡಿಯಲ್ಲಿ ವಿಶ್ವವಿದ್ಯಾಲಯಕ್ಕೆ ಒಂದು ತಮ್ಮ ಅಮೂಲ್ಯವಾದ ಸಲಹೆ ಹಾಗೂ ಮಾರ್ಗದರ್ಶನವನ್ನು ನೀಡುತ್ತಿದ್ದಾರೆ.

ವಿಶ್ವವಿದ್ಯಾಲಯದ ಎಲ್ಲ ಪ್ರಕಟಣೆಗಳ ಸಾರವನ್ನು "ಸಾರ-ವಿಸ್ತಾರ" ಎಂಬ ಕೃತಿಯನ್ನು ಪ್ರಕಟಿಸಲಾಗಿದೆ.

ವಿಶ್ವವಿದ್ಯಾಲಯವು ಮೂರು ಹೊಸ ಕಟ್ಟಡಗಳಲ್ಲದೆ, ಅಭಿವೃದ್ಧಿ ಅಧ್ಯಯನ ವಿಭಾಗಕ್ಕಾಗಿ ಎರಡು ಕೊಠಡಿಗಳನ್ನು ನಿರ್ಮಿಸಿಕೊಟ್ಟಿದೆ. ಕ್ರಿಯಾಶಕ್ತಿಯ ಹಿಂಭಾಗದಲ್ಲಿ ಅಧ್ಯಯನಾಂಗಕ್ಕಾಗಿ ಐದು ಕೊಠಡಿಗಳನ್ನು ಹನ್ನೆರಡು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿಸಿಕೊಟ್ಟಿದೆ. ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗಾಗಿ ಸರಕಾರ ನೀಡಿದ ಇಪ್ಪತ್ತೈದು ಲಕ್ಷ ರೂಪಾಯಿಗಳ ಅನುದಾನದಲ್ಲಿ ಏಳು ಕೊಠಡಿಗಳನ್ನು ನಿರ್ಮಿಸಿ ಕೊಡಲಾಗಿದೆ.

ಪ್ರಸ್ತುತ ಹಣಕಾಸು ವರ್ಷದಲ್ಲಿ ವಿದ್ಯಾರಣ್ಯ ಆವರಣದ ರಸ್ತೆ ನಿರ್ಮಾಣಕ್ಕೆ ಸುಮಾರು ನಲವತ್ತು ಲಕ್ಷ ರೂಪಾಯಿಗಳನ್ನು ತೆಗೆದಿರಿಸಲಾಗಿದೆ. ಹಾಗೆಯೇ ವಿಶ್ವವಿದ್ಯಾಲಯದ ಆವರಣಕ್ಕೆ ಗೋಡೆ ನಿರ್ಮಿಸಲು ನಲವತ್ತು ಲಕ್ಷ ರೂಪಾಯಿಗಳನ್ನು ತೆಗೆದಿರಿಸಲಾಗಿದೆ. ಪ್ರಸ್ತುತ ವರ್ಷದಲ್ಲಿ ಗ್ರಂಥಾಲಯದ ಮೇಲ್ಭಾಗದಲ್ಲಿ ಜಲನಿಯಂತ್ರಕ ರಿಪೇರಿ ಕಾಮಗಾರಿ ಕೈಗೊಳ್ಳಲಾಗಿದೆ. ಅಕ್ಷರ ಗ್ರಂಥಾಲಯದ ಹಾಲಿಗೆ ಫಾಲ್ಸ್ ಸೀಲಿಂಗ್ ವ್ಯವಸ್ಥೆಯ ಆದೇಶ ನೀಡಲಾಗಿದೆ. ಅಧ್ಯಾಪಕರ ಅನುಕೂಲಕ್ಕಾಗಿ ದಶಮಾನೋತ್ಸವ ಕಟ್ಟಡಗಳ ಬಳಿ ಕಾರ್‌ಶೆಡ್‌ನ್ನು ನಿರ್ಮಿಸಲಾಗುತ್ತಿದೆ.

ಕನ್ನಡ ವಿಶ್ವವಿದ್ಯಾಲಯವು ಶಿಲ್ಪಕಲಾ ಶಿಬಿರಕ್ಕಾಗಿ ಸುಮಾರು ಏಳು ಕೋಟಿ ರೂಪಾಯಿಗಳನ್ನು ವಿನಿಯೋಗಿಸಿದ್ದು ಹದಿನೈದು ದಿನಗಳ ಶಿಬಿರದಲ್ಲಿ ಐವತ್ತು ಶಿಲ್ಪಿಗಳು ಮತ್ತು ಸಹಾಯ ಶಿಲ್ಪಿಗಳು ಸೇರಿ ಹತ್ತು ಶಿಲ್ಪಗಳನ್ನು ನಿರ್ಮಿಸಿದ್ದರೆ. ಶಿಬಿರದ ಸಂಚಾಲಕರಾಗಿ ಶಿಲ್ಪಕಲಾ ಅಕಾಡೆಮಿ ಅಧ್ಯಕ್ಷರಾಗಿದ್ದ ಶ್ರೀ ವೆಂಕಟಾಚಲಪತಿ ಅವರು ಕಾರ್ಯನಿರ್ವಹಿಸಿದ್ದಾರೆ. ಪ್ರಸ್ತುತ ಶಿಬಿರದಲ್ಲಿ ರಾಜ್ಯದ ಹಾಗೂ ಹೊರ ರಾಜ್ಯಗಳ ಶಿಲ್ಪಿಗಳು ಭಾಗವಹಿಸಿದ್ದರು.

ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಯುಜಿಸಿ ಅನುದಾನದಡಿ ಬಂದ ಐವತ್ತನಾಲ್ಕು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಆವರಣದ ಮುವತ್ಮೂರು ಕಟ್ಟಡಗಳಿಗೆ ಅಂತರ್ಜಾಲ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಈವರೆಗೆ ಅರ್ನೆಟ್ ಅವರು ೨ ಎಂ.ಬಿ.ಪಿ.ಎಸ್. ಲೀಜ್ಡ್ ಲೈನ್ ಮುಖಾಂತರ ಅಂತರ್ಜಾಲ ಸೇವೆಯನ್ನು ಒದಗಿಸಲಾಗಿತ್ತು. ಈಗ ಬಿ.ಎಸ್.ಎನ್.ಎಲ್. ಅವರ ಮುಖಾಂತರ ೧ ಜಿ.ಬಿ.ಪಿ.ಸ್.(೧೦೦ ಎಂ.ಬಿ.ಪಿ.ಎಸ್) ಸಾಮರ್ಥ್ಯದ ಅಂತರ್ಜಾಲ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಇದರಿಂದಾಗಿ ಶ್ರವ್ಯ ಹಾಗೂ ದೃಶ್ಯ ದತ್ತಾಂಶಗಳ ವರ್ಗಾವಣೆಗೆ ಅನುಕೂಲವಾಗುತ್ತದೆ. ೫೦ ಲಕ್ಷ ರೂ.ಗಳ ಈ ಯೋಜನೆಗೆ ೧ ಲಕ್ಷ ರೂ.ಗಳನ್ನು ವಿಶ್ವವಿದ್ಯಾಲಯದ ವತಿಯಿಂದ ನೀಡಿದ್ದು ಉಳಿದ ಹಣಕ್ಕೆ ಎಂ.ಎಚ್.ಆರ್.ಡಿ. ಹಾಗೂ ಸರ್ಕಾರವನ್ನು ಅವಲಂಬಿಸಲಾಗಿದೆ. ಬಿ.ಎಸ್.ಎನ್.ಎಲ್. ಸಂಸ್ಥೆಯವರು ವಿಶ್ವವಿದ್ಯಾಲಯಕ್ಕೆ ಒಂದು ಬಿ.ಎಸ್.ಎನ್.ಎಲ್. ಟವರನ್ನು ನಿರ್ಮಿಸಿಕೊಟ್ಟಿದ್ದು ಇದಕ್ಕಾಗಿ ಬಿ.ಎಸ್.ಎನ್.ಎಲ್. ಅವರು ೫೦ ಲಕ್ಷ ರೂ.ಗಳನ್ನು ವಿನಿಯೋಗಿಸಿರುತ್ತಾರೆ. ಇದರಿಂದಾಗಿ ಎಂಟು ಜಿ.ಬಿ.ಪಿ.ಎಸ್.ವರೆಗೆ ಅಂತರ್ಜಾಲ ಸಂಪರ್ಕವನ್ನು ಪಡೆಯಬಹುದಾಗಿದೆ. ೧೧ನೇ ಯೋಜನೆ ಅಡಿಯಲ್ಲಿ ವಿಶ್ವವಿದ್ಯಾಲಯದ ಎಂಟು ವಿಭಾಗಗಳ ಅಧ್ಯಾಪಕರಿಗೆ ೩೦ ಲಕ್ಷ ರೂ.ಗಳಲ್ಲಿ ಅಧಿಕೃತ ಲ್ಯಾಪ್‌ಟಾಪ್‌ಗಳನ್ನು ಹಾಗೂ ಇನ್ನಿತರ ಉಪಕರಣಗಳನ್ನು ಒದಗಿಸಲಾಗಿದೆ. ಅವಶ್ಯಕವಿರುವ ಇನ್ನುಳಿದ ಅಧ್ಯಾಪಕರಿಗೂ ಸಹ ಈ ವ್ಯವಸ್ಥೆಯನ್ನು ಡಿಸೆಂಬರ್ ತಿಂಗಳಲ್ಲಿ ಕಲ್ಪಿಸಲಾಗುತ್ತದೆ. ಕುವೆಂಪು ತಂತ್ರಾಂಶ ಸಿದ್ಧತೆಗೆ ಡಾ. ಚಂದ್ರಶೇಖರ ಕಂಬಾರ ಅವರ ಎಂ.ಎಲ್.ಸಿ. ನಿಧಿಯಿಂದ ಕೆಲವು ವರ್ಷಗಳ ಹಿಂದೆ ೬ ಲಕ್ಷ ರೂ.ಗಳ ಅನುದಾನವನ್ನು ಪಡೆದು ಕುವೆಂಪು ತಂತ್ರಾಂಶದ ಬೀಟಾ ಆವೃತ್ತಿಯನ್ನು ರೂಪಿಸಲಾಗಿತ್ತು. ಇದರಲ್ಲಿ ಕಂಡು ಬಂದು ಕೆಲವು ಕೊರತೆಗಳನ್ನು ಈಗ ನಿವಾರಿಸಲಾಗಿದೆ. ಇದರ ಜೊತೆಗೆ ಬಂದು ಹೊಸ ಕೀಲಿಮಣೆ ವಿನ್ಯಾಸವನ್ನು ತಯಾರಿಸಲಾಗಿದೆ. ಇದರಿಂದಾಗಿ ಬೇರೆ ಬೇರೆ ಫಾಂಟ್‌ಗಳ ಕೀಲಿಮಣೆಯನ್ನು ಬಳಸುವುದು ಬೆರಳಚ್ಚುಗಾರರಿಗೆ ಅನುಕೂಲವಾಗುತ್ತದೆ. ಸೊನಾಟಾ ಕಂಪನಿಯವರು ಪ್ರಕಾಶಕ್ ಪ್ರಜಾ ಫಾಂಟ್ ಬಳಸಲು ಅನುಮತಿ ನೀಡಿದ್ದು ಮೂರು ಫಾಂಟ್‌ಗಳನ್ನು ಕುವೆಂಪು ತಂತ್ರಾಂಶಕ್ಕೆ ಅಳವಡಿಸಿಕೊಳ್ಳಲಾಗಿದೆ. ಇದರಿಂದಾಗಿ ತಂತ್ರಾಂಶದ ೨ ನೇ ಆವೃತ್ತಿಯನ್ನು ಎಲ್ಲ ಬಳಕೆದಾರರು ಬಳಸಬಹುದಾಗಿದೆ. ಕರ್ನಾಟಕದ ಕೋರ್ಟ್‌ಗಳಲ್ಲಿ ಬಳಸಲು ಅನುಕೂಲವಾಗುವಂತೆ ಕುವೆಂಪು ತಂತ್ರಾಂಶವನ್ನು ಥಿನ್ ಕ್ಲೈಂಟ್ ಸರ್ವರ್ ಟೆಕ್ನಾಲಜಿಯಲ್ಲಿ ಸಿದ್ಧಪಡಿಸಲಾಗಿದೆ. ಕರ್ನಾಟಕ ಸರ್ಕಾರವು ಕನ್ನಡ ವಿಶ್ವವಿದ್ಯಾಲಯಕ್ಕೆ ಓ.ಸಿ.ಆರ್. ತಂತ್ರಾಂಶವನ್ನು ಸಿದ್ಧಪಡಿಸಲು ಹಾಗೂ ಆನ್‌ಲೈನ್‌ನಲ್ಲಿ ಪದಕೋಶವನ್ನು ರೂಪಿಸಲು ೩೦ ಲಕ್ಷ ರೂ.ಗಳ ಅನುದಾನ ನೀಡಲಿದೆ. ಶೀಘ್ರದಲ್ಲಿ ಈ ಯೋಜನೆಯನ್ನು ಕೈಗೊಂಡು ಮುಂದಿನ ಮೂರು ತಿಂಗಳಲ್ಲಿ ಪೂರೈಸಲಾಗುತ್ತದೆ. ಪಾರದರ್ಶಕ ಹಾಗೂ ಉತ್ತಮ ಗುಣಮಟ್ಟದ ಆಡಳಿತ ವ್ಯವಸ್ಥೆಗೆ ಇ-ಪ್ರಾಕ್ಯೂರ್‌ಮೆಂಟ್, ಇ-ಟೆಂಡರ್ ಹಾಗೂ ಫೈಲ್ ಮೇನೇಜ್‌ಮೆಂಟ್ ವ್ಯವಸ್ಥೆಯನ್ನು ಜಾರಿಗೆ ತರಲಾಗುತ್ತಿದೆ. ಸಿ ಮತ್ತು ಡಿ ಗುಂಪಿನ ಸಿಬ್ಬಂದಿಗಳಿಗೆ ಗಣಕಯಂತ್ರವನ್ನು ಪರಿಣಾಮಕಾರಿಯಾಗಿ ಬಳಸಲು ಸೂಕ್ತ ತರಬೇತಿಯನ್ನು ನೀಡಲಾಗಿದೆ.

ಸರ್ಕಾರವು ನೀಡಿದ ೫೦ ಲಕ್ಷ ರೂ.ಗಳ ಅನುದಾನದಲ್ಲಿ ಈಗಾಗಲೇ ಶಾಶ್ವತ ನೀರು ಸರಬರಾಜು ಯೋಜನೆಯನ್ನು ಪೂರೈಸಲಾಗಿದೆ. ಬಳ್ಳಾರಿ ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ ಕೆರೆಯ ದುರಸ್ತಿಗೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ. ಅಲ್ಲದೆ ಗಿಡಗಳ ಬೆಳವಣಿಗೆಗೆ ವಿವಿಧ ಜಾತಿಯ ಐದು ಸಾವಿರ ಸಸಿಗಳನ್ನು ನೀಡಿದ್ದು, ಅವುಗಳನ್ನು ಈಗಾಗಲೇ ಆವರಣದಲ್ಲಿ ನೆಡಲಾಗಿದೆ.

ವಿಶ್ವವಿದ್ಯಾಲಯದ ಅಧ್ಯಾಪಕರು ಇತರ ಮೂಲಗಳಿಂದ ಧನಸಹಾಯವನ್ನು ಪಡೆದು ಅನೇಕ ವಿಶಿಷ್ಟ ಯೋಜನೆಗಳನ್ನು ಹಮ್ಮಿಕೊಂಡು ಗಂಭೀರ ಅಧ್ಯಯನಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ. ವಿಶ್ವವಿದ್ಯಾಲಯ ಧನಸಹಾಯ ಆಯೋಗದಿಂದ ತಲಾ ೬ ಲಕ್ಷ ರೂ.ಗಳ ಪ್ರಧಾನ ಸಂಶೋಧನಾ ಯೋಜನೆಗಳು ಸಹ ಪ್ರಾಧ್ಯಾಪಕರಾದ ಡಾ. ಬಿ.ಎಂ. ಪುಟ್ಟಯ್ಯ ಹಾಗೂ ಡಾ.ಆರ್. ವೆಂಕಟೇಶ್ ಇಂದ್ವಾಡಿ ಇವರಿಗೆ ಮಂಜೂರಾಗಿದೆ.

ವಿಶ್ವವಿದ್ಯಾಲಯದಲ್ಲಿ ಹತ್ತು ಅಧ್ಯಯನ ಪೀಠಗಳು ತಂತಮ್ಮ ವಿಷಯಕ್ಕೆ ಸಂಬಂಧಿಸಿದಂತೆ ವಿಚಾರಸಂಕಿರಣ, ಪ್ರಕಟಣೆ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ. ಪುರಂದರದಾಸ ಅಧ್ಯಯನ ಪೀಠದಿಂದ ಮೂರು ಪುಸ್ತಕಗಳು, ಹಾಲುಮತ ಅಧ್ಯಯನ ಪೀಠದಿಂದ ಎರಡು ಗ್ರಂಥಗಳು, ಡಾ. ಶಂಬಾ ಜೋಶಿ ಅಧ್ಯಯನ ಪೀಠದಿಂದ ಎರಡು ಗ್ರಂಥಗಳು, ರಾಮಮನೋಹರ ಲೋಹಿಯಾ ಅಧ್ಯಯನ ಪೀಠದಿಂದ ಮೂರು ಗ್ರಂಥಗಳು ಪ್ರಕಟವಾಗುತ್ತಿವೆ. ನಾಡೋಜ ಡಾ. ರಾಜಕುಮಾರ ಅಧ್ಯಯನ ಪೀಠದಿಂದ ಧಾರವಾಡದ ಸೃಜನ ಸಂಸ್ಥೆಯ ಸಹಯೋಗದೊಂದಿಗೆ ಡಾ. ರಾಜಕುಮಾರ ಅವರ ಹುಟ್ಟುಹಬ್ಬವನ್ನು ಆಚರಿಸಲಾಯಿತು. ಅಲ್ಲದೆ ಬೆಂಗಳೂರಿನ ಹಂಸಲೇಖ ಅವರ ಸಂಸ್ಥೆಯ ಸಹಯೋಗದೊಂದಿಗೆ ಮೂರು ದಿನಗಳ ಚಲನಚಿತ್ರಕ್ಕೆ ಸಂಬಂಧಿಸಿದ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಶ್ರೀರಂಗ ದತ್ತಿನಿಧಿಯನ್ನು ಹೊಸದಾಗಿ ಸ್ಥಾಪಿಸಿದ್ದು, ಇದಕ್ಕಾಗಿ ಆದ್ಯ ರಂಗಾಚಾರ್ಯರ ಮಗಳಾದ ಶಶಿಕಲಾ ದೇಶಪಾಂಡೆ ಅವರು ೫ ಲಕ್ಷ ರೂ.ಗಳನ್ನು ಠೇವಣಿಯಾಗಿಟ್ಟಿದ್ದಾರೆ. ಇದರ ಅಂಗವಾಗಿ ಉಪನ್ಯಾಸ ಹಾಗೂ ಕರ್ನಾಟಕ ನಾಟಕ ಅಕಾಡೆಮಿ ಸಹಯೋಗದೊಂದಿಗೆ ನಾಟಕ ಪ್ರದರ್ಶನ ಏರ್ಪಡಿಸಲಾಗಿತ್ತು.

ವಿಶ್ವವಿದ್ಯಾಲಯದ ಗ್ರಂಥಾಲಯಕ್ಕೆ ೧೯ ಲಕ್ಷ ಮೌಲ್ಯದ ಸುಮಾರು ೧೬ ಸಾವಿರ ಗ್ರಂಥಗಳು ಸೇರ್ಪಡೆಯಾಗಿವೆ. ಪ್ರಸಾರಾಂಗದಿಂದ ಪ್ರಕಟಣೆಯಾಗಿರುವ ಪುಸ್ತಕಗಳಿಗೆ ಐ.ಎಸ್.ಬಿ.ಎನ್. ನೊಂದಣಿ ಲಭ್ಯವಾಗಿದ್ದು ಇದರಿಂದ ಈ ಗ್ರಂಥಗಳು ಅಂತಾರಾಷ್ಟ್ರೀಯ ಖ್ಯಾತಿಗೆ ಪಾತ್ರವಾಗುತ್ತವೆ.

ಬಾದಾಮಿ ಕೇಂದ್ರಕ್ಕೆ ಶ್ರೀ ಎಂ.ಕೆ.ಪಟ್ಟಣಶೆಟ್ಟಿ, ಶಾಸಕರು ಹಾಗೂ ಶ್ರೀ ಪಿ.ಸಿ. ಗದ್ದಿಗೌಡರ್, ಸಂಸದರು ಇವರು ಸುಮಾರು ೭ ಲಕ್ಷ ರೂ.ಗಳ ಅನುದಾನ ನೀಡಿದ್ದು ಕ್ರೀಡಾಂಗಣ, ಕಟ್ಟಡ ವಿಸ್ತರಣೆ ಮುಂತಾದ ಕಾರ್ಯಗಳಿಗಾಗಿ ಈ ಅನುದಾನವನ್ನು ಬಳಸಲಾಗುತ್ತದೆ.

ವಿಶ್ವವಿದ್ಯಾಲಯದಲ್ಲಿ ವಿವಿಧ ಹುದ್ದೆಗಳಿಗೆ ಮುಂಬಡ್ತಿ ನೀಡಲಾಗಿದೆ. ಹಾಗೂ ದಿನೇದಿನೇ ಹೆಚ್ಚುತ್ತಿರುವ ಕೆಲಸಕಾರ್ಯಗಳ ಒತ್ತಡಗಳನ್ನು ಸರಿದೂಗಿಸಲು ವಿವಿಧ ಆಡಳಿತ ಹುದ್ದೆಗಳ ಸೃಜನೆ ಮತ್ತು ಮಂಜೂರಾತಿಗಾಗಿ ಸರ್ಕಾರಕ್ಕೆ ಈಗಾಗಲೇ ಪ್ರಸ್ತಾವಗಳನ್ನು ಸಲ್ಲಿಸಲಾಗಿದೆ. ಈ ಎಲ್ಲ ಕಾರ್ಯಗಳ ಸುಲಲಿತವಾಗಿ, ಯಶಸ್ವಿಯಾಗಿ ನಡೆದುಕೊಂಡು ಹೋಗಲು ವಿಶ್ವವಿದ್ಯಾಲಯದ ಅಧ್ಯಾಪಕ ವರ್ಗ, ಆಡಳಿತ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿ ವರ್ಗ ಒಟ್ಟಾಗಿ ದುಡಿಯುತ್ತಿದ್ದಾರೆ. ಆಡಳಿತಾಂಗದ ಎಲ್ಲ ಸದಸ್ಯರು ಇದಕ್ಕಾಗಿ ಶ್ರಮಿಸುತ್ತಿದ್ದಾರೆ. ಮಾಧ್ಯಮದವರು ವಿಶ್ವವಿದ್ಯಾಲಯದ ಕಾರ್ಯ ಚಟುವಟಿಕೆಗಳನ್ನು ಸಕಾರಾತ್ಮಕವಾಗಿ ಗುರುತಿಸಿ ಉತ್ತಮ ಪ್ರಚಾರ ನೀಡುತ್ತಿದ್ದಾರೆ. ವಿಶ್ವವಿದ್ಯಾಲಯದ ಎಲ್ಲ ಕಾರ್ಯಚಟುವಟಿಕೆಗಳಿಗೆ ಬೆನ್ನೆಲುಬಾಗಿ ಕಾರ್ಯಕಾರಿ ಸಮಿತಿ ಮತ್ತು ಆಡಳಿತ ಮಂಡಳಿಯ ಎಲ್ಲ ನಾಮನಿರ್ದೇಶಿತ ಸದಸ್ಯರು ಹಾಗೂ ಪದನಿಮಿತ್ತ ಸದಸ್ಯರು ನಿರಂತರವಾಗಿ ಮಾರ್ಗದರ್ಶನ ನೀಡುತ್ತಿದ್ದಾರೆ.

ಪ್ರಸ್ತುತ ವರ್ಷ ರಾಜ್ಯ ಸರ್ಕಾರದ ಅನುದಾನದಲ್ಲಿ ರಸ್ತೆಗಳ ದುರಸ್ತಿ, ಆವರಣ ಗೋಡೆ, ಅಕ್ಷರ ಗ್ರಂಥಾಲಯದ ನವೀಕರಣ, ಪರೀಕ್ಷಾ ಭವನ ನಿರ್ಮಾಣ ಹಾಗೂ ಎಲ್ಲ ಪರೀಕ್ಷೆಗಳನ್ನು ಒಂದೆಡೆ ನಡೆಸುವ ಕೇಂದ್ರ ವ್ಯವಸ್ಥೆ ಮುಂತಾದವುಗಳನ್ನು ಯೋಜಿಸಬೇಕಾಗಿದೆ. ವಿಶ್ವವಿದ್ಯಾಲಯದ ಕಾರ್ಯಕಾರಿ ಸಮಿತಿಯ ಆಶಯದಂತೆ ದೇಸಿ ತಂತ್ರಜ್ಞಾನ ಅರಿತುಕೊಳ್ಳುವ ದಿಸೆಯಲ್ಲಿ ವಿಜ್ಞಾನ ನಿಕಾಯ, ಅಂತೆಯೇ ನಾಟಕ, ನೃತ್ಯ, ತತ್ವಶಾಸ್ತ್ರ ವಿಷಯಗಳ ಅಧ್ಯಯನಕ್ಕೆ ಅನುವು ಮಾಡಿಕೊಡುವ ವ್ಯವಸ್ಥೆ ರೂಪಿತವಾಗಬೇಕಾಗಿದೆ.

ವಿಶ್ವವಿದ್ಯಾಲಯದ ಧನಸಹಾಯ ಆಯೋಗವು ೧.೫೦ ಕೋಟಿ ರೂ.ಗಳನ್ನು ಕನ್‌ವೆನ್ಷನಲ್ ಹಾಲ್ ನಿರ್ಮಾಣಕ್ಕಾಗಿ ನೀಡಿದ್ದು ಅದನ್ನು ಪಾರಂಪರಿಕ ರೂಪುರೇಷೆಯಲ್ಲಿ ಯೋಜಿಸಿ ನಿರ್ಮಿಸಬೇಕಾಗಿದೆ. ವಿಶ್ವವಿದ್ಯಾಲಯವು ನ್ಯಾಕ್ (ಎನ್.ಎ.ಎ.ಸಿ) ಪುನರ್ ಮೌಲ್ಯೀಕರಣಕ್ಕೆ ಒಳಗಾಗಬೇಕಾಗಿದೆ. ಇದಕ್ಕೆ ಸಂಬಂಧಿಸಿದಂತೆ ಎಲ್ಲ ತಯಾರಿಗಳನ್ನು ಮಾಡಿಕೊಳ್ಳಲಾಗಿದೆ. ಈಗಾಗಲೇ ೧೧ನೇ ಯೋಜನೆಯಡಿ ಮೂರು ವರ್ಷಗಳನ್ನು ಪೂರೈಸಿದ್ದು, ಮುಂಬರುವ ೧೨ನೇ ಯೋಜನೆಯ ಪ್ರಕ್ರಿಯೆಗಾಗಿ ಸಿದ್ಧತೆಗಳನ್ನು ಮಾಡಿಕೊಳ್ಳುವ ಅವಶ್ಯಕತೆಯಿದೆ.

ಪ್ರಸ್ತುತ ವರ್ಷ ಪ್ರಸಾರಾಂಗದಿಂದ ಸುಮಾರು ನೂರು ಮಂಟಪ ಮಾಲೆ ಗ್ರಂಥಗಳನ್ನು ಹಾಗೂ ಸುಮಾರು ನೂರೈವತ್ತು ಪೂರ್ಣ ಪ್ರಮಾಣದ ಪುಸ್ತಕಗಳನ್ನು ಹೊರತರುವ ಯೋಜನೆ ಹಮ್ಮಿಕೊಂಡಿದ್ದು, ಇಂದು ೧೨೦ ಪುಸ್ತಕಗಳು ಬಿಡುಗಡೆಗೊಂಡಿವೆ. ಉಳಿದೆಲ್ಲ ಗ್ರಂಥಗಳನ್ನು ಇನ್ನು ಒಂದು ತಿಂಗಳಲ್ಲಿ ಪ್ರಕಟಿಸಲಾಗುತ್ತದೆ.

ಕನ್ನಡ ವಿಶ್ವವಿದ್ಯಾಲಯದ ವಿಭಾಗಗಳು, ನಿಕಾಯಗಳು ಹಾಗೂ ಕಾರ್ಯಕಾರಿ ಸಮಿತಿ ಗುಣಮಟ್ಟದ ಶಿಕ್ಷಣ, ಮೌಲ್ಯಯುತ ಪ್ರಕಟಣೆ, ಜವಾಬ್ದಾರಿಯುತವಾದ ವಿದ್ಯಾರ್ಥಿ ಸಮುದಾಯವನ್ನು ರೂಪಿಸುವಲ್ಲಿ ಪಣ ತೊಟ್ಟಿವೆ. ಆಡಳಿತ ವರ್ಗ ಇದಕ್ಕಾಗಿ ಕಾಯಾವಾಚಾ ಶ್ರಮಿಸುತ್ತಿದೆ. ಹೀಗಾಗಿ ವಿಶ್ವವಿದ್ಯಾಲಯದ ಕುಲಪತಿಯಾಗಿ ಅಧ್ಯಾಪಕ ವರ್ಗ, ಅಧ್ಯಾಪಕೇತರ ವರ್ಗ, ಕಾರ್ಯಕಾರಿ ಸಮಿತಿ, ಶೈಕ್ಷಣಿಕ ಮಂಡಳಿ ಸದಸ್ಯರಿಗೆ ಕೃತಜ್ಞತೆಯನ್ನು ಸಲ್ಲಿಸಬಯಸುತ್ತೇನೆ. ನಾಡೋಜ ಪದವಿ ಪುರಸ್ಕೃತರು, ಉನ್ನತ ಶಿಕ್ಷಣ ಸಚಿವರು ಹಾಗೂ ಎಲ್ಲ ಅತಿಥಿಗಳು, ಗಣ್ಯ ಮಾನ್ಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ನುಡಿಹಬ್ಬಕ್ಕೆ ಶೋಭೆಯನ್ನು ತಂದಿದ್ದಾರೆ. ಇದಕ್ಕಾಗಿ ತಮಗೆಲ್ಲ ಧನ್ಯವಾದಗಳನ್ನು ಹೇಳಬಯಸುತ್ತೇನೆ.

ನಮಸ್ಕಾರ
೨೧ ಡಿಸೆಂಬರ್ ೨೦೧೦

***